ಮನೆ ಮಂದಿಗೆಲ್ಲ ಮುದ ನೀಡುವ ಮಾಸಿಕ

ಕಸ್ತೂರಿ

ಅಕ್ಟೋಬರ್ ೧೯೯೬



ರೂ. ೬-೦೦

ಸಂಯುಕ್ತಾ: ಸುಖ-ದುಃಖದ ಕಥ

ಕಸ್ತೂರಿ

ಕನ್ನಡ ಡೈಜೆಸ್ಟ್

ಲೋಕ ಶಿಕ್ಷಣ ಟ್ರಸ್ಟಿನ
ಹೆಮ್ಮೆಯ ಕಾಣಿಕೆ

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಎಸ್. ವಿ. ಜೋಶಿ

ಸಹ ಸಂಪಾದಕ:
ವೆಂಕಟನಾರಾಯಣ

ನಿರ್ವಹಣೆ:
ಗೋಪಾಲ ವಾಜಪೇಯಿ
ಶ್ರೀಕಾಂತ ಮಳಗಿ

ಕಲೆ:
ಪಿ. ಆರ್. ಪಾಟೀಲ
ಎಂ. ಎಸ್. ಶಶೀಧರ

ಮುಖಪುಟ:
ಸಂಯುಕ್ತ ಪಾಣಿಗ್ರಾಹಿ
ಚಿತ್ರಕೃಪೆ:
'ಸ್ಯಾವಿ' ಆಂಗ್ಲ ಮಾಸಿಕ

ಕಸ್ತೂರಿ ಕಾರ್ಯಾಲಯ
ಕೊಪ್ಪೀಕರ ರಸ್ತೆ
ಹುಬ್ಬಳ್ಳಿ-೫೮೦೦೨೦.

'ನಾರಿಯರು ಪೂಜೆಗೊಳ್ಳುವಲ್ಲಿ ದೇವತೆಗಳು ನಲಿಯುತ್ತಾರೆ' ಎಂಬುದೊಂದು ಸೂಕ್ತಿ. ಆದರೆ ಇಂಥ ಸೂಕ್ತಿಗಳನ್ನು ಹೇರಳವಾಗಿ ಹೇಳಿರುವ ಭರತ ವರ್ಷದಲ್ಲೇ ಹೆಣ್ಣಿನ ಮೇಲಿನ್ನೂ ಅವ್ಯಾಹತ ಹಲ್ಲೆ ನಡೆದಿದೆ. ನೈನಾ ಸಾಹನಿಯ ಪ್ರಕರಣದಂಥವು ಎಲ್ಲೋ ಅಪರೂಪಕ್ಕೆಂಬಂತೆ ಪ್ರಚಾರ ಪಡೆಯುತ್ತವೆ. ಆಯಿತು, ಕೆಲ ದಿನಗಳವರೆಗೆ ಅದರ ಚರ್ಚೆ. ಕ್ರಮೇಣ ಅದು ಮರೆತುಹೋದ ವಿಷಯವಾಗಿಬಿಡುತ್ತದೆ. ಒಂದೆಡೆ ಮಹಿಳಾ ಜಾಗೃತಿ ಆಂದೋಲನ ಬಿರುಸಿನಿಂದ ಸಾಗಿದ್ದರೆ ಇನ್ನೊಂದೆಡೆ ಅಪ್ರಾಪ್ತ ವಯಸ್ಸಿನ ಬಾಲಕಿಯರ ಮಾರಾಟ, ಅವರನ್ನು ವೇಶ್ಯಾವಾಟಿಕೆಗಳಿಗೆ ಸೇರಿಸುವ ಕುಕೃತ್ಯಗಳೂ ಸದ್ದಿಲ್ಲದೆ ಜೋರಾಗಿ ನಡೆಯುತ್ತಿವೆ.

ಮಹಿಳೆ ಖಂಡಿತವಾಗಿ ದೇಶ-ಸಮಾಜಗಳ ಉನ್ನತಿಗೆ ಪುರುಷನಿಗಿಂತ ಹೆಚ್ಚು ಪ್ರಾಮಾಣಿಕವಾಗಿ, ಸಮರ್ಥವಾಗಿ ದುಡಿಯಬಲ್ಲಳು ಎಂಬುದಕ್ಕೆ ಪುರಾವೆಗಳು ಸಾಕಷ್ಟಿವೆ. ಪ್ರತಿ ವರ್ಷದ ಅಕ್ಟೋಬರ್ ೨ಳನ್ನು ಮಹಿಳಾ ದಿನವನ್ನಾಗಿ ಆಚರಿಸುತ್ತ ಬರುತ್ತಿದ್ದೇವೆ. ಆದರೆ ಅದೊಂದು ದಿನ ಮಾತ್ರವಲ್ಲ, ಪ್ರತಿ ದಿನವೂ 'ಮಹಿಳಾ ದಿನ'ವೇ ಆಗಬೇಕು. ಪುರುಷ ಪ್ರಧಾನ ಸಮಾಜ ಅವಳನ್ನು ಗೌರವಿಸುವುದನ್ನು ಕಲಿಯಬೇಕು.

ಈ ಸಲದ 'ಕಸ್ತೂರಿ'ಯನ್ನು ಮಹಿಳೆಯರಿಗೇ ಮೀಸಲಾಗಿರಿಸಿದ್ದೇವೆ. ನಾನಾ ಕ್ಷೇತ್ರಗಳಲ್ಲಿನ ನಾಲ್ವರು ಮಹಿಳೆಯರ ಬದುಕು-ಸಾಧನೆಯ ಚಿತ್ರವನ್ನಿಲ್ಲಿ ಕೊಡುವುದರ ಜತೆಗೆ 'ಬದುಕಿಗಾಗಿ'ಬೇರೆ ಬೇರೆ ಇದ್ದುಕೊಂಡು ದುಡಿಯುತ್ತಿರುವ ದಂಪತಿಗಳ ಬವಣೆ ಹಾಗೂ ಸಾಮಾಜಿಕ ಕಂದಾಚಾರಗಳ ಸಂಕೋಲೆಯಿಂದ ವಿಮೋಚನೆ ಬಯಸುವ ಮಹಿಳೆಗಾಗಿ ಅದಕ್ಕೂ ಮೊದಲು ಆಕೆ ಮಾಡಿಕೊಳ್ಳಬೇಕಾದ ಮಾನಸಿಕ ತಯಾರಿಯ ಕುರಿತೂ ಲೇಖನಗಳಿವೆ.

ತಾಯಿಕುಲ ಶಾಶ್ವತವಾಗಿರಲಿ ಎಂಬುದೇ 'ಕಸ್ತೂರಿ'ಯ ಹಾರೈಕೆ.

–ವ್ಯವಸ್ಥಾಪಕ ಸಂಪಾದಕ

ಸಹಚಿಂತನ

ವ್ಯಾವಹಾರಿಕ ಯಶಸ್ಸು...

'ಎಂ. ದೀಪಾ' ಅವರ 'ವ್ಯಾವಹಾರಿಕ ಯಶಸ್ಸು: ಹತ್ತು ತಪ್ಪು ಕಲ್ಪನೆಗಳು' ಲೇಖನ ಯಶೋಭಿಲಾಷಿಗಳಿಗೆ ತುಂಬ ಉಪಯುಕ್ತ. ವ್ಯಾಪಾರಿಗಳಿಗಿದು ದಾರಿದೀಪದಂತಿದೆ.

ಕುಕನೂರು **-ಎನ್. ಪಿ. ಸುರೇಶ**

ಇಂಥವರು ನಮ್ಮಲ್ಲಿಲ್ಲ?

'ಕಸ್ತೂರಿ'ಯ ಸೆಪ್ಟಂಬರ್ ೯೬ರ ಸಂಚಿಕೆಯಲ್ಲಿ ಪ್ರಕಟವಾದ ಹೋಬರ್ಡ್ ಬರ್ಡ್‌ರ 'ನಾನು ಸರಕಾರದ ವಿರುದ್ಧ ಹೋರಾಡಿದೆ' ಲೇಖನ ಅಭಿಮಾನದಿಂದ ತಲೆದೂಗುವಂತೆ ಮಾಡಿತಲ್ಲದೆ ಜತೆಗೇ ಇಂಥ ಸಂಪಾದಕರು ನಮ್ಮಲ್ಲಿಲ್ಲಿದ್ದಾರೆ?-ಎಂದು ಯೋಚಿಸುವಂತೆಯೂ ಮಾಡಿತು. ಸರಕಾರದ ಜಾಹೀರಾತಿನ ಹಾಗೂ ಇನ್ನಿತರ 'ಫೆವರ್'ಗಳ ಮುಲಾಜಿಗೆ ತಮ್ಮನ್ನು ಮಾರಿಕೊಂಡು ಮೆರೆದಾಡುವ ಸಂಪಾದಕರೇ ಭಾರತದಲ್ಲಿ ಹೆಚ್ಚು ಅಲ್ಲವೆ? ಈ ಲೇಖನ ಇಂಥ ಸಂಪಾದಕರುಗಳಿಗೆ ನಿಜಕ್ಕೂ ಚಾಟಿಯೇಟಿನಂತಿದೆ.

'ಹುಚ್ಚು ಹಿಡಿ(ಸಿ)ದ ಗೋವಿನ ಕಥೆ' ಗೋ-ಮಾಂಸಾಹಾರಿಗಳ ಕಣ್ಣು ತೆರೆಸುವಂತಿದೆ.

ಗಂಗಾವತಿ **-ತಟ್ಟಿ ಕಾಶೀಮ ಅಲಿ**

ಸೆಪ್ಟಂಬರ್ ಸಂಚಿಕೆಯಲ್ಲಿ 'ಪ್ರಿಯತಮ' ಅವರು ''ಹುಚ್ಚು ಹಿಡಿ(ಸಿ)ದ ಗೋವಿನ ಕಥೆ''ಯಲ್ಲಿ ಇಂಗ್ಲೆಂಡಿನ ಎಲ್ಲಾ ಹಸುಗಳಿಗೂ ಈ ರೋಗ ಬಂದಿದೆ ಎಂದು ಅರ್ಥೈಸಿದಂತೆ ಕಾಣಿಸುತ್ತದೆ. ನಿಜವೆಂದರೆ ಒಂದು ಕೋಟಿ ಹತ್ತು ಲಕ್ಷ ಹಸುಗಳಲ್ಲಿ ಬೆರಳೆಣಿಕೆಗೆ ಸಿಗುವಷ್ಟು ಹಸುಗಳಿಗೆ ಮಾತ್ರ ಈ ರೋಗ ಬಂದಿದ್ದು ಅವುಗಳನ್ನು ಗುರುತಿಸುವದು ಅಸಾಧ್ಯವಾಗಿದೆ. ಕಾರಣವೇನೆಂದರೆ ಈ ರೋಗದ ಲಕ್ಷಣ ಪತ್ತೆ ಹಚ್ಚುವದು ಸಾಧ್ಯವಿಲ್ಲ. ಈ ತೊಂದರೆಯಿಂದಾಗಿ ದೇಶದ ಎಲ್ಲಾ ಹಸುಗಳನ್ನು ನಾಶ ಮಾಡುವ ಯೋಜನೆಯನ್ನು ರೂಪಿಸಲಾಗಿದೆ. ಈ ರೋಗ ಸಾಂಕ್ರಾಮಿಕವಲ್ಲ ಹಾಗೂ ಇವುಗಳ ಹಾಲನ್ನು ಉಪಯೋಗಿಸುವದರಿಂದ ಈ ರೋಗ ಮನುಷ್ಯರಿಗೆ ಬರುವದಿಲ್ಲ. ಈ ಆದ್ದರಿಂದ ಹಸುಗಳನ್ನು ನಮ್ಮ ದೇಶಕ್ಕೆ ತರುವ ವಿಚಾರ ಅವಿವೇಕತನದ್ದಲ್ಲ ಎಂದು ಅನಿಸುತ್ತದೆ. ಇವುಗಳನ್ನು ತರುವದರಿಂದ ದೇಶದಲ್ಲಿ ಉತ್ತಮ ತಳಿಯ ಹಸುಗಳು ಲಭ್ಯವಾಗಿ ಹಾಲು ಹೈನಿನ ಉತ್ಪಾದನೆ ಜಾಸ್ತಿಯಾಗುತ್ತದೆ.

ಸಣ್ಮನೆಗದ್ದೆ (ಉ.ಕ.) **-ಪ್ರಕಾಶ ಹೆಗಡೆ**

ಸರಕಾರದ ವಿರುದ್ಧ ಹೋರಾಡಿದ ದಿಟ್ಟ ಸಂಪಾದಕ ಹೋಬರ್ಡ್ ಬರ್ಡ್ ಸರಕಾರದ ಅನೀತಿಯನ್ನು ಎತ್ತಿ ತೋರಿಸಿದ್ದಾರೆ. ಅಪ್ರಿಯ ಸತ್ಯಗಳನ್ನು ಪ್ರಕಟಿಸಿ ಅನೇಕ ಕಷ್ಟಗಳನ್ನು ಧೈರ್ಯದಿಂದ ಎದುರಿಸಿದ್ದಾರೆ. ಹೋಬರ್ಡ್ ಬರ್ಡ್‌ರಂಥ ಸಂಪಾದಕರುಗಳ ಅವಶ್ಯಕತೆ ಈಗ ನಮ್ಮ ದೇಶಕ್ಕೆ ಬಹಳಷ್ಟಿದೆ.

ನಿವರಗಿ **-ಈರಣ್ಣಾ**

ವಾಹ್ ನಿಭಾ !

'ನಿಭಾ: ಜಗತ್ತಿನ ಮೊಟ್ಟ ಮೊದಲ ಮಾವುಟಗಳು' ಓದಿ (ಸೆಪ್ಟಂಬರ್ ೯೬ರ 'ಕಸ್ತೂರಿ') ಅಚ್ಚರಿ, ಕೌತುಕ, ಹರ್ಷಗಳೆಲ್ಲ ಒಂದೆಡೆಗೇ ಮೇಳೈಸಿದವು. ನಿಭಾಳ ವಯಸ್ಸು, ದೃಢ ಮನಸ್ಸುಗಳೇ ಆಕೆಯನ್ನು ಇಂಥ ಧೈರ್ಯದ ಕೆಲಸಕ್ಕೆ ಎಳೆಸುವಂತೆ ಮಾಡಿದವೆಂಬುದು ನಿಜವಾದರೂ ಅದಕ್ಕೂ ಮುಖ್ಯವಾದ ಮಾತೆಂದರೆ ಅದಕ್ಕೆ ಕಾರಣವಾದದ್ದು ನಿಭಾಳ ಪ್ರಾಣಿಪ್ರೀತಿ. ಇಂಥ ಅಪರೂಪದ ತರುಣಿಯನ್ನು ಪರಿಚಯಿಸಿದ 'ನಿತಾಯಿ'ಯವರಿಗೆ ನಮನಗಳು.

ಗೋಗಿ **-ಮಲ್ಲಿಕಾರ್ಜುನ ಗಚ್ಚಿ**

'ಮಾವುತ,' 'ಮಾವುಟಗ' ಎಂಬ ಪದ ಮಾತ್ರ ಈವರೆಗೂ ಕನ್ನಡ ಶಬ್ದಕೋಶದಲ್ಲಿತ್ತು. 'ನಿತಾಯಿ' ಯವರು ನಿಭಾಳನ್ನು ಪರಿಚಯಿಸುವುದರ ಜತೆಗೆ 'ಮಾವುಟಗಳು' ಎಂಬ ಹೊಸ ಪದವೊಂದನ್ನು ಕನ್ನಡ ಶಬ್ದಭಾಂಡಾರಕ್ಕೆ ನೀಡಿದ್ದಾರೆ.

ಶಿರ್ವಾ (ದ.ಕ.) **-ಪ್ರಭ**

(ಹೊಸ ಪದಗಳ ಸೃಷ್ಟಿಯನ್ನು 'ಕಸ್ತೂರಿ' ಮೊದಲಿನಿಂದಲೂ ಮಾಡುತ್ತ ಬಂದಿದೆ.

- -ಸಂಪಾದಕ)

ಸರಳ-ಸುಂದರ-ಶ್ರೇಷ್ಠ

ಸೆಪ್ಟಂಬರ್ ೯೬ರ ಸಂಚಿಕೆಯಲ್ಲಿ ಪ್ರಕಟವಾದ

ಬೊನ್ಸಾಯ್ ಶ್ರೀನಿವಾಸರ 'ಪುರಾತನ ಜೀವಿಗಳಿಗೆ ಆಧುನಿಕ ಶಿಕ್ಷಣ' ಎಂಬ ವೈಜ್ಞಾನಿಕ ಲೇಖನದ ನಿರೂಪಣೆ ತುಂಬ ಸರಳ-ಸುಂದರ-ಶ್ರೇಷ್ಠ. ವಿಜ್ಞಾನ-ವೈದ್ಯಕೀಯ ಸಾಹಿತ್ಯಗಳಂಥ ವಿಷಯಗಳು 'ಕಸ್ತೂರಿ'ಯಲ್ಲಿ ಸರಳ ಮತ್ತು ಎಂಥವರಿಗೂ ತಿಳಿಯುವಂಥ ಶೈಲಿಯಲ್ಲಿ ನಿರೂಪಿಸಲ್ಪಡುವುದರಿಂದಲೇ ನಮಗೆಲ್ಲ ಈ ಪತ್ರಿಕೆ ತುಂಬ ಅಚ್ಚುಮೆಚ್ಚಿನದಾಗಿದೆ.

ಚಿಕ್ಕಮಗಳೂರು -ಬಿ.ಆರ್. ನಾರಾಯಣರಾವ್

'ಬಾಲಕ್ಷಯ'ದ ಕುರಿತ ಡಾ. ಕರವೀರಪ್ರಭು ಕ್ಯಾಲಕೊಂಡ ಅವರ 'ಆರೋಗ್ಯದಂಗಳ' ಲೇಖನ (ಸೆಪ್ಟಂಬರ್ ೯೬) ಆತ್ಮೀಯವೆನ್ನಿಸುವ ಉದಾಹರಣೆಗಳನ್ನೊಳಗೊಂಡು ಪ್ರಕಟವಾಗಿದೆ. ಪ್ರತಿ ತಿಂಗಳೂ 'ಆರೋಗ್ಯದಂಗಳ' ಅಂಕಣಕ್ಕಾಗಿಯೇ 'ಕಸ್ತೂರಿ'ಯನ್ನು ಕಾಯುತ್ತಿರುವವರಲ್ಲಿ ನಾನೂ ಒಬ್ಬ.

ಹೇರೂರು -ಮಂಜಪ್ಪಗೌಡ

'ಬಾಲಕ್ಷಯ' ನನ್ನಂಥ ಸಾಮಾನ್ಯ ಓದುಗರಿಗೂ ಮನವರಿಕೆಯಾಗುವಂತೆ ನಿರೂಪಿತವಾಗಿದೆ. ಧನ್ಯವಾದಗಳು.

ಮರಿಯಮ್ಮನಹಳ್ಳಿ -ಬಿ.ಎಂ. ಮಲ್ಲಿಕಾರ್ಜುನ

ಡಾ. ಅಳಗಪ್ಪ ಚೆಟ್ಟಿಯಾರ್

ಎಚ್. ಆರ್. ಚಂದ್ರವದನರಾಯರು ಮಾಡಿಕೊಟ್ಟಿರುವ ಪರಿಚಯ 'ಡಾ ಅಳಗಪ್ಪ ಚೆಟ್ಟಿಯಾರ್ (ಸೆಪ್ಟಂಬರ್ ಸಂಚಿಕೆ) ಆ ಮಹಾನ್ ಜೀವಿಯ ಉದ್ಯಮಶೀಲತೆ, ಔದಾರ್ಯ, ವಿದ್ಯಾಪಕ್ಷಪಾತಿತನ ಹೀಗೆ ಮುಂತಾದ ಒಂದೊಂದೇ ಗುಣವನ್ನು ಅನಾವರಣಗೊಳಿಸುತ್ತ ಹೋಗುತ್ತದೆ.

ಕೆರೆಯ ನೀರನು ಕೆರೆಗೆ ಚೆಲ್ಲಿದಂತೆ ತಾವು ಗಳಿಸಿದ್ದೆಲ್ಲವನ್ನೂ ದೇಶಕ್ಕೆ ಕೊಟ್ಟ ಆ ದಾನಚಿಂತಾಮಣಿಯ ಜೀವನಾದರ್ಶ ನಮ್ಮ ದೇಶದ ಶ್ರೀಮಂತರಿಗೆ ಮಾದರಿಯಾಗಲಿ. ನಮ್ಮ ಯುವ ಜನಾಂಗಕ್ಕೆ ಸ್ಫೂರ್ತಿ ನೀಡಲಿ.

ಮೈಸೂರು -ಡಿ. ಗುಂಡೂರಾವ್

ಶತಮಾನದ ಕ್ಯಾಲೆಂಡರ್

ಸೆಪ್ಟಂಬರ್ ೯೬ರ ಸಂಚಿಕೆಯ 'ವೈಜ್ಞಾನನಿಧಿ' ವಿದ್ಯಾರ್ಥಿ ಅಂಕಣದಲ್ಲಿ ಮಾಲತಿ ಕಮಲಾಕ್ಷ, ಕಳನಾಡು ಅವರ 'ಕ್ಷಣಾರ್ಧದಲ್ಲಿ ಶತಮಾನದ ಕ್ಯಾಲೆಂಡರ್' ಪ್ರಕಟವಾಗಿದೆಯಷ್ಟೆ. ಅದರ ಪ್ರಕಾರ ಮಹಾತ್ಮಾ ಗಾಂಧಿಯವರ ಜನನ (೨-೧೦-೧೮೬೯) ಶನಿವಾರ ಆಯಿತೆನ್ನಲಾಗಿದೆ. ಆದರೆ ನನ್ನ ಸಂಗ್ರಹದಲ್ಲಿರುವ 'ಕ್ರಿ.ಶ. ೧೮೦೦ ರಿಂದ ಕ್ರಿ.ಶ. ೨೦೫೦'ರವರೆಗಿನ ಕೋಷ್ಟಕದಲ್ಲಿ ಅದು ಶುಕ್ರವಾರವೆಂದು ತಿಳಿದುಬರುತ್ತದಲ್ಲ!

ಹಾಗಾದರೆ ಯಾವುದು ಸರಿ?

ಉಡುಪಿ -ರಘುರಾಮ

ಮಧುರ ಮಂಡ್ಯದ ಸುತ್ತಮುತ್ತ...

ನಮಗೇ ನಮ್ಮ ರಾಜ್ಯದ ಇಂಥ ಸುಂದರತಾಣಗಳ ಪರಿಚಯವಿರುವುದಿಲ್ಲವಲ್ಲ! ಈ ಲೇಖನ ಓದಿ ನಾನೇ ಅಲ್ಲೆಲ್ಲ ಸುತ್ತಿಬಂದ ಅನುಭವ ಪಡೆದೆ.

ಹಟ್ಟಿ -ಲಾಲಸಹ ರೋಡಲಬಂಡಾ

ಈ ಲೇಖನದೊಂದಿಗೆ ನೀಡಿದ ಅತಿರಿಕ್ತ ಮಾಹಿತಿ 'ವಡೇ ವಡೇ ಮದ್ದೂರ್ ವಡೇ' ಲೇಖನದಲ್ಲಿ ಮಣಿಕಾಂತರು ಮೈಸೂರ್ ಪಾಕ್‌ನಿಂದ ಮೈಸೂರು, ಪೇಡೆಯಿಂದ ಧಾರವಾಡ, ಕುಂದಾದಿಂದ ಬೆಳಗಾವಿ ಪ್ರಸಿದ್ಧಿ ಪಡೆದಿದೆ ಎಂದು ಹೇಳುತ್ತ ಕರದಂಟನಿಂದ ಅಮೀನಗಡ ಪ್ರಸಿದ್ಧಿ ಪಡೆದಿದೆ ಎಂದು ಬರೆದಿದ್ದಾರೆ.

ಆದರೆ ಕರದಂಟನಿಂದ ಗೋಕಾಕವಲ್ಲವೆ ಪ್ರಸಿದ್ಧಿ ಪಡೆದದ್ದು?

ರುಕ್ಮಾಪುರ -ಲೀಲಾಧರ ಮಾ. ಭಂಡಾರಿ

ಮಣಿಕಾಂತರು 'ಮೈಸೂರು ಪಾಕ್' ಎಂದು ಬರೆದಿದ್ದಾರೆ. ಆದರೆ ಅದು ನಿಜವಾಗಿಯೂ ಮಸ್ಸೂರ ಪಾಕ್ ಎಂದಿರಬೇಕಿತ್ತು. ಮಸ್ಸೂರ ಎಂದರೆ ಕಡ್ಲೆಬೇಳೆ.

ಮೈಸೂರು -ಕೊ.ಸು. ನರಸಿಂಹಮೂರ್ತಿ

(ಕರದಂಟಿಗೆ ಗೋಕಾಕವೂ ಪ್ರಸಿದ್ಧ, ಅಮಿನಗಡವೂ ಪ್ರಸಿದ್ಧ. ಆದರೆ ಅಮಿನಗಡದ್ದು ಸಕ್ಕರೆಯಿಂದ ಮಾಡುವ ಕರದಂಟು. ಇನ್ನು ಮಸ್ಸೂರ್ ಪಾಕ್ ಎಂಬುದೇ ಸರಿಯಾದರೂ ಮಣಿಕಾಂತರು ಬರೆದದ್ದು ಸಾಮಾನ್ಯವಾಗಿ ಬಳಕೆಯಲ್ಲಿರುವಂಥ ಹೆಸರನ್ನೇ. -ಸಂಪಾದಕ)

(ಆರನೇ ಪುಟಕ್ಕೆ)

ಅಂತರಂಗ





ಸಂಯುಕ್ತಾ: ಸುಖ-ದುಃಖದ ಕಥೆ

ಸ್ಥಿರ ಶೀರ್ಷಿಕೆಗಳು

ಬೆಳಕಿಂಡಿ

❒ ಸಾಮಾನ್ಯ ಜನರೂ ಅಸಾಮಾನ್ಯವಾದದ್ದನ್ನು ಸಾಧಿಸಬಲ್ಲರು ಎನ್ನುವ ತತ್ವವನ್ನೇ ಪ್ರಜಾಪ್ರಭುತ್ವ ಆಧರಿಸಿದೆ.

-ಹ್ಯಾರಿ ಫಾಸ್‌ಡಿಕ್

❒ ನಿಮಗೆ ಕೊಳ್ಳಲು ಸಾಧ್ಯವಾಗುವ ಐಷಾರಾಮಿ ವಸ್ತುಗಳನ್ನು ಕೊಂಡುಕೊಳ್ಳಲು ನೀವು ಇಚ್ಛಿಸುವುದಿಲ್ಲ.

-ಸ್ಕಾಟ್ ಬೇಕರ್

❒ ಇಂದಿಗೆ ನಾನು ಏನಾಗಿರಬೇಕಿತ್ತೋ ಹಾಗಾಗಿರಲಿಲ್ಲವಾದರೂ ಹಿಂದೆ ಹೇಗಿದ್ದನೋ ಹಾಗಿಲ್ಲವೆನ್ನುವುದಕ್ಕಾಗಿ ನಿನ್ನನ್ನು ಅಭಿನಂದಿಸುತ್ತೇನೆ, ಪ್ರಭು.

-ಮ್ಯಾಕ್ಸಿ ಡನ್ನಮ್

❒ ಭಕ್ತಿಯು ಪಸರಿಸಿರುವಲ್ಲಿ ಪಾವಿತ್ರ್ಯ ರಾರಾಜಿಸುತ್ತಿರುತ್ತದೆ.

-ಆಲಿವರ್ ವೆಂಡೆಲ್ ಹೋಮ್ಸ್

❒ ಇರಬೇಕಾದ ಸ್ಥಳದಲ್ಲಿ ಇಲ್ಲದ್ದೆಲ್ಲವೂ ಹೊಲಸೇ-ಸಗಣಿಯನ್ನೇ ತೆಗೆದುಕೊಳ್ಳಿ ಬೇಕಾದರೆ!

-ಹೆನ್ರಿ ಟೆಂಪಲ್

❒ ಸದ್ಗುಣಗಳ ದಾರಿಯಿಂದ ದೂರಸರಿಸುವುದನ್ನು ಬಿಟ್ಟು ಅಸೂಯೆಗೆ ಬೇರೆ ಯಾವ ಗುಣಧರ್ಮವೂ ಇಲ್ಲ.

-ಲಿಪಿ

(ಮೂರನೇ ಪುಟದಿಂದ)

ಪ್ರಥಮ ಜಲವಿದ್ಯುತ್ ಉತ್ಪಾದನೆಯಾದದ್ದು ಎಲ್ಲಿ?

'ಮಧುರ ಮಂಡ್ಯದ ಸುತ್ತಮುತ್ತ' ಲೇಖನದಲ್ಲಿ "ಏಷ್ಯದಲ್ಲೇ ಮೊಟ್ಟ ಮೊದಲ ಜಲವಿದ್ಯುತ್ ಉತ್ಪಾದನೆಯಾದದ್ದು ಶಿವನಸಮುದ್ರದಲ್ಲಿ (೧೯೦೨-೧೯೦೩) ಎಂದಿದೆ. ಆದರೆ ಆ ಹೆಗ್ಗಳಿಕೆ ಬೆಳಗಾವಿ ಜಿಲ್ಲೆಯ ಗೋಕಾಕಕ್ಕೆ ಸಲ್ಲಬೇಕು. ಅಲ್ಲಿ ೧೮೮೭ ರಲ್ಲೇ ಜಲವಿದ್ಯುತ್ ಉತ್ಪಾದಿಸಲಾಯಿತು.

ಮೈಸೂರು -ಭಾಸ್ಕರ ಭಟ್ಟ

ಜಿಗಣಿ!

"ಅವನು ಜಿಗಣಿಯ ಥರ" ಎಂದು ಹೀಯಾಳಿಸುವೆವಾದರೂ ಜಿಗಣಿಯನ್ನು ವೈದ್ಯಕೀಯ ಬಳಕೆಗೆ ತಂದುಕೊಂಡಿರುವುದು ಅಚ್ಚರಿ ಮೂಡಿಸಿತು. 'ರಕ್ತ ಪಿಪಾಸುವಿಗೆ ಸುಸ್ವಾಗತ' ಆ ದೃಷ್ಟಿಯಿಂದ ತುಂಬ ಮಾಹಿತಿಪೂರ್ಣ ಲೇಖನ.

ರಾಜೂರು -ವಿಜಯಾ ಕುಲಕರ್ಣಿ

ಸೆಪ್ಟಂಬರ್ ೯೬ ಸಂಚಿಕೆಯ ಪರಿವಿಡಿಯನ್ನು ಓದುತ್ತ 'ಪುಸ್ತಕ ವಿಭಾಗ'ದಲ್ಲಿ 'ನೆತ್ತರು ದೆವ್ವಗಳ ವೃತ್ತಾಂತ'ವೆಂದಿರುವುದನ್ನೂ, ಪುಟ ೬೦ ರಲ್ಲಿ 'ರಕ್ತ ಪಿಪಾಸುವಿಗೆ ಸುಸ್ವಾಗತ' ಎಂಬ ಶೀರ್ಷಿಕೆಯನ್ನೂ ಓದಿ ಒಂದು ಕ್ಷಣ ಈ ಸಂಚಿಕೆ ನೆತ್ತರಮಯವೆ ಎಂಬ ಸಂಶಯಬಂತು.

ಆದರೆ ಜಿಗಣಿಗಳನ್ನು ವೈದ್ಯಕೀಯವಾಗಿ ಬಳಸಿಕೊಳ್ಳುತ್ತಿರುವ ಪ್ರಕ್ರಿಯೆ ಆಶ್ಚರ್ಯ ತಂದಿತು.

ರಾಯಚೂರು -ರಾಧಾ ಅಭಿಷೇಕ್

ಎಷ್ಟೆಲ್ಲ ಲೇಖನಗಳು!

ಮಂದಸ್ಮಿತೆಯ ಮುಖಪುಟದೊಂದಿಗೆ ಹೊರಬಂದ ಸೆಪ್ಟಂಬರ್ ೯೬ರ ಸಂಚಿಕೆ ೩೪ ಲೇಖನಗಳನ್ನು ಹೊತ್ತು ತಂದು ನಿಜಕ್ಕೂ ಮನೆಮಂದಿಗೆಲ್ಲ ಮುದ ನೀಡಿತು. 'ನಿಮ್ಮ ನೌಕರಿಯಲ್ಲಿ ನಿಮಗೆ ತೃಪ್ತಿಯಿದೆಯೆ?' ಲೇಖನ ಚಿಂತನೆಗೆ ತೊಡಗಿಸಿದರೆ 'ಕೈ ಬೆರಳುಗಳ ಕುರಿತು ಕೆಲ ವಿಚಿತ್ರ ನಂಬಿಕೆಗಳು' ಮತ್ತು 'ಈ ಕಲ್ಲುಗಳು ಮಾತು ಬಲ್ಲವು' ರೋಚಕ ಅನುಭವ ನೀಡಿದವು. ಪುಸ್ತಕ ವಿಭಾಗದಲ್ಲಿ ಪ್ರಕಟವಾದ 'ನೆತ್ತರು ದೆವ್ವಗಳ ವೃತ್ತಾಂತ' (-ಅರುಣ ನಾರಾಯಣ) ಮೈಜುಮ್ಮೆನ್ನಿಸಿತು.

ದಾಂಡೇಲಿ -ವೆಂಕಟೇಶ ಮೆತಂದಳೆ

ಮತ್ತೆ ಹುಯ್ದು ಮೊದಲ ಮಳೆ

ಆಗಸ್ಟ್ ೯೬ರ ಸಂಚಿಕೆಯಲ್ಲಿ ಪ್ರಕಟವಾದ ಶೈಲಜಾ ಗೋರನ್ನನೆ ಬರೆದ 'ಮತ್ತೆ ಹುಯ್ದು ಮೊದಲ ಮಳೆ' ಬಾಲ್ಯದ ನೆನಪಿನ ಹನಿಗಳನ್ನು ಮನದ ತುಂಬ ಸುರಿಸಿ, ತನು-ಮನಗಳನ್ನು ಪುಳಕಿತಗೊಳಿಸಿ 'ಚಿನ್ನ ಚಿನ್ನ ಆಸೆ'ಯ ಆಪ್ತ ಅನುಭವಗಳನ್ನು ಮತ್ತೊಮ್ಮೆ ಪಡೆಯಲು ಸಹಾಯ ಮಾಡಿದೆ.

ಬೆಂಗಳೂರು -ಶೋಭಾ ಹಳಬೆ

ಮಚ್ಚೆಗಳು

'ಮಚ್ಚೆಗಳು ಏನನ್ನು ಸೂಚಿಸುತ್ತವೆ?' (-ಟಿ.ಬಿ. ಗುರುನಂಜಯ್ಯ, ಆಗಸ್ಟ್ ೯೬ರ ಸಂಚಿಕೆ) ಲೇಖನ ಅಪೂರ್ವ ವಿವರಗಳಿಂದೊಡಗೂಡಿದೆ.

ಗಳತಗಾ -ಪ್ರಕಾಶ ಅ. ಪೂರ್ವೆ

ಕಲಾದಗಿ -ಬಸವರಾಜ ಕಟ್ಟಿ

ಇದೊಂದು ಅವೈಜ್ಞಾನಿಕ ಲೇಖನ. ಇಲ್ಲಿ ಒಡಮೂಡಿರುವ ಅಭಿಪ್ರಾಯಗಗಳು ಜ್ಯೋತಿಶ್ಯಾಸ್ತ್ರದಷ್ಟೇ ಅಸಂಬದ್ಧ ಮತ್ತು ಅಸಹಜ. ಹೇಗೆ ಒಂದೇ ಗಳಿಗೆಯಲ್ಲಿ ಹುಟ್ಟಿದ ಲಕ್ಷಾಂತರ ಜನರ ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳು ಒಂದೇ ರೀತಿ ಇರಲು ಸಾಧ್ಯವಿಲ್ಲವೊ ಒಂದೇ ರೀತಿ ಮಚ್ಚೆಗಳಿರುವ ಎಲ್ಲ ವ್ಯಕ್ತಿಗಳ ಲಕ್ಷಣಗಳು ಏಕಪ್ರಕಾರವಾಗಿರಲು ಸಾಧ್ಯವಿಲ್ಲ. ಮಚ್ಚೆಗಳು ದೇಹದ ಒಂದು ಸಹಜ ಭಾಗ. ಅವುಗಳಿಗೆ ಇಷ್ಟು ಪ್ರಾಮುಖ್ಯ ನೀಡುವ ಅಗತ್ಯವೇ ಇಲ್ಲ. ಇಂಥ ಲೇಖನಗಳಿಂದ ಕೇವಲ ಮನರಂಜನೆಯಷ್ಟೇ ಸಾಧ್ಯ.

ಬಂಗಾರಪೇಟೆ -ಆರ್. ಎ. ಮುರಳಿಮೋಹನ್

'ಕೆ.ಟಿ.': ಮತ್ತೊಂದು ವಿಶ್ಲೇಷಣೆ

ಸಂಶೋಧನೆಗೆಂದು ತಿರುಗುತ್ತ 'ಕಸ್ತೂರಿ' ಸೆಪ್ಟಂಬರ್ ಸಂಚಿಕೆ ಜತೆಗೊಯ್ದೆ. 'ಸಹ ಚಿಂತನ'ದಲ್ಲಿ 'ಕೆ.ಟಿ.ಯ ಮೂಲ' ಎಂಬ ಭಾಸ್ಕರ ಭಟ್ಟರದೊಂದು ಪತ್ರ ಓದಿದೆ. ವಿಜಾಪುರ-ಕಲಬುರ್ಗಿ ಜಿಲ್ಲೆಗಳಲ್ಲಿ ಇದಕ್ಕಿರುವ ಅರ್ಥವೇ ಬೇರೆ. ಅದು ಪಕ್ಕಾ ದೇಶೀ ಅರ್ಥ ಹೊಂದಿದೆ.

ಇಲ್ಲಿ ಕೆ.ಟಿ. ಅಂದರೆ ಏನು ಗೊತ್ತೆ? 'ಕಡಕ್ ಟೀ' ಅಥವಾ ನಾವೆಲ್ಲಾ ಬಳಸುವ ಸ್ಟ್ರಾಂಗ್ ಟಿ.

ಧಾರವಾಡ -ಡಾ. ಎಸ್.ಕೆ. ಜೋಶಿ

ಕಸ್ತೂರಿ

ಕನ್ನಡ ಡೈಜೆಸ್ಟ್

ವರ್ಷ: ೪೧ ಆಕ್ಟೋಬರ್ ೧೯೯೬ ಸಂಚಿಕೆ: ೨

ಶಿಕ್ಷಣ

ಚೀನದ ತತ್ವಜ್ಞಾನಿ ಕನ್‌ಫ್ಯೂಶಿಯಸ್ಸನ ಅಂತಿಮ ಸಮಯ ಸಮೀಪಿಸುತ್ತಿತ್ತು. ಆತ ತನ್ನ ಶಿಷ್ಯರನ್ನು ಕರೆದು, "ಮಕ್ಕಳೆ, ನನ್ನ ಬಾಯಿಯಲ್ಲಿ ನಾಲಿಗೆ ಇದೆಯೋ ಇಲ್ಲವೋ ಎನ್ನುವುದಷ್ಟು ನೋಡಿ ಹೇಳಿರಿ," ಅಂದ. ಇಂಥಾ ವಿಚಿತ್ರ ಪ್ರಶ್ನೆಯನ್ನು ಕೇಳಿ ಅವರೆಲ್ಲ ಆಶ್ಚರ್ಯದಿಂದ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

ಒಬ್ಬ ಶಿಷ್ಯ ಅವನ ಬಾಯಿಯಲ್ಲಿ ಇಣುಕಿ ನೋಡಿ, "ಗುರುಗಳೆ, ನಾಲಿಗೆ ಇದ್ದೇ ಇದೆ, ಅದೆಲ್ಲಿಗೆ ಹೋಗಬೇಕು?" ಅಂದ.

"ಹಾಗಾದರೆ ಹಲ್ಲುಗಳಾದರೂ ಇವೆಯೆ? ಎಂಬುದನ್ನಷ್ಟು ನೋಡಿ ಹೇಳಿ," ಎಂದ ಕನ್‌ಫ್ಯೂಶಿಯಸ್.

"ಹಲ್ಲುಗಳು ಬಿದ್ದುಹೋಗಿ ಎಷ್ಟೋ ವರ್ಷಗಳಾಯಿತಲ್ಲ ಗುರುಗಳೆ," ಎಂದರು ಶಿಷ್ಯರು.

"ಮೊದಲು ಹುಟ್ಟಿದ್ದು ನಾಲಿಗೆ; ಅನಂತರ ಬಂದದ್ದು ಹಲ್ಲುಗಳು. ಹೀಗಿರುವಾಗ ನಾಲಿಗೆ ಮೊದಲು ಬಿದ್ದು ನಂತರ ಹಲ್ಲುಗಳು ಬೀಳಬೇಕಿತ್ತು. ಅದರ ಬದಲು ಆಮೇಲೆ ಬಂದ ಹಲ್ಲುಗಳೇ ಮೊದಲು ಬಿದ್ದು ಮೊದಲು ಬಂದ ನಾಲಿಗೆ ಉಳಿದುಕೊಂಡಿತು. ಏಕೆ?" ಕನ್‌ಫ್ಯೂಶಿಯಸ್ ಕೇಳಿದ.

ಉತ್ತರ ಹೇಳಲಾಗದೆ ಶಿಷ್ಯರೆಲ್ಲ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

ಆಗ ಕನ್‌ಫ್ಯೂಶಿಯಸ್ ತಿಳಿಸಿಹೇಳಿದ, "ಮಕ್ಕಳೇ ಕೇಳಿ. ನಾಲಿಗೆ ಬಹಳ ಕೋಮಲವಾಗಿಯೂ ಮೃದುವಾಗಿಯೂ ಇದೆ. ಆದ್ದರಿಂದಲೇ ಇಷ್ಟು ವರ್ಷ ಉಳಿದುಕೊಂಡು ಬಂತು. ಆದರೆ ಹಲ್ಲುಗಳ ವಿಷಯ ಹಾಗಲ್ಲ. ಅವು ಬಹಳ ಕಠೋರವಾಗಿದ್ದವು. ಆದ್ದರಿಂದಲೇ ಬಹುಬೇಗ ಅವು ಬಿದ್ದುಹೋದವು."

• *ವೆಂಕಟೇಶ ಗಂಗಾವತಿ*

ಬಡತನ

ಒಂದು ದಿನ ಇಬ್ರಾಹಿಮ್‌ರಿಗೆ ಒಬ್ಬಾತ ಒಂದು ಸಾವಿರ ದಿನಾರುಗಳನ್ನು ನೀಡಿದ. ಅವರು ಅದನ್ನು ತಿರಸ್ಕರಿಸುತ್ತ, "ನಾನು ಭಿಕ್ಷುಕರಿಂದ ಕಾಣಿಕೆ ಸ್ವೀಕರಿಸುವುದಿಲ್ಲ," ಎಂದಾಗ ಆತ, ತಾನು ಭಿಕ್ಷುಕನಲ್ಲ; ಶ್ರೀಮಂತ ಎಂದು ಹೇಳಿಕೊಂಡ. ಇಬ್ರಾಹಿಮ್ ಕೇಳಿದ, "ನಿನಗೆ ಇನ್ನಷ್ಟು ಸಂಪತ್ತನ್ನು ಗಳಿಸುವ ಇಚ್ಛೆಯಿದೆಯೊ? ಅಥವಾ ಇದ್ದುದರಲ್ಲೇ ತೃಪ್ತಿಪಟ್ಟುಕೊಳ್ಳುತ್ತಿಯೋ?".

ತನಗೆ ಹೆಚ್ಚಿನದರ ಆಶೆಯಿದೆ ಎನ್ನುವುದನ್ನಾತ ಪ್ರಾಂಜಲವಾಗಿ ಒಪ್ಪಿಕೊಂಡ. ಆಗ "ಹಾಗಿದ್ದರೆ, ನೀನು ನನಗಿಂತ ಬಡವ. ನನಗೆ ಇದ್ದುದರಲ್ಲೇ ತೃಪ್ತಿ ಉಂಟು. ಹೆಚ್ಚಿನದನು ಆಶಿಸುವುದಿಲ್ಲ," ಎಂದು ಇಬ್ರಾಹಿಮ್ ನುಡಿದ.

–ಪ್ರಕಾಶ ಎಸ್. ಮನ್ನಂಗಿ



ಭಾರತದ ಮೊಟ್ಟ ಮೊದಲ
ಹೈಕೋರ್ಟ್ ನ್ಯಾಯಾಧೀಶೆ

ಶ್ರೀಮತಿ ಲೀಲಾ ಸೇಠ್

೧೯೬೦ರ ಘಟನ

"ಕುಖ್ಯಾತ ಡಕಾಯಿತರು" ಎಂಬ ಆಪಾದನೆ ಹೊತ್ತ ನಾಲ್ವರು ಪಟ್ನಾ ಹೈಕೋರ್ಟಿನ ಕಟಕಟೆಯಲ್ಲಿ ವಿಚಾರಿಸಲ್ಪಡುತ್ತಿದರು. ತಮಗೆ ಕೆಳಗಿನ ನ್ಯಾಯಾಲಯವೊಂದರಿಂದ ವಿಧಿಸಲ್ಪಟ್ಟಿದ್ದ ಏಳು ವರ್ಷಗಳ ಸಶ್ರಮ ಸೆರೆವಾಸದ ಶಿಕ್ಷೆಯ ವಿರುದ್ಧ ಅವರು ಮಾಡಿಕೊಂಡಿದ್ದ ಮೇಲ್ಮನವಿಯ ವಿಚಾರಣೆ ಅದು. ಅವರ ಪರವಾಗಿ ಎಂಥವರೂ ತಲೆದೂಗುವಂತೆ ವಾದಿಸುತ್ತಿದ್ದಾಕೆ ಒಬ್ಬ ಮಹಿಳೆ! 'ಔರತ್ ವಕೀಲ್ ಸಾಹಿಬ್' ಎಂದೇ ಜನಪ್ರಿಯವಾಗಿದ್ದವಳು.

ಕೇಸು ಅವಳಂತೆಯೇ ಆಯಿತು. ಆ ನಾಲ್ವರು ಆಪಾದಿತರು ನಿರ್ದೋಷಿಗಳೆಂದು ಬಿಡುಗಡೆಮಾಡಲ್ಪಟ್ಟರು.

ಇದು ಸುಪ್ರಸಿದ್ಧ ಮಗನೊಬ್ಬನ ಸುಪ್ರಸಿದ್ಧ ತಾಯಿಯ ಪ್ರಾರಂಭಿಕ ಗೆಲವುಗಳಲ್ಲಿ ಒಂದು. "ತಕ್ಕ ಹುಡುಗ" ವಿಕ್ರಮ್ ಸೇಠ್‌ನ ತಾಯಿ ಈ ಲೀಲಾ ಸೇಠ್. ಅವ್ವ ಕಾನೂನು ಕ್ಷೇತ್ರದಲ್ಲಿ ಉತ್ತುಂಗವೇರಿದರೆ ಮಗ 'ಎ ಸೂಟಬಲ್ ಬಾಯ್' 'ಗೋಲ್ಡನ್ ಗೇಟ್'ಗಳೇ ಮೊದಲಾದ ಕಾದಂಬರಿಗಳನ್ನು ರಚಿಸಿ ಜಗತ್ಪ್ರಸಿದ್ಧಿ ಪಡೆದಾತ.

ಭಾರತದ ಮೊಟ್ಟ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ ಎಂದೆನಿಸಿರುವ ಶ್ರೀಮತಿ ಲೀಲಾ ಸೇಠ್ ಪ್ರಚಾರ ಪರಾಙ್ಮುಖರು. ಕಾನೂನಿನೊಂದಿಗಿನ ಅವರ ನಂಟಿಗೆ ಈಗ ೪೨ ವರ್ಷ ವಯಸ್ಸು. ಪತಿ ಪ್ರೇಮನಾಥ ಸೇಠ್ ಆಗ ಬಾಟಾ ಶೂಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಮೂರು ವರ್ಷಗಳ ಅವಧಿಗೆ ಅವರು ಇಂಗ್ಲೆಂಡಿಗೆ ವರ್ಗಾಯಿಸಲ್ಪಟ್ಟಾಗ ಚಿಕ್ಕ ಮಗನನ್ನು ಸಾಕುವ ಜವಾಬ್ದಾರಿ ಲೀಲಾರ ಮೇಲೇ ಬಿತ್ತು. ಬಹುಶಃ ಬೇರಾವುದಕ್ಕೂ ತನಗೆ ಅವಕಾಶವೇ ಸಿಗದು ಎಂದು ಭಾವಿಸಿದ್ದ ಲೀಲಾರಿಗೆ ಮಗ ದಿನದ ಬಹುಭಾಗವನ್ನು ಆಕ್ರಮಿಸುವುದಿಲ್ಲ ಎಂಬುದು ಬೇಗನೆ ಅರಿವಿಗೆ ಬಂತು. "ಕಾನೂನು ಅಭ್ಯಾಸವನ್ನೇಕೆ ಮಾಡಬಾರದು? ಎಂಬ ಯೋಚನೆ ಬಂದದ್ದೇ ತಡ ಅದನ್ನು ಕಾರ್ಯಗತಗೊಳಿಸಿಬಿಟ್ಟೆ. ನನ್ನ ಮನೆತನದಲ್ಲಿ ಬೇರೆ ಯಾರೂ ಈ ಕ್ಷೇತ್ರದಲ್ಲಿ ಇರಲಿಲ್ಲ ಎಂಬ ಕಾರಣಕ್ಕಾಗಿ ಅಲ್ಲ, ಕಾನೂನು ಕ್ಷೇತ್ರ ನನ್ನನ್ನು ಆಕರ್ಷಿಸಿದ್ದರಿಂದ ಈ ನಿರ್ಧಾರಕ್ಕೆ ಬಂದೆ" ಎಂದೆನ್ನುವ ಲೀಲಾ ಬಾರ್ ಪರೀಕ್ಷೆಗಳಲ್ಲಿ ಪ್ರಪ್ರಥಮರಾಗಿ ನಿಂತರು.

ಈ ಹೊತ್ತಿಗೆ ಪ್ರೇಮನಾಥ್ ಭಾರತಕ್ಕೆ ಮರಳಿದರು. ಪಟ್ನಾದಲ್ಲಿ ನೆಲೆಸುವ ನಿರ್ಧಾರವನ್ನು ಈ ದಂಪತಿ ಕೈಗೊಂಡರು. ಮನೆಯಲ್ಲಿ ಸುಮ್ಮನೇ ಕುಳಿತಿರುವ ಬದಲು ವಕೀಲಿ ವೃತ್ತಿಯನ್ನಾದರೂ

● ನಿತಾಯಿ

ಭಾರತದ ಹೆಸರನ್ನು ಜಾಗತಿಕ ಸಾಹಿತ್ಯ ನಕ್ಷೆಯಲ್ಲಿ ರಾರಾಜಿಸುವಂತೆ ಮಾಡಿದ ಕಾದಂಬರಿಕಾರ ವಿಕ್ರಮ್ ಸೇಠ್‌ನ ತಾಯಿ ಶ್ರೀಮತಿ ಲೀಲಾ...

(ಆಧಾರ: 'ಸ್ಯಾವಿ'ಯಲ್ಲಿ ಪ್ರಕಟವಾದ ನೀಲಿಮಾ ಪಾಠಕರ ಲೇಖನ)

ನಡೆಸುವುದು ಒಳಿತು ಎಂದೆನಿಸಿದಾಗ ಪತಿಯೂ 'ಅಸ್ತು'ಎಂದರು. ಪಟ್ನಾ ಹೈಕೋರ್ಟಿನಲ್ಲಿ ಲೀಲಾರ ಪ್ರಾಕ್ಟೀಸು ಶುರುವಾದದ್ದು ಹೀಗೆ. ಹತ್ತು ವರ್ಷಗಳ ನಂತರ ಆಕೆಗೆ ದಿಲ್ಲಿ ಹೈಕೋರ್ಟಿನಲ್ಲಿ ಮತ್ತು ಸುಪ್ರಿಂ ಕೋರ್ಟಿನಲ್ಲಿ ವಕೀಲಿ ನಡೆಸುವ ಯೋಗ ಬಂತು. ೧೯೭೪ರಿಂದ ೧೯೭೭ರ ನಡುವೆ ಪ. ಬಂಗಾಲದ ವಕೀಲರ ಮಂಡಳಿ (Panel of Lawyers)ಯಲ್ಲಿ ಸೇವೆ ಸಲ್ಲಿಸಿದರು. ನಂತರ ಹಿರಿಯ ವಕೀಲಳಾಗಿ ಬಡ್ತಿ ಸಿಕ್ಕಿತು. ೧೯೭೮ರ ಜುಲೈ ೨೫ರಂದು ಲೀಲಾ ದಿಲ್ಲಿ ಹೈಕೋರ್ಟಿನಲ್ಲಿ ನ್ಯಾಯಾಧೀಶೆ ಎಂದು ನೇಮಿಸಲ್ಪಟ್ಟರು. ಇಂಥ ಗೌರವವನ್ನು ಪಡೆದ ಮೊದಲ ಮಹಿಳೆ ಆಕೆ.

"ಮೊದಮೊದಲು ನಾನು ಈ ಸ್ಥಾನವನ್ನು ಒಪ್ಪಿದ್ದು ತಪ್ಪು ನಿರ್ಧಾರವೇನೋ ಎಂದೆನಿಸಿತು. ಆದರೆ ಕ್ರಮೇಣ ನಿರ್ಧಾರ ಸರಿಯಾದದ್ದೇ, ನನ್ನ ಕಾನೂನು ಸಾಮರ್ಥ್ಯವನ್ನು ಯೋಗ್ಯ ಮತ್ತು ಉತ್ತಮ ತೀರ್ಪುಗಳಿಗಾಗಿ ಬಳಸಿಕೊಳ್ಳುವ ಸದವಕಾಶ ಇದು ಎಂಬುದು ಮನದಟ್ಟಾಯಿತು." -ಲೀಲಾ ನೆನಪಿಸಿಕೊಳ್ಳುತ್ತಾರೆ.

"ಕಾನೂನು ತುಂಬ ಕ್ಲಿಷ್ಟವಾದ ವ್ಯವಹಾರ. ಯಾರದೋ ಅಸ್ತಿತ್ವ ಇಲ್ಲವೆ ಆಸ್ತಿ ಅಥವಾ ಸ್ವಾತಂತ್ರ್ಯ ಹರಣವಾಗುವ ಸ್ಥಿತಿಯಲ್ಲಿರುವ ಸಂದರ್ಭಗಳನ್ನೇ ತೆಗೆದುಕೊಳ್ಳಿ. ಆ ಎರಡು ಪಕ್ಷಗಳೂ ನೀರಿನಂತೆ ಹಣ ಖರ್ಚು ಮಾಡಿ ಹೋರಾಡುತ್ತಿರುತ್ತವೆ. ಆದರೆ ಅದರ ಬದಲು ಉಭಯ ಪಕ್ಷಗಳೂ ಪರಸ್ಪರ ರಾಜಿ ಮಾಡಿಕೊಂಡುಬಿಟ್ಟರೆ ಅಂದರಂಥ ಆನಂದ-ಸಮಾಧಾನ ನನಗೆ ಬೇರಾವುದರಿಂದಲೂ ಸಿಕ್ಕುವುದಿಲ್ಲ. ಬೇರ್ಪಡೆ ಬಯಸಿದ ದಂಪತಿ ಒಂದಾದರೆ, ಆಸ್ತಿಗಾಗಿ ಹೊಡೆದಾಡುವ ಅಣ್ಣತಮ್ಮಂದಿರು ಅದನ್ನು ಮರೆತು ಕೈಕೂಡಿಸಿದರೆ ನಾನು ಪಡುವ ಸಂಭ್ರಮಕ್ಕೆ ಸಾಟಿಯಾದುದೇ ಇಲ್ಲ. ವಿಚ್ಛೇದನ ಕೋರಿ ಬಂದಿರುವ ಪತಿ-ಪತ್ನಿಯ ವೈಷಮ್ಯದ ನಡುವೆ ಕೂಸು ಬಡವಾಗುವುದನ್ನು ಕಂಡರೆ ನನಗಾಗದು. ಅವರು ಮತ್ತೆ ಮುನ್ನಿನಂತೆ ಇರುವ ನಿರ್ಧಾರ ಕೈಗೊಂಡು ರಾಜಿ ಮಾಡಿಕೊಂಡರೆ ಆ ಮಗುವಿನಷ್ಟೇ ಸಂತಸ ಪಡುವವಳು ನಾನು. ಬಡಿದಾಡುವ ಇಬ್ಬರು ಒಂದಾಗಿ ನಗುನಗುತ್ತಾ ಮರಳುವಂತೆ ಮಾಡುವುದೇ ಒಂದು ಸಾಧನೆ" ಎಂಬುದು ಲೀಲಾರ ನಂಬಿಕೆ.

ಹಿಮಾಚಲ ಪ್ರದೇಶದ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡ (೫, ಆಗಸ್ಟ್ ೧೯೯೧) ಅವರು ಆಡಳಿತಾತ್ಮಕ ಕಾರ್ಯಗಳ ಜತೆಜತೆಗೆ ಅತ್ಯಂತ ಜಟಿಲವೂ ಸೂಕ್ಷ್ಮವೂ ಆದ ಪ್ರಕರಣಗಳನ್ನು ತುಂಬ ಜಾಣ್ಮೆಯಿಂದ ನಿರ್ವಹಿಸಿದರು. ಅಗತ್ಯವೆನಿಸಿದಷ್ಟು ಮಾತ್ರ ಮಾತನಾಡುವ ಲೀಲಾ ತಮ್ಮ ಎಲ್ಲಾ ನೇಮಕಗಳೂ ಒಂದು ರೀತಿಯಲ್ಲಿ ದಾಪುಗಾಲಿನ ಹೆಜ್ಜೆಗಳು ಎಂಬುದನ್ನು ಒಪ್ಪಿಕೊಳ್ಳುತ್ತಾರೆ.

ಆದರೆ ಮುಖ್ಯ ನ್ಯಾಯಮೂರ್ತಿಗಳೇ ಆಗಲಿ, ನ್ಯಾಯಾಧೀಶರಾಗಲಿ ಅವರು ಮನುಷ್ಯರೇ. ಒಂದು ತೀರ್ಪನ್ನು ನೀಡುವಾಗ ಅವರು ಕೂಡ ತಪ್ಪು ಮಾಡುತ್ತಾರೆಯೆ?

"ತೀರ್ಪು ಸರಿಯಾದದ್ದೇ, ತಪ್ಪೇ ಎಂದು ಹೇಳುವುದು ತುಂಬ ಕಷ್ಟ. ಯಾಕೆಂದರೆ ವಿಚಾರಣೆಯ ಸಂದರ್ಭದಲ್ಲಿ ಲಭ್ಯವಾಗುವ ಸಾಕ್ಷ್ಯಾಧಾರಗಳ ಮೇಲೆ ಅವುಗಳ ಮೇಲೆ ಬರುವ ಅಭಿಪ್ರಾಯವನ್ನು ತೀರ್ಪು ಅವಲಂಬಿಸಿರುತ್ತದೆ. ವಕೀಲನೊಬ್ಬ ಒಳ್ಳೆಯ ಕೇಸನ್ನು ಸೋತಾಗ ನಿರಾಶನಾಗುವುದುಂಟು. ಅದೇ ಹೊತ್ತಿಗೆ ಗೆದ್ದಾತ ಬೆನ್ನು ಚಪ್ಪರಿಸಿಕೊಳ್ಳುವುದೂ ಇದೆ." -ಲೀಲಾ ವಿಶ್ಲೇಷಿಸುತ್ತಾರೆ.

ಮರಣದಂಡನೆ ಶಿಕ್ಷೆಯನ್ನು ವಿಧಿಸಬೇಕಾಗಿ ಬರುವ ಪ್ರಕರಣಗಳಂತೂ ತುಂಬ ಉಭಯ ಸಂಕಟಕ್ಕೀಡುಮಾಡುವಂಥವು. ಲೀಲಾ ಇನ್ನೂ ಕಿರಿಯ ವಕೀಲರಾಗಿದ್ದಾಗ ಇಂಥದೊಂದು ಮೊಕದ್ದಮೆಯನ್ನು ಕೈಗೆತ್ತಿಕೊಂಡಿದ್ದರು. "ಮರಣ ದಂಡನೆ ಶಿಕ್ಷೆಯ ತೀರ್ಪು ನೀಡಲ್ಪಟ್ಟಾಗ ನಾನು ತುಂಬಾ ವ್ಯಾಕುಲಗೊಂಡಿದ್ದೆ. ನ್ಯಾಯಾಧೀಶೆಯಾದ ಮೇಲೆ ನಾನಿಂಥ ಪ್ರಕರಣಗಳನ್ನು ಎದುರಿಸಲಿಲ್ಲವೆಂಬುದೇ ನನ್ನ ಪುಣ್ಯ" ಎನ್ನುತ್ತಾರೆ.

ವಕೀಲರಾಗಿ ಲೀಲಾ ಕೈಗೆತ್ತಿಕೊಂಡದ್ದು ಹೆಚ್ಚಾಗಿ ತೆರಿಗೆ ಸಂಬಂಧದ ಪ್ರಕರಣಗಳನ್ನು, ರಿಟ್ ಅರ್ಜಿಗಳನ್ನು, ಕ್ರಿಮಿನಲ್ ಮತ್ತು ಆಡಳಿತಾತ್ಮಕ ಕೇಸುಗಳನ್ನು. "ಈ ಎಲ್ಲ ಪ್ರಕರಣಗಳು ತುಂಬ ಎಚ್ಚರಿಕೆ ಹಾಗೂ ಮನೆಯಲ್ಲಿ ಸಾಕಷ್ಟು ಅಧ್ಯಯನವನ್ನು ಬಯಸುತ್ತವೆ. ಒಮ್ಮೊಮ್ಮೆ ಗಂಟೆಗಟ್ಟಲೆ ಕೂಲಂಕಷವಾಗಿ ಅಧ್ಯಯನ ನಡೆಸಿ ತಯಾರಾಗಿ ಹೋದರೆ

ವಾದ-ಪ್ರತಿವಾದ ಪ್ರಕ್ರಿಯೆ ಐದೇ ನಿಮಿಷಗಳಲ್ಲಿ ಮುಗಿದುಹೋಗಿರುತ್ತದೆ," ಎಂದು ವಿವರಿಸುವ ಲೀಲಾ ತಾವು ನಡೆದುಬಂದ ದಾರಿಯತ್ತ ಒಮ್ಮೆ ನಮ್ಮ ಗಮನವನ್ನು ಹರಿಸುವಂತೆ ಮಾಡುತ್ತಾರೆ.

"ಪಾಟ್ನಾದಲ್ಲಿ ನಾನು ಪ್ರಾಕ್ಟೀಸ್ ಶುರುಮಾಡಿದಾಗ ಜನ 'ಮಹಿಳೆ' ಎಂಬ ಕಾರಣಕ್ಕಾಗಿ ನನ್ನ ಬಳಿ ಕೇಸುಗಳನ್ನು ತರಲು ಹಿಂದೆ ಮುಂದೆ ನೋಡುತ್ತಿದ್ದರು. 'ಹೆಣ್ಣುಮಗಳು ಇಂಥ ಕೆಲಸವನ್ನು ಸರಿಯಾಗಿ ಮಾಡಲು ಸಾಧ್ಯವೇ ಇಲ್ಲ' ಎಂದು ನನ್ನೆದುರೇ ಕೆಲವರು ಅಂದದ್ದೂ ಇದೆ. ಆದರೆ ಒಮ್ಮೆ ಗೊತ್ತಾದ ಮೇಲೆ ತಾವಾಗಿಯೇ ನನ್ನ ಬಳಿ ಬರತೊಡಗಿದರು. ಎಷ್ಟು ಮಟ್ಟಿಗೆಂದರೆ ನನಗೆ ಕೆಲ ಸಂದರ್ಭಗಳಲ್ಲಿ ಪ್ರಾಕ್ಟೀಸು ಮತ್ತು ಮನೆತನದ ಜವಾಬ್ದಾರಿ ಎರಡನ್ನೂ ಒಮ್ಮೆಲೇ ನಿಭಾಯಿಸುವುದು ಕಷ್ಟವಾಗುವಷ್ಟು. ಮಕ್ಕಳನ್ನು ಕರೆದುಕೊಂಡು ಎಲ್ಲಾದರೂ ಹೋದರೆ ಇಲ್ಲಿ ಮನೆಬಾಗಿಲಲ್ಲಿ ಕಕ್ಷಿದಾರರು ಚಾತಕ ಪಕ್ಷಿಯಂತೆ ನನಗಾಗಿ ಕಾದಿರುತ್ತಿದ್ದರು. ಕೆಲವರಂತೂ ಗೊಣಗಿಕೊಳ್ಳುತ್ತಿದ್ದುದೂ ಉಂಟು. ಬರಬರುತ್ತ ಎಲ್ಲವೂ ಅಭ್ಯಾಸವಾಗಿ ಹೋಯಿತು."

ಪ್ರೇಮನಾಥ್ ಸೇಠ್ ಮೊದಲಿನಿಂದಲೂ ಸತಿಗೆ ಸಹಕಾರಿಯಾಗಿ ನಿಂತಿದ್ದಾರೆ. "ನಾನು ಮದುವೆಯ ನಂತರ ಕಾನೂನು ಅಭ್ಯಾಸಕ್ಕೆ ತೊಡಗಿದ್ದೇ ಇದಕ್ಕೆ ಮೊದಲ ಪುರಾವೆ," ಎಂದು ನಗುವ ಲೀಲಾ "ನನ್ನ ಯಶಸ್ಸಿನಲ್ಲಿ ನನ್ನವ್ವ ಮತ್ತು ಕುಟುಂಬದ ಇತರರದೂ ಸಮಾನಪಾಲಿದೆ. ತನ್ನ ಮೂವತ್ತೈದರ ಪ್ರಾಯದಲ್ಲೇ ವಿಧವೆಯಾದ ನನ್ನವ್ವ ತಾನು ಹೆಚ್ಚು ಓದದಿದ್ದರೂ ತನ್ನ ಗಳಿಕೆ ಹಾಗೂ ಉಳಿಕೆಯ ಹಣವನ್ನೆಲ್ಲ ನಮ್ಮ ಶಿಕ್ಷಣಕ್ಕಾಗಿಯೇ ವಿನಿಯೋಗಿಸಿದಳು," ಎನ್ನುವಾಗ ಕಣ್ಣಲ್ಲಿ ಕೃತಜ್ಞತೆ ಸೂಸುತ್ತದೆ.

"ವಿಕ್ರಮ ಸೇಠ್‌ನ ತಾಯಿ ಎಂದು ಕರೆಸಿಕೊಳ್ಳುವಾಗ ಅವರಿಗೆ ಏನನ್ನಿಸುತ್ತದೆ?"

"ಓಹ್. ಅದೇನು ದೊಡ್ಡ ವಿಚಾರವಲ್ಲ ಬಿಡಿ. ನನ್ನ ಎಲ್ಲ ಮಕ್ಕಳೂ ನನಗೆ ಪೂರಕರಾಗಿ ನಿಂತಿದ್ದಾರೆ."

ಒಂದು ವೇಳೆ ಕಾನೂನು ಕ್ಷೇತ್ರಕ್ಕೆ ಬರದೆ ಹೋಗಿದ್ದಿದ್ದರೆ ಲೀಲಾ ಶಿಕ್ಷಕಿಯಾಗಿರುತ್ತಿದ್ದರು. ಕಲಿಸುವಿಕೆಯಲ್ಲಿ ತೀವ್ರ ಆಸಕ್ತಿಯುಳ್ಳ ಆಕೆ ೧೯೫೫ರಲ್ಲೇ ಲಂಡನ್ನಿನಿಂದ ಮಾಂಟೆಸ್ಸರಿ ಶಿಕ್ಷಣ ಪದ್ಧತಿಯಲ್ಲಿ ಡಿಪ್ಲೊಮಾ ಪಡೆದವರು. "ಶಿಕ್ಷಣ - ಅದರಲ್ಲೂ ಪ್ರಾಥಮಿಕ ಶಿಕ್ಷಣ -ತುಂಬ ಮಹತ್ವದ್ದು" ಎಂದವರು ಪ್ರತಿಪಾದಿಸುತ್ತಾರೆ.

೧೯೩೦ರ ಅಕ್ಟೋಬರ್ ೨೦ ರಂದು ಲಕ್ನೋನಲ್ಲಿ ಜನಿಸಿದ ಲೀಲಾ ದಾರ್ಜಿಲಿಂಗ್‌ನ ಲೊರೆಟೊ ಕಾನ್ವೆಂಟ್‌ನಲ್ಲಿ ಶಿಕ್ಷಣ ಪ್ರಾರಂಭಿಸಿ ಕಲಕತ್ತಾ ವಿಶ್ವವಿದ್ಯಾಲಯದ ಮೂಲಕ ೧೯೫೮ರಲ್ಲಿ ಪದವೀಧರೆಯಾದರು.

ಓದುವಿಕೆ, ತೋಟಗಾರಿಕೆ, ಗೃಹಾಂತರಿಕ ಅಲಂಕಾರಗಳಲ್ಲಿ ಅತೀವ ಆಸಕ್ತಿ ಆಕೆಗೆ. ದೊಡ್ಡವರ ಜೀವನ ಚರಿತ್ರೆಗಳು ಆಕೆಯನ್ನು ಆಲೋಚನೆಗೆ ಹಚ್ಚುತ್ತವೆ. ಇಷ್ಟೆಲ್ಲ ಸಾಧನೆಗೈದಿರುವ ಲೀಲಾ ಆತ್ಮ ಚರಿತ್ರೆ ಚರಿತ್ರೆಯನ್ನು ಬರೆಯಲು ಇಷ್ಟಪಡುವುದಿಲ್ಲವೆ?

"ಅನೇಕರು ಬರೆಯಲು ಹೇಳಿದ್ದುಂಟು. ಆದರೆ ನಾನು ಉತ್ತಮವಾಗಿ ಅದನ್ನು ನಿರೂಪಿಸಬಲ್ಲೆನೆ? ಎಂಬ ಅಳುಕು ನನಗಿದೆ. ತೀರ್ಪುಗಳನ್ನು ಬಿಟ್ಟರೆ ನಾನು ಈ ವರೆಗೆ ಬೇರೇನನ್ನೂ ಬರೆದೇ ಇಲ್ಲ. ನಾನು ಈಗಷ್ಟೇ ಓದಿ ಮುಗಿಸಿರುವ ಅಗಾಥಾ ಕ್ರಿಸ್ಟಿಯ ಆತ್ಮಚರಿತ್ರೆ ನನಗೆ ತುಂಬ ಇಷ್ಟವಾಗಿದೆ."

ಸದ್ಯ ವರ್ಲ್ಡ್‌ವೈಡ್ ಫಂಡ್ ಫಾರ್ ನೇಚರ್ ಹಾಗೂ ಇಂಡಿಯಾ ಇಂಟರ್‌ನ್ಯಾಶನಲ್ ಸೆಂಟರ್‌ನ ಧರ್ಮದರ್ಶಿಗಳಲ್ಲೊಬ್ಬರಾಗಿರುವ ಲೀಲಾ ಸೇಠ್ ಮಿರಾಂಡಾ ಹೌಸ್ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷೆಯೂ ಹೌದು. ರಾಜನ್ ಪಿಳ್ಳೆ ಸಾವಿನ ಕುರಿತಂತೆ ರಚಿಸಲ್ಪಟ್ಟಿರುವ ಆಯೋಗದ ಅಧ್ಯಕ್ಷೆಯೂ ಇವರೆ.

"ನಮ್ಮ ದೇಶದಲ್ಲಿ ಸ್ತ್ರೀಯ ಸ್ಥಿತಿಗತಿ ಸುಧಾರಿಸಲಿ, ಮಹಿಳೆಗೆ ಹೆಚ್ಚು ಸ್ವಾತಂತ್ರ್ಯ ಲಭಿಸಲಿ; ಆ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಂಡು ಅವಳು ತಾನು ಇಷ್ಟಪಟ್ಟ ಕ್ಷೇತ್ರದಲ್ಲಿ ಮುಂದೆ ಬರಲಿ. ಇದಕ್ಕೆ ನಾನೇನಾದರೂ ನೆರವಾಗಬಲ್ಲೆನೆಂದಾದರೆ ಅದರಷ್ಟು ಸಂತಸ ನನಗೆ ಬೇರೊಂದಿಲ್ಲ." -ಇದು ಲೀಲಾರ ಅಪೇಕ್ಷೆ.



ಜನಸೇವೆಯೇ ಜೀವನದುಸಿರಾಗಿರುವ

ಜೆಸ್ಟನ್ ಪೆಮಾ

- ಸೋನಿ

ನಿರಾಶ್ರಿತರಾಗಿ ತಮ್ಮ ದೇಶ ಬಿಟ್ಟು ಬಹುಸಂಖ್ಯಾಕವಾಗಿ ಭಾರತದಲ್ಲೂ ಚದುರಿದಂತೆ, ಜಗತ್ತಿನ ಇನ್ನಿತರ ದೇಶಗಳಲ್ಲೂ ವಾಸಿಸಿರುವ, ಶ್ರಮಜೀವಿಯಾದ, ಬೃಹತ್ ಸಮುದಾಯವೊಂದರ ಧರ್ಮಗುರು ದಲಾಯಿಲಾಮಾರ ಸೋದರಿ ಈಕೆ. "ಜಗತ್ತೇ ತಲೆಬಾಗುವ ದಲಾಯಿ ಲಾಮಾರಿಗೆ ಒಬ್ಬ ತಂಗಿ ಇದ್ದಾಳೆಯೆ?" ಎಂಬ ಪ್ರಶ್ನೆಯನ್ನು ನೀವು ಕೇಳಿಯೇಕೇಳುತ್ತೀರೆಂದು ಗೊತ್ತು. ಆದರೆ ಸ್ವತಃ ಆಕೆಯೆ ತಾನು ಇಂಥ ಮಹಾತ್ಮನ ಒಡಹುಟ್ಟಿದವಳೆಂದು ಎಂದೂ ಯಾರೊಂದಿಗೂ ಹೇಳಿಕೊಂಡುದುದಿಲ್ಲ. ಅಣ್ಣನ ಪ್ರಭಾವವಲಯದಲ್ಲೇ ಬೆಳೆಯಲು ಯತ್ನಿಸಿದುದಿಲ್ಲ. ಸ್ವಂತಿಕೆಯನ್ನು ಗಳಿಸಿಕೊಂಡು, ಉಳಿಸಿಕೊಂಡು ಸಮಾಜ ಸೇವೆಯನ್ನೆ ಜೀವನದ ಉಸಿರಾಗಿಸಿಕೊಂಡಿರುವಾಕೆ ಜೆಸ್ಟನ್ ಪೆಮಾ.

ಮುಖದಲ್ಲೆಂದೂ ಮಾಸದ ನಗೆ, ಕಣ್ಣಲ್ಲೆಂದೂ ಮರೆಯಾಗದ ಮಮತೆಯ ಈ ಮಧ್ಯ ವಯಸ್ಕ ಮಹಿಳೆ 'ಎನಗಿಂತ ಕಿರಿಯರಿಲ್ಲ' ಎಂಬ ವಿನೀತ ವ್ಯಕ್ತಿತ್ವವನ್ನು ಬೆಳೆಸಿಕೊಂಡಾಕೆ.

"ಮಾತೃಭೂಮಿ ಟಿಬೇಟ್ಟಿನಿಂದ ನಮ್ಮ ಜನ ಒಂದು ವೇಳೆ ಓಡಿಬಂದಿರದಿದ್ದರೆ ಪೂಜ್ಯ ದಲಾಯಿ ಲಾಮಾರ ಕಚೇರಿಯಲ್ಲೇ ಕೆಲಸ ಮಾಡಿಕೊಂಡಿರುತ್ತಿದ್ದೆ. ಪೂಜ್ಯ ಧರ್ಮಗುರು ನನಗೆ ಯಾವತ್ತಾಲಕ್ಕೂ ಪ್ರೇರಣೆಯಾಗಿ ನಿಂತಿದ್ದಾರೆ," ಪೆಮಾ ವಿನಮ್ರಳಾಗಿ ಹೇಳುತ್ತಾಳೆ.

ಜೆಸ್ಟನ್ ಪೆಮಾಗೆ ಮೂವರು ಮಕ್ಕಳು. ಮಗಳು ಟೆಂಚೋ ತನ್ನ ತಾಯಿಯದೊಂದು ಆತ್ಮೀಯ ಚಿತ್ರವನ್ನು ನಮ್ಮೆದುರು ಬಿಡಿಸಿಡುತ್ತಾಳೆ:

"ಪರಿಪೂರ್ಣತೆಯತ್ತ ಸಾಗುವ ಯತ್ನದಲ್ಲಿ ನಮ್ಮಮ್ಮ ಸದಾ ತೊಡಗಿರುತ್ತಾಳೆ. ಜತೆಗೆ ತನ್ನ ಮಕ್ಕಳನ್ನೂ ಸಮಾಜದ ಇತರರನ್ನೂ ಆ ಕಡೆ ಕೊಂಡೊಯ್ಯುವ ಹಂಬಲವುಳ್ಳಾಕೆ ನಮ್ಮಮ್ಮ ಸ್ವಲ್ಪ ಮುಂಗೋಪಿ ಎಂದೆನಿಸಿದರೂ ಅದು ಆಕೆಯ ದೌರ್ಬಲ್ಯವಲ್ಲ; ತಪ್ಪು ಹೆಜ್ಜೆ, ಆಲಸಿಕೆಯನ್ನಾಕೆ ಸಹಿಸುವುದಿಲ್ಲ ಎಂಬುದರ ದ್ಯೋತಕ. ತನ್ನ ಕುಟುಂಬ ನಿರ್ವಹಣೆ ಹಾಗೂ ಸಮಾಜಸೇವೆ ಎರಡನ್ನೂ ಸರಿಸಮವಾಗಿ ತೂಗಿಸಿಕೊಂಡು ಹೊರಟಿರುವಾಕೆ ನನ್ನ ತಾಯಿ. ನಿಗರ್ವಿ, ಉದಾರಿ. ಒಂದೊಮ್ಮೆ ನಮ್ಮ ಮೇಲೆ ಕೂಗಾಡಿ ಬಿಡುತ್ತಾಳೆ. ಮರುಕ್ಷಣದಲ್ಲೆ ತನ್ನ ದುಡುಕಿಗಾಗಿ ಪರಿತಪಿಸಿ ನಮ್ಮನ್ನೆಲ್ಲ ಕ್ಷಮೆ ಕೇಳುತ್ತಾಳೆ. ಆಗೆಲ್ಲ ಆಕೆಯ ವ್ಯಕ್ತಿತ್ವ ಎಷ್ಟು ದೊಡ್ಡದೆಂಬುದರ ಅರಿವು ನಮಗಾಗುತ್ತದೆ. ನಮ್ಮೊಂದಿಗಷ್ಟೇ ಅಲ್ಲ, ಸಮುದಾಯದ ಇತರರೊಂದಿಗೆ ಆಕೆ ವರ್ತಿಸುವುದೂ ಹೀಗೆಯೆ....

"ನಮಗೆ ನಮ್ಮ ತಾಯಿಯೇ ಎಲ್ಲ. ಸೋದರಮಾವ ದಲಾಯಿ ಲಾಮಾರೊಂದಿಗೆ ನಾವು ಯಾವುದೇ ಕೌಟುಂಬಿಕ ಸಂಬಂಧವನ್ನು ಇಟ್ಟುಕೊಳ್ಳುವ ಹಾಗಿಲ್ಲ. ಯಾಕೆಂದರೆ ಅವರನ್ನು ನಾವೆಲ್ಲ ಟಿಬೇಟಿಯನ್ನರು ಮೊದಲ ದಲಾಯಿಲಾಮಾರ ಅವತಾರ ಎಂದೇ ಭಾವಿಸುತ್ತೇವೆ. ಲಾಮಾ ಅಂದರೇನೇ 'ಗುರುವಿನ ಅವತಾರ' ಎಂದರ್ಥ."

(ಆಧಾರ: 'ಸ್ಟಾವಿ'ಯಲ್ಲಿ ಪ್ರಕಟವಾದ ಆಶಾ ಚೌಧರಿಯವರ ಲೇಖನ.)

ಚೀನೀಯರ ದಾಳಿಯಿಂದಾಗಿ ತತ್ತರಿಸಿ ಟಿಬೇಟಿನಿಂದ ಓಡಿ ಬಂದ ಈ ಜನ ನಿರ್ವಾಸಿತರಾದುದರ ಜತೆಗೆ ತಮ್ಮ ಧರ್ಮ-ಸಂಸ್ಕೃತಿ-ಪರಂಪರೆಗೆ ಒದಗಿದ ಸಂಕಷ್ಟದಿಂದಾಗಿ ತಳಮಳಿಸಿದರು. ಆದರೆ 'ಬದುಕು'ವುದು ಮುಖ್ಯ; ಬದುಕಿ ತಮ್ಮ ದೇಶಕ್ಕಾಗಿ ಹೋರಾಡುವುದೂ ಮುಖ್ಯ; ಶ್ರಮಜೀವಿಯಾದರೆ ಮಾತ್ರ ಇವೆರಡೂ ಸಾಧ್ಯ ಎಂದು ನಂಬಿ ನಡೆಯುತ್ತಿರುವವರು ಈ ಜನ.

ಈ ಸಂದರ್ಭದಲ್ಲಿ ಜೆಸ್ಟನ್ ಪೆಮಾ ವಿದ್ಯಾರ್ಥಿನಿಯಾಗಿ ಸ್ವಿಟ್ಜರ್‌ಲಂಡಿನಲ್ಲಿದ್ದಳು. ತನ್ನ ಜನ ನಿರಾಶ್ರಿತರಾಗಿ ಅನ್ಯದೇಶಗಳಲ್ಲಿ ಅಲೆಯಬೇಕಾದ ಸ್ಥಿತಿಯೊದಗಿದ್ದನ್ನು ಅರಿತು ಆಕೆ ಅಕ್ಷರಶಃ ಅತ್ತುಬಿಟ್ಟಳು. ವಿದ್ಯಾಭ್ಯಾಸಕ್ಕೆ ಶರಣು ಹೊಡೆದು ಭಾರತಕ್ಕೆ ಧಾವಿಸಿದ ಜೆಸ್ಟನ್ ತನ್ನವರ ನೆರವಿಗೆ ನಿಂತಳು.

"ಇಂಥ ಸಮಯದಲ್ಲಿ ಸಹಾಯಹಸ್ತ ಚಾಚಬೇಕಾದದ್ದು ಪ್ರತಿ ಮನುಷ್ಯನ ಧರ್ಮ. ಎಲ್ಲರೂ ನನ್ನವರೆ ಎಂದುಕೊಂಡು ದುಡಿಯಬೇಕು. ಆಗ ಖಂಡಿತ ಎಲ್ಲರೂ ನಮ್ಮವರಾಗುತ್ತಾರೆ. ಬೃಹತ್ ಸಮುದಾಯವೊಂದರ ಸೇವೆಗೆ ನಿಂತಾಗ ಎಂಥ ತ್ಯಾಗಕ್ಕೂ ನಾವು ಸಿದ್ಧರಾಗಬೇಕಾಗುತ್ತದೆ. ಜನಸೇವೆಗೆ ತೊಡಗುವವನನ್ನು ಜನಾರ್ದನನೆಂದೂ ಕೈಬಿಡುವುದಿಲ್ಲ"- ಇದು ಪೆಮಾಳ ನಂಬಿಕೆ.

ಭಾರತಕ್ಕೆ ಬಂದ ಕೂಡಲೇ ದಲಾಯಿಲಾಮಾರ 'ಧರ್ಮಶಾಲಾ'ದಲ್ಲಿ ಕೈಂಕರ್ಯಕ್ಕೆ ನಿಂತ ಪೆಮಾ ನೂರಾರು ಜನ ಅನಾಥರಿಗೆ, ದರಿದ್ರರಿಗೆ 'ತಾಯಿ'ಯಾದಳು. ಅವರ ಸ್ಥಿತಿ ಸುಧಾರಣೆಗೆಂದು ಅವಿಶ್ರಾಂತವಾಗಿ ದುಡಿಯತೊಡಗಿದಳು. ಮಕ್ಕಳಿಗೆ ಆಕೆಯ ಮೊದಲ ಪ್ರಾಶಸ್ತ್ಯ. ಹಗಲಲ್ಲಿ ನರ್ಸರಿ ಸ್ಕೂಲನ್ನೂ ಪ್ರಾಥಮಿಕ ಶಾಲೆಯನ್ನೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನೂ ನಡೆಸುತ್ತಿದ್ದ ಪೆಮಾ ರಾತ್ರಿಯೆಲ್ಲ ತನ್ನ ಸಮುದಾಯದ ಹಿರಿಯರೊಂದಿಗೆ ಸೇರಿ ಯೋಜನೆಗಳನ್ನು ರೂಪಿಸುತ್ತಿದ್ದಳು. ಈ ಒಬ್ಬಂಟಿ ಸಾಹಸಿಯ ಕಾರ್ಯ ಒಂಟಿಗೈ ಚಪ್ಪಾಳೆಯಾಗಲಿಲ್ಲ.

ನಡೆದಿರುವ ಕಾರ್ಯ ಪ್ರಗತಿಯ ಕುರಿತು ಅಧ್ಯಯನ ನಡೆಸಲೆಂದು ದಲಾಯಿ ಲಾಮಾರಿಂದ ಕಳಿಸಲ್ಪಟ್ಟ ತಂಡ ಜೆಸ್ಟನ್ ಪೆಮಾಳ ಕಾರ್ಯವನ್ನು ಕೊಂಡಾಡಿತು. ಕೆಲವು ವರ್ಷಗಳ ನಂತರ ದಲಾಯಿ ಲಾಮಾ ಕರೆದ ವಿಶೇಷ ಸಭೆಯಲ್ಲಿ ಜೆಸ್ಟನ್‌ಳನ್ನು ಟಿಬೇಟಿನ ಮೊಟ್ಟಮೊದಲ ಕ್ಯಾಬಿನೆಟ್ ಸಚಿವೆಯನ್ನಾಗಿ ಆರಿಸಲಾಯಿತು.

ಅಧಿಕಾರವೆಂದೂ ಪೆಮಾಳನ್ನು ಕುರುಡಾಗಿಸಿಲ್ಲ. ಇನ್ನು ಅದಕ್ಕೇ ಅಂಟಿಕೊಂಡು ಕೂಡುವ ಹಟವಾದರೂ ಎಲ್ಲಿ? ಮಕ್ಕಳೊಂದಿಗೆ ಕೆಲಸ ಮಾಡುವ ಹೆಬ್ಬಯಕೆಯಿಂದಾಗಿ ಕೆಲ ದಿನಗಳಲ್ಲಿಯೇ ಪೆಮಾ ಸಚಿವ ಪದವಿಯನ್ನು ತೊರೆದಳು. "ಮಕ್ಕಳನ್ನು ಬಿಟ್ಟಿರಲಾಗದು. ಈ ಮಕ್ಕಳು ನನ್ನನ್ನು ತುಂಬ ಹಚ್ಚಿಕೊಂಡಿವೆ. ಅವರ ಮೇಲಿನ ಪ್ರೀತಿಯೇ ನನಗೆ ಮುಖ್ಯ. ಅವರಿಂದ ದೂರ ಉಳಿದರೆ ಉಸಿರುಗಟ್ಟಿದಂತಾಗುತ್ತದೆ"- ಪೆಮಾಳ ಹೃದಯ ವೈಶಾಲ್ಯವನ್ನು ತೋರುವ ಮಾತಿದು.

"ಅಮ್ಮ ಅದೆಷ್ಟು ಕಟ್ಟುನಿಟ್ಟಿನವಳೆಂಬುದು ನಮಗೆ ಗೊತ್ತಾದದ್ದು ಆಕೆ ನಡೆಸುತ್ತಿದ್ದ ಶಾಲೆಗಳಲ್ಲಿ ನಾವು ಓದುತ್ತಿದ್ದಾಗಲೆ. ತನ್ನ ಮಕ್ಕಳೆಂದು ನಮ್ಮ ಯಾವುದೇ ತಪ್ಪನ್ನೂ ಆಕೆ ಮನ್ನಿಸುತ್ತಿರಲಿಲ್ಲ. ಇನ್ನುಳಿದ ಮಕ್ಕಳಿಗಿಂತ ನನ್ನನ್ನು ಭಿನ್ನವಾಗಿಯೂ ನೋಡುತ್ತಿರಲಿಲ್ಲ. ಅನುದಿನದ ಬದುಕಿನಲ್ಲಿ ಧರ್ಮವನ್ನು ಪರಿಪಾಲಿಸುವ ಕುರಿತೂ ಆಕೆ ಶಾಲೆಯಲ್ಲಿ ಹೇಳುತ್ತಿದ್ದಳು. ಬರಿ ಪ್ರಾರ್ಥನೆ ಮಾಡಿದರಾಗಲಿಲ್ಲ, ಅದರ ತತ್ವಗಳನ್ನು ನಿತ್ಯದ ಬದುಕಿನಲ್ಲಿ ಆಚರಿಸುವುದು ಮುಖ್ಯ. ನಾನು ಇಂಥ ತಾಯಿಯ ಮಗಳಾಗಿ ಧಾರ್ಮಿಕ ಮೌಲ್ಯಗಳನ್ನರಿತು ಬದುಕುವಂತಾಗಿರುವುದು ನನ್ನ ಪುಣ್ಯ" ಎಂದು ಮಗಳು ಟೆಂಚೊ ಅಭಿಮಾನಪಡುತ್ತಾಳೆ.

ಕುಲು ಕೊಳ್ಳದಲ್ಲಿನ ಪೆಮಾಳ ಯೋಜನೆ ಆಕೆಯ ಕ್ರಿಯಾಶಕ್ತಿಗೆ ಸಂದ ಇನ್ನೊಂದು ಪ್ರಮಾಣಪತ್ರದ ಹಾಗೆ. ಆದಿವಾಸಿಗಳ ನಡುವಿದ್ದುಕೊಂಡು ಕೆಲಸ ಮಾಡಬೇಕು. "ರಸ್ತೆ ಕಾಮಗಾರರ ವಸತಿಗಳಲ್ಲಿನ ಪರಿಸ್ಥಿತಿಯನ್ನು ಕಂಡು ಖೇದವಾಯಿತು. ಮಕ್ಕಳು ಹಾಗೂ ವೃದ್ಧರ ಸ್ಥಿತಿಯಂತೂ ತೀರ ಶೋಚನೀಯವಾಗಿತ್ತು. ಅವರತ್ತ ಗಮನಹರಿಸಬೇಕಾದ್ದು ಆಗ ಅತ್ಯಂತ ತುರ್ತಾಗಿ ಆಗಬೇಕಿದ್ದ ಕೆಲಸವಾಗಿತ್ತು" ಎಂದು ನೆನೆದುಕೊಳ್ಳುವ ಪೆಮಾ ಆ ಕೂಡಲೇ ಕಾರ್ಯಪ್ರವೃತ್ತಳಾದಳು. ಆ ಹಳ್ಳಿಯಲ್ಲೊಂದು ಮಾಧ್ಯಮಿಕ, ಎರಡು ಪ್ರಾಥಮಿಕ

ಶಾಲೆಗಳಿದ್ದವು. ಒಂದು ವೃದ್ಧಾಶ್ರಮವೂ ಇತ್ತು. ಮಕ್ಕಳಿಗೆ ಪ್ರತ್ಯೇಕ ವ್ಯವಸ್ಥೆಯೇ ಇರಲಿಲ್ಲ.

"ವೃದ್ಧರಿಗೆ ಒಂಟಿತನ ಕಾಡುತ್ತಿತ್ತು. ಮಕ್ಕಳನ್ನು ಅವರೊಂದಿಗೆ ಇರಗೊಡುವುದೊಂದೇ ಪರಿಹಾರವೆಂದು ನನಗನಿಸಿತು. ಹಾಗೆ ಮಾಡಿ ನೋಡಿದೆ. ಮಕ್ಕಳೊಂದಿಗೆ ವೃದ್ಧರು ಅದೆಷ್ಟು ಬೇಗ ಹೊಂದಿಕೊಂಡರು ಅಂತೀರಿ! ಇದರಿಂದ ಮಕ್ಕಳಿಗೆ ಹಿರಿಯರ ಮಾರ್ಗದರ್ಶನ, ಆ ಹಿರಿಯರಿಗೆ ತಾವು ಏಕಾಕಿಯಲ್ಲ ಎಂಬ ಮಾನಸಿಕ ಸಮಾಧಾನ ಎರಡೂ ಏಕಕಾಲಕ್ಕೇ ಲಭಿಸಿದುವು" ಎಂದಳು. ಜೆಸ್ಟನ್ ಪೆಮಾ ಆ ಯೋಜನೆಯ ಸಂದರ್ಭದಲ್ಲಿ, ಮಾನವೀಯ ಸಂಬಂಧದ ಕೊಂಡಿಯನ್ನು ಗಟ್ಟಿಯಾಗಿ ಬೆಸೆಯುವ ಇಂಥ ಕೆಲಸಗಳನ್ನು ಸದ್ದಿಲ್ಲದೆ ಮಾಡಿ ಮುಗಿಸಿದಳು.

ತದನಂತರ ಪೆಮಾ ನಡೆದದ್ದು ಲಡ್ಡಾಖಿಗೆ. ಅಲ್ಲಿಯ ಶುಷ್ಕ ಭೂಮಿಯ ಕಾರಣದಿಂದಾಗಿ ಜನ ತುಂಬ ಸಂಕಷ್ಟಕ್ಕೊಳಗಾಗಿದ್ದರು. ಅವರೆಲ್ಲರ ಸಂಕಷ್ಟ ಪರಿಹಾರದ ಕೆಲಸವನ್ನು ಪೂರೈಸಲು ಪೆಮಾಗೆ ಹಿಡಿದದ್ದು ಎರಡು ದಶಕಗಳ ಅವಧಿ. ಇಂದು ೨,೦೦೦ ಮಕ್ಕಳು ಆನಂದದಿಂದ ಆಡಿಕೊಳ್ಳುವ ಈ ಜಾಗವೀಗ ಅಂದದ ಬೀಡಾಗಿ, ಹಸಿರುಟ್ಟು ನಲಿಯುತ್ತಿದೆ. ಒಂದು ಕಾಲಕ್ಕೆ ಕೇವಲ ನಿಟ್ಟುಸಿರೇ ಕೇಳಿಬರುತ್ತಿದ್ದ ಅಲ್ಲೀಗ ನಗೆಯ ಅಲೆಗಳು ಉಕ್ಕೇರುತ್ತಿವೆ.

ಮಕ್ಕಳ ಕಲ್ಯಾಣ ಯೋಜನೆಗಳ ವಿಷಯದಲ್ಲಿ ನಮ್ಮ ದೇಶದ ವಿವಿಧೆಡೆ ಜೆಸ್ಟನ್ ಪೆಮಾ ಮಾಡಿದ ಕೆಲಸಗಳು ಶಾಶ್ವತ ಸ್ವರೂಪದವು. ಶಿಶುಗ್ರಾಮಗಳು, ಶಾಲೆಗಳು, ವಸತಿಗೃಹಗಳು, ಒಂದೇ ಎರಡೆ? ಆದರೆ ದಲಾಯಿ ಲಾಮಾರ ಸೋದರಿಗೆ ಇದೆಲ್ಲ ಕಣ್ಣುಮುಚ್ಚಿ ತೆಗೆಯುವುದರೊಳಗಾಗಿ ಸಾಧಿಸಲಿಲ್ಲ. ಹೆಜ್ಜೆ ಹೆಜ್ಜೆಗೂ ಆಕೆ ಅಡ್ಡಿ-ಆತಂಕಗಳನ್ನು ಎದುರಿಸಬೇಕಾಗಿ ಬಂತು.

"ಮೂಲಭೂತ ಪರಿಕರಗಳ ಅಲಭ್ಯತೆಯ ರೂಪದಲ್ಲಿ ಅನಾನುಕೂಲ ಕಾಡಿತು. ತುಂಬ ಬೇಸರಗೊಂಡೆ. ಆದರೆ ಹಾಗೆಂದು ಕೆಲಸ ನಿಲ್ಲಿಸಲಾದೀತೇ? ಎದುರಿಸಬೇಕಾಗಿ ಬಂದ ಇನ್ನೊಂದು ತೊಂದರೆ- ಜಾಗದ ಕೊರತೆಯೆಂದರೆ ತಲೆಗೆ ಕೈ ಹಚ್ಚಿ ಕೂಡುವುದೊಂದೇ ಬಾಕಿ ಎಂಬ ಹಂತದಲ್ಲೇ ಅದೆಲ್ಲಿಂದಲೋ, ಯಾವ ಮೂಲದಿಂದಲೋ ಅನುಕೂಲ, ಸಹಾಯ ಒದಗಿ ಬರುತ್ತಿತ್ತು..." ಪೆಮಾ ಆಗಿನ ಚಿತ್ರವನ್ನು ನೀಡುತ್ತಾಳೆ.

ಜನಕಲ್ಯಾಣದಿಂದ ಆಕೆ ಕೃಷಿ ಸುಧಾರಣೆಯೆಡೆ ಹೊರಳಿದಳು. ಪರ್ಯಾಯ ಕೃಷಿ ವ್ಯವಸ್ಥೆಯನ್ನಾಕೆ ರೈತರಿಗೆ ಬಿಂಬಿಸಿದಳು. ಇದರಿಂದ ಭೂಸಾರವನ್ನು, ಫಲವತ್ತತೆಯನ್ನು ಕಾಪಾಡಿಕೊಂಡು ಹೋಗಬಹುದೆಂಬುದು ರೈತರಿಗೆ ಅರಿವಾಗುವಂತೆ ಮಾಡಿದಳು. ದಕ್ಷಿಣ ಭಾರತದಲ್ಲೂ ಅನೇಕ ಕಡೆ ಕೃಷಿ ಯೋಜನೆಗಳನ್ನು ಪೆಮಾ ರೂಪಿಸಿದ್ದುಂಟು.

"ಇಲ್ಲಿಯ ಬಹುತೇಕ ಭೂಮಿ ಮಳೆಯನ್ನೇ ಅವಲಂಬಿಸಿದೆ. ಆದರೆ ಅಮ್ಮ ಪ್ರಯೋಗಾರ್ಥವಾಗಿ ಇನ್ನಿತರ ಬೆಳೆಗಳನ್ನು ಅಲ್ಲಿ ಬೆಳೆಯುವ ಪ್ರಯತ್ನಕ್ಕಿಳಿದಳು. ಪರಿಣಾಮವೇನು ಗೊತ್ತೆ? ಬೆಳೆಯಬಹುದೆಂದು ಅಂದುಕೊಂಡೇ ಇರದಂಥಲ್ಲಿ ಕೂಡ ತೆಂಗು, ಮೆಣಸು ಹಾಗೂ ಅಂಥವೇ ಅನೇಕ ಬೆಳೆಗಳು ನಳನಳಿಸತೊಡಗಿದವು.

ಕರ್ನಾಟಕದಲ್ಲೂ ಜೆಸ್ಟನ್ ಪೆಮಾ ಕಾರ್ಯ ನಿರ್ವಹಿಸುತ್ತಿದ್ದಾರೆ. ಬೈಲಕುಪ್ಪೆ ಯೋಜನೆ ಪೆಮಾಳ ಯೋಜನೆಗಳಲ್ಲೇ ಅತ್ಯಂತ ದೊಡ್ಡದು ಮತ್ತು ಮಹತ್ವಾಕಾಂಕ್ಷೆಯಾದದ್ದು. ಇಲ್ಲಿಯೂ ಶಿಕ್ಷಣ ಹಾಗೂ ಆರೋಗ್ಯ ರಕ್ಷಣೆಗೇ ಆಕೆ ಒತ್ತು ನೀಡಿದ್ದಾಳೆ.

ಜನಸೇವೆಯ ಎಡೆಬಿಡದ ಕಾರ್ಯಗಳ ನಡುವೆಯೂ ಪೆಮಾ ಬರವಣಿಗೆಗೆ ಅವಕಾಶ ಮಾಡಿಕೊಳ್ಳುತ್ತಾಳೆ. "ಟಿಬೇಟಿನಲ್ಲಿ ಮೂರು ತಿಂಗಳು" (`Three Months in Tibet')- ಆಕೆ ತನ್ನ ಮಾತೃಭೂಮಿಯಲ್ಲಿ ರಸ್ತೆಯ ಮೂಲಕ ಸಂಚರಿಸಿದಾಗ ಪಡೆದ ಅನುಭವಗಳ ವೃತ್ತಾಂತ.

ದೊಡ್ಡ ಮನಸ್ಸಿನವರ ಸಾಧನೆಗಳೇನೇ ಇದ್ದರೂ ಅವರೂ ಕನಸುಣಿಗಳೇ. ಆದರೆ ಅವರು ಕೇವಲ ಹಗಲುಗನಸು ಕಾಣುತ್ತ ಕೂತುಬಿಡುವುದಿಲ್ಲ. ಇಂಥ ಕನಸುಗಳು ಅವರನ್ನು ಇನ್ನಷ್ಟು ಉನ್ನತ ಪಾತಳಿಗೆ ಒಯ್ಯುತ್ತವೆ. ಜೆಸ್ಟನ್ ಪೆಮಾ ಕೂಡ ಇದಕ್ಕೆ ಹೊರತಲ್ಲ. "ಶಾಂತವಾದ, ಹಿಂಸಾರಹಿತವಾದ ಜಗತ್ತು ನೋಡುವ ಕನಸು" ಪೆಮಾಳದು.



ಊರಿಗೇ ಕಣ್ಣಾದ ಕಣ್ಣಿಲ್ಲದ ಹುಡುಗಿ!

ಒಂದು ಸಮುದಾಯದ ಏಳಿಗೆಯು ಸಮರ್ಥ ಶ್ರೀಸಾಮಾನ್ಯನಿಂದ ಮಾತ್ರ ಸಾಧ್ಯ ಎಂಬುದು ಹಿಂದಿನ ಹಿರಿಯರ ನಿಲುವಾಗಿತ್ತು. ನಂಬಿಕೆಯೂ ಆಗಿತ್ತು. ಬುದ್ಧಿಬಲದ ಜತೆಗೆ ಸಮುದಾಯದ ಸಮಾಜದ ಉನ್ನತಿಗಾಗಿ 'ಹಂಬಲ'ವುಳ್ಳವರೇ ಈ ಕಾರ್ಯದಲ್ಲಿ ತೊಡಗಲು ಯೋಗ್ಯರು ಎಂಬುದು, ಆಗ ಜನ ಒಪ್ಪಿಕೊಂಡ ಅಳತೆಗೋಲಾಗಿತ್ತು. ಕ್ರಮೇಣ 'ಹಂಬಲ'ವು ಮಾಯವಾಗತೊಡಗಿ ಮೈಬಲದ್ದೇ ಕೈಮೇಲಾದ್ದರಿಂದ ಬುದ್ಧಿ ಬಲವು ಮೂಲೆಗುಂಪಾಗತೊಡಗಿತು. 'ದೇಶ ಸೇವೆ', 'ಸಮಾಜ ಸೇವೆ' ಎಂಬ ಪದಗಳು, 'ದೇಶ ಸೇವಕ' 'ಸಮಾಜ ಸೇವಕ' ಎಂಬ ಪದವಿಗಳು ನಗೆಪಾಟಲಿಗೀಡಾಗುವಷ್ಟು, ಆ ಪದಗಳನ್ನು ಕೇಳಿದರೇ ಮನಸ್ಸು ರೋಸಿ ಹೋಗುವಷ್ಟು ಪರಿಸ್ಥಿತಿ ಬದಲಾಗಿ ನಿಂತಿತು. ಈಗಂತೂ ಎಂಥ 'ತುದಿ'ಗೆ ಬಂದು ನಿಂತಿದ್ದೇವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಹಾಗಾದರೆ ಸಮುದಾಯ ಸೇವೆಯ 'ಹಂಬಲ'ವಿರುವವರು ಈಗ ಇಲ್ಲವೇ ಇಲ್ಲವೆ? ಇದ್ದಾರೆ. ಆದರೆ ಅವರು ಎಂದೂ ಆ ಬಗ್ಗೆ 'ಟಾಂ ಟಾಂ' ಮಾಡುವುದಿಲ್ಲ. ತಾವು ಮಾಡುವ ಕಾರ್ಯವನ್ನು ಸದ್ದಿಲ್ಲದೆ ಮಾಡಿ ಏನೂ ನಡೆದೇ ಇಲ್ಲವೆಂಬಂತೆ ಸುಮ್ಮನಿದ್ದುಬಿಡುತ್ತಾರೆ.

ಜನಹಿತ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡುವ ವ್ಯಕ್ತಿಗೆ ಸಮಾಜದ ಪ್ರೀತಿ-ಗೌರವಗಳು ತಂತಾವೇ ಲಭಿಸುತ್ತವೆ ಎಂಬುದಕ್ಕೆ ಈ ಹುಡುಗಿಯೇ ಸಾಕ್ಷಿ.

- ಜೆ.ಎಸ್. ವಾಣಿಶ್ರೀ

(ಆಧಾರ: 'ಸ್ಕಾಯ್'ಯಲ್ಲಿ ಪ್ರಕಟವಾದ ಮಿನಾಲ್ ಷೋನಾ ಬರೆದ ಲೇಖನ)

ಒಂದು ಕತೆ ನೆನಪಿಗೆ ಬರುತ್ತದೆ. ಕುರುಡನೊಬ್ಬ ರಾತ್ರಿ ಹೊತ್ತಿನಲ್ಲಿ ಕಂದೀಲು ಹಿಡಿದು ದಾರಿಯಲ್ಲಿ ಸಾಗಿದ್ದ.

"ಕುರುಡನಿಗ್ಯಾಕೆ ಕಂದೀಲು?" ಎಂದು ಕುಹಕಿಗಳು ಕಟಕಿಯಾಡಿದರು.

ಆತ ಹೇಳಿದ, "ನನಗಿದರ ಅವಶ್ಯಕತೆಯೇ ಇಲ್ಲ. ಆದರೆ ಇದು ನಿಮಗೆ, ಅಂದರೆ ಕಣ್ಣಿದ್ದ ಕುರುಡರಿಗೆ, ಉಪಯೋಗಕ್ಕೆ ಬರಲೀಂತ ಹಿಡಿದು ಹೊರಟಿದ್ದೇನೆ" ಎಂದು.

ಈ ಕತೆಗೊಂದು ಜೀವಂತ ನಿದರ್ಶನವೆಂಬಂತಿದ್ದಾಳೆ ಗುಜರಾತ್ ರಾಜ್ಯದ ಚಂಗಾ ಗ್ರಾಮದ ಸರಪಂಚಳಾಗಿರುವ ಸುಧಾ ಪಟೇಲ್. ಪ್ರತಿಭಾವಂತ ಅಂಧೆ ಸುಧಾ ಇನ್ನೂ ಇಪ್ಪತ್ತೆರಡರ ತರುಣಿ. ಇಂದು ಆಕೆ ತನ್ನ ಊರಿನ 'ದೀವಿಗೆ'ಯಂತೆ ಗ್ರಾಮಸ್ಥರ ಪ್ರೀತಿಗೆ ಪಾತ್ರಳಾಗಿದ್ದಾಳೆ. ಶಿಕ್ಷಣ ಮತ್ತು ಊರಿನ ಬೀದಿ ದೀಪಗಳ ವ್ಯವಸ್ಥೆಗೆ ಆಕೆಯ ಮೊದಲ ಆದ್ಯತೆ. ಆರೋಗ್ಯ ಇನ್ನಿತರ ಸೌಲಭ್ಯಗಳತ್ತಲೂ ಆಕೆ ನೀಡುವುದು ಅಷ್ಟೇ ಗಮನವನ್ನು.

ಹಾಗೆ ನೋಡಿದರೆ ಚಂಗಾ ಗ್ರಾಮದ ಮಧ್ಯಮವರ್ಗದ ಈ ಹುಡುಗಿಗೆ ಜನ್ಮತಃ 'ದೃಷ್ಟಿಹೀನೆ' ಎಂಬ ಕಾರಣಕ್ಕಾಗಿ ಶಾಲಾ ಪ್ರವೇಶಾವಕಾಶ ನಿರಾಕರಿಸಲ್ಪಟ್ಟಿತ್ತು. ಆದರೆ ಆಕೆಯಲ್ಲಿರುವ ಕಲಿಯುವ ಆಸಕ್ತಿ ಮತ್ತು ಉತ್ಸಾಹ ಕಂಡು ಬೆರಗಾದ ಆಕೆಯ ತಂದೆ ಅಹಮದಾಬಾದಿನ "ಅಂಧ ಕನ್ಯಾ ಪ್ರಕಾಶ ಗೃಹ" ಶಾಲೆಗೆ ಸೇರಿಸಿದರು. ಈ ಬಾಲೆಯ ಕುತೂಹಲ ಮತ್ತು ಪ್ರತಿಭೆಯನ್ನು ಶಾಲಾ ಅಧ್ಯಾಪಕರು ಗುರುತಿಸಿದರು. ಅವರ ಪೂರಕ ಪ್ರೋತ್ಸಾಹದಿಂದಾಗಿ ಸುಧಾ ಒಂದೊಂದೇ ಮೆಟ್ಟಿಲನ್ನೇರುತ್ತಾ ಎಂ.ಎ. (ಹಿಂದಿ) ಪದವಿ ಪಡೆದಳು. ಒಂದನೆಯ ಇಯತ್ತೆಯಿಂದಲೂ ಪ್ರಥಮ ದರ್ಜೆಯಲ್ಲೆ ತೇರ್ಗಡೆ ಹೊಂದುತ್ತ ಬಂದಿರುವ ಸುಧಾ ಸ್ನಾತಕೋತ್ತರ ಪರೀಕ್ಷೆಯಲ್ಲೂ ಅದೇ ಸ್ಥಾನ ಕಾಪಾಡಿಕೊಂಡ ಪ್ರತಿಭಾವಂತ ಅಂಗವಿಕಲೆ.

ಸುಧಾಗೆ ಕಲೆ, ಸಾಹಿತ್ಯ, ಸಂಸ್ಕೃತಿ, ಅಭಿನಯ ಇನ್ನಿತರ ರಂಗಗಳ ಬಗ್ಗೆಯೂ ವಿಶೇಷ ಪ್ರೀತಿ, ಅಭಿರುಚಿ. ಇದನ್ನರಿತು ಸುಧಾಳ 'ಕಣ್ಣಾಗಿ' ಮುನ್ನಡೆಸಿದವರು ಅಹ್ಮದಾಬಾದಿನ ರಮೇಶ್ ಹಾಗೂ ಉಷಾ ಪಟೇಲ್ ದಂಪತಿ. ಈ ಹುಡುಗಿ ಇಂದು ಜೀವನದಲ್ಲೊಂದು ನೆಲೆ ಕಂಡುಕೊಳ್ಳಲು ಈ ದಂಪತಿಯೇ ಕಾರಣ. ಆಕೆಯ ಪಾಲಕರಾಗಿ ಸ್ವಂತ ಮಗಳ ಹಾಗೆಯೇ ಮಮತೆಯಿಂದ ಸುಧಾಳನ್ನು ಅವರು ಬೆಳೆಸುತ್ತಿದ್ದಾರೆ. 'ಪುರ್ವಾಯಿ ಪ್ರಿಯದರ್ಶಿನಿ' ಎಂಬ ಇಂಗ್ಲಿಷ್ ಸಂಭಾಷಣಾ ವರ್ಗಗಳನ್ನು ನಡೆಸುವ ಈ ದಂಪತಿ ಸುಧಾಳನ್ನು ಮೊದಲ ಬಾರಿಗೆ ಕಂಡದ್ದು ಇಲ್ಲಿಯೆ. ಇವರಿಬ್ಬರನ್ನು ಸುಧಾ 'ಚಿಕ್ಕಪ್ಪ' 'ಚಿಕ್ಕಮ್ಮ' ಎಂದೇ ಹಚ್ಚಿಕೊಂಡಿದ್ದಾಳೆ.

ಮನಸ್ಸಿಗೆ ಆನಂದ ತರುವ ಸಂಗೀತವೆಂದರೆ ಸುಧಾಗೆ ಅಚ್ಚುಮೆಚ್ಚು. ಹಾರ್ಮೋನಿಯಂ ವಾದನವೆಂದರೆ ಮೈಮರೆಯುತ್ತಾಳೆ. ಗಂಧರ್ವ ವಿಶ್ವವಿದ್ಯಾಲಯದಲ್ಲಿ ಸಂಗೀತದಲ್ಲಿ ಪ್ರಥಮಾ ಹಾಗೂ ಮಧ್ಯಮಾ ಪರೀಕ್ಷೆಗಳಲ್ಲೀಕೆ ಉತ್ತೀರ್ಣಳಾಗಿದ್ದಾಳೆ. 'ಚಾರಣ'ದಲ್ಲಂತೂ ವಿಶೇಷ ಆಸಕ್ತಿ ಇರುವ ಸುಧಾ ಒಮ್ಮೆ ಅಬು ಪರ್ವತ ಚಾರಣ ಶಿಬಿರದಲ್ಲಿ ಭಾಗವಹಿಸಿದ್ದಾಳೆ. ಬೆತ್ತದ ಹೆಣಿಕೆಯ ಕರಕುಶಲ ವಸ್ತು ತಯಾರಿಕೆಯಲ್ಲೂ ಆಕೆ ನುರಿತಿದ್ದಾಳೆ.

ಆದರೂ ಎಲ್ಲದಕ್ಕೂ ಅನ್ಯರನ್ನೇ ಅವಲಂಬಿಸಲು ಒಪ್ಪದ ಸುಧಾ ಸ್ವತಂತ್ರ ಜೀವನ ನಡೆಸುವತ್ತ ಯತ್ನಿಸತೊಡಗಿದಳು. ಪರೀಕ್ಷೆ ನಡೆದಾಗ ಮಾತ್ರ ಇನ್ನೊಬ್ಬರ ನೆರವು ಅತ್ಯಗತ್ಯ. ಅಂಧ ಪರೀಕ್ಷಾರ್ಥಿ ತಾನು ಹೇಳುವ ಉತ್ತರಗಳನ್ನು ಬರೆಯಲು ಬೇರೊಬ್ಬ ಸಹಾಯಕರನ್ನು ಇಟ್ಟುಕೊಳ್ಳಲು ಅವಕಾಶವಿದೆ. ಆದರೆ ಸುಧಾಗೆ ಎಂ.ಎ. ಅಂತಿಮ ಪರೀಕ್ಷೆಯಲ್ಲಿ ಯಾರೊಬ್ಬ 'ಲಿಪಿಕಾರ'ನೂ ದೊರೆಯದಿದ್ದಾಗ ಆಕೆಯ 'ಕೈ' ಆದವರು ಈ ರಮೇಶ್ ದಂಪತಿಯೆ.

ಹಿಂದಿಯಲ್ಲಿ ಪಿ.ಎಚ್.ಡಿ. ಮಾಡಬೇಕೆಂದಿದ್ದ ಸುಧಾಳನ್ನು ಚಿಕ್ಕಪ್ಪ ರಮೇಶ್ ಪಟೇಲ್ ಕಾನೂನು ಓದುವಂತೆ ಒತ್ತಾಯಿಸಿದರು. ಆದರೆ ಆಕೆಯನ್ನು "ರಾಜಕೀಯ ರಂಗ" ಆಕರ್ಷಿಸಿತು. ಆ ಮೂಲಕ ಸಮಾಜದ ಒಳಿತಿಗಾಗಿ ಏನಾದರೂ ಕೊಡುಗೆ ನೀಡಬೇಕೆಂಬ ಸುಧಾಳ ಆಸೆ ಈಡೇರಿದ್ದು ಪಂಚಾಯತ್ ಚುನಾವಣೆಯಲ್ಲಿ.

ಈ ಚುನಾವಣೆಯಲ್ಲಿ ಚಂಗಾ ಗ್ರಾಮ ಪಂಚಾಯತಿಗೆ ಸ್ಪರ್ಧಿಸುವಂತೆ ಸುಧಾ ಅವರನ್ನು ತಂದೆ ಪ್ರೇರೇಪಿಸಿದರು. ಸಮಾಜ ಸೇವೆಗೈಯುವ ಸುಧಾಳ ಬಹುದಿನಗಳ ಕನಸು ನನಸಾಗಿದ್ದು ಈ ಚುನಾವಣೆ



ಅಪ್ಪ-ಅಮ್ಮನೊಂದಿಗೆ
ಸುಧಾ ಪಟೇಲ್

ಯಲ್ಲಿ ಬಹುಮತದಿಂದ ಗೆದ್ದ ನಂತರವೆ.

ಸುಧಾ ನಾಮಪತ್ರವನ್ನು ಸಲ್ಲಿಸುವ ದಿನದಿಂದಲೇ ಈಕೆಯ ಬಗೆಗೆ ಅಪನಂಬಿಕೆ ಶುರುವಾಗಿತ್ತು. ಈ ಕಣ್ಣು ಕಾಣದ ಹುಡುಗಿ ಎಂಥ ಕನಸು ಕಾಣುತ್ತಿದ್ದಾಳೆಂದು ನಕ್ಕ ಜನಕ್ಕೂ ಕಮ್ಮಿಯಿಲ್ಲ.

ಅಷ್ಟೇ ಅಲ್ಲ ಪ್ರಚಾರ ಕಾರ್ಯ ಪ್ರಾರಂಭವಾದಾಗ ಗ್ರಾಮಸ್ಥರಿಗೆಲ್ಲ "ಈ ಅಂಧ ಬಾಲೆ ಏನು ಮಾಡಿಯಾಳು?" ಎಂಬ ತಾತ್ಸಾರ. ಹೀಗಾಗಿ ಯಾರೂ ಈಕೆಯ ಪರವಾಗಿ ಪ್ರಚಾರ ನಡೆಸಲು ಮುಂದಾಗಲಿಲ್ಲ. ಸುಧಾಳ ತಮ್ಮ ಮತ್ತು ಅಮ್ಮ ಪ್ರತಿ ಸಭೆಯಲ್ಲೂ ಪರಿಚಯ ಮಾಡಿಸುತ್ತಿದ್ದರು. ಚಿಕ್ಕಪ್ಪ-ಚಿಕ್ಕಮ್ಮ ಹಾಗೂ 'ಪುರ್ವಾಯಿ ಪ್ರಿಯದರ್ಶಿನಿ'ಯ ವಿದ್ಯಾರ್ಥಿಗಳು ಪ್ರಚಾರ ಸಾಮಗ್ರಿಗಳನ್ನು ತಯಾರಿಸಿದರು. ಕೇವಲ ಧನಬಲದಿಂದ ಚುನಾವಣೆಯನ್ನು ಗೆಲ್ಲುವುದು ಸಾಧ್ಯವಿಲ್ಲ ಎಂಬುದರಲ್ಲಿ ನಂಬಿಗೆಯುಳ್ಳ ಸುಧಾ ಅದನ್ನು ಸಿದ್ಧಮಾಡಿಯೂ ತೋರಿಸಿದಳು.

"ನಾನು ನಿಮಗೆ ಯಾವ ಆಶ್ವಾಸನೆಯನ್ನೂ ನೀಡುವುದಿಲ್ಲ. ಆದರೆ ಸೇವೆ ಮಾಡುವ ಅವಕಾಶ ನೀಡಿದರೆ ಖಂಡಿತ ಈ ಹಳ್ಳಿಗೆ ನನ್ನಿಂದಾಗುವ ಎಲ್ಲವನ್ನೂ ಮಾಡುವೆನೆಂಬುದು ಮಾತ್ರ ಹೇಳಬಲ್ಲೆ..." ಎಂದು ಪ್ರಾರಂಭಿಸಿ, ಸಮಾಜದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಪ್ರಚಾರ ಸಭೆಗಳಲ್ಲಿ ಸುಧಾ ಚಂಗಾ ಗ್ರಾಮಸ್ಥರಿಗೆ ಮನದಟ್ಟಾಗುವಂತೆ ವಿಶ್ಲೇಷಿಸುತ್ತಿದದನ್ನು ಕಂಡು ಅವರಿಗೆಲ್ಲ ಬೆರಗು.

ಮುಂದುವರೆದ ಪಟ್ಟಣಗಳಲ್ಲಿ ಇಂದು ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿ ಪುರುಷನಿಗೆ ಸರಿಸಮಾನವಾಗಿ ನಿಂತಿದ್ದಾಳೆ. ಇದಕ್ಕೆ ಶಿಕ್ಷಣವೇ ಮೂಲ ಕಾರಣ. ಇದನ್ನು ಮನಗಂಡ ಸುಧಾ ಸರಪಂಚಳಾಗಿ ಮಾಡಿದ ಮೊಟ್ಟಮೊದಲ ಕೆಲಸವೆಂದರೆ ಚಂಗಾ ಗ್ರಾಮದಲ್ಲಿನ ಐದು ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಮಕ್ಕಳನ್ನೂ ಶಾಲೆಗೆ ಸೇರಿಸಬೇಕೆಂದು ಮನೆ ಮನೆಗೂ ಭೇಟಿ ನೀಡಿ ತಂದೆ-ತಾಯಂದಿರಲ್ಲಿ ಮನವಿ ಮಾಡಿದ್ದು.

ಜನಹಿತ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡುವ ವ್ಯಕ್ತಿಗೆ ಸಮಾಜದ ಪ್ರೀತಿ-ಗೌರವಗಳು ತಂತಾವೇ ಲಭ್ಯವಾಗುತ್ತವೆ. ಸುಧಾಳಿಗೆ ಗ್ರಾಮಸ್ಥರ ಪ್ರೀತಿ-ವಿಶ್ವಾಸಗಳ ಸುರಿಮಳೆಯೇ ಆಗತೊಡಗಿತು. ಮುಂದಿನ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಸಾರ್ವಜನಿಕರು ಒಮ್ಮನದಿಂದ ಸಹಕರಿಸಿದರು.

ರಕ್ತದಾನ ಶಿಬಿರ, ಆರೋಗ್ಯ ಶಿಬಿರ, ದೃಷ್ಟಿದಾನ ಶಿಬಿರಗಳೇ ಮುಂತಾದುವನ್ನು ಸಂಘಟಿಸಿ ಯಶಸ್ವಿಯಾದ ಸುಧಾ ಹಳ್ಳಿಯಲ್ಲಿ ಅಕ್ರಮ ನಿವೇಶನ, ಅನುಮತಿಯಿಲ್ಲದೆ ಮನೆ ಕಟ್ಟಿಕೊಳ್ಳುವಿಕೆ ಮೊದಲಾದುವುಗಳ ವಿರುದ್ಧ ಸಮರವನ್ನೇ ಸಾರಿದಳು.

ಗ್ರಾಮದ ಸುಧಾರಣಾ ಕಾರ್ಯಗಳಿಗೆ ಹಣ ಬೇಕು. ಅದಕ್ಕಾಗಿ ಅಲ್ಲಿ ಬೆಳೆದು ನಿಂತ ಮರಗಳನ್ನು

ಮಾರುವ ಯೋಜನೆಯನ್ನು ಹಾಕಿಕೊಂಡಳು ಸುಧಾ. ಆದರೆ ಅದೇ ಹೊತ್ತಿಗೆ ಹೆಚ್ಚು ಮರಗಳನ್ನು ಬೆಳೆಯುವಂತೆ ಸಸಿಗಳನ್ನು ನಡುವಂತೆ ಪ್ರತಿ ಗ್ರಾಮಸ್ಥನ ಮನವೊಲಿಸಿದಳು. ರಸ್ತೆ ಸಂಪರ್ಕ, ಹೆಂಗಸರಿಗಾಗಿ ಪ್ರತ್ಯೇಕ ಶೌಚಾಲಯಗಳು ಸುಧಾ ಯೋಚಿಸಿದ ಇನ್ನಿತರ ಯೋಜನೆಗಳಲ್ಲಿ ಕೆಲವು ಮಾತ್ರ.

ಆದರೆ ಎಲ್ಲವೂ 'ಸುಗಮ'ವಾಗಿಯೇ ಸಾಗಿಬಂದಿದೆ ಎಂದೇನಿಲ್ಲ. ಸುಧಾಗೆ ಅಡ್ಡಗಾಲು ಹಾಕುವ ಪ್ರಯತ್ನಗಳು ಮೊದಲಿನಿಂದಲೂ ನಡೆದವು. ರಾಜಕಾರಣ ಅದರಲ್ಲೂ ಹಳ್ಳಿಯ ರಾಜಕಾರಣವೆಂದ ಮೇಲೆ ಕೇಳಬೇಕೆ? ಚಂಗಾ ಗ್ರಾಮದಲ್ಲಿ ಮುಸ್ಲಿಂ ಮತದಾರರ ಸಂಖ್ಯೆ ಹೆಚ್ಚು. ಅವರೆಲ್ಲ ಒಂದೆಡೆ ಸೇರಿ ತಮ್ಮ ಮತಗಳನ್ನು ಹೇಗೆ ಮತ್ತು ಯಾರ್ಯಾರಿಗೆ ನೀಡಬೇಕೆಂಬ ಬಗ್ಗೆ ನಿರ್ಧರಿಸಿದರು. ಇದರಿಂದ ಅವರ ಮತಗಳು ಒಬ್ಬನೇ ಅಭ್ಯರ್ಥಿಗೆ ಮೀಸಲಾಗಲಿಲ್ಲ. ಸುಧಾ ಗೆದ್ದಾಗ ಸಿಟ್ಟಿಗೆದ್ದ ಠಾಕೂರರು ಮುಸ್ಲಿಂ ಸಮುದಾಯದ ಮೇಲೆ ದಾಳಿ ನಡೆಸಿದರು. ಒಂದಿಬ್ಬರಿಗೆ ಗಂಭೀರ ಗಾಯಗಳೂ ಆದವು. ಸುಧಾ ಅವರು ಕೂಡಲೇ ಸ್ಥಳೀಯ ಪೊಲೀಸರಿಗೆ ದೂರುನೀಡಿ ವಿಷಯ ತಿಳಿಸಿ ಪರಿಸ್ಥಿತಿ ಹತೋಟಿ ಮೀರದಂತೆ ನೋಡಿಕೊಂಡಳು. ಅಂದು ಗ್ರಾಮಸ್ಥರು ಸುಧಾಳ ಧೈರ್ಯ ಮತ್ತು ಮುಂದಾಲೋಚನೆ ಕಂಡು ಅಭಿಮಾನ ಪಟ್ಟರು.

ಗ್ರಾಮದ ಅಭಿವೃದ್ಧಿ ಕಾರ್ಯಗಳಿಗೆಂದು ಮಂಜೂರಾಗುವ ನಿರ್ದಿಷ್ಟ ಹಣದಿಂದ ಸಮುದಾಯದ ಒಳಿತಿಗಾಗಿ ಹಲವಾರು ಕಾರ್ಯಯೋಜನೆಗಳನ್ನು ಹಮ್ಮಿಕೊಂಡಿರುವ ಸುಧಾ ಯುವಕರಿಗೆ ಸ್ವಯಂ ಉದ್ಯೋಗ ಕಲ್ಪಿಸುವ ಹಲವಾರು ತರಬೇತಿ ಶಿಬಿರಗಳನ್ನು ನಡೆಸಿ ಯಶಸ್ವಿಯಾಗಿದ್ದಾಳೆ.

ಆನಂದ್‌ದಲ್ಲಿರುವ ಸುಧಾ ಇಲ್ಲಿಂದ ಅರ್ಧ ಗಂಟೆ ಪ್ರಯಾಣ ಕಾಲದಷ್ಟು ದೂರದ ಚಂಗಾ ಗ್ರಾಮಕ್ಕೆ ಪ್ರತಿ ಸೋಮವಾರ ಹಾಗೂ ಮಂಗಳವಾರಗಳಂದು ಭೇಟಿ ನೀಡುತ್ತಾಳೆ. ಆಗೆಲ್ಲ ಗ್ರಾಮದಲ್ಲಿನ ಪ್ರತಿ ಮನೆಗೂ ತೆರಳಿ ಅವರ ಸಮಸ್ಯೆ ಏನು? ಎಂತು? ಎಂದು ವಿಚಾರಿಸುವ ವಿಶಾಲ ಹೃದಯಿ ಆಕೆ. ಜನ ಆಕೆಯಿಂದ ಎಷ್ಟೆಲ್ಲ ಸುಧಾರಣೆ ನಿರೀಕ್ಷಿಸುತ್ತಿದ್ದಾರೆಂದರೆ ಆಕೆಯ ತಂದೆ ಹತ್ತು ವರ್ಷಗಳ ಕಾಲ ಸರಪಂಚನಾಗಿ ಸೇವೆ ಸಲ್ಲಿಸಿದಾಗಲೂ ಮಾಡಲಾಗದ್ದಕಿಂತ ಹೆಚ್ಚು!

ತುಂಬ ಸರಳವಾಗಿದೆ ಆಕೆಯ ಕಚೇರಿ. ಒಂದು ಮೇಜು, ಎರಡೋ-ಮೂರೋ ಕುರ್ಚಿಗಳಷ್ಟೇ ಅಲ್ಲಿರುವುದು. ಎಲ್ಲ ಕೆಲಸಗಳೂ ಫಟಾಫಟ್ ಆಗಿಬಿಡಬೇಕು. ಯಾವುದಕ್ಕೂ ಯಾರಿಂದಲೂ ಅನವಶ್ಯ ವಿವರಣೆಯನ್ನಾಕೆ ಬಯಸುವುದಿಲ್ಲ. ಎರಡೇ ದಿನಗಳಲ್ಲಿ ಒಂದು ತಿಂಗಳಿನಷ್ಟು ಕೆಲಸ ಮುಗಿದು ಬಿಡಬೇಕು. ಕಳೆದ ಭೇಟಿಯ ಸಂದರ್ಭದ ಪ್ರತಿ ಕಲಾಪವೂ ಆಕೆಗೆ ನೆನಪಿರುತ್ತದೆ. ಮಾಡಬೇಕಾದ ಕೆಲಸದ ಅರಿವೂ ಇರುತ್ತದೆ.

ಗ್ರಾಮಕ್ಕೆ ಬಂದರೆ ಮನೆಯಲ್ಲೂ ಜನ ಆಕೆಯ ಸುತ್ತುವರಿದೇ ಇರುತ್ತಾರೆ. ಸಮಸ್ಯೆಗೆ ಆಕೆಯಿಂದ ದಿಢೀರ್ ಪರಿಹಾರ ಪಡೆದು ತೃಪ್ತರಾಗಿ ಹೊರಡುತ್ತಾರೆ.

ಕುಟುಂಬ ಅಥವಾ ಸಮುದಾಯ ಯಾವುದೇ ಇರಲಿ ಅದರ ಮೂಲ ಉದ್ದೇಶಗಳು ಈಡೇರುವುದು ಅವುಗಳ ಆಧಾರ ಸ್ತಂಭಗಳು ಗಟ್ಟಿಯಾಗಿದ್ದರೆ ಮಾತ್ರ ಸಾಧ್ಯ. ಇದು ರಾಷ್ಟ್ರ ಹಾಗೂ ರಾಜ್ಯದ ಅಭಿವೃದ್ಧಿ ಕೆಲಸಗಳಿಗೂ ಅನ್ವಯಿಸುತ್ತದೆ. ಸುಧಾ ಗಟ್ಟಿಯಾಗಿ ನಿಂತಿರುವುದಲೇ ಇತರ ಸದಸ್ಯರಿಗೂ ಪ್ರೇರಣೆ ದೊರೆತಿದೆ.

ಕಣ್ಣಿಲ್ಲದ ಹುಡುಗಿ ಹಳ್ಳಿಯ ಕಣ್ಣಾಗಿ ನಿಂತಿರುವ ಇಂಥ ಉದಾಹರಣೆ ಬಹುಶಃ ಬೇರೆಲ್ಲೂ ಇಲ್ಲವೇನೊ.

"ನನ್ನ ಬಗ್ಗೆ ಕೆಲವರು ಅನುಕಂಪದಿಂದ ಮಾತಾಡುತ್ತಾರೆ. ಊಹುಂ, ನನಗಷ್ಟೇ ಅಲ್ಲ ಯಾವುದೇ ಅಂಗವಿಕಲನಿಗೂ ಬೇಕಾಗಿರುವುದು ಅನುಕಂಪವಲ್ಲ, ಅವಕಾಶ. ಸಾಮರ್ಥ್ಯವನ್ನು ತೋರುವ ಮುಕ್ತ ಅವಕಾಶ" ಎಂಬ ಸುಧಾಳ ಮಾತು ಚಿಂತನಾರ್ಹ.



ಮೊಳೆ ಮೊಳೆತು ಸಾಯುವ ಆಸೆ....

- ಕೆ. ಎಚ್. ಸಾವಿತ್ರಿ

ನಾನೊಂದು ತೀರ
ನೀನೊಂದು ತೀರ
ಮನಸು ಮನಸು ದೂರ
ಪ್ರೀತಿ ಹೃದಯ ಭಾರ...

ಮದುವೆಯಾದ ಹೊಸತರಲ್ಲಿ ಅವರಿಬ್ಬರು ಎಷ್ಟೊಂದು ಸುಂದರ ಕನಸುಗಳನ್ನು ಜೊತೆ ಜೊತೆಯಾಗಿ ಹೆಣೆದಿದ್ದರು!

ಕೈಗೆ ಕೈ ಜೋಡಿಸಿ ಸಪ್ತಪದಿ ತುಳಿಯುತ್ತ 'ಧರ್ಮೇಚ, ಅರ್ಥೇಚ, ಕಾಮೇಚ ನಾತಿಚರಾಮಿ' ಹೇಳುವಾಗ ಜೀವನ ಪರ್ಯಂತ ಒಂದಾಗಿಯೇ ಇರುತ್ತೇವೆ ಎಂದು ಸಂಭ್ರಮಿಸಿದ್ದರು.

ಆದರೆ...ಬದುಕಿನ ಅನಿವಾರ್ಯತೆ ಅವರನ್ನು ಅಗಲಿಸಿತ್ತು. ಭವಿಷ್ಯದ ಭದ್ರತೆಗಾಗಿ ಆಧರಿಸಿದ್ದ ಉದ್ಯೋಗ ಅವರನ್ನು ದೂರ ಮಾಡಿತ್ತು.

ಅವನೆಲ್ಲೋ...ಅವಳೆಲ್ಲೋ...

ಪ್ರತಿ ತಿಂಗಳು ನಾಲ್ಕಾರು ಸಾವಿರ ರೂಪಾಯಿಗಳನ್ನು ಹೊತ್ತು ತರುವ ಸಂಬಳದ ಲಕೋಟೆ

ಅಥವಾ ಚೆಕ್ ಕೈ ಸೇರುವಾಗ ಮನಸ್ಸು ಖುಷಿಗೊಳ್ಳುತ್ತದೆ.

ಆದರೆ ಈ ಖುಷಿಗಾಗಿ ಬಾಳಿನ ಅಮೂಲ್ಯ ಕ್ಷಣಗಳನ್ನು ಕಳೆದುಕೊಳ್ಳಬೇಕೆ?

ಅದನ್ನು ನೆನಸಿಕೊಳ್ಳುತ್ತಿದ್ದಂತೆಯೇ ಮನಸ್ಸಿಗೆ ಪಿಚ್ಚೆನ್ನಿಸುತ್ತದೆ. ಸೂತ್ರ ಕಿತ್ತ ಪಟದಂತೆ ಮನಸ್ಸು ಎಲ್ಲೆಂದರಲ್ಲಿಗೆ ಧಾವಿಸುತ್ತದೆ. ಖುಷಿಯ ಬಲೂನಿಗೆ ಸೂಜಿ ಚುಚ್ಚಿದಂತಾಗಿ ಉತ್ಸಾಹ ಮುದುಡುತ್ತದೆ.

ದೂರದಲ್ಲೆಲ್ಲೋ ಇರುವ ಇನಿಯ ಅಥವಾ ಇನಿಯಳನ್ನು ನೆನಪಿಸಿಕೊಳ್ಳುವಾಗ ಕಣ್ಣಂಚು ತೇವಗೊಳ್ಳುತ್ತದೆ. ಮನಸ್ಸು ಆದ್ರ್ರವಾಗುತ್ತದೆ. ರೆಕ್ಕೆ ಇದ್ದರೆ ಹಾರಿ ಹೋಗಿ ಆ ಬಾಹುಗಳಲ್ಲಿ ಮೈಮರೆಯಬೇಕು. ಕೈಗೆ ಕೈ ಜೋಡಿಸಿ ಮನಸ್ಸು ಬಿಚ್ಚಿ ಎಲ್ಲಾ ಕಷ್ಟ-ಸುಖಗಳನ್ನು ಹಂಚಿಕೊಳ್ಳಬೇಕು ಎಂಬ ಅದಮ್ಯ ಹಂಬಲ ಮೂಡುತ್ತದೆ.

ಆದರೆ.. ಎಲ್ಲವೂ 'ರೆ' ಸಾಮ್ರಾಜ್ಯ. ನೆನೆಸಿಕೊಂಡಾಗಲೆಲ್ಲಾ ಅದು ಈಡೇರಲು ಸಾಧ್ಯವೇ? ಅದಕ್ಕಾಗಿ ದಿನಗಟ್ಟಳೆ ಕಾಯಬೇಕು. ಕುಳಿತಲ್ಲಿ, ನಿಂತಲ್ಲಿ ಕಾಡುವ ನೆನಪುಗಳನ್ನು ಬಲವಂತವಾಗಿ ಮರೆಯ ಬೇಕು. ಭವಿಷ್ಯಕ್ಕಾಗಿ ಏಣಿ ಹಾಕುವ ಸಂಭ್ರಮದಲ್ಲಿ ಎಲ್ಲವನ್ನೂ ಮರೆಯಲೇಬೇಕು. ಬದುಕಿಗೆ ಅದು ಅನಿವಾರ್ಯ.

ಭವಿಷ್ಯಕ್ಕಾಗಿ ವರ್ತಮಾನವನ್ನು ಕಳೆದುಕೊಳ್ಳುವ ಮಂದಿಯ ಪಾಡು ಇದು. ಇವರು 'ನಾಳೆ'ಗಾಗಿಯೇ ಬದುಕುವವರು. ನಿನ್ನೆ ಹಾಗೂ ನಾಳೆಯ ನೆನಪಲ್ಲಿ ಬದುಕುತ್ತಾ ಇಂದಿನ ಸುಖದಿಂದ ವಂಚಿತರಾಗುತ್ತಿರುವುದರ ಬಗ್ಗೆ ಗಮನ ಹರಿಸುವ ಗೋಜಿಗೇ ಹೋಗುವುದಿಲ್ಲ. ನಾಳಿನ ಸುಂದರ ಭವಿಷ್ಯ ವರ್ತಮಾನದ ಬಗ್ಗೆ ತಲೆ ಕೆಡಿಸಿಕೊಳ್ಳಲು ಅವಕಾಶ ನೀಡುವುದಿಲ್ಲ.

ಜೀವನದಲ್ಲಿ ಮಹತ್ವವಾದುದನ್ನು ಸಾಧಿಸಬೇಕೆಂಬ ಹಂಬಲಕ್ಕೆ ಮೊದಲ ಬಲಿಯೇ ವೈಯಕ್ತಿಕ ಸುಖ-ಸವಲತ್ತುಗಳು.

ಮದುವೆಯಾಗುವುದು ಪರಸ್ಪರ ಆಸರೆಯಾಗಿ ಜೀವನಪರ್ಯಂತ ಒಟ್ಟಿಗೆ ಇರಬೇಕೆಂಬ ಉದ್ದೇಶದಿಂದ. ಆದರೆ ಆಧುನಿಕ ಸಮಾಜ ಇದಕ್ಕೆ ಆಸ್ಪದ ನೀಡುತ್ತಿಲ್ಲ. ಗಂಡ-ಹೆಂಡಿರಲ್ಲಿ ಮಹತ್ವಾಕಾಂಕ್ಷೆ, ಹೊಸತನವನ್ನು ಸಾಧಿಸಬೇಕೆಂಬ ಛಲ, ಕೆಲವೊಮ್ಮೆ ಆರ್ಥಿಕ ಸಂಕಷ್ಟವೂ ಗಂಡ-ಹೆಂಡಿರನ್ನು ದೈಹಿಕವಾಗಿ ಅಗಲುವಂತೆ ಮಾಡುತ್ತದೆ. ಜೊತೆಯಲ್ಲಿ ಹುಟ್ಟಿದ ಅಕ್ಕ-ತಂಗಿಯರು ಅಣ್ಣ-ತಮ್ಮಂದಿರ ಜವಾಬ್ದಾರಿ ನೀಗಿಕೊಳ್ಳಲು ಒಟ್ಟಿಗೆ ಇರಬೇಕೆಂದು ಗಂಡ-ಹೆಂಡತಿ ಬಯಸಿದರೂ ಅದು ಸಾಧ್ಯವಾಗದಿರಬಹುದು. ಒಟ್ಟಿನಲ್ಲಿ ದೂರ ಇರಲು ಏನೇನೋ ಕಾರಣಗಳು, ಅಡ್ಡಿಗಳು. ಇಂತಹ ಜೋಡಿಗಳು ನಮ್ಮಲ್ಲಿ ಸಾವಿರಾರು.

"ಪತಿಯ ನೆರಳಿನಂತೆ ಸತಿ" ಎಂಬ ಹೇಳಿಕೆ ಸವಕಲಾಗಿ ಅರ್ಥ ಕಳೆದುಕೊಳ್ಳುತ್ತಿದೆ. ಪತಿ ಎಲ್ಲೋ... ಪತ್ನಿ ಎಲ್ಲೋ ಆದರೂ ದಾಂಪತ್ಯ ಸಾಗುತ್ತದೆ.

ಇನ್ನು ಕೆಲವರಿದ್ದಾರೆ. ಸವತ್ತುಗಳು ಯಾವುವೂ ಬೇಡ. ಗಂಜಿ ಕುಡಿದರೂ ಚಿಂತೆ ಇಲ್ಲ, ಒಟ್ಟಿಗೆ ಒಂದೇ ಸೂರಿನಡಿ ವಾಸಿಸೋಣ ಎಂಬ ನಿರ್ಧಾರ ತೆಗೆದುಕೊಂಡವರೂ ನಮ್ಮ ಮಧ್ಯೆ ಇದ್ದಾರೆ.

ಕೆಲವೊಮ್ಮೆ ಸಣ್ಣ-ಪುಟ್ಟ ಘಟನೆಗಳಿಂದ ವಿಪರೀತಾರ್ಥ ಕಲ್ಪಿಸಿಕೊಂಡು ಮಾನಸಿಕವಾಗಿ-ದೈಹಿಕವಾಗಿ ದೂರ ದೂರವೇ ಉಳಿದು ಏಕಾಂಗಿಯಾಗಿ ಬದುಕುವ ಪತಿ-ಪತ್ನಿಯರಿಗೆ ನಮ್ಮಲ್ಲೇನು ಕೊರತೆ?

ಅನಿವಾರ್ಯವಾಗಿ ಅಗಲಿರುವ ಗಂಡ-ಹೆಂಡತಿ ತಮ್ಮ ದಾಂಪತ್ಯ ಕಾಪಾಡಿಕೊಳ್ಳಲು ಪಡಬೇಕಾದ ಕಷ್ಟ ಅಷ್ಟಿಷ್ಟಲ್ಲ. ಪರಸ್ಪರ ನಂಬಿಕೆ-ನಿಷ್ಠೆಯ ಜೊತೆಗೆ ಬಾಂಧವ್ಯ ಉಳಿಸಿಕೊಳ್ಳಲು ವಾರಕ್ಕೆ ೨-೩ ಬಾರಿಯಾದರೂ ಎಸ್.ಟಿ.ಡಿ., ದೂರವಾಣಿ ಕರೆಗಳು; ವಾರಕ್ಕೆ ೨-೩ ಬಾರಿ ಪತ್ರ; ತಿಂಗಳಿಗೊಮ್ಮೆ ಭೇಟಿ. ಈ ಭೇಟಿಯ ಅವಧಿಯಲ್ಲೇ ಕಳೆದುಕೊಂಡ ಅಮೂಲ್ಯ ಕ್ಷಣಗಳನ್ನು ಪಡೆದುಕೊಳ್ಳುವ ಕಾತರ.

ಮಕ್ಕಳ ಗತಿ? ಅವು ಅಮ್ಮನ ಬಳಿಯಲ್ಲೇ ಇರುವ ಸಹಜ ಆಸೆ ವ್ಯಕ್ತಪಡಿಸುವುದರಿಂದ ತಾಯಿಯೇ ತಂದೆಯ ಪಾತ್ರವನ್ನೂ ನಿರ್ವಹಿಸಬೇಕಾದ ಹೊಣೆಗಾರಿಕೆ. ತಂದೆಯ ಬಿಗಿ ಇಲ್ಲದೆ ಮಕ್ಕಳು ಹಾಳಾಗಬಾರದು, ದುರಭ್ಯಾಸಕ್ಕೆ ಈಡಾಗಬಾರದು ಎಂಬ ಕಳವಳ ಎಲ್ಲವೂ ಆಕೆಗೆ ಮಾನಸಿಕ ಒತ್ತಡ ತರುತ್ತದೆ. 'ದ್ವಿಪಾತ್ರಾಭಿನಯ'ದಲ್ಲಿ ಆಕೆ

ಉನ್ಮಾದ

ಕೆಲವು ತಿಂಗಳ ಹಿಂದೆ ಮುಂಬಯಿಯಲ್ಲೊಂದು ಘಟನೆ ಸಂಭವಿಸಿತು. ಸರಿಯಾಗಿ ಪಾಠ ಒಪ್ಪಿಸಲಿಲ್ಲವೆಂಬ ಕಾರಣಕ್ಕಾಗಿ ಸ್ವಂತ ತಾಯಿಯೇ ೬-೭- ವರ್ಷದ ಪುಟ್ಟ ಮಗನನ್ನು ಅಡಿಗೆ ಮನೆಗೆ ಕರೆದೊಯ್ದು ಬಾಗಿಲು ಮುಚ್ಚಿ ಚಾಕುವಿನಿಂದ ಅವನ ಹೊಟ್ಟೆಗೆ ತಿವಿದು ಕರುಳು ಹೊರಬರುವಂತೆ ಮಾಡಿದ್ದಳು.

ಮಗುವಿನ ಕಿರುಚಾಟ ಕೇಳಿದ ಹುಡುಗನ ಅಜ್ಜ-ಅಜ್ಜಿ ಗಾಬರಿಯಿಂದ ಬಾಗಿಲು ಬಡಿದಾಗ ಆ ತಾಯಿ ಬಾಗಿಲನ್ನೇನೋ ತೆರೆದಳು. ಆದರೆ ಮಗು ರಕ್ತದ ಮಡುವಿನಲ್ಲಿ ಬಿದ್ದಿತ್ತು. ತಾಯಿಯ ಕೈಯಲ್ಲಿ ಚಾಕುವಿತ್ತು.

ಕೂಡಲೇ ಅಜ್ಜ-ಅಜ್ಜಿ ಮಗುವನ್ನು ಆಸ್ಪತ್ರೆಗೆ ಸೇರಿದರು. ಅತ್ತ ಆಸ್ಪತ್ರೆಯಲ್ಲಿ ಮಗು ಜೀವನ್ಮರಣದ ಹೋರಾಟದಲ್ಲಿ ಇದ್ದರೆ ಇತ್ತ ತಾಯಿ ಎನಿಸಿಕೊಂಡವಳು ಮನೆಯಲ್ಲಿ ಇದ್ದಳು.

ಆಕೆ ಮಾನಸಿಕವಾಗಿ ಸ್ವಸ್ಥಳಾಗಿರಲಿಲ್ಲವೆಂದೂ ಆಗಾಗ ಮನೆಯಲ್ಲಿ ಮಗುವೂ ಸೇರಿದಂತೆ ಅತ್ತೆ ಮಾವನ ಜೊತೆ ಜಗಳವಾಡುತ್ತಿದ್ದಳೆಂದೂ ಅಕ್ಕ ಪಕ್ಕದವರು ಹೇಳಿದರು.

ಆದರೆ ಆಕೆಯ ಮಾನಸಿಕ ಸ್ವಾಸ್ಥ್ಯ ಇಷ್ಟೊಂದು ಹದಗೆಡಲು ಕಾರಣ ಆಕೆಯ ಪತಿ ಅರಬ್ ದೇಶದಲ್ಲೆಲ್ಲೋ ಕೆಲಸದಲ್ಲಿದ್ದದ್ದು. ಎರಡು ಮೂರು ವರ್ಷಕ್ಕೊಮ್ಮೆ ಆತ ಬಂದು ಹೆಂಡತಿ-ಮಗುವಿನೊಡನೆ ಒಂದೆರಡು ತಿಂಗಳು ಕಾಲ ಕಳೆದು ಮರಳುತ್ತಿದ್ದ. ಪತಿ ಬಂದಾಗ ಹಸನ್ಮುಖಿಳಾಗಿರುತ್ತಿದ್ದ ಆಕೆ ಆತ ತೆರಳುತ್ತಿದ್ದಂತೆಯೇ ಖಿನ್ನಳಾಗುತ್ತಿದ್ದಳು. ಪತಿಯಿಂದ ದೂರವಿರಲೇಬೇಕಾದ ಅನಿವಾರ್ಯತೆ ಆಕೆಯನ್ನು ಮಾನಸಿಕವಾಗಿ ಎಷ್ಟು ಕಂಗೆಡಿಸಿತ್ತೆಂದರೆ ಹಲವು ಬಾರಿ ಹುಚ್ಚಿಯಂತಾಡುತ್ತಿದ್ದಳು.

ತನ್ನ ಮಗುವನ್ನು ತುಂಬ ಪ್ರೀತಿಸುತ್ತಿದ್ದರೂ ಹತಾಶೆ, ಒಂಟಿತನದಿಂದಾಗಿ ಸಂಯಮ ಕಳೆದುಕೊಳ್ಳುತ್ತಿದ್ದ ಆಕೆ ಕೊನೆಗೆ ತನ್ನ ಕರುಳ ಕುಡಿಯನ್ನೇ ಬಲಿತೆಗೆದುಕೊಳ್ಳುವಷ್ಟು ಉನ್ಮಾದಕ್ಕೆ ಒಳಗಾಗಿದ್ದಳು.

-ರಚಿತಾ

ಕಂಗಾಲುತ್ತಾಳೆ.

ಯಾವುದ್ಯಾವುದೋ ಕಾರಣಗಳಿಗಾಗಿ ಪರಸ್ಪರ ಅಗಲಿ ಇರಬೇಕಾದ ಗಂಡ-ಹೆಂಡತಿಯರ ಪಾಡು ಒಂದು ರೀತಿಯಾದರೆ ಸೇನಾಪಡೆಯಲ್ಲಿರುವವರ ಸ್ಥಿತಿ ಇದಕ್ಕಿಂತ ಪೂರ್ಣ ಭಿನ್ನ. ಗಡಿಯಲ್ಲೋ ಶತ್ರುಗಳ ಮಧ್ಯೆ ಹೋರಾಡುತ್ತಲೋ ಇರಬೇಕಾದ ಸೈನಿಕರು ತಮ್ಮ ಸೇವಾವಧಿಯ ಬಹ್ವಂಶ ಕುಟುಂಬದಿಂದ ದೂರವಿರಲೇಬೇಕು.

ವಾರಗಟ್ಟಳೆ, ತಿಂಗಳುಗಟ್ಟಳೆ ಪತ್ನಿಯರಿಂದ ದೂರವಿರಬೇಕಾದ ಅನಿವಾರ್ಯತೆಯಿಂದಾಗಿ ವೇಶ್ಯೆಯರ ಮನೆಗೆ ಭೇಟಿ ಕೊಡುವ ಸೈನಿಕರು ಅನೇಕ ರೋಗಗಳಿಗೆ ಆಹ್ವಾನ ನೀಡುವುದುಂಟು. ಕೆಲವೊಮ್ಮೆ ಇಂಥ ಹೆಂಗಸರಿಗೆ ಗಂಟುಬಿದ್ದು ಶಾಶ್ವತವಾಗಿ ದಾಂಪತ್ಯ ಸುಖದಿಂದ ಎರವಾದವರೂ ಅನೇಕರು. ಇಂತಹ ಸ್ಥಿತಿ ಕೇವಲ ಸೈನಿಕರಿಗೆ ಸೀಮಿತವಲ್ಲ, ಹೊರಊರುಗಳಲ್ಲಿರುವವರೂ ಇದಕ್ಕೆ ಬಲಿಯಾಗಿದ್ದಾರೆ.

ಹೆಣ್ಣನ್ನು ಕಾಣದೆ ತಿಂಗಳುಟ್ಟಲೆ ಇರುವ ಸೈನಿಕರು ಕೆಲವೊಮ್ಮೆ ತಾವು ಆಕ್ರಮಣ ಮಾಡುವ ಹಳ್ಳಿಗಳ ಹೆಣ್ಣು ಮಕ್ಕಳ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ ಅದನ್ನೇ ಶತ್ರುಗಳ ಮೇಲಿನ ತಮ್ಮ ಗೆಲುವು ಎಂದು ಬಣ್ಣಿಸಿಕೊಳ್ಳಲು ಪ್ರಯತ್ನಿಸುವುದು ಇದೇ ಹಿನ್ನೆಲೆಯಲ್ಲಿ.

"ಸಮಾಜದಲ್ಲಿ ನಮಗೆ 'ಗೃಹಿಣಿ' ಎಂಬ ಪಟ್ಟ ದೊರೆತಿದೆ. ಆದರೂ ಗಂಡನಿದ್ದೂ ವಿಧವೆಯಂತೆ ನಮ್ಮ ಬಾಳು. ವಿಧವೆಯರಿಗೆ ಶಾಶ್ವತವಾಗಿ ಗಂಡ ಇಲ್ಲ. ಆದರೆ ನಮಗೆ ಗಂಡನಿದ್ದೂ ವೈವಾಹಿಕ ಬದುಕಿಲ್ಲ. ಗಂಡನಿದ್ದೂ ಎಲ್ಲಾ ಸುಖ-ಸಂತೋಷಗಳಿಂದ ವಂಚಿತರು ನಾವು" ಎಂದು ಸೈನಿಕರ ಪತ್ನಿಯರು ಹಲುಬುವುದು ಸಾಮಾನ್ಯ.

ಪತ್ನಿಯರಿಂದ ದೂರವಿರುವ ಕೆಲವರಿಗೆ ಕೆಲವೊಮ್ಮೆ ಮಹಿಳಾ ಸಹೋದ್ಯೋಗಿಗಳ ಜೊತೆ

ಬೆಳೆಯುವ ಸಲುಗೆಯೇ ಸಂಬಂಧವಾಗಿ ರೂಪುಗೊಂಡು ಇಲ್ಲದ ಹಗರಣಗಳಿಗೆ ಎಡೆ ಮಾಡಿಕೊಡುತ್ತದೆ. ಹಲವು ಬಾರಿ ಎರಡನೇ ಮದುವೆ ಅನಿವಾರ್ಯ ಎಂಬ ಪರಿಸ್ಥಿತಿಯನ್ನೂ ಸೃಷ್ಟಿಸುತ್ತದೆ.

ಆದರೆ ಇಂತಹ ಪ್ರಕರಣಗಳು ಮಹಿಳೆಯರಲ್ಲಿ ಕಡಿಮೆ. ಸಂಸ್ಕಾರವೋ, ಸಹಜವಾಗಿ ನಡವಳಿಕೆಯಲ್ಲಿ ಅಡಕವಾಗಿರುವ ಸಂಯಮವೋ ಅಡ್ಡದಾರಿ ಹಿಡಿಯಲು ಅವರಿಗೆ ತಡೆ ಒಡ್ಡುತ್ತದೆ. ತಮ್ಮೆಲ್ಲಾ ನೋವು-ದುಃಖ ಹತಾಶೆಗಳನ್ನು ಹೆಚ್ಚು ಹೆಚ್ಚು ಕೆಲಸ ಮಾಡುತ್ತಲೋ, ಮನೆವಾರ್ತೆಯಲ್ಲೋ, ಮಕ್ಕಳನ್ನು ನೋಡಿಕೊಳ್ಳುವುದರಲ್ಲೋ ಮರೆಯಲು ಯತ್ನಿಸುತ್ತಾರೆ.

ಕೆಲವು ಮಹಿಳೆಯರು ತಮ್ಮನ್ನು ಕಾಡುವ ಒಂಟಿತನ, ಏಕಾಂಗಿತನ ಮರೆಯಲು ಉದ್ಯೋಗಕ್ಕೆ ಸೇರಿ ತಮ್ಮ ಬೇಸರವನ್ನು ಕಳೆಯಲು ಪ್ರಯತ್ನಿಸುತ್ತಾರೆ. ಉದ್ಯೋಗ-ಸ್ನೇಹಿತರ ನಡುವೆ ಉಲ್ಲಸಿತರಾಗುತ್ತಾರೆ.

ಹಗಲೆಲ್ಲಾ ವೃತ್ತಿ, ಸಂಸಾರದಲ್ಲೇ ಕಳೆದರೂ ರಾತ್ರಿ ಒಂಟಿಯಾಗುತ್ತಿದ್ದಂತೆಯೇ ಏಕಾಂಗಿತನ ಅವರ ಮೇಲೆ ಎರಗಲು ಸಿದ್ಧವಾಗಿ ನಿಂತಿರುತ್ತದೆ. ಹೀಗಾಗಿ ಅನೇಕ ಮಹಿಳೆಯರಿಗೆ ರಾತ್ರಿ ಎಂದರೆ ಭೀತಿ. ಕೆಲವರಂತೂ ರಾತ್ರಿಯನ್ನೇ ದ್ವೇಷಿಸುವಷ್ಟರ ಮಟ್ಟಿಗೆ ಕತ್ತಲಿನ ಬಗ್ಗೆ ಅಲರ್ಜಿ ಬೆಳೆಸಿಕೊಂಡಿರುತ್ತಾರೆ.

ರಾತ್ರಿ ಎಂಬುದು ಅವರ ಪಾಲಿಗೆ ಏಕಾಂಗಿತನದ ಸಂಕೇತ.

ಕ್ರಮೇಣ ಅವರನ್ನು ಖಿನ್ನತೆ ಆವರಿಸುತ್ತದೆ. ಪತಿಯಿಂದ ದೂರವಿರುವ ಪತ್ನಿ ಅಥವಾ ಪತ್ನಿಯಿಂದ ದೂರವಿರುವ ಪತಿ ಹತಾಶೆ, ಉದ್ವೇಗದಿಂದ ಹಪಹಪಿಸುವುದನ್ನು ಕಾಣುತ್ತೇವೆ.

ಪ್ರಬುದ್ಧತೆ ಹಾಗೂ ಪರಸ್ಪರ ತಿಳುವಳಿಕೆ ಎಷ್ಟೇ ಇದ್ದರೂ ಬೆಂಬಿಡದೆ ಕಾಡುವ ಈ ಏಕಾಂಗಿತನದಿಂದ ಯಾರೂ ಮುಕ್ತರಲ್ಲ.

ಕೆಲವೊಮ್ಮೆ ನಾವೇ ಹಾಕಿಕೊಂಡ ಕಟ್ಟುಪಾಡುಗಳನ್ನು ಕಿತ್ತೊಗೆದು ಹೊರಬರಬೇಕು ಎನಿಸುತ್ತದೆ. ಆದರೆ ಹೀಗನಿಸುವುದು ಕೆಲವೇ ಕ್ಷಣ. ಭವಿಷ್ಯದ ಪ್ರಶ್ನೆ ಬೃಹದಾಕಾರ ತಾಳಿ ನಿಂತಾಗ ಅವುದುಗಚ್ಚಿ ಎಲ್ಲವನ್ನೂ ಸಹಿಸಿಕೊಳ್ಳುತ್ತೇವೆ ಎನ್ನುವುದು ಹಲವು ಗೃಹಿಣಿಯರ ಅಳಲು.

ನಾಗರಿಕ ಸಮಾಜ ಹಲವಾರು ಸವಲತ್ತುಗಳನ್ನು ತಂದು ಕೊಟ್ಟಿರಬಹುದು. ಆದರೆ ಸಂಬಂಧಗಳು ಶಿಥಿಲಗೊಳ್ಳುತ್ತಿವೆ. ಅವು ಕೇವಲ ತೋರಿಕೆಯದಾಗುತ್ತಿವೆ. ಗಂಡ-ಹೆಂಡತಿ, ತಂದೆ-ತಾಯಿ-ಮಕ್ಕಳ ನಡುವಣ ಬಾಂಧವ್ಯವೂ ಲಾಭ-ನಷ್ಟದ ಲೆಕ್ಕಾಚಾರಕ್ಕೆ ಒಳಪಡುತ್ತಿದೆಯೇನೋ ಎಂಬ ಆತಂಕ ಹುಟ್ಟಿಸುತ್ತಿದೆ.

ಆಧುನಿಕ ಸಮಾಜದಲ್ಲಿ, ಉದ್ಯೋಗದ ಅನಿವಾರ್ಯತೆಯ ಬಳುವಳಿಯಾದ ಈ ಅಗಲಿಕೆಯು ದಿನೇ-ದಿನೇ ಹೆಚ್ಚೆಚ್ಚು ಅನಿವಾರ್ಯವಾಗುತ್ತಿದೆ.

ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳು, ಆರ್ಥಿಕ ಪರಿಸ್ಥಿತಿಯಿಂದಾಗಿ ಗಂಡ-ಹೆಂಡತಿ ಇಬ್ಬರೂ ದುಡಿಯುವುದು ಅಥವಾ ಗಂಡ ಬೇರೆ ಊರಿನಲ್ಲಿ ಕೆಲಸಕ್ಕೆ ಹೋಗುವುದು ಸಾಮಾನ್ಯ ಸಂಗತಿಯಾಗುತ್ತಿದೆ.

ಮಹಿಳೆಯರು ಒಂಟಿಯಾಗಿಯೇ ಬದುಕನ್ನು, ಸಮಾಜವನ್ನು ಎದುರಿಸುವ ಸ್ಥೈರ್ಯ ಬೆಳೆಕೊಳ್ಳುತ್ತಿದ್ದಾರೆ.

ಆದರೆ ಅದೇ ಹೊತ್ತಿಗೆ ಹೃದಯದಾಳದಲ್ಲಿ 'ಪತಿ ತನ್ನೊಡನೆ ಸದಾ ಇರಬೇಕು ತನ್ನೆಲ್ಲಾ ನೋವು-ನಲಿವುಗಳಿಗೆ ಸ್ಪಂದಿಸಬೇಕು' ಎಂಬ ಆಸೆ ಮೊಳೆ ಮೊಳೆತು ಅಲ್ಲಿಯೇ ಸಾಯುತ್ತಿರುತ್ತದೆ.

ಆಸೆಯ ಸಮಾಧಿಯ ಮೇಲೆಯೇ ಭವಿಷ್ಯ ಕಟ್ಟುವ ಕೆಲಸ ನಡೆಯುತ್ತಲೇ ಇರುತ್ತದೆ.

✪

"ನಿನ್ನ ಗಣಿತ ಪರೀಕ್ಷೆಯನ್ನು ಹ್ಯಾಗೆ ಬರೆದೆ?" ಎಂದು ತಂದೆ ಮಗನನ್ನು ಕೇಳಿದರು.
"ಚೆನ್ನಾಗಿ ಬರೆದೆನಪ್ಪಾ. ೧೦೦ರ ಸನಿಹ ಅಂಕಗಳು ಬೀಳಬಹುದು" ಎಂದುತ್ತರಿಸಿದ ಮಗರಾಯ.
"ಒಳ್ಳೆಯದು ೯೯ ಅಂಗಗಳು ಬರುತ್ತವೆಂದಾಯಿತು."
"ಇಲ್ಲಪ್ಪಾ ೦೦ ಅಂಕಗಳು ಬರುತ್ತವೆ."



ವಿಮೋಚನೆಗೆ ಮೊದಲು

ಡಾ. ಎಂ.ಆರ್. ಮುಂದಾರವಳಿ

ಇಪ್ಪತ್ತಾರು ವರುಷದ ಹುಡುಗಿಯೊಬ್ಬಳು, ಮನೆಯಲ್ಲಿ ವಿವಾಹ ಪ್ರಯತ್ನಗಳು ನಡೆಯುತ್ತಿರುವಂತೆಯೇ ಮೋಹಪಾಶದಲ್ಲಿ ಸಿಲುಕಿದಳು. ಅವಳಿಗೆ ಒಳ್ಳೆಯ ಓದು, ಉದ್ಯೋಗವಿತ್ತು. ಮೋಹಗೊಂಡ ಗಂಡಿಗೂ, ಇವಳಿಗೂ ಮಧ್ಯದಲ್ಲಿ ಜಾತಿ, ಧರ್ಮಗಳ ಬಲುದೊಡ್ಡ ಗೋಡೆ. ಇಬ್ಬರೂ ಮನೆಯವರನ್ನು ತೊರೆದು ಬಾಳಬೇಕಾದಂತಹ ಪರಿಸ್ಥಿತಿ. ಪ್ರೀತಿಗೆ ಇದು ಯಾವುದೂ ಅಡ್ಡಿಬರಲಾ

ರದು. ಆದರೆ, ಅವಳು ಹೆಜ್ಜೆಯಿಡುವ ಮುನ್ನ ಆತನನ್ನು ಗಮನಿಸತೊಡಗಿದಳು. ವಿವಾಹಕ್ಕೆ ಮುನ್ನವೇ ದೇಹಸಂಪರ್ಕಕ್ಕಾಗಿ ಆತುರ ತೋರಿದ್ದ ಅವನ ಪ್ರೀತಿ ಅವಳ ಧರ್ಮ, ಜಾತಿಯ ಕುರಿತು ಇರಲಿಲ್ಲ. ಬದಲಾಗಿ ಅವಳು ತನ್ನ ಧರ್ಮದ ಎಲ್ಲ ರೀತಿ-ನೀತಿಗಳನ್ನು ಅನುಸರಿಸಬೇಕೆಂದು ತಾಕೀತು ಮಾಡುತ್ತಿದ್ದ. ಅವನ ಜೇನು ನುಡಿಗಳೆಲ್ಲ ಅವಳ ಹಣದಲ್ಲಿ ಸುತ್ತ, ಮಜಾಮಾಡಲು ಮಾತ್ರ. ಅವಳಿಗೆ ಅರಿವು ಬಂದಕೂಡಲೇ ಎಚ್ಚರಗೊಂಡಳು. ತನ್ನನ್ನು ಒಪ್ಪಿಸಿಕೊಳ್ಳುವುದು ಕೇವಲ ವಿವಾಹಾನಂತರ ಎಂದು ಸ್ಪಷ್ಟಪಡಿಸಿದಳು. ಹಾಗೂ ತನ್ನ ಸಂಬಳದ ಮೇಲೆ ಅವನಿಗೆ ಯಾವ ಹಕ್ಕೂ ಇಲ್ಲವೆಂದು ನಿಖರವಾಗಿ ಹೇಳಿಬಿಟ್ಟಳು. ಈ ಮಾತುಗಳು ಖಚಿತವಾದುವೆಂದು ತಿಳಿದ ಕೂಡಲೇ ಅವನ ಪ್ರೀತಿ ಮಾತು, ಜೇನುನುಡಿ ಬದಲಾಗಿ ಹೋಯಿತು. ಅವಳನ್ನು ಹೀನಾಮಾನ ಬೈಯ್ದು, ಶಪಿಸಿ ಹೊರಟುಹೋದ.

ಪ್ರತಿ ಹೆಣ್ಣಿನ ಬದುಕಿನಲ್ಲೂ ಗಂಡಿನ ಪ್ರವೇಶ ಅಗತ್ಯ. ಅದು ಕೇವಲ ಅನಿವಾರ್ಯತೆ ಆಗಿಬಿಟ್ಟರೆ ಹೆಣ್ಣು ಗುಲಾಮಳಾಗಿಬಿಡುತ್ತಾಳೆ. ಗಂಡಿನ ಪ್ರೀತಿ ನುಡಿಯ ಹಿಂದೆ ಆದರವಿದೆಯೋ, ಒಡೆತನದ ಹಮ್ಮಿದೆಯೋ ಎಂಬುದನ್ನು ಎಚ್ಚರಿಕೆಯಿಂದ ಗಮನಿಸಲೇಬೇಕು.

ಬುದ್ಧಿವಂತೆ ವಿಚಾರವಂತೆ, ಕಾನೂನು ಪರೀಕ್ಷೆ ಕೂಡ ಮಾಡಿಕೊಂಡ ಮಧ್ಯಮ ದರ್ಜೆಯ ಹುಡುಗಿಯೊಬ್ಬಳಿಗೆ ಹಿರಿಯರೇ ನಿಶ್ಚಯಿಸಿದ ಅತಿ ಶ್ರೀಮಂತ ಮನೆಯ ವರ ಸಿಕ್ಕಿದ. ವರದಕ್ಷಿಣೆ ಇಲ್ಲದೇ, ಇವಳಿಗೆ ಮೈತುಂಬಾ ಒಡವೆ ಹಾಕಿ ಮದುವೆ ಮಾಡಿಕೊಂಡ ಆ ಹುಡುಗ. ನೋಡಲು ಬಲು ಹಿತಕರವಾದ ಮದುವೆ ಇದಾಗಿದ್ದರೂ ಅವಳ ಜೀವನ ಮಾತ್ರ ಹಿತಕರ ಆಗಲಿಲ್ಲ. ಗಂಡನೊಂದಿಗೆ ಅವಳು ಹಗಲು ಹೊತ್ತು ಮಾತನಾಡುವಂತಿಲ್ಲ, ಗಂಡನೆದುರು ಅವಳು ನೆಲದ ಮೇಲೇ ಕೂರಬೇಕು. ಮನೆಯ ಸಮಸ್ತ ಕೆಲಸವನ್ನೂ ಅವಳೇ ಮಾಡಬೇಕು.... ಅತ್ತೆಮಾವ, ನಾದಿನಿ, ಓರಗಿತ್ತಿಯರೊಂದಿಗೆ ತುಂಬಿದ ಸಂಸಾರದಲ್ಲಿ ಅವಳ ಬಡತನ ಯಾವಾಗಲೂ ಒಂದು ಅಪಹಾಸ್ಯದ ವಸ್ತು ಆಗಿರುತ್ತಿತ್ತು. ಈ ಅಪಹಾಸ್ಯ ಅವರು ದಿನನಿತ್ಯ ಉಡುವ ಬಟ್ಟೆ ಬರೆಗಳ ಗುಣಮಟ್ಟದಿಂದ ಹಿಡಿದು, ಚಪ್ಪಲಿ, ಅಲಂಕಾರ ಸಾಮಗ್ರಿ, ಸಿನಿಮಾದಲ್ಲಿ ತೆಗೆದುಕೊಳ್ಳುವ ಟಿಕೇಟಿನ ಬೆಲೆ...ಇತ್ಯಾದಿ ಎಲ್ಲದರ ಸುತ್ತಲೂ ತಿರುಗುತ್ತಿತ್ತು. ಅವಳ ಇನ್ನೊಂದು ಹಿಂಸೆ ಅಂದರೆ, ಅತ್ತೆ ಮನೆಯವರು ಕೊಟ್ಟ ಎಲ್ಲ ಒಡವೆಗಳನ್ನೂ ಅವಳು ಯಾವಾಗಲೂ ಧರಿಸಿರಬೇಕು. ಅದು ಅವರ ಅಂತಸ್ತಿನ ಪ್ರಶ್ನೆ. ಆದರೆ ಅದು ಅಷ್ಟಕ್ಕೇ ನಿಲ್ಲುವುದಿಲ್ಲ. ಮನೆಗೆ ಬಂದ ಅತಿಥಿಗಳೆಲ್ಲರೆದುರು ಈ ಹುಡುಗಿ ಬರಬೇಕು. ಅತ್ತೆ ತಾವು ಹಾಕಿದ ಆಭರಣಗಳ ಗುಣಗಾನ, ತೂಕ, ಮಜೂರಿ ಎಲ್ಲ ಮಾತನಾಡಬೇಕು. ಕೊನೆಯಲ್ಲಿ ಅವಳ ತವರು ಮನೆಯಲ್ಲಿ ಹಾಕಿರುವ ೧೦ ಗ್ರಾಮಿನ ಸರವೊಂದನ್ನು ತೋರಿಸಿ ಅಪಹಾಸ್ಯ ಮಾಡಿ ನಗಬೇಕು, ಹಾಗೂ ಬಡವರ ಮನೆಯ ಹುಡುಗಿಯನ್ನು ಮಾಡಿಕೊಂಡೆವು ಎಂದು ಜಗಜ್ಜಾಹೀರು ಮಾಡುವುದು ಅವರ ಉದ್ದೇಶ. ಅವಮಾನ ತಾಳಲಾರದೇ ಅವಳು ಗಂಡನೊಂದಿಗೆ ಹೇಳಿದರೆ ಅವನು 'ಅಮ್ಮನ ಮಗ' ಕೊನೆಗೆ ಹಿಂಸೆ ತಡೆಯದೆ ತನ್ನ ಎರಡು ವರ್ಷದ ಮಗನೊಂದಿಗೆ ಬಾವಿಗೆ ಬಿದ್ದ ಅವಳು ಪುಣ್ಯಾತ್ಮರ ನೆರವಿನಿಂದ ಬದುಕಿ ತವರಿಗೆ ಚಿಕಿತ್ಸೆಗೆಂದು ಬಂದಳು. ನಂತರ ಗಂಡನ ಮನೆಗೆ ಹೋಗಲೇ ಇಲ್ಲ. ಕೆಲಸ ಹುಡುಕಿಕೊಂಡು ತನ್ನ ಕಾಲ ಮೇಲೆ ನಿಂತಳು. ಗಂಡನ ಯಾವ ಪತ್ರ, ಕರೆಗೂ ಓಗೊಡಲಿಲ್ಲ. ಉತ್ತರಿಸಲಿಲ್ಲ. ನಾಲ್ಕು ವರುಷಗಳ ದೀರ್ಘ ಮೌನದ ನಂತರ ಗಂಡ ರಾಜಿಗೆ ಬಂದ. ಪ್ರತ್ಯೇಕ ಮನೆ ಮಾಡಿಕೊಂಡು ಅವಳನ್ನು ಕರೆದುಕೊಂಡು ಹೋದ. ಈಗ 'ಮನೆಯೊಡತಿ' ಅವಳೇ.

ಹೆಣ್ಣು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಬೇಕು ನಿಜ. ಆದರೆ, ಅದಕ್ಕಾಗಿ ಬೇರೊಂದು ಗುಂಪಿನ ವಿರುದ್ಧ ಸಮರ ನಡೆಸುವ ಅಗತ್ಯವಿಲ್ಲ. ತನ್ನ ಜತೆಯೇ, ತನ್ನ ಭಾವನೆ, ದೌರ್ಬಲ್ಯಗಳೊಂದಿಗೆ ಸೆಣಸಾಟ ನಡೆಸಬೇಕು. ಗಂಡು ಅವಳ ದೌರ್ಬಲ್ಯ ಆಗಬಾರದು. ಹಾಗೆ ಒಮ್ಮೆ ಆದರೂ ಸಾಕು. ಅವಳು ದಾಸಿಯಾಗಿ ಬಿಡುತ್ತಾಳೆ. ದಾಸ್ಯತ್ವದಿಂದ ಬಿಡುಗಡೆ ಹೊಂದಬೇಕು ಎಂದರೆ ಮೊದಲು

ದಾಸೀ ಭಾವದಿಂದ ಮುಕ್ತಳಾಗಬೇಕು. ತಾನು ಗಂಡನನ್ನು ಬಿಟ್ಟರೆ, ಮದುವೆ ಆಗದಿದ್ದರೆ, ಸಮಾಜ ತನ್ನ ಕಂಡು ನಕ್ಕರೆ.... ಇತ್ಯಾದಿ ಭಯಗಳು, ನಮ್ಮ ದೌರ್ಬಲ್ಯ ಆದಾಗ ನಾವು ದಾಸ್ಯಭಾವದಿಂದ ಮುಕ್ತರಾಗುವುದಾದರೂ ಹೇಗೆ?

ಬಾಲ ವಿಧವೆಯೊಬ್ಬಳು ನಡೆದು ಬಂದ ಹಾದಿ ಹೀಗಿದೆ. ಸಮಾಜ ೧೨ ವರುಷದ ಈ ಹುಡುಗಿಯ ಮೇಲೆ ಸಾಂಪ್ರದಾಯಕ ಒತ್ತಡ ಹೇರಿ ಕೂದಲು ತೆಗೆಸಲು ಮುಂದಾದಾಗ ಮನೆಬಿಟ್ಟು ಹೊರಟಳು. ಬೇರೊಂದು ಹಳ್ಳಿಗೆ ಬಂದು ಅಲ್ಲಿ ಅವರಿವರ ನೆರವಿನಿಂದ ಓದಿ, ಶಿಕ್ಷಣ ಪರೀಕ್ಷೆ ಮುಗಿಸಿ ಪ್ರಾಥಮಿಕ ಶಾಲೆಯ ಶಿಕ್ಷಕಿ ಆದಳು. ೨೦ ವರುಷದ ಸುಂದರ, ಒಂಟಿ ಹೆಣ್ಣಿನ ಮೇಲೆ ಒಬ್ಬ ಕಾಮುಕನ ದೃಷ್ಟಿ ಬಿತ್ತು. ಅವಳ ಮೇಲೆ ಅತ್ಯಾಚಾರ ಮಾಡಿದ. ಆದರೆ ಈ ಹೆಣ್ಣು ಸುಮ್ಮನಿರಲಿಲ್ಲ. ಮೇಲೆ ಬಿದ್ದು ಅವನನ್ನು ಮದುವೆ ಆದಳು. ಅದೂ ಅವನ ನಾಲ್ಕನೆಯ ಹೆಂಡತಿ ಆಗಿ. ಊರಿನಲ್ಲಿ ದೊಡ್ಡ ಶಿಕ್ಷಕಿ ಎನಿಸಿಕೊಂಡಳು. ಎರಡು ಮಕ್ಕಳಾದ ಕೂಡಲೇ ಅವನನ್ನು ಮನೆಗೆ ಸೇರಿಸಲಿಲ್ಲ. ಬಾಲ ವಿಧವೆ ಆದದ್ದು, ಸಂಪ್ರದಾಯಕ್ಕೆ ಬಲಿಪಶು ಆಗಬೇಕಾಗಿ ಬಂದದ್ದು, ಅತ್ಯಾಚಾರಕ್ಕೆ ಬಲಿದಾಯಾದದ್ದು, ಆತನನ್ನು ಮದುವೆ ಆದದ್ದು ಎಲ್ಲ ಅವಳ ಬಾಳಿನ ವಿಧಿ. ಆದರೆ, ಆಕೆ ವಿಧಿಯನ್ನು ಗೆದ್ದಳು. ವಿಧಿಯನ್ನು ಆಳಿದಳು. ಗಂಡನಿಗೆ ಎಂದೂ ಸೊಪ್ಪು ಹಾಕಲಿಲ್ಲ. ಅವನಿಗೆ ಅವಳ ಮೇಲೆ ಒಡೆತನ ಸ್ಥಾಪಿಸುವ ಅವಕಾಶವೇ ಆಗಲಿಲ್ಲ. ಅವಳ ಮಾತಿಗೆ, ನೋಟಕ್ಕೆ ಕಾದು ಕುಳಿತಿರುತ್ತಿದ್ದ. ಸಾವಿರಾರು ಮಕ್ಕಳಿಗೆ ಶಿಕ್ಷಣ ನೀಡಿ ಬಾಳುವ ಮಾರ್ಗ ತೋರಿದಳು.

ಈ ಹೆಣ್ಣು ಇಂದು, ನೊಂದಿರುವ ದಾಸ್ಯಕೂಪದಲ್ಲಿ ಕೊಳೆಯುತ್ತಿರುವ ಹೆಣ್ಣುಮಕ್ಕಳಿಗೆ ಆದರ್ಶ ಸಂಪ್ರದಾಯದ ಕೊಡಲಿಗೆ ತಲೆಬಾಗಿಸಲು ಒತ್ತಾಯ ಮಾಡುವುದೂ ಹೆಣ್ಣು, ಆ ರೀತಿ ತಲೆಬಾಗದಿದ್ದರೆ ವಿಧಿ ಇಲ್ಲ ಎಂದು ತಲೆ ಬಾಗಿಸುವುದೂ ಹೆಣ್ಣೇ. ಗಂಡಿನ ಆಳ್ವಿಕೆಯಲ್ಲಿ ಬದುಕುವುದೇ ತನ್ನ ಗೌರವಕ್ಕೆ ಮೆರಗು ಎಂದು ಭಾವಿಸಿ ದಾಸಿಯಾಗುವುದು ಹೆಣ್ಣೇ.

ವಿದ್ಯೆ ಇರಲೀ, ಬಿಡಲಿ, ಉದ್ಯೋಗ ಇರಲಿ, ಇಲ್ಲದಿರಲಿ, ಹಣ ಇರಲಿ, ಇಲ್ಲದಿರಲಿ, ಹೆಣ್ಣು ಒಂದು ಕುಟುಂಬದ, ಒಬ್ಬ ವ್ಯಕ್ತಿಯ ದಾಸಿ ಎಂದು ಆಕೆಯೇ ಅಂದುಕೊಳ್ಳುತ್ತಿದ್ದಾಳೆ. ಇದೇ ಅವಳ ಮೂರ್ಖತನ. ಇದೇ ಕಾರಣದಿಂದಲೇ ಗಂಡೂ ಹೆಣ್ಣನ್ನೆ ಆಳುತ್ತಾನೆ. ಹೆಣ್ಣೂ ಹೆಣ್ಣನ್ನು ಆಳುತ್ತಾಳೆ. ಬದುಕು ಯಾರೊಬ್ಬರ ಸೊತ್ತೂ ಅಲ್ಲ, ತೊತ್ತೂ ಅಲ್ಲ. ಅದು ಸ್ವಚ್ಛಂದವಾದ, ನಿರ್ಮಲವಾದ, ಸ್ವತಂತ್ರವಾದ ಅಂಗಣ. ಪ್ರತಿಯೊಬ್ಬನ ಬದುಕಿನಲ್ಲೂ ಅನೇಕ ಪಾತ್ರಗಳು ಕಂಡುಬರುತ್ತವೆ. ಹೆಣ್ಣು ಮತ್ತು ಗಂಡುಗಳ ಆ ಪಾತ್ರಗಳಿಗೆ ಸಂಬಂಧದ ಅನೇಕ ರೂಪಗಳೂ ಇರುತ್ತವೆ. ಆ ಪಾತ್ರಗಳು ಅಂಗಣವನ್ನು ಅಲಂಕರಿಸುವ ಹೂಗಿಡಗಳಾಗಬೇಕು. ತಂಪು ನೀಡುವ ಮರಗಳಾಗಬೇಕು. ಅಂಗಣವನ್ನು ರಕ್ಷಿಸುವ ಬೇಲಿಯಾಗಬೇಕು. ಹಾಗಾಗದೇ ಅಂಗಣ ತನ್ನ ಸ್ವತ್ತು ಎಂದು ಆಕ್ರಮಿಸುವ ಮುಳ್ಳುಗಿಡಗಳಾದರೆ, ಜೊಂಡು-ಹುಲ್ಲುಗಳಾದರೆ ಅವನ್ನು ಕತ್ತರಿಸಿ ಬಿಸಾಡಬೇಕಾದ ಕರ್ತವ್ಯ, ಜವಾಬ್ದಾರಿ ಅಂಗಣದ್ದೇ ಆಗಿರುತ್ತದೆ.

ದಾಸ್ಯ ಭಾವನೆಗೆ ಮತ್ತೊಂದು ಕಾರಣ ಭಯ. ಮೊದಲ ಕಾರಣ ಸಾಮಾಜಿಕ, ಸಂಪ್ರದಾಯಗಳ ಭಯವಾದರೆ, ಎರಡನೆಯ ಕಾರಣ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಸಮಾರ್ಥ್ಯ ಇಲ್ಲದಿರುವ ಭಯ. ಆತ್ಮವಿಶ್ವಾಸದ ಕೊರತೆ ತರುವ ಭಯ. ತಮ್ಮ ಪ್ರತಿಯೊಂದು ವಿಷಯವನ್ನು ಬೇರೆಯವರ ನಿರ್ಧಾರದ ಮೇಲೇ ಮಾಡುವ ರೂಢಿ ಬೆಳೆಸಿಕೊಂಡು, ಎಲ್ಲದಕ್ಕೂ ಬೇರೆಯವರನ್ನು ಅವಲಂಬಿಸುವ ಚಟ ತಂದೊಡ್ಡಿದ ಭೀತಿ.

ತನ್ನ ಓದು, ಬಟ್ಟೆ, ಪುಸ್ತಕ ಪ್ರತಿಯೊಂದಕ್ಕೂ ಈ ಹೆಣ್ಣು ಬೇರೆಯವರನ್ನು ಅವಲಂಬಿಸುತ್ತಿದ್ದಳು. ಓದಬೇಕಾದ ವಿಷಯ, ಆರಿಸಿಕೊಳ್ಳಬೇಕಾದ ಉದ್ಯೋಗ....ಎಲ್ಲಕ್ಕೂ ಅಣ್ಣ-ತಂದೆಯರ ನಿರ್ಧಾರವನ್ನೇ ಅವಲಂಬಿಸುತ್ತಿದ್ದಳು. ಕೊನೆಗೆ ಕಚೇರಿಯ ಮೀಟಿಂಗ್‌ಗಳ ವಿಷಯಕ್ಕೂ ಅವರ ಸಲಹೆಗಳನ್ನೇ ಕೇಳುತ್ತಿದ್ದಳು. ಈಗ ಅವಳಿಗಾಗಿ ನಿರ್ಧರಿಸುವವರು ಬೇರೆಯವರೇ. ಎಲ್ಲಿಯೂ ಅವಳು ಯಶಸ್ವಿಯಾಗಿ ಬರಲು ಸಾಧ್ಯವಾಗುತ್ತಿಲ್ಲ. ಅವಳದೇ ಸಲಹೆ,

ತೀರ್ಮಾನಗಳು ಸಾಕಷ್ಟು ಮೂರ್ಖತನದ್ದಾಗಿರುತ್ತವೆ. ಈಗ ಅವಳು ಸ್ವಾತಂತ್ರ್ಯ ಬೇಕು ಎಂದು ಕೂಗುಹಾಕುತ್ತಿದ್ದಾಳೆ. ಆದರೆ, ಅವಳಿಗೆ ಅದನ್ನು ನೀಡಲು ಮನೆಯವರು ಸಿದ್ಧರಿಲ್ಲ. ಏಕೆಂದರೆ ಅವರ ನಡೆಯಲ್ಲಿ ಕೌಟುಂಬಿಕ ಶಾಂತಿಯೇ ಹದಗೆಡುತ್ತದೆ. ತನಗೆ ತಾನೇ ಹ್ಲಾಕಿಕೊಂಡ ಬೇಡಿಯಲ್ಲಿ ನಲವತ್ತೇ ವಸಂತಗಳನ್ನು ಕಳೆದಿರುವ ಈ ಹೆಣ್ಣಿಗೆ, ಗಂಡನ ಕುರಿತಾಗಲೀ, ಅಣ್ಣ-ತಂದೆಯರ ಕುರಿತಾಗಲೀ ಅಭಿಮಾನವಿಲ್ಲ. ಹಾಗೆ ಅವಳಿಗೆ ನೆಮ್ಮದಿ ಸಿಗಲೆಂದು ಸ್ವಾತಂತ್ರ್ಯ ನೀಡಿ ಕೆಲವು ಸಮಸ್ಯೆಗಳನ್ನು ಮುಂದಿಟ್ಟರೆ, ಅವನ್ನು ಮತ್ತಷ್ಟು ಜಟಿಲಗೊಳಿಸುತ್ತಾಳೆ ಆತ್ಮವಿಶ್ವಾಸ ಕಳೆದುಕೊಂಡ ಹೆಣ್ಣು. ಅದಕ್ಕೆ ಅವಳ ಮನೋಧರ್ಮವೇ ಕಾರಣ.

ಮಹಿಳೆ ತನ್ನ ಹೊಣೆಯನ್ನು ಬೇರೆಯವರು ಹೊರಬೇಕು ಎಂಬ ಭಾವವೇ ಅವರ ದಾಸ್ಯತ್ವಕ್ಕೆ ಹೆಜ್ಜೆಯಾಗುತ್ತದೆ. ಏಕೆಂದರೆ ಈ ಭಾವದಿಂದಲೇ ಅವಳು ತನ್ನನ್ನು ತಾನು ಸುಲಭವಾಗಿ ಮತ್ತೊಬ್ಬರಿಗೆ ಒಪ್ಪಿಸಿಕೊಂಡುಬಿಡುತ್ತಾಳೆ. ತಾನೇ ಎಲ್ಲರ, ಎಲ್ಲದರ ಹೊಣೆ ಹೊರುತ್ತೇನೆ ಎಂದು ಬಲವಾಗಿ ವರ್ತಿಸಿದಾಗ ಅವಳು ಒಡತಿ ಆಗುತ್ತಾಳೆ. ಆದ್ದರಿಂದ ಅವಳು ಮೊದಲು ತನ್ನ ಅಂತರಂಗದಲ್ಲಿ ಹೋರಾಟ ನಡೆಸಿ ಗೆಲ್ಲಬೇಕಿದೆ.

ತುಂಬಿದ ಕುರುಸಭೆಯಲ್ಲಿ ಹಿರಿಯರೆಲ್ಲರ ಸಮಕ್ಷಮದಲ್ಲಿ ಧರ್ಮರಾಯ ದುರ್ಯೋಧನನೊಂದಿಗೆ ಪಗಡೆಯಾಡಿ ಸೋತಿದ್ದ. ರಾಜ್ಯ, ಕೋಶ, ತಮ್ಮಂದಿರು ಮತ್ತು ಸ್ವತಃ ತಾನು. ಅಷ್ಟೇ ಅಲ್ಲದೆ ತನ್ನ ಪ್ರೀತಿಪಾತ್ರಳಾದ ದ್ರೌಪದಿಯನ್ನು ಕೂಡ ಸೋತು ದಾಸ್ಯತ್ವವನ್ನು ಅಂಗೀಕರಿಸಿದ್ದ. ದ್ರೌಪದಿಯನ್ನು ಓರ್ವ ದಾಸಿಯನ್ನೆಳೆದು ತರುವಂತೆ ಸಭೆಯಲ್ಲಿ ಎಳೆತಂದು ನಿಲ್ಲಿಸಲಾಗಿತ್ತು. ಆಗ ದ್ರೌಪದಿ ಇಡೀ ಸಭೆಯನ್ನು ಕೇಳಿದ್ದಳು, "ನನ್ನ ಪತಿ ನನ್ನನ್ನು ಸೋತದ್ದು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡ ಮೇಲೋ ಅಥವಾ ಅದಕ್ಕೂ ಮೊದಲೋ?" ಈ ಪ್ರಶ್ನೆಗೆ ಯಾರಿಂದಲೂ ಸೂಕ್ತ ಉತ್ತರ ದೊರಕದೇ ಇದ್ದದ್ದು ಆ ಪ್ರಕರಣದ ಮುಖ್ಯ ಅಂಶ ಆಗಿತ್ತು. ಆದರೆ, ಪ್ರಶ್ನೆ ಕೇಳುವಾಗ ದ್ರೌಪದಿ ಅಂತರಂಗದಲ್ಲಿ ಎಂತಹ ಹೋರಾಟ ನಡೆದಿರಬೇಕು. ಮೊದಲೇ ನೊಂದ ಪತಿಗೆ ತಾನು ಈ ಮೂಲಕ ಮತ್ತಷ್ಟು ನೋವನ್ನು ಕೊಡುತ್ತಿದ್ದೇನೆ; ತಾನು ಹೀಗೆ ಕೇಳಿದರೆ ಪತಿಯ ಕುರಿತು ಸಭೆಯಲ್ಲಿರುವ ಗೌರವ ಆದರಗಳಿಗೆ ಧಕ್ಕೆ ಬರುತ್ತದೆ; ತನ್ನ ಈ ಪ್ರಶ್ನೆಯಿಂದ ಅಣ್ಣ-ತಮ್ಮಂದಿರು ತನ್ನ ಮೇಲೆ ಇಟ್ಟಿರುವ ಪ್ರೀತಿ, ಆದರಗಳು ಕಡಿಮೆ ಆಗಬಹುದೇನೋ; ಹೆಣ್ಣಿಗಿರಬೇಕಾದ ಲಜ್ಜೆ, ವಿನಯಗಳನ್ನು ತೊರೆದೆ ಎಂದು ಸಭೆ ತನ್ನನ್ನು ನಿಂದಿಸಬಹುದು;....ಈ ರೀತಿಯ ಎಷ್ಟೆಷ್ಟು ಅನಿಸಿಕೆಗಳನ್ನು ಅದುಮಿಟ್ಟುಕೊಂಡಿರಬೇಕು?

ಹೆಂಡತಿಯ ದಾಸ್ಯವನ್ನು ಬಯಸುವ ಪತಿಗೆ ಹೆಣ್ಣು ಕೇಳಬೇಕಾದ ಪ್ರಶ್ನೆ ಇದೇ 'ನಿನ್ನ ಸ್ವಾತಂತ್ರ್ಯವ ಎಷ್ಟು ಹಣಕ್ಕೆ ಮಾರಿಕೊಂಡಿದ್ದೀಯ!' ಎಂದು. ಭಾವನೆಗಳ, ಒತ್ತಡಗಳ, ಸಂಬಂಧಗಳ ಒಡತಿಯರಾಗುವುದೋ, ದಾಸಿಯರಾಗುವುದೋ ಅದನ್ನು ನಿರ್ಧರಿಸಬೇಕಾದದ್ದು ಹೆಣ್ಣೇ! ಸ್ವಾತಂತ್ರ್ಯ ನೀಡಿ ಎಂದು ಬೇಡುವ ಬದಲು ಅದರ ಮೇಲಿನ ಹಕ್ಕು ಸ್ಥಾಪನೆ ಆಗಬೇಕು.

ಎಂಥ ಸರಳ ವಿವಾಹ!

ಬಿಹಾರದ ಗಂಗಾತೀರದಲ್ಲಿರುವ ರಾಮರೇಖಾ ಘಾಟ್ ಮೇಲೆ ಪ್ರತಿವರ್ಷ ಹತ್ತುಸಾವಿರ ವಿವಾಹಗಳು ನಡೆಯುತ್ತವೆ. ಪುರೋಹಿತರಿಗೆ ಸ್ವಲ್ಪ ದಕ್ಷಿಣೆ ನೀಡಿ ತುಪ್ಪದ ದೀಪಕ್ಕೆ ಸುತ್ತುಹಾಕಿ ಬಂದರೆ ಮುಗಿಯಿತು ವಿವಾಹ. ಅನಂತರ ವಿವಾಹಕ್ಕೆ ಬಂದವರಿಗೆಲ್ಲ ಕಡಲೆಹಿಟ್ಟಿನ ಉಂಡೆಗಳನ್ನು ಹಂಚಲಾಗುತ್ತದೆ. ಮದುವೆ ಮೇಳವಾಗಲಿ, ಬ್ಯಾಂಡ್, ಔತಣಗಳಾಗಲಿ ಇಲ್ಲ. ವರದಕ್ಷಿಣೆಯಂತೂ ಇಲ್ಲವೇ ಇಲ್ಲ.

- ಟೇಕಲ್ ಗೋಪಾಲಕೃಷ್ಣ

ತಾತಯ್ಯ

- ಗೌ.ರು. ಓಂಕಾರಯ್ಯ

ಆತನ ಹೆಸರು ನಮಗಾರಿಗೂ ತಿಳಿಯದು. ಆತ ಎಲ್ಲಿಯವ, ಅವನ ಕತೆ ಏನು ಎಂಬುದೂ ನಿಗೂಢ. ನಾನು ಚಿಕ್ಕ ಹುಡುಗನಾಗಿದ್ದಾಗ ನಮ್ಮ ಹಳ್ಳಿಯಿಂದ ಒಂದು ಮೈಲು ದೂರದಲ್ಲಿ ನದಿಯ ಹತ್ತಿರ ಇದ್ದ ಗುಡಿಸಲೇ ಆತನ ನಿವಾಸ. ಹಳ್ಳಿಗರೆಲ್ಲ ಅಲ್ಲಿಗೆ ಹೋಗಿ ತಮ್ಮ ಕಷ್ಟಸುಖಗಳನ್ನು ಆತನಲ್ಲಿ ಹೇಳಿಕೊಳ್ಳುತ್ತಿದ್ದರು. ಆತ ಮೌನವಾಗಿ ಆಲಿಸಿ ಉತ್ತರ ಕೊಡುತ್ತಿದ್ದ. ತನ್ನ ಕೈಲಾದ ನೆರವನ್ನೂ ನೀಡುತ್ತಿದ್ದ. ಕಾಯಿಲೆ ಕಸಾಲೆಯವರಿಗೆ ಔಷಧಿ ಸಹ ಕೊಡುತ್ತಿದ್ದ. ಕಾಯಿಲೆ ವಾಸಿಯಾದವರು ಆತನನ್ನು ಸ್ಮರಿಸುತ್ತಿದ್ದರು. ಆತ ಮೌನಿ, ಹೆಚ್ಚು ಮಾತನಾಡುತ್ತಿರಲಿಲ್ಲ. ಅವನೊಡನೆ ಬೇರೆ ಯಾರೂ ಇರಲಿಲ್ಲ. ತನ್ನ ಕೆಲಸಗಳನ್ನು ತಾನೇ ಮಾಡಿಕೊಳ್ಳುತ್ತಿದ್ದ. ಅವನ ಗುಡಿಸಲ ತುಂಬೆಲ್ಲ ಪುಸ್ತಕಗಳೇ ಪುಸ್ತಕಗಳು ಆತ ಯಾವಾಗಲೂ ಓದುತ್ತಿದ್ದ. ನಾನು ನನ್ನ ಅಪ್ಪನೊಡನೆ ಒಂದೆರಡು ಸಾರಿ ಆತನ ಗುಡಿಸಲಿಗೆ ಹೋಗಿದ್ದೆ. ಆತ ತೆಳ್ಳಗೆ ಉದ್ದವಾಗಿದ್ದ. ತಲೆಗೂದಲು, ಗಡ್ಡದ ಕೂದಲು ಬೆಳ್ಳಗಿದ್ದು ಮೈಮೇಲೆ ಹಳ್ಳಿಗರಂತೆ ಒಂದು ವಸ್ತ್ರ ಮೊಳಕಾಲ ಮೇಲೆ ಒಂದು ಲುಂಗಿ. ಅಷ್ಟೇ ಅವನ ಉಡುಪು. ಹಳ್ಳಿಗರೆಲ್ಲ ಆತನನ್ನು 'ಉಪಕಾರಿ ತಾತಯ್ಯ ಎಂದೇ ಕರೆಯುತ್ತಿದ್ದರು. ಆ ಗುಡಿಸಿಲಿನ ಹತ್ತಿರ ರೋಹಿಣಿ ನದಿ ವಿಸ್ತಾರವಾಗಿ ಹರಿಯುತ್ತಿತ್ತು. ಸ್ವಲ್ಪ ದೂರದಲ್ಲಿ ಮೇಲೆ ಎರಡು ಗುಡ್ಡಗಳನ್ನು ಸೀಳಿಕೊಂಡು ಹರಿದು ಬರುತ್ತಿತ್ತು. ಎಲ್ಲಿ ನೋಡಿದರೂ ಮರಗಿಡಗಳು, ಹಸಿರು ಬನ, ಕಾಡು ಪ್ರಾಣಿಗಳು, ಹಕ್ಕಿ ಪಕ್ಷಿಗಳು, ಎಲ್ಲರ ಕಣ್ಣಿಗೂ ಮನಕ್ಕೂ ಸಂತಸ ನೀಡುತ್ತಿದ್ದವು. ಸ್ವಲ್ಪ ದೂರದಲ್ಲಿ ನದಿ ಪಕ್ಕದಲ್ಲಿಯೇ ನಮ್ಮ ಹಳ್ಳಿ ಸ್ವಲ್ಪ ಎತ್ತರದಲ್ಲಿತ್ತು. ನೆರೆ ತೊರೆ ಬಂದರೆ ನಮ್ಮ ಹಳ್ಳಿಗೇ ಅಪಾಯವಿರಲಿಲ್ಲವಾದರೂ ಆ ಮಾತನ್ನು ಆ ತಾತಯ್ಯನ ಗುಡಿಸಲ ಬಗ್ಗೆ ಹೇಳುವಹಾಗಿರಲಿಲ್ಲ. ಆದರೆ ಎಂದೂ ನೆರೆಯು ತಾತಯ್ಯನ ಗುಡಿಸಲನ್ನು ಮುಟ್ಟಿರಲಿಲ್ಲ. ಸಾಯಂಕಾಲ ಕಾಡು ಮೇಡು ಸುತ್ತಿ ಗಿಡಮೂಲಿಕೆಗಳನ್ನು ತಂದು ಅರೆದು ಔಷಧಿ ತಯಾರಿಸುತ್ತಿದ್ದ ಆ ತಾತಯ್ಯ.

ಒಂದು ಸಾರಿ ದೊಡ್ಡ ಇಂಜಿನಿಯರು ನದಿಯ ಪಕ್ಕದ ರಸ್ತೆಯಲ್ಲಿ ಹೋಗುತ್ತಿದ್ದರು. ಅವರ ದೃಷ್ಟಿ ಎರಡು ಗುಡ್ಡಗಳ ಮಧ್ಯೆ ಹರಿದು ಬರುತ್ತಿರುವ ರೋಹಿಣಿಯತ್ತ ಹೋಯಿತು. ಅಬ್ಬಾ ಎಂತಹ ಸೌಂದರ್ಯ, ಎಷ್ಟು ಅನುಕೂಲಕರವಾದ ತಾಣ ಎಂದುಕೊಂಡರು. ಸರಕಾರಕ್ಕೆ ಬರೆದರು ಅಳತೆಯವರು ಬಂದರು, ಅಳತೆಯಾಯಿತು. ಕೆಲಸ ಆರಂಭವಾಯಿತು.

'ಇಲ್ಲಿ ಡ್ಯಾಂ ಕಟ್ಟುತ್ತಾರಂತೆ, ರೋಹಿಣಿಯನ್ನು ತಡೆದುನಿಲ್ಲಿಸಿ ಬೆಳೆ ಬೆಳೆಯಲು ನಮಗೆಲ್ಲ ನೀರು ಕೊಡುತ್ತಾರಂತೆ' ಎಂದು ಹಳ್ಳಿಗಳಿಗೆಲ್ಲ ಸುದ್ದಿ ಹರಡಿತು. ಜನಗಳಿಗೆ ಹರುಷವೇ ಹರುಷ. "ಸಾರ್ ಬಲದಂಡೆ ನಾಲೆ ಆ ಸಾಧುವಿನ ಗುಡಿಸಲ ಪಕ್ಕದಲ್ಲೇ ಹೋಗುತ್ತದೆ. ಆ ಜಾಗ ಖಾಲಿಮಾಡಿಸಬೇಕು."

"ನೀವು ಹೋಗಿ ಅವರಿಗೆ ವಿಷಯ ತಿಳಿಸಿ."

"ನಮಗಂತೂ ಅವರ ಪತ್ತಿರ ಮಾತನಾಡಲು ಭಯ."

"ಹೌದೆ? ಹಾಗಾದರೆ ನಾನೇ ಬರುತ್ತೇನೆ ನಡೆಯಿರಿ," ಎಂದರು ಇಂಜಿನಿಯರು.

ಜೀಪು ಗುಡಿಸಲ ಪಕ್ಕದಲ್ಲಿ ಬಂದು ನಿಂತಿತು.

"ಅಧಿಕಾರಿ ಅಂಜುತ್ತಲೇ ಗುಡಿಸಲಿಗೆ ಕಾಲಿಟ್ಟ. ಒಳಗಡೆ ನಿಶ್ಶಬ್ದ. ಎತ್ತ ನೋಡಿದರೂ ಪುಸ್ತಕದ ಕಪಾಟುಗಳು, ಒಳಗೆ ಯಾರೂ ಕಾಣಲಿಲ್ಲ. ಪಕ್ಕದಲ್ಲಿದ್ದ ಮಲಗುವ ಕೋಣೆಯತ್ತ ನೋಡಿದರು. ಅಲ್ಲಿ ಮಂಚಕ್ಕೆ ಒರಗಿಕೊಂಡು ಒಬ್ಬ ಏನನ್ನೋ ಓದುತ್ತಿದ್ದ.

ಆತ ಓದಿನಲ್ಲಿ ಲೀನನಾಗಿದ್ದ. ಅಧಿಕಾರಿ ಅವನ ಗಮನಸೆಳೆಯಲು "ನಮಸ್ಕಾರ ಸಾರ್" ಅಂದ.

ಉಪಕಾರ ಯಾವುದೆಂದು ತಿಳಿದದ್ದು ಅವನ ಗುಡಿಸಲು ಸುಟ್ಟ ಮೇಲೆಯೇ

ಆತ ಪುಸ್ತಕವನ್ನು ಕೆಳಗಿಟ್ಟು ಅಧಿಕಾರಿಯ ಕಡೆ ನೋಡಿ "ನೀವು ಯಾರು?" ಏನು ಬೇಕಾಗಿತ್ತು? ಬನ್ನಿ, ಕುಳಿತುಕೊಳ್ಳಿ," ಅಂದ.

"ನಿಮಗೆ ತೊಂದರೆ ಕೊಟ್ಟೆವು ಅಂತ ಕಾಣುತ್ತೆ."

"ಛೆ ಛೆ' ಏನೂ ಇಲ್ಲ, ನನ್ನಿಂದ ಏನಾಗ ಬೇಕಾಗಿತ್ತು?'

"ನೋಡಿ, ಅಲ್ಲಿ ದೂರದಲ್ಲಿ ಎರಡು ಗುಡ್ಡಗ



ಳಸುವ ರೋಹಿಣಿ ಹರಿಯುತ್ತದೆ. ಆ ಜಾಗದಲ್ಲಿ ಡ್ಯಾಂ ನಿರ್ಮಿಸಿದರೆ ಹಳ್ಳಿಗರಿಗೆ ಬೇಸಾಯಕ್ಕೆ ನೀರು ಸಿಗುತ್ತದೆ, ಜನರ ಜೀವನ ಉತ್ತಮವಾಗುತ್ತದೆ."

"ಹೌದೆ? ಹಾಗೇ ಮಾಡಿ. ನನ್ನಿಂದ ಏನಾದರೂ ಸಹಾಯ ಬೇಕಾದರೆ ಮಾಡುತ್ತೇನೆ."

"ನಾವು ತೆಗೆಯುವ ಬಲದಂಡೆ ನಾಲೆ ತಮ್ಮ ಗುಡಿಸಲಿನ ಹತ್ತಿರವೇ ಹೋಗುತ್ತದೆ. ಆದ್ದರಿಂದ ನಿಮ್ಮಲ್ಲಿ...."

"ಪರವಾಗಿಲ್ಲ. ನಾನೂ ಜನರ ಒಳ್ಳೆಯದನ್ನೇ ಬಯಸುವವ. ಬೇಕಾದರೆ ಈ ಆಶ್ರಮವನ್ನು ಬೇರೆಡೆಗೆ ಸಾಗಿಸುವಾ."

"ನಿಮ್ಮ ಆಶ್ರಮ ಬೇರೆಡೆಗೆ ಹೋಗುವುದು ಬೇಡ, ಅದೋ ನೋಡಿ, ಬಲದಂಡೆಯ ಗುಡ್ಡದ ಮೇಲೆ ವಿಸ್ತಾರವಾದ ಬಯಲಿದೆ. ಅಲ್ಲಿ ನಾವು ತಮ್ಮ ಆಶ್ರಮವನ್ನು ನಿರ್ಮಿಸಿ ಕೊಡುತ್ತೇವೆ."

"ಆಗಬಹುದು."

ಅನತಿ ಕಾಲದಲ್ಲೆ ಡ್ಯಾಂ ನಿರ್ಮಾಣವಾಯಿತು. ಅಲ್ಲೇ ಬಲದಂಡೆಯ ಗುಡ್ಡದ ಮೇಲೆ ಈ ಸಾಧುವಿನ ಆಶ್ರಮವು ಕಟ್ಟಲ್ಪಟ್ಟಿತು.

ಈಗ ಆಶ್ರಮ ಹುಲ್ಲು ಜೋಪಡಿಯದಾಗಿರದೆ ಕಲ್ಲು, ಗಾರೆ, ಹೆಂಚುಗಳಿಂದ ಸುಂದರವಾಗಿ ಕಟ್ಟಲ್ಪಟ್ಟಿತು. ಅಲ್ಲಿ ದಿನಾಲು ಹಳ್ಳಿಗರು ಬಂದು ಸೇರುತ್ತಿದ್ದರು. ಪ್ರವಾಸಿಗರೂ ಬರುತ್ತಿದ್ದರು.

ದಿನಗಳು ಉರುಳಿದವು. ಡ್ಯಾಂ ತುಂಬಾ ನೀರು. ಅದು ಸುತ್ತಲಿನ ಗ್ರಾಮಗಳ ಜಮೀನಿಗೆ ನೀರುಣಿಸುತ್ತಿತ್ತು. ಅದರಿಂದ ಒಳ್ಳೆ ಬೆಳೆ ಬರುತ್ತಿತ್ತು. ಜನ ಮೊದಲಿಗಿಂತ ಸುಖವಾಗಿದ್ದರು.

ಈ ಉಪಕಾರಿ ತಾತಯ್ಯನಿಗೂ ವಯಸ್ಸಾಯಿತು. ಅವನ ತಲೆಯೆಲ್ಲ ನರೆಯಿತು. ಆಗ ಚೋಟಿದ್ದ ನಾವು ನಡುಪ್ರಾಯಕ್ಕೆ ಬಂದೆವು. ತಾತಯ್ಯ ಈಗಲೂ ಉಪಕಾರಿಯಾಗಿಯೇ ಇದ್ದ. ಯಾರಿಗೂ ಒಂದು ಕೆಟ್ಟ ಮಾತನಾಡದವ. ಕೈಲಾದ ಉಪಕಾರ ಮಾಡುವವ. ಅವನ ದಿನಚರಿಯೂ ಸರಳ. ಸ್ವಲ್ಪ ಆಹಾರ ಬೇಯಿಸಿಕೊಂಡು ತಿನ್ನುವುದು. ಹಳ್ಳಿಗರು ಯಾರಾದರೂ ಬಂದರೆ ಅವರೊಡನೆ ಅಷ್ಟಿಷ್ಟು ಮಾತಾಡುವುದು. ಮುಂಜಾನೆ ಡ್ಯಾಮಿನ ಹತ್ತಿರ ಹೋಗಿ ಆ ವಿಶಾವಾದ ಜಲರಾಶಿಯನ್ನು ನೋಡುತ್ತಾ ನಿಲ್ಲುವನು. ಉಳಿದ ಸಮಯವನ್ನು ಓದುವುದರಲ್ಲೋ ಬರೆಯುವುದರಲ್ಲೋ ಕಳೆಯುವನು. ಮಳೆಗಾಲ ಆರಂಭವಾಯಿತು. ಭಾರಿ ಮಳೆ ಬಿತ್ತು ಡ್ಯಾಂ ತುಂಬಿ ಸೂಸಿತು. ಹಳ್ಳಿಗರಿಗೆಲ್ಲ ಆನಂದ. ಮಳೆಗಾಲದ ಬೆಳೆ, ಬೇಸಿಗೆ ಕಾಲದ ಬೆಳೆ ಬೆಳೆಯಬೇಕೆಂದಿದ್ದ. ಕೆಲವರು ನಾಟಿ ಮಾಡುತ್ತಿದ್ದರು, ಕೆಲವರು ಉತ್ತುತ್ತಿದ್ದರು.

ಒಂದು ದಿನ ಮಧ್ಯಾಹ್ನ ನಾನು ತಾತಯ್ಯನನ್ನು ನೋಡಲು ಹೋಗಿದ್ದೆ.

"ಬಾ ಶಂಭು, ಏನು ಬಂದೆ?"

"ಮಗುವಿಗೆ ಜ್ವರ ಇಳಿದಿಲ್ಲ. ಅದಕ್ಕೆ ಬಂದೆ."

"ಸರಿ ಮದ್ದುಕೊಡುತ್ತೇನೆ, ನಿಲ್ಲು" ಎಂದು ಡ್ಯಾಮಿನ ಕಡೆಗೆ ಹೋಗಿ ಬಂದ. ಅವನ ಮುಖದಲ್ಲಿ ಚಿಂತೆ ಇದ್ದಂತಿತ್ತು. ಮತ್ತೆ ಒಳಗೆ ಹೋದ. ತಿರುಗಿ ಮತ್ತೆ ಡ್ಯಾಮಿನ ಹತ್ತಿರ ಹೋಗಿ ಬಂದರು. ನನಗೆ ಒಂದೂ ಅರ್ಥವಾಗಲಿಲ್ಲ ಮತ್ತೆ ಬಂದರು. ಆಶ್ರಮದ ಪಕ್ಕಕ್ಕೆ ನಿಂತು ಕೆಳಗಡೆ ನೋಡಿದರು. ಹತ್ತಿರದಲ್ಲಿ ಕಾಣಿಸಿತು ಹಳ್ಳಿ. "ಹಳ್ಳಿಯಲ್ಲಿ ಯಾರೂ ಇಲ್ಲ, ಎಲ್ಲರೂ ಕೆಲಸಕ್ಕೆ ಹೋಗಿದ್ದಾರೆ ಅಲ್ಲವೇ ಶಂಭು?" ಅಂದ.

"ಹೌದು ಸ್ವಾಮಿ, ಎಲ್ಲಾ ಗದ್ದೆಯಲ್ಲಿ ಕೆಲಸಮಾಡುತ್ತಿದ್ದಾರೆ," ಅಂದೆ.

"ಹಾಗಾದರೆ, ಹಳ್ಳಿಯಲ್ಲಿ ಯಾರು ಉಳಿದಿದ್ದಾರೆ?"

"ಹುಡುಗರು, ಮುದುಕರು, ಶಾಲಾ ಮಕ್ಕಳಿದ್ದಾರೆ."

"ಅವರನ್ನೆಲ್ಲ ಇಲ್ಲಿಗೆ ಕರೆಸಲಾಗುತ್ತದೆಯೇ?"

"ಅದ್ಹೇಗೆ ಆಗುತ್ತೆ ಸ್ವಾಮಿ?"

"ಹೌದು, ಹೌದು. ಅದು ಆಗದ ಮಾತು" ಎಂದು ಡ್ಯಾಮಿನ ಹತ್ತಿರ ಮತ್ತೆ ಓಡಿದ. ಪುನಃ ಹಿಂದಿರುಗಿ ಬಂದ.

"ಶಂಭು, ಹಳ್ಳಿಗರೆಲ್ಲ ನನ್ನ ಪ್ರೀತಿಸುತ್ತಾರೆ ಅಲ್ಲವೆ?"

"ಹೌದು ಪ್ರೀತಿಸುತ್ತಾರೆ. ನಿಮಗೆ ಏನಾದರೂ ಕೆಡುಕಾದರೆ ಖಂಡಿತ ಅವರು ಸಹಿಸುವುದಿಲ್ಲ.

ನಿಮಗಾಗಿ ಅವರು ಪ್ರಾಣಕೊಡಲೂ ಸಿದ್ಧ"


"ಹೌದಾ?"

"ಹೌದು."

ಆತ ಮತ್ತೆ ಒಳಗೆ ಓಡಿದರು. ನಾನು ಹೊರಗೆ ನಿಂತಿದ್ದೆ. ಸ್ವಲ್ಪ ಸಮಯದಲ್ಲಿ ಆಶ್ರಮದಲ್ಲಿ ಬೆಂಕಿ ತಲೆದೋರಿತು. ಹೊಗೆ ಆಕಾಶಕ್ಕೇರಿತು. ಸನ್ಯಾಸಿ ಹೊರಗೆ ಬಂದ. ಬೆಂಕಿ ಹೊತ್ತಿದೆಯಲ್ಲ ಎಂದು ನಾನು ಚಡಪಡಿಸಿದೆ. "ಶಂಭು; ಅದೇ ನೋಡು ಅವರೆಲ್ಲ, ಇಲ್ಲಿಗೆ ಬೆಂಕಿ ನಂದಿಸಲು ಓಡಿ ಬರುತ್ತಿದ್ದಾರೆ ಅಲ್ಲವೆ?"

"ಹೌದು, ಸ್ವಾಮಿ ನಿಮ್ಮ ಪುಸ್ತಕಗಳಿಗೆಲ್ಲಾ ಬೆಂಕಿ ಹತ್ತಿಕೊಂಡಿತು."

ಹೊಲದಲ್ಲಿ, ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದ ಜನ ಬೆಂಕಿಯನ್ನು ಕಂಡು "ಅಯ್ಯೋ ತಾತಯ್ಯನ ಆಶ್ರಮಕ್ಕೆ ಬೆಂಕಿ ತಗುಲಿದೆ" ಎಂದು ಕೆಲಸ ಬಿಟ್ಟು ಓಡೋಡಿ ಬಂದರು. ಶಾಲೆ ಹುಡುಗರು, ಮುದುಕರು, ಮಕ್ಕಳು, ಶಾಲಾ ಮಾಸ್ತರು ಎಲ್ಲಾ ಒಂದೇ



ಸಮನೆ ಹತ್ತುತ್ತಿದ್ದಾರೆ. ಅವರ ಗುರಿ ಹೇಗಾದರೂ ಮಾಡಿ ತಾತಯ್ಯನ ಆಶ್ರಮ ಉಳಿಸುವುದು. ಹೊರಗೆ ನಿಂತು ಅವರತ್ತಲೇ ನೋಡುತ್ತಿದ್ದ.

"ಏನು ತಾತಯ್ಯ, ಬೆಂಕಿ ಹೇಗೆ ಹತ್ತಿತು?" ಎಂದು ಕೇಳಿದನೊಬ್ಬ.

"ಅದನ್ನು ಆಮೇಲೆ ಹೇಳುತ್ತೇನೆ ಎಲ್ಲಾ ಬಂದಿರುವಿರಾ?" ಎಂದು ಕೇಳಿದ ತಾತಯ್ಯ.

"ಎಲ್ಲಾ ಬಂದಿದ್ದೇವೆ, ಬೆಂಕಿ ನಂದಿಸಲು. ಈಗ ಆಗುತ್ತಿಲ್ಲ. ಎಲ್ಲಾ ಕೈಮೀರಿ ಹೋಯಿತು ತಾತಯ್ಯ" ಎಂದು ಹಳ್ಳಿಗರು ಕಣ್ಣೀರಿಟ್ಟರು.

"ಅಳಬೇಡಿ. ಆಗುವುದೆಲ್ಲಾ ಒಳ್ಳೆಯಕ್ಕೇ" ಎಂದು ಡ್ಯಾಂ ಕಡೆ ತಿರುಗಿ ತೋರಿಸಿದ ತಾತಯ್ಯ. ಆಗಲೇ ಡ್ಯಾಂ ಅರ್ಧ ಸೀಳಿ ನೀರು ಭೋರ್ಗರೆದು ಹರಿಯುತ್ತಿತ್ತು. ಸ್ವಲ್ಪ ಹೊತ್ತಿನಲ್ಲಿ ಅದು ಒಡೆದು ನೀರು ಹಳ್ಳಿ, ಹೊಲ-ಗದ್ದೆಗಳನ್ನು ಮುಚ್ಚಿಳಿಯಿತು.

ಎಲ್ಲರಿಗೂ ಆಶ್ಚರ್ಯ ಮತ್ತು ಭಯ.

"ನಿಮ್ಮನ್ನೆಲ್ಲ ಉಳಿಸಲು ನನಗೆ ಇದ್ದುದೊಂದೇ ದಾರಿ. ನನ್ನ ಕೈಯಾರೆ ನನ್ನ ಪುಸ್ತಕ ಭಾಂಡಾರಕ್ಕೆ ಬೆಂಕಿ ಇಟ್ಟೆ. ಪುಸ್ತಕ ಹೋದರೆ ಹೋಗಲಿ, ನೀವೆಲ್ಲ ಬದುಕಿದಿರಿ ಅಷ್ಟೇ ನನಗೆ ಸಾಕು" ಎಂದು ಸನ್ಯಾಸಿ ನಿಟ್ಟುಸಿರು ಬಿಟ್ಟ.

"ನಮ್ಮನ್ನುಳಿಸಲು ತಾತಯ್ಯ ಎಂತಹ ತ್ಯಾಗ ಮಾಡಿದ!" ಎಂದುಕೊಂಡರು ಅಲ್ಲಿ ನೆರೆದ ಜನರು.

(ಚೀನಿ ಕಥೆಯ ಸ್ಫೂರ್ತಿಯಿಂದ)

ನೂತನ ಫ್ಯಾಕ್ಸ್ ಯಂತ್ರ

ಇಂಗ್ಲೆಂಡಿನ ಟೆಲಿಕಾಂ ಇಂಜಿನಿಯರ್ ಒಬ್ಬರು ಒಂದು ಹೊಸ ಬಗೆಯ ಫ್ಯಾಕ್ಸ್ ಯಂತ್ರವನ್ನು ಕಂಡುಹಿಡಿದಿದ್ದಾರೆ. ಅದನ್ನು ಗಡಿಯಾರದಂತೆ ಕೈಗೆ ಕಟ್ಟಿಕೊಳ್ಳಬಹುದು. ಅದರಿಂದ ಫ್ಯಾಕ್ಸ್ ಸಮಾಚಾರವನ್ನು ಕಳುಹಿಸಬಹುದು ಮತ್ತು ತರಿಸಿಕೊಳ್ಳಬಹುದು. ಈ ವಿಶಿಷ್ಟ ಯಂತ್ರದಿಂದ ದೂರವಾಣಿ ಕರೆಯನ್ನು ಪಡೆಯಬಹುದು, ಕಂಪ್ಯೂಟರ್ ಟಿಪ್ಪಣಿಯನ್ನು ಪಡೆಯಬಹುದು. ಐದು ಸಾವಿರ ಡಾಲರ್ ಬೆಲೆಬಾಳುವ ಈ ಯಂತ್ರದಲ್ಲಿ ಒಂದು ವಿಡಿಯೋ ಫೋನನ್ನು ಅಳವಡಿಸಲಾಗಿದೆ. ಇದರಿಂದ ಅದರ ಮೂಲಕ ಮಾತನಾಡುವವರಿಗೆ ಜವಾಬನ್ನೂ ಕೊಡಬಹುದು. ಅತ್ತ ಕಡೆಯಿಂದ ಮಾತನಾಡುವವರೂ ವಿಡಿಯೋಫೋನ್ ಉಪಯೋಗಿಸುತ್ತಿದ್ದರೆ ಅವರ ಮುಖವನ್ನು ಕಾಣಬಹುದು. ಇದೊಂದು ಹೊಸ ಸಂಶೋಧನೆ.

- ಡಿ. ಗುಂಡೂರಾವ್

ಮಾಲಿಕ ?

ನನ್ನ ಬಾಲ್ಯಸ್ನೇಹಿತ ರಘು ೫೦ ವರ್ಷಗಳ ನಂತರ ಮೊನ್ನೆ ಸ್ನೇಹಿತರೊಬ್ಬರ ಮನೆ ಮದುವೆಯಲ್ಲಿ ಸಿಕ್ಕ. ಬಹಳಷ್ಟು ಮಾತನಾಡಿ ಊಟ ಮುಗಿಸಿ ತಾಂಬೂಲ ಹಾಕಿಕೊಳ್ಳಲು ಬಂದೆವು. ಆತ ಅಡಿಕೆ ಪುಡಿಯಲ್ಲಿನ ಸಕ್ಕರೆ ಹರಳುಗಳನ್ನು ಹುಡುಕುತ್ತಿದ್ದ. ನಾನು "ಏನಪ್ಪಾ ರಘು, ಹುಡುಗನಾಗಿದ್ದಾಗ ಈ ರೀತಿ ಸಕ್ಕರೆ ಹುಡುಕಿ ತಿನ್ನುತ್ತಿದ್ದೆ. ಇಷ್ಟು ವರ್ಷವಾದರೂ ಆ ಅಭ್ಯಾಸ ಬಿಟ್ಟಿಲ್ಲವೆ?" ಎಂದು ಕೇಳಿದೆ. ಅದಕ್ಕೆ ಅವನ ಉತ್ತರ ಹೀಗಿತ್ತು - "ಮೊದಲು ಸಕ್ಕರೆಯನ್ನು ತಿನ್ನುವುದಕ್ಕೋಸ್ಕರ ಆರಿಸುತ್ತಿದ್ದೆ. ಈಗ ನಾನು ಸಕ್ಕರೆ ಕಾರ್ಖಾನೆ ಮಾಲಿಕನಾಗಿರುವುದರಿಂದ ಅಂದರೆ ಡಯಾಬಿಟೀಸ್ ಹೊತ್ತಿರುವುದರಿಂದ ಸಕ್ಕರೆ ಹುಡುಕಿ ತೆಗೆದುಹಾಕುತ್ತಿದ್ದೇನೆ" ಎಂದು ನಕ್ಕುಬಿಟ್ಟ.

- ಶಿವನಂಜಪ್ಪ



-ಶಂಕರ ಆಜ್ಜಂಪುರ

ಮರಣಾದ ಮೂವತ್ತು ವರ್ಷಗಳ ನಂತರ ಆತ ತನ್ನ ತಂದೆಗೆ ಗತಿ ಕಾಣಿಸಿದ!

ಪ್ರಪಂಚದಲ್ಲಿ ಸಂಭವಿಸಿರುವ ಅಸಂಖ್ಯ ವಿಮಾನ ಅಪಘಾತಗಳಂತೆಯೇ ೧೯೬೨ರ ಜೂನ್ ೨೮ ರಂದೂ ಒಂದು ಅಪಘಾತ ಸಂಭವಿಸಿತು. ಇದರಲ್ಲಿ ಮೃತರಾದವರ ಪೈಕಿ ಡಚ್ ರಾಯಲ್ ಏರ್‌ಫೋರ್ಸ್‌ನಲ್ಲಿ ತಂತ್ರಜ್ಞನಾಗಿದ್ದ ಫ್ರಾನ್ಸ್ ರುಡಾಲ್ಫ್ ಕೂಡ ಒಬ್ಬಾತ. ಮರಣ ಸಂಭವಿಸಿ ಮೂವತ್ತು ವರ್ಷಗಳ ನಂತರ ಆತನ ಮಗ ಹ್ಯಾರಿ ರುಡಾಲ್ಫ್ ತಂದೆಗೆ ಸೂಕ್ತ ಸಂಸ್ಕಾರ ಏರ್ಪಡಿಸುವುದರ ಮೂಲಕ ಶ್ರದ್ಧಾಂಜಲಿಯನ್ನರ್ಪಿಸಿದ. ಇದಕ್ಕೆಲ್ಲ ಆತ ಅನುಭವಿಸಿದ ನೋವು, ಸಂಕಟಗಳು ಹಾಗೂ ಪ್ರದರ್ಶಿಸಿದ ಸಾಹಸ ಮನೋಧರ್ಮಗಳು ರೋಚಕ. ಹ್ಯಾರಿಯ ಅನುಭವಗಳನ್ನು ಅವನ ಶಬ್ದಗಳಲ್ಲೆ ಕೇಳಿ:

"ನ್ಯೂಗಿನಿಯ ಉಷ್ಣ ವಲಯದ ಕಾಡುಗಳಲ್ಲಿ ಕಳೆದ ಹತ್ತು ದಿನಗಳಿಂದ ಧಾರಾಕಾರ ಮಳೆ. ಕಾಲುಗಳು ಮೊಣಕಾಲುದ್ದದ ಕೆಸರಿನಲ್ಲಿ ಹೂತು ಹೋಗಿದ್ದರೂ ಹೇಗುಹೇಗೋ ನಡೆಯುತ್ತಿದ್ದೆ. ನನ್ನ ಯಾತ್ರೆಗೆ ಎಂದಿಗೂ ಕೊನೆಯಿಲ್ಲವೇನೋ ಎನ್ನಿಸುತ್ತಿರುವಂತೆಯೇ, ನನ್ನಲ್ಲಿದ್ದ ಆಹಾರ ಪದಾರ್ಥಗಳು ಕಡಿಮೆಯಾಗುತ್ತಾ ನಡೆದಿದ್ದವು. ಊರಿಗೆ ಹಿಂದಿರುಗಿ ಬಿಡಲೆ ಎಂದು ಆಗಾಗ ಅನ್ನಿಸುತ್ತಿತ್ತು. ಆದರೆ ನನ್ನ ತಂದೆಯ ಚಿತ್ರ ಕಣ್ಣೆದುರು ಬಂದಾಗ ನನ್ನ ನಿರ್ಧಾರ ಬದಲಾಗುತ್ತಿತ್ತು.

"ಇದ್ದಕ್ಕಿದ್ದಂತೆ ೧೫ ಮಂದಿ ನಗ್ನರಾದ ಕಾಡುಜನ ಧುತ್ತೆಂದು ಎರಗಿ ನನ್ನ ಹಾದಿಯನ್ನು ಅಡ್ಡಗಟ್ಟಿದ್ದರು. ಬಿಲ್ಲು-ಬಾಣಗಳನ್ನು ಹೊಂದಿದ್ದ ಆ ಕರಿಯರ ತಲೆಗೂದಲು ಗುಂಗುರು ಗುಂಗುರಾಗಿತ್ತು. ಹಕ್ಕಿಗರಿಗಳಿಂದ ಸಿಂಗರಿಸಿಕೊಂಡಿದ್ದ ಪಾಪುವಾ ಆದಿವಾಸಿಗಳನ್ನು ನೋಡಿದೊಡನೆ ನನ್ನ ಕಥೆ ಇಂದೇ ಮುಗಿಯಿತೆಂದು ಥರಥರನೆ ನಡುಗುತ್ತಾ ನಿಂತೆ.

"ಯುದ್ಧದಲ್ಲಿ ಆಸಕ್ತರಾದ ಈ ಪಾಪುವಾ ಆದಿವಾಸಿಗಳಿಗೆ ಅಪರಿಚಿತ, ಅಸಹಾಯಕ ಅಲೆಮಾರಿಯೊಬ್ಬ ಎದುರಾದಾಗ ನಿರಾಶೆಯೆನಿಸಿರಬಹುದು. ಕಾಡಿನಲ್ಲಿ ಕವಿದಿದ್ದ ಮಂಕು ಮೋಡದ ವಾತಾವರಣವೂ ಅವರ ನಿರಾಶೆಗೆ ಇನ್ನೊಂದು ಕಾರಣವಿರಬೇಕು. ಚೂಪು ಕಲ್ಲುಗಳಿಂದ, ಮರದ ಗೆಲ್ಲುಗಳಿಂದ ಗಾಸಿಗೊಂಡಿದ್ದ ನನ್ನ ಶರೀರ ಅಲ್ಲಲ್ಲಿ ಊದಿಕೊಂಡಿತ್ತು. ರಕ್ತ ಹೀರುವ ಕೀಟಗಳು, ಜಿಗಣೆಗಳು ಮತ್ತು ಕರಿದುಂಬಿಗಳ ದಾಳಿಯಿಂದ ಕಂಗೆಟ್ಟು ಹೋಗಿದ್ದೆ.

"ನಿಸ್ತೇಜನಾಗಿದ್ದ ನಾನು ಏನು ಮಾಡಲೂ ತಿಳಿಯದೆ, ಎರಡೂ ಕೈಗಳನ್ನು ತಲೆಯ ಮೇಲಿರಿಸಿಕೊಂಡು 'ನಾನು ನಿಮಗೆ ಶರಣಾಗಿದ್ದೇನೆ' ಎಂದು ಸೂಚಿಸುವಂತೆ ಸುಮ್ಮನೇ ಕುಳಿತೆ. ಭಯಗ್ರಸ್ತನಾದ ನನ್ನ ಮನಸ್ಸಿನಲ್ಲಿ ತಂದೆಯ ನೆನಪು ಉಕ್ಕಿ ಹರಿಯುತ್ತಿತ್ತು. ಆತನ ನೆನಪೇ ಈ ಸಾಹಸ ಯಾತ್ರೆಗೆ ಪ್ರೇರಣೆ. ಕಷ್ಟಗಳನ್ನು ಸಹಿಸಿಕೊಳ್ಳಲು ಚೈತನ್ಯ ನೀಡಿದ ಆಧಾರ.

"೧೯೬೨ರ ಜೂನ್ ೨೮ ರಂದು ನ್ಯೂಗಿನಿಯ ಮೇಲೆ ಅಧಿಕಾರ ಸ್ಥಾಪಿಸಲು ಡಚ್ಚರು ಇಂಡೋನೇಷಿಯಾದ ವಿರುದ್ಧ ಹೋರಾಡುತ್ತಿದ್ದರು. ಡಚ್ ರಾಯಲ್ ಏರ್ ಫೋರ್ಸ್‌ನ ಉದ್ಯೋಗಿಯಾಗಿದ್ದ ನನ್ನ ತಂದೆ ಇತರ ನಾಲ್ಕು ಮಂದಿ ಮಿಲಿಟರಿ ಸಹೋದ್ಯೋಗಿಗಳಲ್ಲದೆ, ಮೂವರು ನಾಗರಿಕ ಅಧಿಕಾರಿಗಳೊಂದಿಗೆ ಎಕ್ಸ್-೧೧ ಎಂಬ ಸಂಖ್ಯೆಯಿದ್ದ ಡಕೋಟಾ ಸಿ-೪೭ ವಿಮಾನದ ಸಾರಥ್ಯ ವಹಿಸಿದ್ದ. ಅವರು ಪ್ರಯಾಣಿಸಬೇಕಾಗಿದ್ದ ಮಾರ್ಗದಲ್ಲಿ ೫೦೦೦ ಮೀಟರ್ ಎತ್ತರದ ಕಾರ್ಸ್‌ಟನ್ ಪರ್ವತ ಶಿಖರಗಳನ್ನು ದಾಟಿಹೋಗುವುದು ಅನಿವಾರ್ಯವಾಗಿತ್ತು. ದುರದೃಷ್ಟವಶಾತ್ ಅವರಿನ್ನೂ ಅರ್ಧದಾರಿ ಕ್ರಮಿಸುವಷ್ಟರಲ್ಲೆ ಪರ್ವತ ಶಿಖರಗಳಿಗೆ ವಿಮಾನ ಬಡಿದು ಮರಣವನ್ನಪ್ಪಿದ್ದರು. ನನ್ನ ತಂದೆಯ ಪಾರ್ಥಿವ ಶರೀರ ಆ ಪರ್ವತಾಗ್ರದ ಮೇಲೆ ಯಾರೂ ಗಮನಿಸುವವರಿಲ್ಲದೇ ಅನಾಥವಾಗಿ ಬಿದ್ದಿತ್ತು. ಅದನ್ನು ನೆನೆಸಿಕೊಳ್ಳುವುದೇ ಕಷ್ಟ. ಆದರೆ ಸಹಿಸದೆ ವಿಧಿಯಿರಲಿಲ್ಲ.

"ನಾನು ನನ್ನ ತಂದೆಯನ್ನು ಕೊನೆಯ ಬಾರಿ ನೋಡಿದಾಗ ನನಗೆ ೧೨ ವರ್ಷ ವಯಸ್ಸು. ಮಿಲಿಟರಿಯವರಿಗೆ ಸಹಜವಾದ ದೃಢಕಾಯ ಆತನಿಗಿತ್ತು. ಸುಖೀ ಕುಟುಂಬದ ಯಜಮಾನನಾಗಿ ಸದಾ ಉಲ್ಲಸಿತನಾಗಿರುತ್ತಿದ್ದ ವ್ಯಕ್ತಿ. ತನ್ನ ಪತ್ನಿ ಮತ್ತು ನಾಲ್ಕು ಮಕ್ಕಳ ಬಗ್ಗೆ ಅಪಾರ ಪ್ರೇಮ ಹೊಂದಿದ್ದವ. ಬಿಡುವಿನ ವೇಳೆಯನ್ನು ಆತ ನಮ್ಮೊಂದಿಗೆ ಕಳೆಯುತ್ತಿದ್ದ. ಕಾಡಿನಲ್ಲಿ ಅಲೆದಾಡುವುದು ಮತ್ತು ಹಳೆಯ ಕಾರುಗಳ ರಿಪೇರಿ ಮಾಡುವುದು ಆತನ ಮೆಚ್ಚಿನ ಹವ್ಯಾಸಗಳು. ಅವನಲ್ಲಿ ೧೯೪೭ರ ಪ್ಯೂಗಟ್ ಕಾರ್ ಒಂದಿತ್ತು. ಅದರಲ್ಲಿ ಅಲೆದಾಡಿ ನಾವು ಬಹಳಷ್ಟು ಸಮಯ ಕಳೆದ ನೆನಪು ಇನ್ನೂ ಇದೆ.

"ಆತ ತನ್ನ ೩೯ನೇ ವಯಸ್ಸಿನಲ್ಲಿ ಕಣ್ಮರೆಯಾದ. ೩೦ ವರ್ಷಗಳ ನಂತರವೂ ಆತನ ಬಗೆಗಿನ ಪ್ರೀತಿ ಭಾವ ನಮ್ಮಲ್ಲಿ ಬತ್ತಲಿಲ್ಲ. ಅವನ ಮತ್ತು ಅವನ ಸಹ ಪ್ರಯಾಣಿಕರಿಗೆ ಒದಗಿದ್ದ ದುರ್ಗತಿ ನಮ್ಮ ನೆನಪಿನಿಂದ ಮಾಸಲೇ ಇಲ್ಲ. ೧೯೭೪ ರಲ್ಲಿ ಆ ವಿಮಾನ ಅಪಘಾತಕ್ಕೆ ಸಂಬಂಧಿಸಿದ ಕಡತಗಳನ್ನು ಮುಚ್ಚಿದ ಸರ್ಕಾರ, ಅಪಘಾತದ ಪ್ರದೇಶ ಅತ್ಯಂತ

ದುರ್ಗಮವಾಗಿದ್ದು, ಅಲ್ಲಿಗೆ ಹೋಗಿ ಮೃತರ ಅವಶೇಷಗಳನ್ನಾಗಲಿ ವಿಮಾನದ ಭಾಗಗಳನ್ನಾಗಲಿ ಹುಡುಕುವುದು ಅಸಾಧ್ಯ ಎಂದು ಘೋಷಿಸಿತು. ಇದ್ದ ಚಿಕ್ಕದೊಂದು ಆಸೆಯೂ ಮಣ್ಣುಗೂಡಿದ ಮೇಲೆ, ನಾನೇ ಹೇಗಾದರೂ ಮಾಡಿ ನನ್ನ ತಂದೆಯ ಅವಶೇಷಗಳನ್ನು ಹುಡುಕಿ ಅವನಿಗೊಂದು ಸದ್ಗತಿಯನ್ನು ಕಾಣಿಸಬೇಕೆಂದು ನಿಶ್ಚಯಿಸಿದೆ. ಈ ಯಾತ್ರೆ ಕೈಗೂಡಲು ನನ್ನ ಕುಟುಂಬ ೫೦,೦೦೦ ಗಿಲ್ಡರುಗಳನ್ನು (ಸುಮಾರು ೬ ಲಕ್ಷ ರೂಪಾಯಿಗಳು) ವ್ಯಯಿಸಬೇಕಾಯಿತು.

“ಪಾಪುವಾ ಆದಿವಾಸಿಗಳು ಎಂಥ ಜನ, ಫಾದರ್ ಜೋಸ್?’ ಎಂದು ನಾನು ಆತನ ಕಚೇರಿಯಲ್ಲಿ ಕುಳಿತು ಕೇಳಿದಾಗ, ಆ ಧರ್ಮಪ್ರಚಾರಕನ ಮುಖದಲ್ಲಿ ಮುಗುಳ್ನಗೆ ಮೂಡಿತು. ೧೯೬೨ರ ವರೆಗೂ ಡಚ್ ಸಾಮ್ರಾಜ್ಯದ ಒಂದು ಭಾಗವೇ ಆಗಿದ್ದ ಇರಿಯಾನ್ ಜಯಾ ಪ್ರಾಂತ್ಯದಲ್ಲಿ ಫಾದರ್ ಜೋಸ್ ವಾಸವಾಗಿದ್ದ. ತನ್ನ ಜೀವಿತದ ಬಹುಭಾಗವನ್ನು ಆತ ಪಾಪುವಾ ಆದಿವಾಸಿಗಳೊಂದಿಗೇ ಕಳೆದಿದ್ದ. ಆತ ಹೇಳಿದ, ‘ಅವರು ತುಂಬ ಒಳ್ಳೆಯವರು, ನೆರವು ನೀಡುವಂಥವರು. ಆದರೆ ಅಲ್ಲಿನ ಅರಣ್ಯಗಳು ದಟ್ಟವಾಗಿದ್ದು ಸದಾ ಮಳೆ ಸುರಿಯುತ್ತಲೇ ಇರುತ್ತದೆ. ಕೆಸರು, ಬಗೆ ಬಗೆಯ ಹಾವು, ಚೇಳು, ಜಿಗಣೆಗಳ ನೆಲೆವೀಡು ಅದು. ತಿನ್ನಲಂತೂ ಏನೂ ಸಿಕ್ಕದು. ಹೀಗಿರುವಾಗ ನೀನೊಬ್ಬನೇ ಅಂಥ ಸ್ಥಳಕ್ಕೆ ಹೋಗುವುದು ಮೂರ್ಖತನವಾದೀತು’.

“ಅನಂತರ ಇನ್ನೂ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ನಾನು ಆ್ಯಮ್‌ಸ್ಟರ್‌ಡ್ಯಾಂನಲ್ಲಿರುವ ರಾಯಲ್ ಟ್ರಾಪಿಕಲ್ ಸಂಸ್ಥೆಗೆ ಹೋಗಿ ಪಾಪುವಾ ನ್ಯೂಗಿನಿ ಪ್ರದೇಶದ ಭೂಪಟಗಳನ್ನು ಅಧ್ಯಯನ ಮಾಡಿದೆ. ಕಾಗದದ ಮೇಲೆ ನೋಡುವಾಗಲೇ ಪ್ರಯಾಣ ಕಠಿಣವೆಂದು ಅನ್ನಿಸಿತು. ಈ ಯಾತ್ರೆಯ ತಯಾರಿಗೆಂದೇ ನಾನು ಜಾವಾ ದ್ವೀಪದ ಬಳಿಯ ಅಗ್ನಿ ಪರ್ವತಗಳ ಬಳಿ ೧೫ ದಿನ ತಂಗಿ, ಕನಿಷ್ಠ ೨೫ ಬಾರಿಯಾದರೂ ಅದನ್ನು ಏರಿಳಿದು, ಬಯಲಿನಲ್ಲಿ ಮಲಗಿ, ಶರೀರದ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳನ್ನು ಮೈಗೂಡಿಸಿಕೊಂಡೆ.

“೧೯೮೯ರ ಅಕ್ಟೋಬರ್ ೨೫ ರಂದು ನನ್ನ ಸಾಹಸಯಾತ್ರೆ ಪ್ರಾರಂಭವಾಯಿತು. ಮುಖ್ಯ ಆಹಾರ ಪದಾರ್ಥಗಳನ್ನು ಜೋಡಿಸಿಕೊಂಡು ಇರಿಯಾನ್ ಜಯಾದ ಪಶ್ಚಿಮ ಕರಾವಳಿಯಲ್ಲಿನ ತಿಮುಕಾ ಎಂಬಲ್ಲಿಂದ ಹೊರಟೆ. ಅಲ್ಲಿನ ಪಾದ್ರಿಯೊಬ್ಬನು ನನ್ನನ್ನು ಪಾಪುವಾ ನ್ಯೂಗಿನಿಯ ಮೂಲ ನಿವಾಸಿಯೊಬ್ಬನಿಗೆ ಪರಿಚಯಿಸಿದ. ಕಾಡಿನಲ್ಲಿರುವ ತನ್ನ ನೆಲೆ ತಲುಪಲು ಕನಿಷ್ಟ ನಾಲ್ಕು ದಿನಗಳಾದರೂ ಬೇಕೆಂದು ಆತ ನಕ್ಷೆ ಸಹಿತವಾಗಿ ತಿಳಿಹೇಳಿದ. ಅವನು ಅತ್ಯಂತ ಆಶಾವಾದಿಯಾದಂತೆ ಕಾಣುತ್ತದೆ. ನಾನು ಅಲ್ಲಿಗೆ ತಲುಪಿಯೇ ತಲುಪುವೆನೆಂದು ಹುರಿದುಂಬಿಸಿದ. ಆದರೆ ನನ್ನ ಯಾತ್ರೆ ದೀರ್ಘವಾದುದಷ್ಟೇ ಅಲ್ಲ, ನರಕ ಸದೃಶವೂ ಆಗಿತ್ತೆನ್ನುವುದು ಮುಂದೆ ಅನುಭವಕ್ಕೆ ಬಂತು.

“ದಿನಗಟ್ಟಲೆ ಬಿಡುವಿಲ್ಲದಂತೆ ಸುರಿಯುವ ಮುಸಲಧಾರೆ. ೫೦ ಮೀಟರು ಎತ್ತರದ ಮರಗಳಿಂದ ಬೀಳುವ ಹನಿಗಳ ಹೊಡೆತವನ್ನು ತಡೆಯುವುದು ಅಸಾಧ್ಯ. ಆಗೊಮ್ಮೆ-ಈಗೊಮ್ಮೆ ಮೋಡಗಳು ಚದುರಿದಾಗ ದಿನ-ರಾತ್ರಿಗಳ ಅಂತರ ಗೊತ್ತಾಗುತ್ತಿತ್ತು. ನನ್ನೊಂದಿಗಿದ್ದ ದಿಕ್ಸೂಚಿ ಯಂತ್ರವೂ ಮಳೆಯ ಹಟಮಾರಿತನದೊಡನೆ ಸ್ಪರ್ಧೆ ನಡೆಸುವಂತೆ ನಡೆದುಕೊಂಡಿತು. ಅದು ತೋರುತ್ತಿದ್ದ ರಸ್ತೆಯಲ್ಲಿ ಹಳ್ಳಕೊಳ್ಳಗಳೂ ಕೆಸರಿನ ಗುಂಡಿಗಳೂ ತುಂಬಿದ್ದವು.

“ಕರಿದುಂಬಿಗಳ ಗುಂಪು ನನ್ನನ್ನು ಮುತ್ತಿದಾಗ ನಾನು ಧರಿಸಿದ್ದ ಬಟ್ಟೆಗಳಿಂದ ನನಗೆ ಹೆಚ್ಚಿನ ರಕ್ಷಣೆಯೇನೂ ದೊರೆಯಲಿಲ್ಲ. ಎಲ್ಲ ಕಡೆಯೂ ಅವು ಕಚ್ಚಿದ್ದರಿಂದ ನನ್ನ ಶರೀರ ನಂಜುಮಯವಾಗಿತ್ತು. ಒಂಭತ್ತೂವರೆ ಸೆಂಟಿಮೀಟರಿನಷ್ಟು ಉದ್ದದ ರಾಕ್ಷಸ ಗಾತ್ರದ ಜಿಗಣೆಗಳು ಮೈಗೆಲ್ಲ ಅಂಟಿಕೊಂಡು ರಕ್ತ ಹೀರಿದ್ದವು. ಸಾಲದ್ದಕ್ಕೆ ನನ್ನ ಬೂಟುಗಳ ಲೇಸ್ ರಂಧ್ರದ ಮೂಲಕ ಒಳತೂರಿದ್ದ ಜಿಗಣೆಗಳ ಕಡಿತದಿಂದಾಗಿ, ಸಂಜೆ ಬೂಟ್ ಬಿಚ್ಚಿದಾಗ ಇಡೀ ಪಾದ ನನ್ನ ರಕ್ತದಿಂದಲೇ ತೊಯ್ದು ಹೋಗಿತ್ತು.

“ದಾರಿಯಲ್ಲಿ ಅಲ್ಲಲ್ಲಿ ಆರೆಂಟು ಮೀಟರು ಉದ್ದದ ಹೆಬ್ಬಾವುಗಳು ಮಲಗಿರುತ್ತಿದ್ದವು. ಚೆನ್ನಾಗಿ

ಬೆಳೆದ ಹಂದಿಯನ್ನೇ ನುಂಗಬಲ್ಲ ಅವಕ್ಕೆ ನನ್ನಂಥ ನಿರಾಯುಧ ಮನುಷ್ಯ ಈಡಾದಾನೆಯೇ? ತಲೆಯ ಮೇಲೆ ಹಕ್ಕಿಗಳ ವಿಚಿತ್ರ ಕೂಗುಗಳು. ರಾತ್ರಿಯ ವೇಳೆ ಇವುಗಳ ಕಲರವದೊಡನೆ ಆಗೀಗ ಹಾವು-ಹಲ್ಲಿಗಳು ತರಗೆಲೆಯ ಮೇಲೆ ಸರಿಯುವ ಶಬ್ದ, ವಿಷಜೇಡ, ಚೇಳುಗಳಷ್ಟೇ ಅಲ್ಲದೆ ಕಾಣದ ಕಾಡು ಮೃಗಗಳ ಭೀತಿ ಬೇರೆ. ಊದಿಕೊಂಡ ನನ್ನ ಕೈಕಾಲುಗಳ ಅಸಹನೀಯ ಯಾತನೆ, ಭಯ, ಕಲರವದ ನಡುವ ನಿದ್ರೆ ಹೇಗೆತಾನೆ ಬಂದೀತು?

"ಒಂಟಿಯಾಗಿ ಸಾಗುವವನಿಗೆ ಕಾಡು ಎಂಥ ಭಯಂಕರ ಶತ್ರುವಾಗಿ ಪರಿಣಮಿಸಬಲ್ಲದು ಎಂಬುದು ಆಗಲೇ ತಿಳಿದದ್ದು. ಇನ್ನೊಂದು ನಾಲ್ಕು ದಿನ ನಡೆದರೆ.... ತಿಮುಕಾದ ಆದಿವಾಸಿಯ ಶಬ್ದಗಳು ಇನ್ನೂ ನನ್ನ ಕಿವಿಗಳಲ್ಲಿ ಗುಣಗುಣಿಸುತ್ತಿದ್ದವು. ಈ ವೇಳೆಗೆ ನನ್ನ ಪಯಣ ಪ್ರಾರಂಭವಾಗಿ ಹತ್ತು ದಿನಗಳೇ ಕಳೆದಿದ್ದವು. ಈಗ ೧೫ ಮಂದಿ ಕಾಡುಜನಗಳ ಮಧ್ಯೆ ಸಿಕ್ಕುಬಿದ್ದಾಗ ಭಯದ ಜತೆಜತೆಯಲ್ಲಿಯೇ ಸಂತೋಷವೂ ಆಗುತ್ತಿತ್ತು. ಅವರು ಕ್ರೂರಿಗಳಾಗಿರಬಹುದು, ಹಲ್ಲೆಮಾಡಬಹುದು, ಆದರೂ ಅವರು ಮನುಷ್ಯರೆನ್ನುವುದು ಮುಖ್ಯ ಎಂಬ ವಿಚಾರವೇ ಅಷ್ಟಿಷ್ಟು ಸಮಾಧಾನ ತಂದಿತ್ತು. ಪಾಪುವಾ ಆದಿವಾಸಿಗಳು ಸ್ನೇಹಪರರು ಎಂದು ಫಾದರ್ ಜೋಸ್ ಹೇಳಿದ್ದು ನೆನಪಿಗೆ ಬರುತ್ತಿರುವಂತೆಯೇ, ನನ್ನೆದುರಿನ ಆದಿವಾಸಿಗಳು ತಮ್ಮಲ್ಲಿಯೇ ಏನನ್ನೋ ಚರ್ಚಿಸುತ್ತಿದ್ದುದು ಗಮನಕ್ಕೆ ಬಂತು. ನಾನು ಮಾತ್ರ ಶರಣಾಗತಿಯ ಸೂಚಕವಾಗಿ ಕೈಗಳನ್ನು ಮೇಲೆತ್ತಿ ಹಿಡಿದಿದ್ದೆ. ಕೊನೆಗೊಬ್ಬ ಮುದುಕ ನನ್ನ ಸಮೀಪಕ್ಕೆ ಬಂದು ನನ್ನಲ್ಲಿದ್ದ ವಸ್ತುಗಳನ್ನು ಶೋಧಿಸತೊಡಗಿದ.

"ನಾನು ಬರುವಾಗ ತಿಮುಕಾದ ಆದಿವಾಸಿ ಚಿಕ್ಕ ಚೀಟಿಯೊಂದನ್ನು ಕೊಟ್ಟಿದ್ದ. ಅದನ್ನು ಮುದುಕ ನೋಡಿದ ನಂತರ ಆತನಿಗೆ ನಾನು ಒಳ್ಳೆಯವ ಎನ್ನಿಸಿರಬೇಕು. ಆತನ ಮುಖದಲ್ಲಿ ಮುಗುಳುನಗೆ ಹರಡಿದ್ದನ್ನು ಕಂಡೊಡನೆಯೇ ಆಯುಧಗಳನ್ನು ನನ್ನತ್ತ ಹಿಡಿದ ಇತರ ಜನ ಅವುಗಳನ್ನು ಕೆಳಕ್ಕೆ ಇಳಿಸಿದರು. ಅವರಲ್ಲಿ ಒಬ್ಬನಿಗೆ ಮಲಯಾ ಭಾಷೆಯ ಪರಿಚಯವಿತ್ತು. ಆತ ಅನುವಾದಕನಾಗಿ ಸಹಕರಿಸಲು ಮುಂದೆ ಬಂದ. ನಾನು ಕಾರ್ಸ್ಟೆಟನ್ ಪರ್ವತದಲ್ಲಿ ವಿಮಾನ ಅಪಘಾತದಿಂದ ಮಡಿದ ತಂದೆಯ ಅವಶೇಷಗಳನ್ನು ಅರಸಲು ಬಂದಿದ್ದೇನೆ ಎಂದು ಕಷ್ಟಪಟ್ಟು ತಿಳಿಸಿದೆ. ಇದನ್ನು ಮುದುಕನಿಗೆ ವರ್ಗಾಯಿಸಿದ ನಂತರ, 'ನೀನು ನಮ್ಮ ಶಿಬಿರದಲ್ಲಿ ಈ ರಾತ್ರಿ ಉಳಿದುಕೊಳ್ಳಬೇಕೆಂದು ನಮ್ಮ ಮುಖಂಡರು ಅಪೇಕ್ಷಿಸುತ್ತಾರೆ' ಎಂದು ಅನುವಾದಕ ಮುದುಕನ ಉತ್ತರವನ್ನು ನನಗೆ ಹೇಳಿದ.

"ಫಾದರ್ ಜೋಸ್ ಹೇಳಿದ್ದಂತೆ ಅವರು ಉದಾರಿಗಳೇ ಆಗಿದ್ದರೂ, ಸಂಶಯದ ಸುಳಿಯಿಂದ ಇನ್ನೂ ಹೊರಬಂದಿರಲಿಲ್ಲ. ನಾನು ಮಾತ್ರ ಅವರ ವಿಶ್ವಾಸವನ್ನು ಸಂಪಾದಿಸಲು ಅಗತ್ಯವಿದ್ದ ಎಲ್ಲ ಹಾವಭಾವಗಳನ್ನೂ ಪ್ರಯೋಗಿಸಿ ಸ್ನೇಹಯಾಚಕನಂತೆ ವರ್ತಿಸಿದೆ. ನಾನೊಬ್ಬ ನಿರಪಾಯಕಾರಿ ಮನುಷ್ಯ ಎಂಬುದು ಅವರಿಗೆ ಮನವರಿಕೆಯಾದ ನಂತರ, ಬೆಟ್ಟಗಳ ಮೇಲೆ ಬೆಳೆದ ಬೃಹತ್ ಅಣಬೆಗಳಂತೆ ಕಾಣುವ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಆದಿವಾಸಿಗಳು ನನ್ನನ್ನು ಸ್ವಾಗತಿಸಿದರು. ಎಕ್ಸ್-೧೧ ವಿಮಾನದ ಚಿತ್ರವನ್ನು ಅವರಿಗೆ ತೋರಿಸಿದೆ. ನಂತರ ನನ್ನ ವಿಚಿತ್ರ ಯಾತ್ರೆಯ ಉದ್ದೇಶವನ್ನು ಅವರಿಗೆ ತಿಳಿಸಿದಾಗ, ಅವರಲ್ಲಿ ಕೆಲವರಿಗೆ ಹಿಂದಿನ ನೆನಪು ಮರುಕಳಿಸಿದಾಗಿನ ಭಾವಗಳು ಅವರ ಮುಖದ ಮೇಲೆ ಮೂಡಿದವು. ಗ್ರಾಮದ ಮುಖಂಡ ದೂರದಲ್ಲಿ ಕಾಣುತ್ತಿದ್ದ ಎತ್ತರದ ಪರ್ವತಗಳತ್ತ ಕೈತೋರಿಸಿ, ಉತ್ಸಾಹದಿಂದ ಏನನ್ನೋ ವಿವರಿಸಲು ಆರಂಭಿಸಿದ.

"ಮುಂದೆ ಎರಡು ದಿನ ನಾನು ಪಾಪುವಾ ಆದಿವಾಸಿಗಳ ಅತಿಥಿಯಾಗಿದ್ದೆ. ಈ ವೇಳೆಗೆ ನನ್ನ ಆರೋಗ್ಯವೂ ಸ್ವಲ್ಪ ಮಟ್ಟಿಗೆ ಸುಧಾರಿಸಿ, ಯಾತ್ರೆಯನ್ನು ಮುಂದುವರೆಸುವಷ್ಟು ಚೈತನ್ಯವೂ ಬಂದಿತ್ತು. ಈಗ ಪಾಪುವಾ ಯೋಧರು ನನ್ನ ಬೆಂಗಾವಲಿಗಿದ್ದರು. ಮಳೆಗಾಡು ಮುಗಿಯುತ್ತ ಬಂದು ಹಿಮ ಮತ್ತು ಮೋಡಗಳ ನಡುವೆ ಪರ್ವತಗಳೀಗ ಅಸ್ಪಷ್ಟವಾಗಿ ಗೋಚರಿಸುತ್ತಿದ್ದವು. ಸುತ್ತಲೂ ಖನಿಜಮಯ ಪ್ರದೇಶವಿದ್ದುದರಿಂದ ದಿಕ್ಸೂಚಿ ಸರಿಯಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಹೆಬ್ಬಂಡೆಗಳ ನಡುವೆ ಅಲ್ಲಲ್ಲಿ ವಿಶ್ರಾಂತಿ ಪಡೆಯುತ್ತಾ ಮುಂದೆ ಸಾಗಿದೆ.

"ತಿಮುಕಾವನ್ನು ಬಿಟ್ಟ ೧೫ ದಿನಗಳ ನಂತರ ನಾನು ತಲುಪಿದ ಸ್ಥಳವು ಕ್ಷುದ್ರಗ್ರಹವೊಂದರ ಭೂದೃಶ್ಯದಂತಿದ್ದು, ಒರಟಾದ ಎತ್ತರದ ಬೃಹದಾಕಾರದ ಬಂಡೆಗಳು ಆಗಸವನ್ನು ಮುಟ್ಟುವಂತಿದ್ದವು. ಬಹಳಷ್ಟು ಶೋಧಿಸಿದ ನಂತರ ಒಂದು ಕಡೆ ನೆಲಮಟ್ಟದಿಂದ ೪೫೦೦ ಮೀಟರು ಎತ್ತರದಲ್ಲಿದ್ದ ಒಂದು ಕೊರಕಲಿನಲ್ಲಿ ಎಕ್ಸ್-೧೧ ಡಕೋಟಾ ವಿಮಾನದ ಬಾಲ ಕಾಣಿಸಿತು. ಅದರ ಮೇಲೆ ಕೆಂಪು, ಬಿಳಿ ಮತ್ತು ನೀಲಿಬಣ್ಣದ ಡಚ್ ಲಾಂಛನದ ಗುರುತುಗಳಿದ್ದವು. ನನ್ನನ್ನು ಇಷ್ಟು ದಿನ ಕಾಡಿದ ಚಿತ್ರ ಇದೇ!

"ವಿಮಾನದ ಅವಶೇಷಗಳ ಬಳಿ ನಾನು ಕಳೆದ ಎರಡು ದಿನಗಳು ಘೋರವಾಗಿದ್ದವು. ವಿಸ್ತಾರವಾದ ಪ್ರದೇಶದಲ್ಲಿ ವಿಮಾನದ ತುಂಡುಗಳು ಚೆದುರಿಬಿದ್ದಿದ್ದವು. ಅವುಗಳಲ್ಲಿ ಬೂಟುಗಳು, ಒಂದು ಗೊಂಬೆ, ಕಾಲುಚೀಲಗಳು ಹಾಗೂ ಅಂಕುಡೊಂಕಾಗಿದ್ದ ಪ್ರೊಪೆಲ್ಲರುಗಳಿದ್ದವು. ಆದರೆ ಆ ನಿರ್ಜನ ಪರ್ವತ ಪ್ರದೇಶದಲ್ಲಿ ಎಷ್ಟು ಹುಡುಕಿದರೂ ನಾನು ಅರಸಿ ಬಂದ, ಗೌರವ ಸಲ್ಲಿಸಬೇಕೆಂದಿದ್ದ ಮಾನವ ಅವಶೇಷಗಳ ಕುರುಹು ಮಾತ್ರ ಕಾಣಸಲೇಇಲ್ಲ.

"ವಿಮಾನವು ಅಪಘಾತಕ್ಕೆ ಒಳಗಾದ ಪ್ರದೇಶದಿಂದ ಸ್ವಲ್ಪ ದೂರದಲ್ಲಿ ಗಣಿಯೊಂದು ಕಾರ್ಯನಿರ್ವಹಿಸುತ್ತಿತ್ತು. ಅಲ್ಲಿನ ಕಾರ್ಮಿಕರಿಂದ ೧೯೮೧ರಲ್ಲಿ ಇಂಡೋನೇಷಿಯಾದ ಕೆಲವು ವಿದ್ಯಾರ್ಥಿಗಳು ಈ ಸ್ಥಳಕ್ಕೆ ಭೇಟಿ ನೀಡಿದ್ದರೆಂದು ತಿಳಿಯಿತು. ಬಹುಶಃ ಅವರು ಈ ಬಗ್ಗೆ ನನಗೇನಾದರೂ ಮಾಹಿತಿಯನ್ನು ಒದಗಿಸಬಹುದೆಂದು ತರ್ಕಿಸಿದೆ. ಬಾಂಡುಂಗ್‌ನಲ್ಲಿದ್ದ ನನ್ನ ಸ್ನೇಹಿತರ ಸಹಾಯದಿಂದ ಅವರಲ್ಲಿ ಮೂವರನ್ನು ಸಂಪರ್ಕಿಸಿದೆ. ಅವರು ಅಪಘಾತ ಸ್ಥಳಕ್ಕೆ ಹಿಂದೊಮ್ಮೆ ಹೋಗಿದ್ದುದು ನಿಜ ಎಂದು ಒಪ್ಪಿಕೊಂಡರು. 'ಅದೊಂದು ಘನಘೋರವಾದ ಸ್ಫೋಟವಾಗಿರಬೇಕು. ಅವಶೇಷಗಳು ಬಹಳ ದೂರದವರೆಗೂ ಹರಡಿದ್ದವು' ಎಂದು ಅವರಲ್ಲೊಬ್ಬ ಹೇಳಿದ.

"ಅವರು ಈ ಜಾಗದಲ್ಲಿ ಒಂದು ತಿಂಗಳು ತಂಗಿದ್ದರು. ಪ್ರತಿದಿನವೂ ಅವಶೇಷಗಳಿಗಾಗಿ ಹುಡುಕುತ್ತಿದ್ದರು. ಅವರಿಗೆ ಮೆಷಿನ್‌ಗನ್‌ಗಳು, ದಿನಚರಿ ಹಾಗೂ ಕೆಲವು ಬಟ್ಟೆಗಳು ದೊರಕಿದ್ದವು. ಈ ಎಲ್ಲ ವಸ್ತುಗಳನ್ನೂ ಇಂಡೋನೇಷಿಯಾದ ವಿಶ್ವವಿದ್ಯಾಲಯದಲ್ಲಿ ಕಾಯ್ದಿಡಲಾಗಿತ್ತು. ಆ ದಿನಚರಿಯ ಪುಸ್ತಕ ನನ್ನ ತಂದೆಯದೇ ಆಗಿದ್ದೊಂದು ಯೋಗಾಯೋಗ! ವಿದ್ಯಾರ್ಥಿಗಳು ದೊರೆತ ಮಾನವ ಶರೀರದ ಭಾಗಗಳನ್ನು ಜತನದಿಂದ ಸಂಗ್ರಹಿಸಿ ಪೆಟ್ಟಿಗೆಯಲ್ಲಿಟ್ಟು ಬಂಡೆಯೊಂದರ ಬಳಿ ಹುಗಿದಿದ್ದರು. ಈ ಸಮಾಧಿಯ ಸ್ಥಳ ನಕ್ಷೆಯನ್ನೂ ನನಗೆ ಅವರು ನೀಡಿದರು. ಕೊನೆಗೂ ೩೦ ವರ್ಷಗಳ ನಂತರ ವಿಶ್ವಾಸಾರ್ಹ ಸಾಕ್ಷ್ಯಾಧಾರಗಳು ದೊರೆತಿದ್ದವು!

"ನನ್ನ ಪ್ರವಾಸದ ೧೪ ತಿಂಗಳ ನಂತರ, ಅಂದರೆ ೧೯೯೧ರ ಜನವರಿಯಲ್ಲಿ ಡಚ್ ರಾಯಲ್ ಏರ್‌ಫೋರ್ಸ್, ಸಾರ್ವಜನಿಕರು ಹಾಗೂ ಮೃತರ ಸಂಬಂಧಿಕರಿಂದ ಬಂದ ಒತ್ತಡವನ್ನು ಸಹಿಸಲಾರದೆ, ಐದು ಜನರ ತಂಡವನ್ನು ಕಳಿಸಿ ಮಾನವ ಅವಶೇಷಗಳನ್ನು ಸಂಗ್ರಹಿಸಲು ವ್ಯವಸ್ಥೆ ಮಾಡಿತು. ಇದರಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ಅಪಘಾತದ ಸ್ಥಳಕ್ಕೆ ನಾವೆಲ್ಲ ಹೆಲಿಕಾಪ್ಟರಿನಲ್ಲಿ ಪ್ರಯಾಣಿಸಿದೆವು. ಇಡೀ ಪ್ರದೇಶವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ವಿದ್ಯಾರ್ಥಿಗಳು ಸಮಾಧಿಗೊಳಿಸಿದ್ದ ಸ್ಥಳವನ್ನು ಗುರುತಿಸಿದೆವು. ಅಲ್ಲಿ ಅಗೆದಾಗ ಪೆಟ್ಟಿಗೆಯಲ್ಲಿ ಮಾನವ ಅವಶೇಷಗಳು ದೊರೆತವು. ಅದನ್ನು ನೋಡಿದ ಕ್ಷಣಗಳನ್ನು ನಾನು ನನ್ನ ಜೀವನದಲ್ಲಿಯೇ ಮರೆಯಲಾರೆ. ನನ್ನ ಭಾವನೆಗಳು ಉಕ್ಕಿಬಂದು ಹೃದಯದಲ್ಲಿ ಸಂತೃಪ್ತಭಾವ ಮೂಡಿತು. ನಾನು ನನ್ನ ಶೋಧದಲ್ಲಿ ಯಶಸ್ವಿಯಾಗಿದ್ದೆ. ನನ್ನ ತಂದೆ ತನ್ನ 'ಮನೆಗೆ' ಬಂದಿದ್ದ!

'ಎಕ್ಸ್-೧೧ ವಿಮಾನಾಪಘಾತದಲ್ಲಿ ಮಡಿದ ಎಲ್ಲರ ಅವಶೇಷಗಳನ್ನೂ ೧೯೯೧ರ ಫೆಬ್ರವರಿ ೧೯ ರಂದು ಹಾಲೆಂಡ್‌ನಲ್ಲಿ ಸಕಲ ಮಿಲಿಟರಿ ಗೌರವದೊಡನೆ ಸಮಾಧಿಗೊಳಿಸಲಾಯಿತು. ಕಾರ್ಸ್‌ಟೆನ್ ಪರ್ವತದಲ್ಲಿ ಇಂದಿಗೂ ವಿಮಾನದ ಅವಶೇಷಗಳ ಜತೆ ಒಂದು ಫಲಕವನ್ನು ನೋಡಬಹುದು. ಅದರಲ್ಲಿ ಮಡಿದವರ ಸ್ಮರಣಾರ್ಥವಾಗಿ ಶೋಧಕ ತಂಡದ ಗೌರವಾರ್ಪಣೆಯನ್ನು ದಾಖಲಿಸಲಾಗಿದೆ."

(ಆಧಾರ: 'ರೀಡರ್ಸ್ ಡೈಜೆಸ್ಟ್')

ಖಾನ್ ಸಾಹೇಬರು ಏಕಲವ್ಯನನ್ನು ಗುರುತಿಸಿದಾಗ...

ಎಸ್.ಎನ್. ನಾಡಗೀರ

ಮೂವತ್ತರ ದಶಕ. ಮುರಾದಾಬಾದ್ ಸಂಗೀತಸಭೆಯಲ್ಲಿ ಉಸ್ತಾದ್ ಅಬ್ದುಲ್ ಕರೀಮ್‌ಖಾನರ ಗಾಯನವಿತ್ತು. ಅವರಿಗೆ ಅತಿ ಪ್ರಿಯವಾದ ರಾಗವೆಂದರೆ ಝಿಂಝೋಟಿ. ಆ ರಾಗದಲ್ಲವರು "ಪಿಯಾ ಬಿನ ನಹಿ ಆವತ ಚೈನ" ಎಂಬ ಹಾಡು ಹಾಡುತ್ತಿದ್ದರು. ಅವರಿಗೆ ಸಾಥಿಯಾಗಿ ಪ್ರಸಿದ್ಧ ಸಾರಂಗೀವಾದಕ ಇಮ್ತಿಯಾಜ್ ಅಹಮ್ಮದರು ಸಾರಂಗಿ ನುಡಿಸುತ್ತಿದ್ದರು.

ಆ ಹಾಡಿನ ಅರ್ಥ "ಪ್ರಿಯತಮೆ ಇಲ್ಲದೆ ಮನಸ್ಸು ವ್ಯಥಿತವಾಗಿದೆ" ಎಂದು. ಇಮ್ತಿಯಾಜ್ ಅಹಮ್ಮದರ ಗಮನ ಅಲ್ಲಿಯೆ ನೆಲದ ಮೇಲೆ ಕುಳಿತಿದ್ದ ಪೈಜಾಮ-ಜುಬ್ಬಾ ಧರಿಸಿದ ಸುಮಾರು ಇಪ್ಪತ್ತೈದು ವರ್ಷದ ತರುಣನೆಡೆಗೆ ಹೋಯಿತು. ಬಹಳ ಆಸಕ್ತಿಯಿಂದ ಆಲಿಸುತ್ತಿದ್ದ ಆತ ಭಾವನಾ ಲೋಕದಲ್ಲಿ ವಿಹರಿಸುತ್ತಿರುವಂತೆ ಅವರಿಗೆ ಅನ್ನಿಸಿತು. ಗಾಯನ ಮುಗಿದು ಎಲ್ಲರೂ ಎದ್ದುಹೋದರೂ ಆ ತರುಣ ಇನ್ನೂ ಕುಳಿತೇ ಇದ್ದ. ಆನಂತರ ಆತ ಹೊರಟುಹೋದ.

ಇಮ್ತಿಯಾಜ್ ಅಹಮ್ಮದರು ಎಷ್ಟೋ ಬಾರಿ ಆ ತರುಣನನ್ನು ಮುರಾದಾಬಾದ್ ರೈಲ್ವೆ ಸ್ಟೇಷನ್ನಿನ ಪ್ಲಾಟ್‌ಫಾರಂನಲ್ಲಿ ನೋಡಿದ್ದರು. ಅಂದು ರಾತ್ರಿ ಮಳೆ ಬರುತ್ತಿದ್ದುದರಿಂದ ಪ್ಲಾಟ್ ಫಾರ್ಮಿನ ಮೇಲೆ ಯಾರೂ ಇರಲಿಲ್ಲ. ಇಮ್ತಿಯಾಜರ ಗಮನ ಅಲ್ಲಿಯೆ ಅಂಚೆಚೀಲಗಳ ಮೇಲೆ ಕುಳಿತು ತನ್ನಷ್ಟಕ್ಕೆ ತಾನೆ ಗಾಯನ ಗುಣಗುಣಿಸುತ್ತಿದ್ದ ಆ ತರುಣನತ್ತ ಹೋಯಿತು. ಆತ "ಪಿಯಾ ಬಿನ ನಹಿ ಆವತ ಚೈನ" ಹೇಳುತ್ತಿದ್ದ. ಸ್ವತಃ ಖಾನ್‌ಸಾಹೇಬರೇ ಹಾಡುತ್ತಿದ್ದಾರೇನೋ ಎಂದು ಇಮ್ತಿಯಾಜರಿಗೆ ಅನ್ನಿಸಿತು. ತಾವು ಎದುರಿಗೆ ಬಂದರೆ ಆತ ಹಾಡುವುದನ್ನೆಲ್ಲಿ ನಿಲ್ಲಿಸುತ್ತಾನೋ ಎಂದು ಅಲ್ಲಿಯೆ ಇದ್ದ ಕಂಬದ ಹಿಂದೆ ಅಡಗಿ ಗಾಯನವನ್ನು ಆಲಿಸತೊಡಗಿದರು.

ಅಷ್ಟರಲ್ಲಿ ಯಾರೋ ಕದ್ದು ಕೇಳುತ್ತಿರುವಂತೆ ಭಾಸವಾದ ಆ ತರುಣ ಗಾಯನವನ್ನು ಅರ್ಧಕ್ಕೇ ನಿಲ್ಲಿಸಿದ. ಆಗ ಇಮ್ತಿಯಾಜ್ ಅಹಮ್ಮದರು ಅವನ ಬಳಿಹೋಗಿ, ಆತನ ಹೆಗಲಮೇಲೆ ಕೈಯಿಟ್ಟು, "ಶೇಷ್, ನೀನು ಬಹಳ ಚೆನ್ನಾಗಿ ಹಾಡುತ್ತೀಯಾ, ನಿನ್ನ ಗುರು ಯಾರು?" ಎಂದು ಕೇಳಿದರು. "ಗುರುಗಳೆನ್ನುವವರು ಯಾರೂ ಇಲ್ಲ. ನನಗೆ ಸಂಗೀತವನ್ನು ಯಾರೂ ಕಲಿಸಿಲ್ಲ," ಎಂದಾಗ ಇಮ್ತಿಯಾಜರಿಗೆ ಆಶ್ಚರ್ಯವೇ ಆಶ್ಚರ್ಯ. "ಇನ್ನೊಂದು ಹಾಡು ಹೇಳುತ್ತೀಯಾ?" ಇಮ್ತಿಯಾಜ್ ಅಹಮ್ಮದ್ ಕೇಳಿದರು. ಆ ತರುಣ ಹಾಡತೊಡಗಿದ. ಇಮ್ತಿಯಾಜರು ಸಾರಂಗಿಯನ್ನು ಹೊರದೆಗೆದು ನುಡಿಸತೊಡಗಿದರು. ಸಾಮಾನ್ಯವಾಗಿ ಸಾರಂಗಿಯಾಗಲಿ ಇತರ ಯಾವುದೇ ಸಂಗೀತದ ಉಪಕರಣಗಳಾಗಲಿ ಹಾಡಿಗೆ ಮೆರಗು ನೀಡುತ್ತವೆ. ಆದರೆ ಈ

ಸಂದರ್ಭದಲ್ಲಿ ತರುಣನ ಹಾಡೇ ಸಾರಂಗೀವಾದನಕ್ಕೆ ಮೆರಗು ನೀಡುವಂತೆ ಕಾಣುತ್ತಿತ್ತು.

"ಭಲೆ! ಮತ್ತೇನನ್ನು ಹಾಡುತ್ತೀ?" ಇಮ್ತಿಯಾಜ್ ಅಹಮ್ಮದರು ಕೇಳಿದರು.

"ಭಜನೆ ಮತ್ತು ಗಜಲ್," ತರುಣ ಉತ್ತರಿಸಿದ.

ಆ ತರುಣನ ಗಾಯನದಲ್ಲಿ ದುಃಖ, ನಿರಾಸೆ, ಸಂತೋಷ ಮುಂತಾದ ಭಾವನೆಗಳು ನಾನಾ ವರ್ಣ ತಾಳಿ ಕಾರಂಜಿಯಂತೆ ಪುಟಿಯುವಹಾಗೆ ಇಮ್ತಿಯಾಜ್ ಅಹಮ್ಮದರಿಗೆ ಅನ್ನಿಸಿತು.

ಮುಂದೊಮ್ಮೆ ಖಾನ್ ಸಾಹೇಬ್ ಅಬ್ದುಲ್ ಕರೀಮ್‌ಖಾನರು ಒಬ್ಬರೇ ಇದ್ದಾಗ, "ನೀವು ಒಬ್ಬ ತರುಣನಿಗೆ ಸಂಗೀತವನ್ನು ಧಾರೆಯೆರೆದು ಕೊಟ್ಟಿದ್ದೀರಿ," ಎಂದರು. ಅಬ್ದುಲ್ ಕರೀಮ್‌ಖಾನರು ಆಶ್ಚರ್ಯದಿಂದ, "ಆದರೆ ನಾನು ಯಾರಿಗೂ ಸಂಗೀತ ಕಲಿಸಿಲ್ಲವಲ್ಲ," ಎಂದರು. "ಹಾಗಾದರೆ ನೀವು ತಪ್ಪು ತಿಳಿದುಕೊಂಡಿದ್ದೀರಿ," ಎಂದರು ಇಮ್ತಿಯಾಜ್ ಅಹಮ್ಮದರು. ಅವರು ಹೀಗೇಕೆ ಹೇಳಿದರೆಂಬುದು ಅಬ್ದುಲ್ ಕರೀಮ್‌ಖಾನರಿಗೆ ಅರ್ಥವಾಗಲಿಲ್ಲ.

ಕಾಲ ಯಥಾಪ್ರಕಾರ ಸರಿಯುತ್ತಿತ್ತು. ಒಂದು ದಿನ ಇಮ್ತಿಯಾಜ್ ಅಹಮ್ಮದರು ಖಾನ್ ಸಾಹೇಬ್ ಅಬ್ದುಲ್ ಕರೀಮ್‌ಖಾನರಿಗೆ ಆ ತರುಣನನ್ನು ಭೇಟಿಮಾಡಿಸಿದರು. ಅವನ ಗಾಯನವನ್ನು ಕೇಳಿ ಖಾನ್‌ಸಾಹೇಬರಿಗೆ ಬಹಳ ಸಂತೋಷವಾಯಿತು. ಆಶ್ಚರ್ಯವೂ ಆಯಿತು. ಈತನೊಬ್ಬ ಅಸಾಧಾರಣ ಪ್ರತಿಭಾಶಾಲಿ ಎಂದೂ ಅನ್ನಿಸಿತು. ಆತನು ಹಾಡುವುದನ್ನು ನಿಲ್ಲಿಸಿದ ನಂತರ, "ನಿನಗೆ ಗಾಯನವನ್ನು ಯಾರು ಕಲಿಸಿದರು?" ಎಂದು ಅಬ್ದುಲ್ ಕರೀಮ್ ಖಾನರು ಕೇಳಿದರು.

"ಉಸ್ತಾದ್ ಖಾನ್‌ಸಾಹೇಬ್ ಅಬ್ದುಲ್ ಖರೀಮ್‌ಖಾನರು" ಎಂದನಾತ

"ಆದರೆ ನಿನಗೆ ನಾನು ಸಂಗೀತ ಕಲಿಸಿಯೇ ಇಲ್ಲವಲ್ಲ?"

"ತಾವು ನನ್ನ ಅಪ್ರತ್ಯಕ್ಷ ಗುರುಗಳು. ಚಿಕ್ಕವನಿದ್ದಾಗ ನಾನು ತಮ್ಮ ಧ್ವನಿಮುದ್ರಿಕೆಗಳ ಮೂಲಕ ಸಂಗೀತವನ್ನು ಅಭ್ಯಸಿಸಿದೆ. ದಯವಿಟ್ಟು ಆಶೀರ್ವದಿಸಬೇಕು," ಎಂದ ಆ ತರುಣ.

ಖಾನ್ ಸಾಹೇಬರಿಗೆ ಬಹಳ ಸಂತೋಷವಾಗಿ ತಮ್ಮ ಬೆಲೆಬಾಳುವ ಶಾಲನ್ನೇ ಆಶೀರ್ವಾದಪೂರ್ವಕವಾಗಿ ಹೊದಿಸಿದರು. "ನೀನು ಏಕಲವ್ಯನ ಹಾಗೆ ಅಭ್ಯಸಿಸಿರುವೆ. ಹೀಗಾಗಿ ನೀನು ಈಗಿನ ಕಾಲದ



ಏಕಲವ್ಯನೇ ಸರಿ. ಮುಂದೊಂದು ದಿನ ಬಹಳ ಪ್ರಸಿದ್ಧಿಯನ್ನೂ ಪಡೆಯುವೆ," ಎಂದರು ಖಾನ್ ಸಾಹೇಬ್ ಅಬ್ದುಲ್ ಕರೀಮ್‌ಖಾನ್.

ಮುಂದೆ ಅವರ ಸೂಚನೆಯಂತೆ ಇಮ್ತಿಯಾಜ್ ಅಹ್ಮದರು ಚಲನಚಿತ್ರರಂಗದಲ್ಲಿಯ ತಮ್ಮ ಸ್ನೇಹಿತರಿಗೆ ಆ ತರುಣನನ್ನು ಪರಿಚಯಿಸಿದರು.

ಅದಾಗಿ ಎಂಟುವರ್ಷಗಳ ನಂತರ ೧೯೩೫ರಲ್ಲಿ "ದೇವದಾಸ್" ನಿರ್ಮಾಣವಾದಾಗ ಅದೇ ತರುಣ ಅದೇ ಹಾಡನ್ನು ಆ ಚಿತ್ರಕ್ಕಾಗಿ ಹಾಡಿದ್ದ. ಆದರೆ ಅಲ್ಲಿಯ ಸನ್ನಿವೇಶ ಮಾತ್ರ ಬೇರೆ ಇತ್ತು. ಭಗ್ನಪ್ರೇಮಿಯಾದ ತರುಣನೊಬ್ಬ ಅತಿಯಾಗಿ ಮದ್ಯವನ್ನು ಸೇವಿಸಿ, ಒಂದು ಗಟಾರದಲ್ಲಿ ಬಿದ್ದು, ನಾಯಿಯೊಂದನ್ನು ಆಲಿಂಗಿಸಿ ಆ ಹಾಡನ್ನು ಹೇಳುತ್ತಾನೆ. ಆ ದೃಶ್ಯದಲ್ಲಿ ಪಾತ್ರಧಾರಿಯ ನಟನೆ ಮತ್ತು ಗಾಯನ ಅತ್ಯದ್ಭುತವಾಗಿತ್ತು. ಅದರಿಂದಾಗಿ ಜನಪ್ರಿಯತೆ ಆ ತರುಣನಿದ್ದಲ್ಲಿ ತಾನಾಗಿಯೆ ಹರಿದು ಬಂತು. ಹೀಗೆ ಖಾನ್‌ಸಾಹೇಬರ ಭವಿಷ್ಯವಾಣಿ ನಿಜವಾಗಿತ್ತು. ಆದರೆ ತಮ್ಮ ಶಿಷ್ಯ ಪ್ರಸಿದ್ಧಿಯ ಉತ್ತುಂಗಕ್ಕೇರುವುದನ್ನು ನೋಡುವ ಭಾಗ್ಯ ಅಬ್ದುಲ್ ಕರೀಮ್‌ಖಾನರಿಗಿರಲಿಲ್ಲ. 'ದೇವದಾಸ್' ಹೊರಬರುವುದಕ್ಕೆ ಒಂದು ವರ್ಷ ಮೊದಲೆ ಅವರು ಪೈಗಂಬರವಾಸಿಯಾಗಿದ್ದರು.

ಖಾನ್‌ಸಾಹೇಬ್ ಅಬ್ದುಲ್ ಕರೀಮ್‌ಖಾನ್‌ರಂತೆಯೇ ಆ ತರುಣನೂ "ಸಂಗೀತವೇ ನನ್ನ ಜೀವನದ ಉಸಿರು" ಎನ್ನುತ್ತಿದ್ದ. ಮುಂದೆ 'ತಾನ್‌ಸೇನ್' ಚಿತ್ರದಲ್ಲಿ ಮುಖ್ಯ ಪಾತ್ರ ಆತನಿಗೆ ಸಿಕ್ಕಿತು. ತನ್ನ ಅಸಾಧಾರಣ ಪ್ರತಿಭೆಯಿಂದಾಗಿ ಆತ ಎರಡನೆಯ ತಾನ್‌ಸೇನ್ ಎನ್ನಿಸಿಕೊಂಡ. ಅವನ ಸಂಗೀತ ಕೇಳಲು ಸಂಗೀತಪ್ರೇಮಿಗಳು ಮಳೆಯನ್ನೂ ಲೆಕ್ಕಿಸಲಿಲ್ಲ. ಅವನ ನರನಾಡಿಗಳಲ್ಲೂ ಸ್ವರ ಮಿಡಿಯುತ್ತಿತ್ತು. ದಶಕಗಳಾಚೆಗೂ ಅವನ ಸಂಗೀತ ಪಸರಿಸಿತು.

ಆ ತರುಣನೇ ಪಂಜಾಬದ ಜಾಲಂಧರ್ ಪಟ್ಟಣದ ಕುಂದನಲಾಲ್ ಸೈಗಲ್. ನ್ಯೂ ಥೇಟರ್ಸ್‌ದ ಪ್ರಖ್ಯಾತ ಗಾಯಕನೂ ನಟನೂ ಆಗಿದ್ದ ಆತ ೧೯೪೭ರಲ್ಲಿ "ಅಮರ್ ಸೈಗಲ್" ಎಂದೂ ಹೆಸರು ಪಡೆದ.

***

ಇನ್ನೊಂದು ಸೌರವ್ಯೂಹ ಇದೆಯೇ?

ನಮ್ಮ ಸೌರವ್ಯೂಹಕ್ಕೆ ಒಂದು ಜೊತೆಗಾತಿ ಸಿಕ್ಕಿದೆ. ಸೌರವ್ಯೂಹದಂತಹದೇ ವ್ಯವಸ್ಥೆಯುಳ್ಳ ಸೂರ್ಯನನ್ನು ಹೋಲುವ ಇನ್ನೊಂದು ನಕ್ಷತ್ರ 'ವೇಗಾ' ಅನ್ನು ಖಗೋಳ ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. ಇದು ಭೂಮಿಯಿಂದ ೨೬ ಪ್ರಕಾಶ ವರ್ಷಗಳಷ್ಟು ದೂರದಲ್ಲಿದೆ. ವೇಗಾ ರೂಪುಗೊಂಡು ಹೆಚ್ಚೆಂದರೆ ಹತ್ತು ಲಕ್ಷ ವರ್ಷಗಳಾಗಿರಬೇಕು ಎಂದು ಒಂದು ಅಂದಾಜು. ಸೂರ್ಯನಿಗಿಂತ ಸುಮಾರು ಮೂರರಷ್ಟು ಭಾರವಿರುವ ವೇಗಾದ ಸೌರವ್ಯೂಹವು ನಮ್ಮ ಸೌರವ್ಯೂಹಕ್ಕಿಂತ ಸುಮಾರು ನಾಲ್ಕುಪಟ್ಟು ವಿಸ್ತಾರವಿದೆ. ಜೊತೆಗೆ ವೇಗಾ ಸೂರ್ಯನಿಗಿಂತ ಸುಮಾರು ಅರವತ್ತು ಪಟ್ಟು ಹೆಚ್ಚು ಪ್ರಕಾಶಮಾನವಾಗಿದೆ.

ಇದನ್ನು ಆವರಿಸಿರುವ ಧೂಳಿನ ಕಣಗಳ ತೂಕ ನಮ್ಮ ಸೌರವ್ಯೂಹದ ಒಟ್ಟು ತೂಕದಷ್ಟೇ ಇರಬೇಕೆಂದು ಒಂದು ಅಂದಾಜು. ಆದರೆ ನಮ್ಮ ಸೌರವ್ಯೂಹದಂತೆಯೇ ಅಲ್ಲಿಯೂ ಗ್ರಹಗಳು ರೂಪುಗೊಂಡಿವೆಯೇ ಎಂಬುದಿನ್ನೂ ಸರಿಯಾಗಿ ನಿರ್ಧರಿತವಾಗಿಲ್ಲ.

- 'ಗೌರಿ ಅಭಿ'



ವಾಲ್ಮೀಕಿ ರಾಮಾಯಣವನ್ನು ತಮಿಳು ಭಾಷೆಯಲ್ಲಿ ತಮಿಳು ಸಂಸ್ಕೃತಿಯ ಪ್ರತಿಬಿಂಬದಂತೆ ರಚಿಸಿದಾತ ಮಹಾಕವಿ ಕಂಬನ್. ತಮಿಳನ್ನು ಉಳಿಸಿರುವವರೆಂದರೆ ಕಂಬನ್ ಮತ್ತು ತಿರುವಳ್ಳುವರ್ ಎನ್ನುವ ಮಾತು ತಮಿಳನ್ನಾಡುವ ಮಂದಿಯಲ್ಲಿ ಬಳಕೆಯಲ್ಲಿದೆ. ಕಂಬನ್ ಅಲ್ಲಿ ಹುಟ್ಟಿದ್ದೇ ತಮಿಳುನಾಡಿನ ಹಿರಿಮೆ ಎಂದು ತಮಿಳಿನ ಆಧುನಿಕ ಕವಿ ಭಾರತಿಯಾರ್ ಹಾಡಿದ್ದಾರೆ.

ಕಂಬನ್ ಬದುಕಿದ್ದು ಸುಮಾರು ಹತ್ತನೇ ಶತಮಾನದಲ್ಲಿ. ಆತ ಹುಟ್ಟಿದ ಊರು ತಿರುವಳಂದೂರು ಎಂದು ಹೇಳಲಾಗುತ್ತಿದ್ದರೂ ಅದಕ್ಕೆ ಆಧಾರಗಳು ದೊರಕಿಲ್ಲ. ಎಳೆಯ ಮಗುವಾಗಿದ್ದಾಗಲೇ ತಂದೆ ತಾಯಿಯನ್ನು ಕಳೆದುಕೊಂಡು ಊರಿನ ಕಾಳಿಗುಡಿಯ ಧ್ವಜಸ್ತಂಭದ ಬಳಿ ಇದ್ದವನನ್ನು ತಿರುವಣ್ಣೆ ನೆಲ್ಲೂರಿನ ಜಡೆಯಪ್ಪನೆಂಬ ಶ್ರೀಮಂತನು ಕರೆದೊಯ್ದು ಸಾಕಿದನೆಂದೂ ಕಂಬದ ಬಳಿ ದೊರೆತವನಾದುದರಿಂದ ಅವನಿಗೆ 'ಕಂಬನ್' ಎಂಬ ಹೆಸರೇ ಬಳಕೆಗೆ ಬಂತೆಂದೂ ಕಥೆಯಿದೆ.

ತನ್ನ ಆಶ್ರಯದಾತನನ್ನಂತೂ ಕವಿ ಕೃತಜ್ಞತೆಯಿಂದ ತನ್ನ ಕಾವ್ಯದಲ್ಲಿ ಮತ್ತೆ ಮತ್ತೆ ಸ್ಮರಿಸಿಕೊಂಡಿದ್ದಾನೆ. ಕಂಬನ್ ಧಾರ್ಮಿಕ ಪ್ರವೃತ್ತಿಯಲ್ಲಿ ವೈಷ್ಣವ. ಕಡೆಗಾಲದಲ್ಲಿ ರಾಮನಾಥಪುರಂ ಜಿಲ್ಲೆಯ ನಾಟ್ಟರಸನ್ ಕೋಟ್ಟೈ ಎಂಬಲ್ಲಿ ವಾಸ ಮಾಡುತ್ತಿದ್ದು ಅಲ್ಲಿಯೇ ತೀರಿಕೊಂಡ. ಹೀಗಾಗಿ ಕಂಬನ್ ಸಮಾಧಿ ಆ ಊರಿನಲ್ಲಿಯೇ ಇದೆ.

ಈತ ರಚಿಸಿದ ರಾಮಾಯಣ ಹತ್ತು ಸಾವಿರ ಪದ್ಯಗಳಷ್ಟು ದೊಡ್ಡದಾಗಿದೆ. ವಾಲ್ಮೀಕಿಯೇ ಇವನಿಗೆ ಮಾರ್ಗದರ್ಶಿಯಾದರೂ ಕವಿ ಸಹಜವಾದ ಮನೋಧರ್ಮದಿಂದ ಅಲ್ಲಲ್ಲಿ ಸ್ವಾತಂತ್ರ್ಯ ವಹಿಸಿದ್ದಾನೆ. ವಸ್ತುವಿನಲ್ಲಿಯೂ ನಿರೂಪಣೆಯಲ್ಲಿಯೂ ನವ್ಯತೆ ಕಾಣಬರುತ್ತದೆ. ತಮಿಳು ಸಾಹಿತ್ಯದಲ್ಲಿ ತುಂಬ ಶ್ರೇಷ್ಠ ಕೃತಿಯೆಂಬ ಕೀರ್ತಿ ಇಂದಿನವರೆಗೂ ಇದಕ್ಕೆ ಉಳಿದು ಬಂದಿದೆ.

– ಡಾಮಿನ್

ಅತ್ಯುಪಕಾರಿ ಆಮ್ಲಗಳು

ಆಮ್ಲ ಎಂದೊಡನೆ ಭೀತಿಯ ಭಾವನೆ ನಮ್ಮಲ್ಲಿ ಮೂಡುತ್ತದೆ. ಅದು ತೀವ್ರ ಸ್ವರೂಪದ ಸುಟ್ಟಗಾಯಗಳಿಗೆ ಕಾರಣವಾಗುವುದೆನ್ನುವುದೇನೋ ಸರಿ. ಆದರೆ ಆಮ್ಲದ ಮತ್ತೊಂದು ಸ್ವರೂಪವನ್ನು ಗುರುತಿಸಿದರೆ ಅದು ಎಷ್ಟು ಉಪಕಾರಿ ಎನ್ನುವುದು ವೇದ್ಯವಾಗುತ್ತದೆ. ಔಷಧ, ಬಣ್ಣ, ಶೃಂಗಾರ ಪ್ರಸಾಧನ ಹಾಗೂ ಕೈಗಾರಿಕಾ ಉತ್ಪನ್ನಗಳ ತಯಾರಿಕೆಗಳಲ್ಲಿ ಆಮ್ಲಗಳ ಪಾತ್ರ ಹಿರಿದು.

ಸ್ಥೂಲವಾಗಿ ಆಮ್ಲಗಳನ್ನು ನಿರವಯ ಆಮ್ಲಗಳು ಮತ್ತು ಸಾವಯವ ಆಮ್ಲಗಳು ಎಂದು ಎರಡು ವರ್ಗಗಳಾಗಿ ವಿಂಗಡಿಸಬಹುದು. ಗಂಧಕಾಮ್ಲವನ್ನು ಉದ್ಯಮಗಳಲ್ಲಿ ವಿಶೇಷವಾಗಿ ಬಳಸುತ್ತಾರೆ. ಕಣ್ಣು, ತ್ವಚೆಗೆ ಇದು ಅತಿ ಹಾನಿಕಾರಿ. ಹೈಡ್ರೋಕ್ಲೋರಿಕ್ ಆಮ್ಲವನ್ನು ಗಂಧಕಾಮ್ಲ ಹಾಗೂ ಅಡಿಗೆ ಲವಣದಿಂದ ತಯಾರಿಸಲಾಗುತ್ತದೆ. ಹೈಡ್ರೋಕ್ಲೋರಿಕ್ ಆಮ್ಲದಿಂದ ಇತರ ರಾಸಾಯನಿಕಗಳನ್ನು ಉತ್ಪಾದಿಸುತ್ತಾರೆ. ಲೋಹದಿಂದ ತಯಾರಾದ ಸಾಮಗ್ರಿಗಳನ್ನು ಸ್ವಚ್ಛಗೊಳಿಸಲು ಈ ಆಮ್ಲ ಹೇಳಿ ಮಾಡಿಸಿದಂತಿದೆ. ನಮ್ಮ ಶರೀರದಲ್ಲೂ ಅಲ್ಪ ಪ್ರಮಾಣದಲ್ಲಿ ಹೈಡ್ರೋಕ್ಲೋರಿಕ್ ಆಮ್ಲ ತಯಾರಾಗುತ್ತಿದ್ದು ಪಚನಕ್ರಿಯೆಗೆ ನೆರವಾಗಿದೆ.

ನೈಟ್ರಿಕ್ ಆಮ್ಲ ಅತಿ ಅಘಾತಕಾರಿಯಾದರೆ ಬೋರಿಕ್ ಆಮ್ಲ ಅತಿ ದುರ್ಬಲವಾದದ್ದು. ಇದು ಇಟಲಿ ದೇಶದಲ್ಲಿ ಸ್ವಾಭಾವಿಕವಾಗಿಯೆ ಲಭ್ಯ. ಬೋರಿಕ್ ಆಮ್ಲವನ್ನು ಕುಂಭ ಕಲಾಕೃತಿಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಸಿಮೆಂಟು, ವರ್ಣದ್ರವ್ಯ, ಅಲಂಕಾರ ಸಾಮಗ್ರಿಗಳ ತಯಾರಿಕೆಗಳಲ್ಲೂ ಅದು ಬೇಕೇ ಬೇಕು. ಬೋರಿಕ್ ಆಮ್ಲ ಕ್ರಿಮಿನಾಶಕವೂ ಹೌದು.

ಇಂಗಾಲಾಮ್ಲದಿಂದ ತಯಾರಿಸಲಾಗುವ ಕಾರ್ಬಾನಿಕ್ ಆಮ್ಲ ನಾವು ಕುಡಿಯುವ ಸೋಡಾದಲ್ಲಿ ಬೆರೆತಿರುತ್ತದೆ. ಆರ್ಸೆನಿಕ್ ಆಮ್ಲದಿಂದ ಕೀಟನಾಶಕಗಳನ್ನು ತಯಾರಿಸಲಾಗುತ್ತದೆ. ಸಾವಯವ ಆಮ್ಲಗಳು, ನಿರವಯ ಆಮ್ಲಗಳಷ್ಟು ಪ್ರಬಲವಾದವುಗಳಲ್ಲ. ಅಸಿಟಿಕ್ ಆಮ್ಲ ಮಧ್ಯದಲ್ಲಿರುತ್ತದೆ. ಹಾಲಿನಲ್ಲಿ ಸಕ್ಕರೆ ಕರಗಿದಾಗ ಲ್ಯಾಕ್ಟಿಕ್ ಆಮ್ಲ ಉತ್ಪತ್ತಿಯಾಗುವುದು. ಹಾಲು ಹುಳಿಯಾಗಲು ಇದೇ ಕಾರಣ. ನಮ್ಮ ದೇಹಾರೋಗ್ಯಕ್ಕೆ ಅಮೈನೊ ಆಮ್ಲಗಳು ಅಗತ್ಯ. ಹಾಲಿನಲ್ಲಿ ಇವು ಧಾರಾಳವಾಗಿ ಲಭ್ಯ. ದ್ವಿದಳಧಾನ್ಯ, ಕಿತ್ತಲೆ, ನಿಂಬೆ, ದ್ರಾಕ್ಷಿಹಣ್ಣುಗಳಲ್ಲೂ ಅಮೈನೊ ಆಮ್ಲವಿದೆ. ಮಾಂಸಾಹಾರದಲ್ಲಿ ನಿಕೋಟಿನಿಕ್ ಆಮ್ಲವಿದ್ದು ಚರ್ಮವ್ಯಾಧಿಗೆ ಉಪಶಮನಕಾರಿ. ನಮ್ಮ ಶರೀರದಲ್ಲೇ ಹಲವಾರು ಆಮ್ಲಗಳು ತಯಾರಾಗಿ ಆರೋಗ್ಯ ಸಮತೋಲನಕ್ಕೆ ಪೂರಕವಾಗುತ್ತವೆ.

– ಬಿಂಡಿಗನವಿಲೆ ಭಗವಾನ್

ರಕ್ತದಿಂದ ಬರೆದ ಗ್ರಂಥ

ಕ್ರಿಸ್ತಶಕ ೧೧೬೬ರಲ್ಲಿ ಜಪಾನಿನ ಬಾದಶಹ 'ಸುಟೋಕ' ಎಂಬುವನು ರಕ್ತದಿಂದಲೇ ಬರೆದ ಗ್ರಂಥ 'ಲಂಕೆಯ ಮೇಲಿನ ಸೂತ್ರ'. ಇದು ಬೌದ್ಧ ಧರ್ಮಗ್ರಂಥವೊಂದರ ಅನುವಾದ. ಮೂರು ವರ್ಷಗಳವರೆಗೆ 'ಸುಟೋಕ' ತನ್ನ ದೇಹದಲ್ಲಿನ ರಕ್ತದಿಂದಲೇ ಈ ಅದ್ಭುತವಾದ ಗ್ರಂಥ ಬರೆದು ಮುಗಿಸಿದ. ಅದರಲ್ಲಿ ೧೪೦ ಪುಟಗಳಿದ್ದು ಸುಮಾರು ೧೦,೬೦೦ ಶಬ್ದಗಳಿವೆ.

– ರಾಮನ್

ಜ್ಞಾನನಿಧಿ


ವೈರ್‌ಲೆಸ್ ಟೆಲಿಗ್ರಾಫಿಯ ಜನಕ

ಆಲಿವರ್ ಲಾಡ್ಜ್

ವೈರ್‌ಲೆಸ್ ಟೆಲಿಗ್ರಾಫಿಯ ಪಿತಾಮಹ ಎಂದೇ ಪರಿಗಣಿಸಲ್ಪಡುವ ಆಲಿವರ್ ಲಾಡ್ಜ್ ಹುಟ್ಟಿದ್ದು ೧೮೫೧ರ ಜೂನ್ ಹನ್ನೆರಡರಂದು. ಖ್ಯಾತ ಶಿಕ್ಷಣವೇತ್ತರ, ಧರ್ಮವಿದರ ಮನೆತನವೆಂದು ಇಂಗ್ಲೆಂಡಿನ ತುಂಬಾ ಮನ್ನಿಸಲ್ಪಟ್ಟಿದ್ದರೂ ಆತನ ತಂದೆ ಆರಿಸಿಕೊಂಡಿದ್ದು ಕುಂಬಾರಿಕೆಗೆ ಬೇಕಾಗುವ ಪರಿಕರಗಳನ್ನು ಒದಗಿಸುವ ಉದ್ಯೋಗವನ್ನು. ಮನೆಗೆ ಬಂದು ಪಾಠ ಹೇಳಲು ಒಬ್ಬ ಶಿಕ್ಷಕನನ್ನು ತಂದೆ ನಿಯುಕ್ತಗೊಳಿಸಿದ್ದನಾದ್ದರಿಂದ ಎಲ್ಲರಹಾಗೆ ಆಲಿವರ್ ಲಾಡ್ಜ್ ಶಾಲೆಗೆ ಹೋಗಲಿಲ್ಲ.

ಮಗ ಏಳು ವರ್ಷ ಕಲಿತದ್ದು ಸಾಕಾಯಿತು ಎಂದು ತಂದೆಗೆ ಅನ್ನಿಸಿದ್ದರಿಂದ ಆಲಿವರ್ ತನ್ನ ಹದಿನಾಲ್ಕನೆಯ ವಯಸ್ಸಿಗೇ ಶಿಕ್ಷಣಕ್ಕೆ ಶರಣು ಹೊಡೆದು ತಂದೆಯ ಉದ್ಯೋಗದಲ್ಲಿ ನೆರವಾಗತೊಡಗಿದ. ವ್ಯಾಪಾರೋದ್ದೇಶಕ್ಕಾಗಿ ಆತನಿಗೆ ಮೇಲಿಂದ ಮೇಲೆ ಲಂಡನ್ನಿಗೆ ಹೋಗಬೇಕಾಗುತ್ತಿತ್ತು. ಅಲ್ಲಿ ವೇಳೆ ಕಳೆಯಲೆಂದು ಜಾನ್ ಟಿಂಡಾಲನ ಭಾಷಣಗಳನ್ನು ಕೇಳಿ ವಿಜ್ಞಾನದಲ್ಲಿ ಆಸಕ್ತಿ ಕುದುರಿತು. ತನ್ನ ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಮತ್ತೆ ಕಾಲೇಜು ಸೇರಿ, ವಿಜ್ಞಾನ ಕಲಿತು, ಅದರಲ್ಲಿ ಪದವಿ ಪಡೆದ. ಅನಂತರ ಆಗಿನ ಕಾಲದ ಖ್ಯಾತ ವಿಜ್ಞಾನಿಯಾಗಿದ್ದ ಕ್ಯಾರೆ ಫಾಸ್ಟರನ ಕೈಲಿ ಡೆಮಾನ್‌ಸ್ಟ್ರೇಟರ್ ಆಗಿ ನಿಯುಕ್ತನಾದ. ಆಲಿವರ್ ಲಾಡ್ಜ್‌ಗೆ ೧೮೭೭ ರಲ್ಲಿ ಡಾಕ್ಟರೇಟ್ ಬಂತು. ಅಲ್ಲಿಂದಾತ ಯಂತ್ರಶಾಸ್ತ್ರ ಹಾಗೂ ವಿದ್ಯುತ್ತಿಗೆ ಸಂಬಂಧಿಸಿದಹಾಗೆ ಪ್ರಬಂಧಗಳನ್ನು ಮಂಡಿಸತೊಡಗಿದ.

೧೮೮೧ರಲ್ಲಿ ಆಲಿವರ್ ಲಾಡ್ಜ್ ಲಂಡನ್ ಬಿಟ್ಟು ಲಿವರ್‌ಪೂಲಿಗೆ ಹೋಗಿ ಅಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರೊಫೆಸರ್‌ನಾಗಿ ನಿಯುಕ್ತನಾದ. ಆಗ ಆತ ವಿದ್ಯುದಯಸ್ಕಾಂತ ಅಲೆಗಳನ್ನು ಕಂಡುಹಿಡಿಯುವ ವಿಧಾನವನ್ನು ಶೋಧಿಸಿದ್ದೇ ರೇಡಿಯೋ ಅಲೆಗಳ ಅಸ್ತಿತ್ವವನ್ನು ಗ್ರಹಿಸುವುದಕ್ಕೆ ಆ ಕಾಲದಲ್ಲಿ ಬಳಸಲಾಗುತ್ತಿದ್ದ ಉಪಕರಣವನ್ನು ಸುಧಾರಿಸಲು ಕಾರಣವಾಯಿತು. ಈಥರ್ ಎಂಬ ಅದೃಶ್ಯವಸ್ತು ಅವಕಾಶವನ್ನೆಲ್ಲಾ ವ್ಯಾಪಿಸಿದೆಯೆಂಬ ಭಾವನೆ ಆಗ ಪ್ರಚಲಿತವಾಗಿತ್ತು. ಈ ಭಾವನೆಯಲ್ಲಿ ಎಷ್ಟೂ ಹುರುಳಿಲ್ಲ ಎನ್ನುವುದನ್ನು ಆಲಿವರ್ ಲಾಡ್ಜ್ ತೋರಿಸಿಕೊಟ್ಟು ತನ್ಮೂಲಕ ಸಾಪೇಕ್ಷವಾದದ ಸಿದ್ಧಾಂತ ಮುಂದೆ ರೂಪುಗೊಳ್ಳಲು ವೈಜ್ಞಾನಿಕ ವೇದಿಕೆಯನ್ನು ನಿರ್ಮಿಸಿಕೊಟ್ಟ.



ಜ್ಞಾನನಿಧಿ

ರೇಡಿಯೋ ಅಲೆಗಳು ಅಂತರಿಕ್ಷದಿಂದ ತೂರಿಕೊಂಡು ಬರುವುದು ಬಹು ಹಿಂದೆಯೆ ನಮಗೆಲ್ಲ ಗೊತ್ತಿತ್ತಾದರೂ ಅವು ಸೂರ್ಯನಿಂದ ಬರುತ್ತಿವೆಯೆಂಬುದನ್ನು ಊಹಿಸಿದಾತ ಆಲಿವರ್ ಲಾಡ್ಜ್. ಮುಂದೆ ೪೮ ವರ್ಷಗಳ ನಂತರ ಅವನ ಊಹೆ ಸರಿಯೆಂಬುದು ಸ್ಥಿರಪಟ್ಟಿತು. ಅಂದರೆ ಬರಿ ತರ್ಕಬಲದಿಂದಲೆ ಆತ ೪೮ ವರ್ಷಗಳಷ್ಟು ಹಿಂದೆಯೆ ಸರಿಯಾದ ನಿಷ್ಕರ್ಷೆಗೆ ಬಂದಿದ್ದ.

ಅವನ ವೈಜ್ಞಾನಿಕ ಸಾಧನೆಗಳಿಗಾಗಿ ಅನೇಕ ಪ್ರತಿಷ್ಠಿತ ಸಂಸ್ಥೆಗಳಿಂದ ಮಾನ ಸನ್ಮಾನಗಳು ಅವನನ್ನು ಹುಡುಕಿಕೊಂಡು ಬಂದವು. ಸ್ವತಃ ಬ್ರಿಟಿಶ್ ಸರಕಾರವೇ ನೈಟ್ ಪದವಿಯನ್ನು ನೀಡಿ ಆಲಿವರ್ ಲಾಡ್ಜ್‌ನನ್ನು ಸನ್ಮಾನಿಸಿತು.

ಆದರೆ ಆ ವೇಳೆಗಾಗಲೆ ಆಲಿವರ್ ಲಾಡ್ಜ್ ಅಂತರ್ಮುಖಿಯಾಗತೊಡಗಿದ್ದ. ಸಾವಿನಾಚೆಗೆ ಏನಿದೆಯೆಂಬುದನ್ನು ತಿಳಿದುಕೊಳ್ಳಲು ಅವನ ಮನಸ್ಸು ತವಕಿಸುತ್ತಿತ್ತು. ಮೊದಲನೆಯ ಮಹಾಯುದ್ಧದಲ್ಲಿ ಆಲಿವರ್ ಲಾಡ್ಜ್ ತನ್ನ ಮಗನನ್ನು ಕಳೆದುಕೊಂಡ ಬಳಿಕ ಇನ್ನಷ್ಟು ಅಂತರ್ಮುಖಿಯಾಗಿ ಪ್ರೇತಾತ್ಮಗಳ ಸಂಶೋಧನೆಯಲ್ಲಿ ತೊಡಗಿಕೊಂಡ. ವಿಜ್ಞಾನಕ್ಕೂ ಧರ್ಮಕ್ಕೂ ಸಂಬಂಧವೇ ಇಲ್ಲ; ಅವೆರಡೂ ಪರಸ್ಪರ ವಿರುದ್ಧವಾದವುಗಳು ಎಂಬ ಭಾವನೆ ಸಾರ್ವತ್ರಿಕವಾಗಿದೆ. ಆದರೆ ಈ ಭಾವನೆ ತಪ್ಪು; ವಿಜ್ಞಾನ-ಧರ್ಮಗಳೆರಡೂ ಒಂದಕ್ಕೊಂದು ಪೂರಕವಾಗಿವೆಯೇ ಹೊರತು ವಿರುದ್ಧವಾಗಿಲ್ಲ ಎನ್ನುವುದನ್ನು ಜನಮಾನಸದಲ್ಲಿ ಬಿಂಬಿಸಲು ಆಲಿವರ್ ಲಾಡ್ಜ್ ಬಹುವಾಗಿ ಪ್ರಯತ್ನಪಟ್ಟ. ಈ ಪ್ರಯತ್ನದಲ್ಲಿರುವಾಗಲೆ ೧೯೪೦ರ ಆಗಸ್ಟ್ ೨೨ ರಂದು ತನ್ನ ೮೯ನೆಯ ವಯಸ್ಸಿನಲ್ಲಿ ಆತ ತೀರಿಕೊಂಡ.

-ಡಿ.ಎಸ್.

ಗುಡ್ಡ ಸುತ್ತಿ...

ಏಷ್ಯಾ, ಉತ್ತರ ಅಮೆರಿಕಾಗಳನ್ನು ಬೇರ್ಪಡಿಸುವ ಬೇರಿಂಗ್ ಜಲಸಂಧಿ ೫೬ ಕಿಲೋಮೀಟರುಗಳಷ್ಟು ಅಗಲವಾಗಿದೆ. ಈ ಜಲಸಂಧಿಯಲ್ಲಿ ಅಮೆರಿಕಾದ ಅಲಾಸ್ಕಾ ಮತ್ತು ರಶಿಯದ ಏಷ್ಯಾ ಭಾಗದ ತೀರಗಳಿಗೆ ತಾಗಿಕೊಂಡು ಹಲವಾರು ಚಿಕ್ಕಪುಟ್ಟ ದ್ವೀಪಗಳಿವೆ. ಇವುಗಳಲ್ಲಿ ಜನವಸತಿಯೂ ಇದೆ. ಈ ಎರಡೂ ಬದಿಯ ದ್ವೀಪಗಳ ಮಧ್ಯದ ಕನಿಷ್ಠ ದೂರ ೧೫ ಕಿಲೋಮೀಟರು. ಎರಡೂ ಬದಿಯ ದ್ವೀಪ ಸಮೂಹಗಳ ನಡುವೆ ಓಡಾಟ, ಕೊಡು-ಕೊಳ್ಳುವಿಕೆಗಳು ಮೊದಲಿನಿಂದಲೂ ಇದ್ದು ಅದರಿಂದಾಗಿ ಸಂಬಂಧಗಳೂ ಬೆಳೆದಿದ್ದವು. ಆದರೆ ಶೀತಲ ಸಮರದಿಂದಾಗಿ ಇವೆರಪರ ನಡುವಿನ ಅನಿರ್ಬಂಧಿತ ಓಡಾಟಕ್ಕೆ ವ್ಯತ್ಯಯ ಬಂತು. ರಷ್ಯಾ ತುದಿಯಿರುವ ದ್ವೀಪವಾಸಿ ೧೫ ಕಿಲೋಮೀಟರು ಆಚೆಗೆ ಇರುವ ಅಮೆರಿಕ ದ್ವೀಪವಾಸಿಯಾದ ಸೊಸೆ, ಮಗಳು, ಅಳಿಯ ಅಥವಾ ಇತರ ಯಾರಾದರೂ ಸಂಬಂಧಿಯನ್ನು ನೋಡಬೇಕಾದರೆ ಸಾವಿರಾರು ಕಿಲೋಮೀಟರು ಭ್ರಮಿಸಿ ಮಾಸ್ಕೋಗೆ ಬರಬೇಕು. ಪರವಾನಗಿ ಪಡೆದು ಅಲ್ಲಿಂದ ಅಮೆರಿಕದ ನ್ಯೂಯಾರ್ಕ್‌ಗೆ ಹೋಗಿ, ನ್ಯೂಯಾರ್ಕ್‌ನಿಂದ ಅಲಾಸ್ಕಾ, ನಂತರ ತಾನು ಬಯಸಿದ ದ್ವೀಪ ಸೇರಬೇಕಾಗುತ್ತದೆ. ಅಮೆರಿಕ ಬದಿಯ ದ್ವೀಪವಾಸಿಗೂ ಗತಿ.

ಕೆ. ಗಣೇಶ್
(ಆಧಾರ-ಸ್ಪುಟ್ನಿಕ್)

ಅದ್ಭುತಗಳ ಆಗರವಾದ

ಕಡಲು

ಸುಮಾರು ಐದು ಬಿಲಿಯನ್ ವರ್ಷಗಳ ಹಿಂದೆ ಭೂಮಿ ಹುಟ್ಟಿತೆಂದು ಹೇಳುತ್ತಾರೆ. ನೀರಿನ ಕುದಿಯುವ ಬಿಂದುವಿಗೂ ಕೆಳಗಿನ ಮಟ್ಟಕ್ಕೆ ಭೂಮಿಯ ಹೊರ ಮೈಯ ಉಷ್ಣತೆಯು ಇಳಿದಾಗ ಭೂಮಿಯ ಮೇಲೆ ನೀರು ಇತ್ತು.

ಕೋಟಿ ವರ್ಷಗಳ ನಂತರ ೭ ಖಂಡಗಳು ಕಂಡುಬಂದವು. ನಾಲ್ಕು ಸಾಗರಗಳು ಇಂದಿನ ರೂಪಕ್ಕೆ ಬಂದವು. ವಿಜ್ಞಾನಿಗಳ ಪ್ರಕಾರ ಸುಮಾರು ೨೨೦ ಮಿಲಿಯ ಘನ ಮೈಲುಗಳಷ್ಟು ನೀರನ್ನು ಸಾಗರಗಳು ಒಳಗೊಂಡಿವೆ. ಈ ಅಗಾಧ ಜಲಾಶಯ ಅನೇಕ ಅದ್ಭುತಗಳ ಆಗರವೆನಿಸಿದೆ. ನಮ್ಮ ಭೂಮಿಯ ಮೇಲೆ ಕಂಡು ಬರುವಂತಹ ಆಳವಾದ ಕಂದರ, ಕೊರಕಲುಗಳು ಇಲ್ಲಿವೆ. ಗೌರೀಶಂಕರದಂಥ ಪರ್ವತ ಶಿಖರದ ತುದಿಯೂ ಕಾಣಿಸದಂತೆ ತನ್ನಲ್ಲಿ ಅಡಗಿಸಿಕೊಳ್ಳುವಂಥ ಕಂದಕಗಳೂ ಅಲ್ಲಿವೆ. ಅತಿ ಎತ್ತರ ಪರ್ವತಗಳೂ ಈ ಜಲಧಿಯಲ್ಲಿ ಅಲ್ಲಲ್ಲಿ ಅಡಗಿಕೊಂಡಿವೆ.

ಒಂದು ಘನ ಮೈಲು ಸಮು[illegible]ನಲ್ಲಿ ಯಾವ ಯಾವ ರಾಸಾ[illegible]ಗಳಿರಬಹುದೆಂದು ಸಮುದ್ರ ವಿಜ್ಞಾನಿಗಳು ಕಲ್ಪಿಸಿದ್ದಾರೆ. ಆಕ್ಸಿಜನ್-೪,೦೬೭,೦೦೦,೦೦೦ ಟನ್, ಮೆಗ್ನೀಶಿಯಂ- ೬,೪೦೦೦,೦೦೦ ಟನ್, ಹೈಡ್ರೋಜನ್- ೫೦೯೦೦೦,೦೦೦,ಗಂಧಕ-೪,೨೦೦,೦೦೦, ಕ್ಲೋರೀನ್-೮೯೫೦೦,೦೦೦, ಸುಣ್ಣ-೧,೯೦೦, ೦೦೦, ಸೋಡಿಯಂ-೪೯೫೦೦,೦೦೦, ಪೊಟ್ಯಾಶಿಯಂ-೧,೮೦೦,೦೦೦ ಟನ್ನುಗಳು.

ಇವಲ್ಲದೆ ಮೆಗ್ನೀಶಿಯಂ, ಬ್ರೋಮೇನ್ ಅಲ್ಲದೆ ಇನ್ನೂ ಅನೇಕ ವಸ್ತುಗಳು ಅಲ್ಪ ಪ್ರಮಾಣದಲ್ಲಿವೆ. ಭೂಮಿಯ ಮೇಲಿನ ಮಳೆಯ ನೀರು ಹರಿದು ಬರುವಾಗ ಮಣ್ಣಲ್ಲಿಯ ಲವಣಾಂಶವನ್ನು ಕರಗಿಸಿ ತರುವುದು ಸಮುದ್ರದ ನೀರು ಇಷ್ಟು ಉಪ್ಪಾಗಿರಲು ಕಾರಣ. ಸಮುದ್ರದಲ್ಲಿನ ಉಪ್ಪನ್ನೆಲ್ಲ ಸಂಗ್ರಹಿಸಲು ಸಾಧ್ಯವಾದರೆ ಭೂಮಿಯ ಮೇಲ್ಮೈ ಮೇಲೆ ಸುಮಾರು ೫೦೦ ಅಡಿ ದಪ್ಪವಾಗಿ ಹೊದಿಸಬಹುದು.

ಒಂದು ಘನ ಮೈಲಿ ಸಮುದ್ರದಲ್ಲಿ ೩೮ ಪೌಂಡು ಚಿನ್ನ ಇದೆ. ಜೀವಿಗಳು ಉಗಮಿಸುವುದಕ್ಕಿಂತ ಮೊದಲು ಇದ್ದುದಕ್ಕಿಂತ ಈಗ ಸಮುದ್ರದ ನೀರಿನಲ್ಲಿ ಉಪ್ಪಿನ ಅಂಶ ಹೆಚ್ಚಾಗಿದೆ. ಆದ್ದರಿಂದಲೇ ಜೀವಿಗಳ ಜೀವಕೋಶಗಳಲ್ಲಿ ಸಮುದ್ರ ನೀರಿಗಿಂತ ಕಡಿಮೆ ಉಪ್ಪಿನಂಶವಿದೆ.

ಜೀವ ಪ್ರಪಂಚ:- ಸಮುದ್ರದಲ್ಲಿ ಸುಮಾರು ೨೭,೪೦೦ ಅಡಿ ಕೆಳಗೆ ನಕ್ಷತ್ರ ಮೀನು ಹಾಗೂ ಕೆಲ ಕಠಿಣ ಕವಚ ಜೀವಿಗಳು ಮಾತ್ರ ಬದುಕುಳಿಯಬಲ್ಲವು. ಜೀವಿಗಳನ್ನು ೨೬ ಪ್ರಭೇದಗಳಲ್ಲಿ ವಿಂಗಡಿಸ ಬಹುದು. ಇವುಗಳಲ್ಲಿ ಹೆಚ್ಚಿನವುಗಳ ವಾಸ ಸಮುದ್ರವೇ ಆಗಿದೆ. ಪ್ರಪ್ರಥಮ ಏಕಕೋಶೀಯ ಜೀವಿಗಳ ಬದುಕು ಪ್ರಾರಂಭವಾದದ್ದೇ ಸಮುದ್ರದಲ್ಲಿ.

ಪ್ರಾಣಿವರ್ಗದಲ್ಲಿ ೪-೫ ಭಾಗವನ್ನು ಸಂಧಿಪದಿಗಳೇ ಆಕ್ರಮಿಸಿಕೊಂಡಿವೆ. ಸಮುದ್ರದಲ್ಲಿ ಸುಮಾರು ೩೫,೦೦೦ರಷ್ಟು ಈ ಸಂಧಿಪದಿಗಳಿದ್ದುದಾದರೆ ೮,೪೦೦೦೦ ಕ್ರಿಮಿಗಳು ಭೂವಾಸಿಗಳು. ಸಮುದ್ರಜೀವಿಗಳಲ್ಲಿ ಅರ್ಧದಷ್ಟು ಕೇವಲ ಕ್ರಿಮಿಗಳೇ.

ಜ್ಞಾನನಿಧಿ

ಹೆಚ್ಚಿನವು ಸಂಧಿಪದಿಗಳಾಗಿವೆ. ಎಲ್ಲಾ ಸಂಧಿ ಪದಿ ಗಳು ಬೆಳೆದಂತೆ ತಮ್ಮ ಹೊರಪದರನ್ನು ಉದುರಿಸಿಕೊಳ್ಳುವುದು ಅವುಗಳ ಪ್ರಮುಖ ಲಕ್ಷಣವಾಗಿದೆ.

ಮತ್ಸ್ಯಲೋಕ :- ಅಟ್ಲಾಂಟಿಕ್ ಸಾಗರದ ದಂಡೆಯ ಪ್ರದೇಶದಲ್ಲಿ ನೇರಿಳೆ ಬಣ್ಣದ ಹಲವು ಪ್ರಕಾರದ ನಕ್ಷತ್ರ ಮೀನುಗಳಿವೆ. ಇವುಗಳ ಬೆನ್ನ ಮೇಲೆ ಚಿಪ್ಪುಗಳ ಕವಚವಿದೆ. ಮೀನುಗಳಲ್ಲಿ ಎಷ್ಟು ಜಾತಿಗಳಿವೆ ಗೊತ್ತೆ? ಎರಡು ಸಾವಿರ. ಹಾಂ! ದಿಗಿಲುಗೊಳ್ಳ ಬೇಡಿ! ೯ ಕೈಗಳ ನಕ್ಷತ್ರ ಮೀನುಗಳಿವೆ. ಕೆಲವಂತೂ ೯ ಅಡಿಗಳಷ್ಟು ಅಗಲವಾಗಿವೆ. ಕಲ್ಮೀನು ಜಾತಿಯ ಕೆಲ ಮೀನುಗಳು ಎಷ್ಟು ಅಪಾಯಕಾರಿ ಗೊತ್ತೆ? ಕೆಲವೇ ಗಂಟೆಗಳಲ್ಲಿ ಓರ್ವ ಸದೃಢ ವ್ಯಕ್ತಿಯನ್ನು ಕೊಲ್ಲುವಂಥ ವಿಷ ಅವುಗಳಲ್ಲಿದೆ. ಸಮುದ್ರದಡಿಯ ಕಲ್ಲು ಪದರುಗಳಲ್ಲಿರುವುದರಿಂದ ಅವಕ್ಕೆ ಈ ಹೆಸರು. ಇವು ಇದ್ದಕಡೆ ಈಜಲು ಹೋಗ ಬಾರದೆಂದು ಆಸ್ಟ್ರೇಲಿಯಾದ ಕೆಲ ಸಮುದ್ರ ದಂಡೆಗಳಲ್ಲಿ ಸೂಚನಾಫಲಕಗಳನ್ನು ಹಾಕಲಾಗಿದೆ.

ಮೈಮೇಲೆ ಪಟ್ಟೆಗಳಿರುವ ಜೀಬ್ರಾ ಮೀನು ಗಳೂ ಕಡಲಿನಲ್ಲಿವೆ. ಚಿಕ್ಕ ಗರಿಗಳಂಥ ರೆಕ್ಕೆಗಳು ಅವುಗಳಿಗಿವೆ. ಇವುಗಳ ಮೊನೆ ಸೂಜಿಯಂತಿದ್ದು ವಿಷದಮುಳ್ಳುಗಳಾಗಿವೆ. ಈ ಮೀನಿಗೆ ಹೆದರಿಕೆ ಎಂಬುದೇ ಇಲ್ಲ. ಮುಳುಗಿ ಈಜುವವರಿಗೆ ಇದರ ಗರಿ ತಾಗಿದರೂ ವಿಪರೀತ ನೋವಾಗುತ್ತದೆ. ಕೆಲ ಸಲ ಪಾರ್ಶ್ವವಾಯು ಹೊಡೆದಂತೆ ಆಗು ವದೂ ಇದೆ. ಅಪರೂಪಕ್ಕೊಂಬಂತೆ ಮರ ಣವೂ ಸಂಭವಿಸಬಹುದು.

ಸಸ್ಯಲೋಕ:- ಸಾಗರಜಲದಲ್ಲಿ ನೂರಕ್ಕೂ ಕಡಿಮೆಯಿಲ್ಲದಷ್ಟು ಬಗೆಯ ಎತ್ತರೆತ್ತರದ ಜಲಸಸ್ಯಗಳಿವೆ. ಎರಡು ಲಕ್ಷದಷ್ಟು ಹೂಬಿ ಡುವ ಸಸ್ಯಗಳಿವೆ. ಅವುಗಳಲ್ಲಿ ಹೆಚ್ಚಿನವು ಭೂಭಾಗದಲ್ಲಿ ಕಾಣುವ ಹೂಗಿಡಗಳನ್ನು ಹೋಲುತ್ತವೆ.

ಇದೆಲ್ಲ ಗೊತ್ತಾದದ್ದು ಹೇಗೆ ಎನ್ನು ತ್ತೀರಾ? ಕೆಲ ಬಂಡೆಗಳಲ್ಲಿ ಕಂಡುಬಂದ ಪಳೆಯುಳಿಕೆಗಳಿಂದ. ಸುಮಾರು ೫೦-೬೦ ಕೋಟಿ ವರ್ಷಗಳ ಹಿಂದೆ ಪ್ರಾಣಿಗಳಿಗೆ ದಪ್ಪ ಕವಚಗಳಿದ್ದುದು ವ್ಯಕ್ತವಾಗಿದೆ. ಇತ್ತೀಚೆ ಪ್ರಪಂ ಚದಲ್ಲಿ ಕೆಲವೆಡೆ ಕೆಸರಿನಲ್ಲೂ ಮರಳಿನಲ್ಲೂ ಪಳೆಯುಳಿಕೆಗಳು ಸಿಕ್ಕಿದ್ದು ೨೦ ಕೋಟಿ ವರ್ಷಗಳ ಹಿಂದಿನ ಜೆಲ್ಲಿ ಮೀನುಗಳ, ವೃತ್ತ ಹುಳುಗಳ, ಚಪ್ಪಟೆ ಹುಳುಗಳ, ಮೃದ್ವಂಗಿ, ಹವಳದ ಹುಳುಗಳ ಇರುವಿಕೆಯನ್ನು ತೋರಿಸುತ್ತದೆ.

-ಮೋಹನ ಗ. ಹೆಗಡೆ

ವಿಚಿತ್ರ ಪುಸ್ತಕ

ಭೂತಾನದ ಬೌದ್ಧ ಸಂನ್ಯಾಸಿಗಳ ಆಶ್ರ ಮವಾದ 'ಟಾಕ್‌ಸ್ಟಾಂಗ್' ನಲ್ಲಿರುವ ಕಪ್ಪು ಕಾಗದದ ಒಂದು ಪುಸ್ತಕದಲ್ಲಿ ಬಿಳಿ ಮತ್ತು ಚಿನ್ನದ ಬಣ್ಣದಿಂದ ಅಕ್ಷರಗಳನ್ನು ಬರೆಯಲಾ ಗಿದೆ. ಈ ಪುಸ್ತಕದ ವಿಸ್ಮಯ ಅಡಗಿರುವುದೇ ಬಣ್ಣದ ಅಕ್ಷರಗಳಲ್ಲಿ.

ಇವು ಸಾಮಾನ್ಯ ಬಣ್ಣಗಳಲ್ಲ. ಚಿನ್ನದಲ್ಲೇ ತಯಾರಿಸಲ್ಪಟ್ಟಂತಹ ಶಾಯಿಯಿಂದ ಚಿನ್ನದ ಬಣ್ಣದ ಅಕ್ಷರಗಳನ್ನು ಬರೆದಿದ್ದರೆ, ಬಿಳಿ ಬಣ್ಣದ ಅಕ್ಷರಗಳನ್ನು ಬೌದ್ಧ ಗುರು ಲಾಮಾ ಗಳ ಅಸ್ತಿಯಿಂದ ಬರೆಯಲಾಗಿದೆ. ಲಾಮಾ ಗಳು ನಿರ್ವಾಣ ಹೊಂದಿದ ನಂತರ ಅವರ ಮೂಳೆಗಳನ್ನು ಪುಡಿ ಮಾಡಿ, ಪೇಸ್ಟ್ ರೂಪಕ್ಕೆ ತಂದು ಅದರಿಂದ ಈ ಬಿಳಿ ಅಕ್ಷರಗಳನ್ನು ಬರೆಯಲಾಗಿದೆ.

-ಸಿ.ಎಸ್.ಎ.

ಜ್ಞಾನನಿಧಿ

ಗುಡ್ಡಗಾಡು ಜನರ ದಾರಿ ದೀಪ

ಎಲ್ವಿನ್ ವೆರಿಯರ್

ಕ್ರೈಸ್ತಮತ ಪ್ರಚಾರಕ್ಕಾಗಿ ಭಾರತಕ್ಕೆ ಬಂದ ಎಲ್ವಿನ್ ವೆರಿಯರ್ ಇಲ್ಲಿಯ ಗಿರಿಜನರ ಶೋಚನೀಯ ಸ್ಥಿತಿಯನ್ನು ನೋಡಿ ಮರುಕಗೊಂಡು ಪಾದ್ರಿಯ ಹುದ್ದೆಯನ್ನು ತ್ಯಜಿಸಿ ಅವರ ಏಳಿಗೆಗಾಗಿ ಹಗಲಿರುಳೂ ದುಡಿದ.

ಆತ ಹುಟ್ಟಿದ್ದು ಇಂಗ್ಲೆಂಡಿನ ಕೆಂಟ್ ಪ್ರಾಂತದ ಡೋವರ್ ಎಂಬ ಊರಿನಲ್ಲಿ, ೧೯೦೨ ರಲ್ಲಿ. ಮೊದಲಿನಿಂದಲೂ ಭಾರತದ ಬಗ್ಗೆ ಅಭಿಮಾನ. ನಮ್ಮ ದೇಶದ ಸ್ವಾತಂತ್ರ್ಯ ಚಳವಳಿಯ ಬಗ್ಗೆ ಅಪಾರ ಸಹಾನುಭೂತಿ. ಗಾಂಧೀಜಿಯ ಪ್ರಭಾವದಿಂದ ಹಳ್ಳಿಯಲ್ಲಿ ಹಳ್ಳಿಗರೊಡನೆ ಒಂದಾಗಿ ಬಾಳತೊಡಗಿದ. ಇವನ ಸೇವಾ ಮನೋಭಾವವನ್ನು ಗುರುತಿಸಿದ ವಲ್ಲಭಭಾಯಿ ಪಟೇಲರು ಆತನನ್ನು ಗಿರಿಜನರ ಕಡೆ ಆಸಕ್ತಿ ವಹಿಸುವಂತೆ ಪ್ರೇರೇಪಿಸಿದರು.

೧೯೩೧ರಿಂದ ತನ್ನ ಅವಸಾನದ ಕಾಲದವರೆಗೂ ಆತ ಅವಿಶ್ರಾಂತವಾಗಿ ಗಿರಿಜನರ ಏಳಿಗೆಗಾಗಿ ದುಡಿದ. ಮಧ್ಯಪ್ರದೇಶದ ಗೊಂಡರ ಸಣ್ಣ ಹಳ್ಳಿಯಾದ ಕರಂಜಿಯ ಎಂಬಲ್ಲಿ ನೆಲೆಸಿ ಅದನ್ನೇ ತನ್ನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡ ವೆರಿಯರ್ ಗಿರಿಜನರ ಸಂಸ್ಕೃತಿ, ಜೀವನ ವಿಧಾನವನ್ನು ಆಳವಾಗಿ ಅಧ್ಯಯನ ಮಾಡಿದ (೧೯೩೧). ಅವನು ಅವರಲ್ಲಿ ಎಷ್ಟು ಆತ್ಮೀಯನಾಗಿದ್ದನೆಂದರೆ ಗೊಂಡ ಜನಾಂಗದ ಹುಡುಗಿಯನ್ನು ಮದುವೆಯಾಗಿ ಅವರ ತೆರನಾಗಿಯೆ ಜೀವಿಸತೊಡಗಿದ. ಸಾಹಿತ್ಯದ ಬಗ್ಗೆ ಅಪಾರವಾದ ಒಲವಿದ್ದುದರಿಂದ ಆಯಾ ಜನರಲ್ಲಿ ಬೆರೆತು, ಬೈಗಾ ಆಸೇರಿಯಾ ಜನರನ್ನು ಕುರಿತು ಗ್ರಂಥಗಳನ್ನು ರಚಿಸಿದ. 'ಮಹಾ ಕೋಸಲದ ಜನಪದ ಕಥೆಗಳು', 'ಛತ್ತೀಸ್ ಘರನ ಜನಪದ ಗೀತಗಳು' ಎಂಬ ಪುಸ್ತಕಗಳನ್ನು ಪ್ರಕಟಿಸಿದ. 'ಎ ಫಿಲಾಸಫಿ ಫಾರ್ ನೇಫಾ' ಎಂಬುದು ಅವನ ಬಹು ಜನಪ್ರಿಯವಾದ ಗ್ರಂಥ. ನಾಗಾಲ್ಯಾಂಡಿನ ಇತಿಹಾಸದ ಬಗ್ಗೆ ಅವನು ಪ್ರಕಟಿಸಿದ ಪುಸ್ತಕಗಳು ರಾಷ್ಟ್ರಾಧ್ಯಕ್ಷ ಬಹುಮಾನವನ್ನು ಗಳಿಸಿದವು. ಅದಲ್ಲದೆ ಕೇಂದ್ರ ಸರ್ಕಾರ ಆತನನ್ನು ಮತ್ತು ತ್ರಿಪುರಾಗಳಿಗೆ ಆದಿವಾಸಿಗಳ ಗೌರವ ಸಲಹೆಗಾರನನ್ನಾಗಿ ನಿಯಮಿಸಿತು.

೧೯೬೪ರಲ್ಲಿ ಪ್ರಕಟವಾದ 'ದ ಟ್ರೈಬಲ್ ವರ್ಲ್ಡ್ ಆಫ್ ವೆರಿಯರ್ ಎಂಬುದು ಅವರ ಆತ್ಮಕಥೆ. 'ಎ ಕ್ಲೌಡ್ ದಟ್ ಈಸ್ ಡ್ರಾಗೋನಿಷ್' ಎಂಬುದು ವನ್ಯಜೀವನವನ್ನು ವಸ್ತುವಾಗುಳ್ಳ ಕಾದಂಬರಿಗಳಲ್ಲೊಂದು ೧೯೬೧ರಲ್ಲಿ 'ಪದ್ಮಭೂಷಣ' ಪ್ರಶಸ್ತಿ ತಾನಾಗಿಯೆ ಹುಡುಕಿಕೊಂಡು ಬ ನಾಗರಿಕ ಸಮಾಜದಿಂದ ದೂರವಿದ್ದು ಜೀವನಾನುಕೂಲಗಳಿಲ್ಲದ ಪರಿಸ್ಥಿತ ಗುಡ್ಡಗಾಡು ಜನರ ಸ್ಥಿತಿಗತಿಗಳನ್ನು ಬಹುಮಟ್ಟಿಗೆ ಸುಧಾರಿ ಅತ್ಯುನ್ನತ ಮಟ್ಟದ ಸಮಾಜ ಸುಧಾರಕ. ಸಹಮಾನವರ ಬಗ್ಗೆ ಅನುಕಂಪ ತನ್ನ ಜೀವನವನ್ನೇ ಅವರಿಗಾಗಿ ಮುಡಿಪಿಟ್ಟ ಶ್ರೇಷ್ಠ ಮಾನವ. ಒಂದು ಸರಒಂದು ಸಂಸ್ಥೆ ಮಾಡಲು ಸಾಧ್ಯವಾಗದ ಕೆಲಸವನ್ನು ಮಾಡಿರುವುದರಿಂದ ಭಾರತೀಯ ಅವನಿಗೆ ಎಂದೆಂದಿಗೂ ಕೃತಜ್ಞರಾಗಿರಬೇಕು.

೧೯೬೪ರಲ್ಲಿ ಎಲ್ವಿನ್ ವೆರಿಯರ್ ಕಾಲವಶನಾದರೂ ತನ್ನ ಸತ್ಕಾರ್ಯಗಳಿಂದಾಗಿ ಜನರ ಮನಸ್ಸಿನಲ್ಲಿ ಅಮರನಾಗಿದ್ದಾನೆ.

– ಡಿ. ಗುಂಡೂರಾವ್

ಜ್ಞಾನನಿಧಿ

ದೇಹದ ಒಟ್ಟು ಭಾರದಲ್ಲಿ ಅರ್ಧದಷ್ಟು ಭಾರ ಸ್ನಾಯುಗಳದ್ದೇ ಆಗಿದೆ.

ಮಾನವನ ದೇಹದಲ್ಲಿ ಒಟ್ಟು ೫೨೭ ಸ್ನಾಯುಗಳಿವೆ.

ಮಾನವ ದೇಹದಲ್ಲಿ ೨೦ ಲಕ್ಷ ಕಿಟಕಿಗಳಿವೆ ಎಂದರೆ ನೀವು ನಂಬುತ್ತೀರಾ? ಚರ್ಮದಲ್ಲಿ ಸುಮಾರು ೨೦ ಲಕ್ಷ ರಂಧ್ರಗಳಿವೆ. ಅವು ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾಗಿದ್ದರೂ, ಒಂದರ ಹಿಂದೆ ಒಂದರಂತೆ ಇವುಗಳನ್ನು ಜೋಡಿಸಿದರೆ ೭೨ ಮೈಲುಗಳಷ್ಟು ಉದ್ದವಾಗುತ್ತವೆ. ಈ ಸೂಕ್ಷ್ಮ ರಂಧ್ರಗಳ ಮೂಲಕವೇ ನಮ್ಮ ದೇಹ ಕಶ್ಮಲಗಳನ್ನು ಹೊರಹಾಕುತ್ತದೆ.

ನಗುವಾಗ ಮನುಷ್ಯನ ೧೩ ಸ್ನಾಯುಗಳು ಉಪಯೋಗವಾಗುತ್ತವೆ. ಹೂಂಕರಿಸುವಾಗ ೫೦ ಸ್ನಾಯುಗಳು ಉಪಯೋಗವಾಗುತ್ತವೆ.

ಮಾನವನ ಹೃದಯವು ಎರಡು ಸಾರಿ ಬಡಿಯುವಷ್ಟರಲ್ಲಿ ಒಂದು ಸೆಕೆಂಡು ನಿಲ್ಲುತ್ತದೆ. ಇದರಿಂದ ಎಲ್ಲರ ಹೃದಯವೂ ಅವರ ಜೀವಿತಾವಧಿಯ ಆರನೇ ಒಂದು ಭಾಗದಷ್ಟು ಕಾಲ ತಟಸ್ಥವಾಗಿರುತ್ತದೆ.

ಮಾನವನ ಹೃದಯವು ಜೀವಿತಾವಧಿಯಲ್ಲಿ ಭಾರೀ ಯುದ್ಧನೌಕೆಯನ್ನು ಸಮುದ್ರದಿಂದ ಮೇಲೆ ಎತ್ತುವಷ್ಟು ಶಕ್ತಿಯನ್ನು ಉತ್ಪಾದಿಸುತ್ತದೆ.

ಸ್ತ್ರೀಯರಿಗಿಂತಲೂ ಪುರುಷರ ತಲೆಗೂದಲು ಹೆಚ್ಚು ಉದುರುತ್ತದೆ.

ನಮ್ಮ ಬಾಯಿಯಿಂದ ಒಂದೇ ಒಂದು ಶಬ್ದ ಹೊರಡಬೇಕಾದರೆ ಅದಕ್ಕಾಗಿ ೭೨ ಸ್ನಾಯುಗಳು ಉಪಯೋಗವಾಗಿರುತ್ತವೆ.

ಮನುಷ್ಯನು ತನ್ನ ಎರಡೂ ಕೈಗಳಿಂದ ೨೩೬ ಪೌಂಡ್ ಭಾರವನ್ನು ಎತ್ತಬಲ್ಲ. ತನ್ನ ಹೆಗಲ ಮೇಲೆ ೩೩೦ ಪೌಂಡ್ ಭಾರ ಹೊರಬಲ್ಲ.

ಮನುಷ್ಯನ ತಲೆಯಲ್ಲಿ ಒಂದು ಲಕ್ಷದಿಂದ ಒಂದು ಲಕ್ಷ ಅರವತ್ತು ಸಾವಿರದವರೆಗೆ ಕೂದಲುಗಳಿರುತ್ತವೆ ಎಂದು ಅಂದಾಜಿಸಲಾಗಿದೆ.

• ಎಚ್.ಆರ್. ವಸ್ತ್ರದ, ಕುಕನೂರು.

ಬೊಂಬೆಗಳು

ಜಗತ್ತಿನಲ್ಲಿ ಎಲ್ಲರಿಗಿಂತ ಮೊದಲು ಬೊಂಬೆಗಳನ್ನು ತಯಾರಿಸಿದವರಾರು ಗೊತ್ತೆ? ಈಜಿಪ್ಷಿನವರು. ಆದರೆ ಅದನ್ನವರು ಆಟಿಗೆಯಾಗಿ ಬಳಸುತ್ತಿರಲಿಲ್ಲ. ಅದರ ಉಪಯೋಗ ಧಾರ್ಮಿಕ ವಿಧಿಗಳಷ್ಟೇ ಸೀಮಿತವಾಗಿತ್ತು. ಬೊಂಬೆಗಳನ್ನು ಕೈಯಿಂದ ತಯಾರಿಸಿದರೂ ಧಾರ್ಮಿಕ ವಿಧಿಗಾಗಿ ಅವನ್ನು ಬಳಸುವಾಗ ಕೈಯಿಂದ ಮುಟ್ಟುತ್ತಿರಲಿಲ್ಲ. ಕಾಲಾಂತರದಲ್ಲಿ ಬೊಂಬೆಮಾಡುವ ಕಲೆಯನ್ನು ಗ್ರೀಕರೂ, ರೋಮನ್ನರೂ ಇಜಿಪ್ಷಿನವರಿಂದ ಕಲಿತುಕೊಂಡರು.

- ಟೇಕಲ್ ಗೋಪಾಲಕೃಷ್ಣ

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾಗಿ ಅರ್ಥವನ್ನು ವಿವರಿಸಿದೆ.

(೧) ಅನಿರ್ದೇಶ್ಯ
- (ಅ) ಕೆಟ್ಟ ಅಭಿಪ್ರಾಯವುಳ್ಳವ
- (ಆ) ದೇಶಭ್ರಷ್ಟ
- (ಇ) ಕೆಲಸವಿಲ್ಲದೆ ತಿರುಗುವ
- (ಈ) ವಿವರಿಸಲು ಬಾರದ

(೨) ಅನವಸರ
- (ಅ) ಸಾವಕಾಶ
- (ಆ) ಸಂದರ್ಭಕ್ಕೆ ಸರಿಹೊಂದದ
- (ಇ) ಬಾಡಿದ ಹೂಮಾಲೆ
- (ಈ) ಹಿಂದೆ ಸರಿಯುವಿಕೆ

(೩) ಅನರ್ಪಿತ
- (ಅ) ಪೂಜೆ ಮಾಡದ
- (ಆ) ಪ್ರಯೋಜನವಿಲ್ಲದ
- (ಇ) ದೇವರಿಗೆ ನೈವೇದ್ಯವಿಲ್ಲದ
- (ಈ) ಅಯೋಗ್ಯ

(೪) ಅಪಾವೃತ
- (ಅ) ತೆರೆದಿಟ್ಟ
- (ಆ) ನಿಂತಲ್ಲೇ ನಿಲ್ಲುವ
- (ಇ) ಚಂಚಲ
- (ಈ) ಕೆಲಸವಿಲ್ಲದ

(೫) ಅನುಮೇಯ
- (ಅ) ಅಳತೆ ಮಾಡಿದ
- (ಆ) ಊಹಿಸಲು ಬರುವಂಥ
- (ಇ) ಮಿತ
- (ಈ) ಬಹಳ ಚಿಕ್ಕ

(೬) ಅನಾಘ್ರಾತ
- (ಅ) ಮುಚ್ಚಿದ
- (ಆ) ತೆರೆದ
- (ಇ) ಮೂಸಲ್ಪಡದ
- (ಈ) ಅಪಾಯ

(೭) ಚಕ್ರೇಶ್ವರ
- (ಅ) ರಾಜ
- (ಆ) ಗಾಡಿಯವ
- (ಇ) ಕುಂಬಾರ
- (ಈ) ಸಂಚಾರಿ

(೮) ಚಲ್ಲವರಿ
- (ಅ) ಚದರಿ ಹೋಗು
- (ಆ) ಹಟಹಿಡಿ
- (ಇ) ಸೌಂದರ್ಯ
- (ಈ) ಹುಚ್ಚಾಟವಾಡು

(೯) ನಿರವಗ್ರಹ
- (ಅ) ಹಿಡಿತಕ್ಕೆ ಸಿಗದ
- (ಆ) ದುಷ್ಟಗ್ರಹ
- (ಇ) ಮೊಸಳೆ
- (ಈ) ಚುರುಕಾದ

(೧೦) ನಿರಾಟ
- (ಅ) ಕಡಿಮೆ ನೀರಿನ
- (ಆ) ನಿರ್ಜನ
- (ಇ) ಜಿಗುಟು
- (ಈ) ಸ್ಪಷ್ಟ

(೧೧) ನಿಷ್ಪ್ರಪಂಚ
- (ಅ) ವಿರಕ್ತ
- (ಆ) ಮೋಸವರಿಯದ
- (ಇ) ಶರೀರವಿಲ್ಲದ
- (ಈ) ಸಂಸಾರ ಸುಖವಿಲ್ಲದ

(೧೨) ಪೆಂಪು
- (ಅ) ಹೆಣ್ಣಿಗತನ
- (ಆ) ದಡ್ಡತನ
- (ಇ) ಹಿರಿಮೆ
- (ಈ) ರುಚಿಕರ

'ಶಬ್ದಭಾಂಡಾರ'ದ ಸರಿಯಾದ ಅರ್ಥಗಳು

೧) ಅನಿರ್ದೇಶ್ಯ

(ಈ) ವಿವರಿಸಲು ಬಾರದ, ಹೇಳಲು ಬಾರದ, ನಿಶ್ಚಿತಪಡಿಸಲು ಬಾರದ, ಹೋಲಿಸಲು ಬಾರದ ಉದಾ: ಪರಮಾತ್ಮನ ಸ್ವರೂಪವು ಅನಿರ್ದೇಶ್ಯವಾಗಿದೆ; ಅನಿರ್ದೇಶ್ಯವಾದ ಭಯವು ಅವನನ್ನು ಕಾಡುತ್ತಿದೆ. (ಸಂ. ಅ = ಅಲ್ಲ, ನಿರ್ದೇಶ್ಯ = ತೋರಿಸತಕ್ಕಂಥ)

೨) ಅನವಸರ

(ಆ) ಸಂದರ್ಭಕ್ಕೆ ಸರಿಹೊಂದದ, ಅಸಂಗತ, ಸ್ಥಳ ಅಥವಾ ಹೊತ್ತಿಗೆ ಹೊಂದಿಕೆಯಾಗದ, ಅಕಾಲ. ಉದಾ: ಅನವಸರ ಹಾಸ್ಯ, ಅಂದರೆ ಹಾಸ್ಯಮಾಡಬಾರದ ಹೊತ್ತಿನಲ್ಲಿ ಮಾಡಿದ ಹಾಸ್ಯ. (ಸಂ. ಅನ್ = ಅಲ್ಲ, ಅವಸರ = ಸಂದರ್ಭ)

೩) ಅನರ್ಪಿತ

(ಇ) ದೇವರಿಗೆ ಸಮರ್ಪಿಸದ ಉದಾ: ಅನರ್ಪಿತವಾದ ಅನ್ನವನ್ನು ಅವನು ಸೇವಿಸುವುದಿಲ್ಲ. (ಅನ್ = ಅಲ್ಲ, ಅರ್ಪಿತ = ಒಪ್ಪಿಸಿದ)

೪) ಅಪಾವೃತ

(ಅ) ತೆರೆದಿಟ್ಟ, ಮುಸುಕು ಅಥವಾ ಮುಚ್ಚಳ ಸರಿಸಿದ; ಅಂಕೆಗೆ ಸಿಲುಕದ, ಸ್ವೇಚ್ಛಾಚಾರಿ. ಉದಾ: ಅವನ ನಿಜಸ್ವರೂಪ ಅಪಾವೃತವಾಯಿತು. (ಸಂ. ಅಪ = ಅಲ್ಲ, ಆವೃತ ಮುಚ್ಚಿದ)

೫) ಅನುಮೇಯ

(ಆ) ಊಹಿಸಲು ಬರುವಂಥ. ತರ್ಕಿಸಲಾಗುವ, ಅಂದಾಜು ಮಾಡಬಲ್ಲಂಥ. ಉದಾ: ಈ ಹೋರಾಟದ ಫಲ ಅನುಮೇಯವಾಗಿಯೇ ಇತ್ತು. (ಸಂ. ಅನು = ಅನುಸರಿಸಿ. ಮೇಯ = ಅಳತೆ ಮಾಡಲ್ಪಡುವ)

೬) ಅನಾಘ್ರಾತ:

(ಇ) ಮೂಸಲ್ಪಡದ. ಈ ವರೆಗೆ ಇತರರಿಂದ ಭೋಗಿಸಲ್ಪಡದ. ಉದಾ: ಅವಳು ಅನಾಘ್ರಾತ ಕುಸುಮ. (ಸಂ. ಅನ್ = ಅಲ್ಲ, ಆಘ್ರಾತ = ಮೂಸಿರದ)

೭) ಚಕ್ರೇಶ್ವರ

(ಅ) ರಾಜ, ಒಂದು ಪ್ರಾಂತದ ಅಧಿಪತಿ. ವಿಷ್ಣು (ಸಂ. ಚಕ್ರ = ರಾಜ್ಯ, ಈಶ್ವರ = ಒಡೆಯ)

೮) ಚಲ್ಲವರಿ

(ಈ) ಹುಚ್ಚಾಟವಾಡು, ಸರಸವಾಡು, ತಮಾಷೆ ಮಾಡು, ನಗು, ಹುಡುಗಾಟವಾಡು. ಉದಾ: ಅವಳು ಚಲ್ಲವರಿಯುತ್ತಾಳೆ. (ಕನ್ನಡ ಚಲ್ಲ = ತಮಾಷೆ)

೯) ನಿರವಗ್ರಹ

(ಅ) ಹಿಡಿತಕ್ಕೆ ಸಿಗದ, ಅಂಕೆತಪ್ಪಿದ, ಅಂಕೆಯಿಲ್ಲದ, ಸ್ವೇಚ್ಛಾಚಾರಿ, ಸ್ವತಂತ್ರ, ಅನಿಯಂತ್ರಿತ, ಉದಾ: ತಂದೆ ಸತ್ತ ಮೇಲೆ ಮಗ ನಿರವಗ್ರಹನಾದ (ಸಂ. ನಿರ್ = ಇಲ್ಲ ಅವಗ್ರಹ = ಹಿಡಿತ)

೧೦) ನಿರಾಳ

(ಈ) ಸ್ಪಷ್ಟ, ಕೆಸರು ಮೊದಲಾದ ಕಳಂಕವಿಲ್ಲದ; ಸಂದೇಹವಿಲ್ಲದ, ನಿಶ್ಚಯ ಮನಸ್ಸಿನ, ಶಾಂತ ಮನಸ್ಸು (ಸಂ. ನಿರಾವಿಲದಿಂದ)

೧೧) ನಿಷ್ಪ್ರಪಂಚ

(ಆ) ಮೋಸವರಿಯದ, ವಂಚನೆ ಮಾಡದ, ಪರಿಶುದ್ಧ, ನಂಬಿಕೆಯ ವಿಶ್ವಾಸಶೀಲ, ಉದಾ: ನಿಷ್ಪ್ರಪಂಚವಾದ ಮಗು. (ನಿರ್ = ಇಲ್ಲ, ಪ್ರಪಂಚ = ವಂಚನೆ)

೧೨) ಪೆಂಪು

(ಇ) ಹಿರಿಮೆ, ದೊಡ್ಡತನ, ಮಹತಿ, ಭವ್ಯತೆ, ಶೋಭೆ, ಧಾರಾಳತನ. ಉದಾ: ಪಂಪನ ಕಾವ್ಯದ ಪೆಂಪು. (ಕನ್ನಡ)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೦೬-೦೮ ಸರಿಯಿದ್ದರೆ ...... ಸಾಧಾರಣ
೦೯-೧೦ ..-,,-......... .... ಉತ್ತಮ
೧೧-೧೨ .-,,- .... ಅತ್ಯುತ್ತಮ



ಇಸ್ಪೀಟ್ ಎಲೆ
ಕೆಲ ಮೋಜಿನ ವಿಷಯಗಳು

— ಆರ್. ವಿ. ಕಟ್ಟೀಮನಿ, ತಡಕಲ್

ಮಹಾಭಾರತದಲ್ಲಿ ಪಾಂಡವರ ವನವಾಸಕ್ಕೆ ಕಾರಣವಾದ ಜೂಜಿನ ಪ್ರಸಂಗ ಗೊತ್ತಿರಬೇಕು. ಶಕುನಿಯ ಕುತಂತ್ರದಿಂದ, ಮೋಸದ ದಾಳಗಳಿಂದ ಧರ್ಮರಾಯ ರಾಜ್ಯ ಕೋಶವನ್ನೆಲ್ಲ ಸೋತು, ತನ್ನನ್ನು ತನ್ನ ತಮ್ಮಂದಿರನ್ನು ಹಾಗೂ ದ್ರೌಪದಿಯನ್ನು ಪಣಕ್ಕೊಡ್ಡಿ ಸೋತಿದ್ದು, ನಂತರ ವಸ್ತ್ರಾಪಹರಣ ದ್ರೌಪದಿಯ ಮಾನ ಕಾಪಾಡಲು ಕೃಷ್ಣ ಬಂದುದು ವನವಾಸ-ಅಜ್ಞಾತವಾಸಗಳ ನಂತರ ಕುರುಕ್ಷೇತ್ರ ಸಂಭವಿಸಿದ್ದು ಇದೆಲ್ಲ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತೇ ಇರುತ್ತದೆ.

ಜೂಜುಕೋರತನ ರಕ್ತಕ್ಕಂಟಿಕೊಂಡವನು ಗೆದ್ದರೆ ಇನ್ನಷ್ಟು, ಮತ್ತಷ್ಟು ಗೆಲ್ಲಬೇಕೆಂದು ಜೂಜಾಡುತ್ತಲೇ ಇರುತ್ತಾನೆ. ಸೋತವನು ಸೋತದ್ದನ್ನೆಲ್ಲ ಮರಳಿ ಪಡೆಯಬೇಕೆನ್ನುವ ಹಂಬಲದಿಂದ ತನ್ನ ಬಳಿ ಇದ್ದುದ್ದನ್ನೆಲ್ಲ ಪಣಕ್ಕೊಡ್ಡುತ್ತಲೇ ಹೋಗುತ್ತಾನೆ.

ಜೂಜಿನಲ್ಲಿ ಹಲವು ಬಗೆ. ಪಗಡೆ, ದಾಳ, ಇಸ್ಪೀಟು, ಕುದುರೆ ಜೂಜು ಇತ್ತೀಚಿನ ದಿನಗಳಲ್ಲಿ ಕ್ಯಾಸಿನೋ, ಲಾಟರಿ, ಮಟಕಾ ಇತ್ಯಾದಿ ಹೀಗೆ ಜೂಜಿನದು ಶತಾವತಾರ.

ಇಷ್ಟೆಲ್ಲ ವಿಧದ ಜೂಜುಗಳಲ್ಲಿ ಹೆಚ್ಚು ಜನಪ್ರಿಯವೂ ಜಗದ್ವ್ಯಾಪಿಯೂ ಆದುದೆಂದರೆ ಇಸ್ಪೀಟ್. ಈ ಆಟಕ್ಕೆ ಬಳಸಲಾಗುತ್ತಿರುವ ಇಸ್ಪೀಟೆಲೆಗಳಿಗೆ ಸಂಬಂಧಿಸಿದಂತೆ ಕೆಲವು ಮೋಜಿನ ಸಂಗತಿಗಳನ್ನು ತಿಳಿಯಪಡಿಸುವುದು ಈ ಲೇಖನದ ಉದ್ದೇಶ.

ಇತಿಹಾಸ

ಇಸ್ಪೀಟೆಲೆಗಳಿಗೆ ಸಾವಿರದ ನಾಲ್ಕುನೂರು ವರ್ಷಗಳ ಸುದೀರ್ಘ ಇತಿಹಾಸವಿದೆ. ಕೆಲ ಲಭ್ಯ ಐತಿಹಾಸಿಕ ದಾಖಲೆಗಳು ಇಸ್ಪೀಟಾಟದ ಕಾಲವನ್ನು



ಕ್ರಿಸ್ತಶಕ ಆರನೇ ಶತಮಾನದಷ್ಟು ಹಿಂದಕ್ಕೆ ಒಯ್ಯುತ್ತವೆ. ಆದರೆ ಇಸ್ಪೀಟಾಟ ಮೊದಲು ಆರಂಭವಾದುದೆಲ್ಲಿ? ಇಸ್ಪೀಟೆಲೆಗಳನ್ನು ಮೊದಲು ತಯಾರಿಸಿದುದೆಲ್ಲಿ ಎಂಬುದನ್ನು ಅಷ್ಟು ಖಚಿತವಾಗಿ ಹೇಳಲಾಗದೆನ್ನಲಾಗುತ್ತಿದೆ. ಇಷ್ಟಂತೂ ನಿರ್ವಿವಾದ. ಇಸ್ಪೀಟೆಲೆಗಳು ಮೊದಲು ಬಳಕೆಗೆ ಬಂದುದು ಭಾರತದಲ್ಲಿ ಅಥವಾ ಚೀನಾದಲ್ಲಿ.

ಚೀನೀ ವಿಶ್ವಜ್ಞಾನ ಕೋಶದ (೧೭ನೆಯ ಶತಮಾನದ್ದು)ಪ್ರಕಾರ ಚೀನಾದಲ್ಲಿ ಕ್ರಿಸ್ತಶಕ ೧೧೨೦ರಲ್ಲಿ ಆಗಿನ ಚಕ್ರವರ್ತಿ ಯಮುನ್ ಹೋ ತನ್ನ ಉಪಪತ್ನಿಯರೊಂದಿಗೆ ವಿನೋದಾರ್ಥವಾಗಿ ಆಡಲೆಂದು ಈ ಇಸ್ಪೀಟೆಲೆಗಳನ್ನು ಸೃಷ್ಟಿಸಲಾಯಿತೆಂದು ಹೇಳಲಾಗಿದೆ. ಆದರೆ ಇದು ಅಷ್ಟಾಗಿ ನಂಬಲರ್ಹವಲ್ಲ. ಲಭ್ಯವಾಗಿರುವ ಅನೇಕ ಆಧಾರ, ಪುರಾವೆಗಳ ಮೇಲಿಂದ ಕ್ರಿಸ್ತಶಕ ೮-೯ನೇ ಶತಮಾನಗಳಲ್ಲಿಯೇ ಭಾರತದಲ್ಲಿ ಇಸ್ಪೀಟೆಲೆಗಳು ಬಳಕೆಯಲ್ಲಿದ್ದವೆನ್ನುವವರೂ ಉಂಟು. ಒಟ್ಟಿನಲ್ಲಿ ಇಸ್ಪೀಟಾಟ ಹಾಗೂ ಇಸ್ಪೀಟೆಲೆಗಳ ತವರು ಭಾರತ ಎನ್ನುವ ಹೆಮ್ಮೆ(?) ನಮ್ಮದಾಗಬಹುದು. ಇಲ್ಲಿಂದ ಇಸ್ಪೀಟಾಟ ಇತರ ದೇಶಗಳಿಗೆ ಹರಡಿರಬಹುದು.

ಹುಚ್ಚ ಚಾರ್ಲ್ಸ್

ಯೂರೋಪ್ ದೇಶಗಳಿಗೆ ಕ್ರಿಸ್ತಶಕ ೧೩, ೧೪ನೇ ಶತಮಾನಗಳವರೆಗೂ ಇಸ್ಪೀಟಾಟದ ಬಗ್ಗೆಯಾಗಲಿ, ಇಸ್ಪೀಟೆಲೆಗಳ ಬಗ್ಗೆಯಾಗಲಿ ಗೊತ್ತಿರಲೇ ಇಲ್ಲ. ಆದರೆ ಚೀನಾದಲ್ಲಿರುವಂತೆ ಯೂರೋಪಿನಲ್ಲೂ ಒಂದು ಕಥೆ ಪ್ರಚಾರದಲ್ಲಿದೆ. ಈ ಕಥೆಯ ಪ್ರಕಾರ ಕ್ರಿಸ್ತಶಕ ೧೪ನೇ ಶತಮಾನದಲ್ಲಿ ಫ್ರಾನ್ಸ್ ದೇಶವನ್ನು ಆಳುತ್ತಿದ್ದ ಚಕ್ರವರ್ತಿ ಆರನೇ ಚಾರ್ಲ್ಸ್‌ನಿಗೆ ಹೊತ್ತು ಕಳೆಯುವ ಸಾಧನವಾಗಿ ಇಸ್ಪೀಟೆಲೆಗಳನ್ನು ಕಂಡು ಹಿಡಿಯಲಾಯಿತೆನ್ನಲಾಗಿದೆ. ಆರನೇ ಚಾರ್ಲ್ಸ್ ಮುಗ್ಧ ತುಸು ಮೊದ್ದು ಎನ್ನುವ ಪ್ರತೀತಿ ಇತ್ತು. ಇವನನ್ನು 'ಹುಚ್ಚ ಚಾರ್ಲ್ಸ್' ಎನ್ನುತ್ತಿದ್ದರು.

ಈ ಚಾರ್ಲ್ಸ್‌ನನ್ನು ಅವನ ಬಂಧುಗಳು ಎಲ್ಲ ಚಟಗಳಿಗೆ ದಾಸನನ್ನಾಗಿ ಮಾಡಿ, ಮೋಸದಿಂದ ಅವನ ಖಜಾನೆಯಲ್ಲಿನ ಆಸ್ತಿಯನ್ನೆಲ್ಲವನ್ನೂ ದೋಚಿದರೆಂಬುದು ಇತಿಹಾಸ ತಿಳಿಸುವ ವಿಷಯ. ಆದರೆ ಇವನಿಗಾಗಿಯೇ ಇಸ್ಪೀಟಾಟವನ್ನು ಇಸ್ಪೀಟೆಲೆಗಳನ್ನು ಕಂಡು ಹಿಡಿಯಲಾಯಿತೆನ್ನುವುದು ಕೇವಲ ಅತಿಶಯೋಕ್ತಿ. ಚಾರ್ಲ್ಸ್‌ನ ಬಂಧುಗಳು ಅಷ್ಟೊತ್ತಿಗಾಗಲೇ ಇತರ ದೇಶಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದ್ದ ಇಸ್ಪೀಟಾಟವನ್ನು ಕಂಡು ಆತನಿಗೂ ಅದರ ಚಟವನ್ನು ಅಂಟಿಸಿದ್ದಿರಬೇಕೆನ್ನುವ ವಾದ ಹೆಚ್ಚು ಸಮಂಜಸ.

ಯೂರೋಪಿನ ಸನಾತನಿಗಳ ಅಭಿಪ್ರಾಯದಂತೆ ಇಸ್ಪೀಟೆಲೆಗಳನ್ನು ಸೃಷ್ಟಿಸಿದ್ದು ದೆವ್ವಗಳು. ಮಾನವರಿಂದ ಇಸ್ಪೀಟಾಟವೆನ್ನುವ ಕೆಟ್ಟ ಕೆಲಸವನ್ನು ಮಾಡಿಸಿ ನರಕಕ್ಕೆ ತಳ್ಳಬೇಕೆಂದೇ ದೆವ್ವಗಳು ಈ ಕೆಲಸ ಮಾಡಿದವೆಂಬುದು ಅಂಥವರ ಅಂಬೋಣವಾಗಿತ್ತು. ಇದಕ್ಕೆ ಅನುಗುಣವಾಗಿ ಚರ್ಚಿನ ಅಧಿಕಾರಿಗಳು ಕೂಡ ಇಸ್ಪೀಟಾಡುವವರಿಗೆ ಪಾಪಿಗಳೆನ್ನುವ





ಪಟ್ಟಕಟ್ಟಿ ಮತದಿಂದ ಬಹಿಷ್ಕರಿಸುತ್ತಿದ್ದರು. ಆದರೆ ಕಟ್ಟಳೆ ನಿಷೇಧ ಶಿಕ್ಷೆಯ ಭಯ ಯಾವುದೂ ಇಸ್ಪೀಟಾಟದ ಚಟವನ್ನು ನಿಯಂತ್ರಿಸಲು ಶಕ್ತವಾಗ ಲಿಲ್ಲ. ಧರ್ಮಾಧಿಕಾರಿಗಳೇ ತಮ್ಮ ಧೋರಣೆಯನ್ನು ಬದಲಾಯಿಸಿಕೊಳ್ಳಬೇಕಾಯಿತು. ನಂತರ ಅವರು ಇಸ್ಪೀಟಾಟಕ್ಕೆ ಸಂಬಂಧಿಸಿದಂತೆ ಯಾವ ರೀತಿಯ ಹಸ್ತಕ್ಷೇಪ ಮಾಡಲಿಲ್ಲ.

ಹಲವು ಅವತಾರಗಳು

ಇಂದು ನಾವು ನೋಡುತ್ತಿರುವ ಇಸ್ಪೀಟೆಲೆಗಳು ಒಂದೊಂದು ಸೆಟ್‌ನಲ್ಲಿ ಹದಿಮೂರರಂತೆ ನಾಲ್ಕು ಸೆಟ್‌ಗಳಲ್ಲಿ ಒಟ್ಟು ಐವತ್ತೆರಡು; ಜತೆಗೊಂದು ಜೋಕರ್ ಎಲೆ ಹೀಗಿವೆ.

ಆದರೆ ಆರಂಭಿಕ ಹಂತದಲ್ಲಿ ಈ ಇಸ್ಪೀಟೆಲೆಗಳ ಸ್ವರೂಪವೇ ಬೇರೆ ಇತ್ತು. ಇವು ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ರೀತಿ ಬಳಕೆಯಲ್ಲಿದ್ದವು. ಕೆಲ ಪ್ರದೇಶಗಳಲ್ಲಿ ೭೨ ಎಲೆಗಳು ಸೇರಿ ಒಂದು ಸೆಟ್ ಎಂಬುದಾಗಿ ಪರಿಗಣಿಸಲಾಗುತ್ತಿತ್ತು. ಉದಾ ಹರಣೆಗೆ ನಮ್ಮ ದೇಶದಲ್ಲಿ ಒಂದೊಂದು ಎಲೆ ಹತ್ತು ಸೆಟ್‌ಗಳದ್ದಾಗಿರುತ್ತಿದ್ದು. 'ಗಾಂಜೀಫಾ' ಎಂದು ಕರೆಯಲ್ಪಡುತ್ತಿದ್ದ ಅವುಗಳ ಮೇಲೆ ಭಗವಂತನ ದಶಾವತಾರಗಳನ್ನೂ ಚಿತ್ರಿಸಲಾಗಿರುತ್ತಿತ್ತು. ಆ ಕಾಲ ದಲ್ಲಿ ಮುದ್ರಣ ಯಂತ್ರವೇ ಅಪರಿಚಿತ. ಹೀಗಾಗಿ ಕಲಾವಿದರು ರಟ್ಟಿನ ತುಂಡು, ತೆಳುವಾದ ಮರದ ಹಲಗೆ ಅಥವಾ ದಂತದ ಹಾಳೆಯ ಮೇಲೆ ಚಿತ್ರಗಳನ್ನು ಬರೆಯುತ್ತಿದ್ದರು. ಇಂಥ ಎಲೆಗಳು ಬಗೆಬಗೆಯ ಆಕಾರದಲ್ಲಿರುತ್ತಿದ್ದವು.

ಇಂಥ ಎಲೆಗಳ ಬೆಲೆಯೂ ತುಂಬಾ ದುಬಾರಿ ಯಾಗಿರುತ್ತಿತ್ತಾದ್ದರಿಂದ ಆ ಕಾಲದಲ್ಲಿ ಧನಿಕರಷ್ಟೇ ಇಸ್ಪೀಟಾಟವನ್ನು ಆಡಬಲ್ಲವರಾಗಿದ್ದರು.

ಇಸ್ಪೀಟಾಟಕ್ಕೆ ಮರಣ ದಂಡನೆ

ಕ್ರಿಸ್ತಶಕ ೧೪೬೩ರಲ್ಲಿ ರಾಜವಂಶದವರನ್ನು ಹೊರತುಪಡಿಸಿ ಉಳಿದ ಜನ ಸಾಮಾನ್ಯರು ಇಸ್ಪೀಟು ಆಡಕೂಡದೆನ್ನುವ ಕಾನೂನನ್ನು ಬ್ರಿಟನ್ನಿ ನಲ್ಲಿ ತರಲಾಗಿತ್ತು. ಆದರೆ ವರ್ಷದಲ್ಲೊಂದು ದಿನ ಕ್ರಿಸ್ಮಸ್ ದಿನದಂದು ಮಾತ್ರ ಜನಸಾಮಾನ್ಯರೆಲ್ಲರೂ ಇಸ್ಪೀಟು ಆಡಬಹುದೆಂದು ಕಾನೂನು ಸಮ್ಮತಿ ವಿನಾಯಿತಿ ಕಲ್ಪಿಸಲಾಗಿತ್ತು. ಆದರೆ, ಹೆಚ್ಚುತ್ತಿದ್ದ ಇಸ್ಪೀಟಾಟದ ಜನಪ್ರಿಯತೆಯನ್ನು ತಡೆಯಲು ಕಾನೂನಿಗಾಗಲಿ, ಸರ್ಕಾರಕ್ಕಾಗಲಿ ಸಾಧ್ಯವಾಗಲಿಲ್ಲ.

ಈ ಕ್ರಮ ಅಷ್ಟು ಉಪಯುಕ್ತವಲ್ಲ ಎಂಬುದನ್ನು ಮನಗಂಡು ಇಸ್ಪೀಟೆಲೆಗಳ ತಯಾರಿಕೆಯ ಮೇಲೆ ವಿಪರೀತ ತೆರಿಗೆ ವಿಧಿಸಲಾಯ್ತು. ಆದರೂ ಇಸ್ಪೀ ಟಾಟದ ಹುಚ್ಚು ಕುಗ್ಗಲಿಲ್ಲ. ಇಸ್ಪೀಟೆಲೆಗಳ ತಯಾ ರಿಕೆಯನ್ನೇ ನಿಷೇಧಿಸಲಾಯಿತು. ಇದರಿಂದಾಗಿ ಇಸ್ಪೀಟೆಲೆಗಳ ಕಳ್ಳ ಜಾಸ್ತಿಯಾಯ್ತು. ಸರಕಾರ ಮತ್ತಷ್ಟು ಕಠಿಣ ಕ್ರಮಕ್ಕೆಳಸಿತು. ಕಳ್ಳತನದಲ್ಲಿ ಇಸ್ಪೀ ಟೆಲೆ ತಯಾರು ಮಾಡುವವರಿಗೆ, ಆಡುವವರಿಗೆ ಆದು ಅವರ ಮೊದಲನೆ ತಪ್ಪಾಗಿದ್ದರೆ ಕೊರಡು ಹೊತ್ತುಕೊಂಡು ನಿಲ್ಲುವ ಶಿಕ್ಷೆ ವಿಧಿಸುತ್ತಿದ್ದರು. ಪುನಃ ಅದೇ ತಪ್ಪನ್ನು ಮಾಡಿ ಸಿಕ್ಕಿಬಿದ್ದವರಿಗೆ ಮರಣ ದಂಡನೆಯನ್ನು ವಿಧಿಸಲಾಗುತ್ತಿತ್ತು.





ಇಷ್ಟೆಲ್ಲ ಕಟ್ಟುಪಾಡುಗಳಿದ್ದರೂ ಇಸ್ಪೀಟಾಟ ಆಡುವ ಪ್ರಮಾಣ ಕುಗ್ಗುವ ಬದಲು ಅದು ಮತ್ತಷ್ಟು ಜನಪ್ರಿಯವಾಗತೊಡಗಿತು. ಕೊನೆಗೆ ಸರಕಾರವೇ ಬೇಸತ್ತು ಕೆಲ ದಿನಗಳ ನಂತರ ಇಸ್ಪೀಟಾಟದ ಮೇಲಿನ ಕಟ್ಟಲೆಗಳೆಲ್ಲವನ್ನೂ ಕ್ರಮೇಣ ಒಂದೊಂದಾಗಿ ರದ್ದುಗೊಳಿಸಿತು. ಇಷ್ಟೇ ಅಲ್ಲದೆ ಕ್ರಿಸ್ತಶಕ ೧೮೩೨ರಲ್ಲಿ ಥಾಮಸ್ ಡಿಲಾರ್ ಎನ್ನುವವನಿಗೆ ಇಸ್ಪೀಟೆಲೆಗಳನ್ನು ಮುದ್ರಣ ಯಂತ್ರದಲ್ಲಿ ಮುದ್ರಿಸಿ ತಯಾರಿಸಲು ಅಧಿಕೃತ ಪರವಾನಿಗೆಯನ್ನೂ ಕೊಟ್ಟಿತು. ಈತನೇ ಜಗತ್ತಿನಲ್ಲಿ ಮೊದಲ ಬಾರಿಗೆ ಇಸ್ಪೀಟೆಲೆಗಳನ್ನು ಮುದ್ರಿಸಿದ ವ್ಯಕ್ತಿ.

ರಾಜಾ,ರಾಣಿ,ಜಾಕಿ,ಜೋಕರ್ ಕಥೆ

ಈಗ ಬಳಕೆಯಲ್ಲಿರುವ ಎಲೆಗಳನ್ನು ಹೋಲುತ್ತಿದ್ದ ಇಸ್ಪೀಟೆಲೆಗಳು ಬಳಕೆಗೆ ಬಂದು ೧೫೦ ವರ್ಷಗಳಿಗಿಂತಲೂ ಜಾಸ್ತಿ ಕಾಲವಾಗಿಲ್ಲ. ಮೊದಲಲ್ಲಿ ಈ ಇಸ್ಪೀಟೆಲೆಗಳು ೧೪ ಎಲೆಗಳಂತೆ ಒಟ್ಟು ೪ ಸೆಟ್‌ಗಳಲ್ಲಿ ೫೬ ಎಲೆಗಳಿರುತ್ತಿದ್ದವು. ರಾಜ, ರಾಣಿ ಈಗಿರುವಂತೆಯೇ ಇದ್ದವು. ಜಾಕಿ ಮಾತ್ರ ಆಗ ಇರಲಿಲ್ಲ. ಜಾಕಿಯ ಬದಲಾಗಿ 'ನೈಟ್' (Knight - ಸರದಾರ) ಎಲೆ ಇರುತ್ತಿತ್ತು. ನಂತರದ ದಿನಗಳಲ್ಲಿ 'ನೈಟ್'ನ ಬದಲಾಗಿ ಜಾಕಿಯನ್ನು ಬಳಕೆಗೆ ತರಲಾಯ್ತು. ಜಾಕಿ ಎಂದರೆ 'ಗುಲಾಮ' ಎಂದರ್ಥ.


ಈಗಿರುವ ೧೦, ೯, ೮, ೭,... ಮುಂತಾದ ಅಂಕಿಗಳನ್ನುಳ್ಳ ಎಲೆಗಳು ಆಗಲೂ ಹೀಗೆಯೇ ಇದ್ದವು. ಭಾರತದಲ್ಲಿ ಮಾತ್ರ ಈ ಅಂಕಿಗಳುಳ್ಳ ಎಲೆಗಳ ಮೇಲೆ ಕಲಾವಿದರು ಸೂರ್ಯ, ಚಂದ್ರ, ಅದೃಷ್ಟ ಚಕ್ರ, ಮೃತ್ಯುದೇವತೆ ಮುಂತಾದ ಚಿತ್ರಗಳನ್ನು ಬರೆದಿರುತ್ತಿದ್ದರು.

ಈಗ ಹೆಚ್ಚುವರಿ ಎಲೆಯಾಗಿರುವ 'ಜೋಕರ್'ಅನ್ನು ಹಿಂದೆ 'ಲೀಪೆ' ಎನ್ನುತ್ತಿದ್ದುದುಂಟು. ಫ್ರೆಂಚ್ ಭಾಷೆಯ ಈ ಪದಕ್ಕೆ ಅರ್ಥ 'ವಿದೂಷಕ' ಎಂದು.

ಕ್ರಿಸ್ತಶಕ ೧೮೭೦ಕ್ಕೆ ಮುನ್ನ ರಾಜ, ರಾಣಿ, ಜಾಕಿಯರಿಗೆ ಒಂದೊಂದೇ ತಲೆ ಇತ್ತು. ನಂತರವೇ ಎಲೆಗಳನ್ನು ಯಾವ ರೀತಿ ಹಿಡಿದುಕೊಂಡರೂ ಅನುಕೂಲವಾಗುವಂತೆ ಎರಡೂ ಕಡೆ ತಲೆಗಳನ್ನು ಮುದ್ರಿಸುವ ಪರಿಪಾಠ ಬಳಕೆಗೆ ಬಂದದ್ದು.

ಕ್ರಿಸ್ತಶಕ ೧೮೫೦ಕ್ಕೆ ಮುನ್ನ ಎಲೆಗಳ ಹಿಂಭಾಗದಲ್ಲಿ ಯಾವುದೇ ಬಗೆಯ ವಿನ್ಯಾಸಗಳಿರಲಿಲ್ಲ. ಬರೀ ಬಿಳಿ ಭಾಗ ಮಾತ್ರ ಇರುತ್ತಿತ್ತು. ಇದರಿಂದಾಗಿ ಹಲವಾರು ರೀತಿಯಲ್ಲಿ ಮೋಸಮಾಡಲು ಅವಕಾಶವಿದೆ ಎನ್ನುವುದು ಗ್ರಹಿಕೆಗೆ ಬಂದ ನಂತರ ಎಲೆಗಳ ಹಿಂಭಾಗದಲ್ಲಿ ಬಗೆಬಗೆಯ ವಿನ್ಯಾಸಗಳನ್ನು ಮುದ್ರಿಸುವ ರೂಢಿಯೂ ಬಳಕೆಗೆ ಬಂತು.

ಇಸ್ಪೀಟೆಲೆಗಳಲ್ಲಿರುವ ನಾಲ್ವರು ರಾಜರು ಇತಿಹಾಸ ಪ್ರಸಿದ್ಧರಾದ ನಾಲ್ವರು ಚಕ್ರವರ್ತಿಗಳ ಪ್ರತಿರೂಪವೆಂಬುದಾಗಿ ಯೂರೋಪಿಯನ್ನರ ನಂಬಿಕೆ. ಆ ಚಕ್ರವರ್ತಿಗಳು ಜ್ಯೂಲಿಯಸ್ ಸೀಜರ್, ಚಾರ್ಲ



ಮ್ಯಾಗ್ನಿ ಅಲೆಕ್ಸಾಂಡರ್ ಹಾಗೂ ಡೇವಿಡ್ (ವಿವರ ಗಳಿಗೆ ಬಾಕ್ಸ್ ನೋಡಿ). ನಾಲ್ವರು ರಾಣಿಯರು ಈ ಚಕ್ರವರ್ತಿಗಳ ಪತ್ನಿಯರೆನ್ನುವ ನಂಬಿಕೆಯೂ ಉಂಟು.

ಫ್ರೆಂಚ್ ಕ್ರಾಂತಿಯ ನಂತರ ಫ್ರಾನ್ಸ್ ದೇಶದಲ್ಲಿ ಇಸ್ಪೀಟೆಲೆಗಳ ಮೇಲೆ ರಾಜ, ರಾಣಿ, ಜಾಕಿಯರ ಬದಲಾಗಿ ಕ್ರಾಂತಿಕಾರರ ಆಶಯಗಳಾಗಿದ್ದ ಸಮಾನತೆ, ಸ್ವೇಚ್ಛೆ, ಸಹಭ್ರಾತೃತ್ವದ ಚಿಹ್ನೆಗಳನ್ನು ಮುದ್ರಿಸಿ ಬಳಕೆಗೆ ತಂದರು. ಅದೇ ರೀತಿ ರಶಿಯದಲ್ಲಿಯೂ ಕಮ್ಯೂನಿಸ್ಟರು ಕ್ರಾಂತಿಯ ನಂತರ ರಾಜ-ರಾಣಿಯರ ಚಿತ್ರಗಳನ್ನು ರದ್ದು ಮಾಡಿ ಕಮ್ಯೂನಿಸ್ಟ್ ನಾಯಕರ ಚಿತ್ರಗಳನ್ನು ಮುದ್ರಿಸಿ ಬೆಳಕಿಗೆ ತಂದರು. ಆದರೆ ಈ ಪ್ರಯತ್ನಗಳಾವವೂ ಫಲ ನೀಡಲಿಲ್ಲ. ಇಸ್ಪೀಟೆಲೆಗಳ ಈ ಹೊಸರೂಪಗಳನ್ನು ಅಲ್ಲಿಯ ಜನ ಸ್ವೀಕರಿಸಲಿಲ್ಲ. ಆದರಿಂದಾಗಿ ಮತ್ತೆ ಯಥಾಪ್ರಕಾರ ರಾಜ, ರಾಣಿ, ಜಾಕಿಯರೇ ಇಸ್ಪೀಟೆಲೆಗಳ ಮೇಲೆ ರಾರಾಜಿಸುವಂತಾಯಿತು.

ಚೌಕಾನಿ (ಡೈಮಂಡ್) ಒಂಬತ್ತರ ವೈಶಿಷ್ಟ್ಯ

ಇಸ್ಪೀಟೆಲೆಗಳಲ್ಲಿ ಚೌಕಾನಿ (ಡೈಮಂಡ್) ಒಂಬತ್ತಕ್ಕೆ ಒಂದು ವಿಶಿಷ್ಟ ಇತಿಹಾಸವಿದೆ. ಸ್ಕಾಟ್‌ಲೆಂಡಿನ ಪ್ರಜೆಗಳಿಗೆ ಈ ಎಲೆಯ ಮೇಲೆ ವಿಪರೀತ ದ್ವೇಷ. ಚೌಕಾನಿ ೯ ತಮಗೆ ಹಲವು ಕಷ್ಟ-ನಷ್ಟಗಳನ್ನು ತಂದೊಡ್ಡಿದೆ ಎನ್ನುವುದು ಅವರ ಭಾವನೆ. ಹೇಗೆಂದರೆ ಕುಲೋಡಿ ಯುದ್ಧದಲ್ಲಿ ಸ್ಕಾಟ್‌ಲೆಂಡ್ ಬ್ರಿಟನ್ನಿನ ಕೈಯಲ್ಲಿ ಸೋಲನುಭವಿಸಿತು. ತನ್ನ ಸೈನ್ಯ ಸ್ಕಾಟ್‌ಲೆಂಡಿನ ಮೇಲೆ ವಿಜಯಸಾಧಿಸಿತೆನ್ನುವ ಸುದ್ದಿ ಕೇಳಿದಾಗ ಬ್ರಿಟನ್ನಿನ ದೊರೆ ಇಸ್ಪೀಡಾಟುತ್ತ ಕುಳಿತಿದ್ದನಂತೆ. ತನ್ನ ಸೈನ್ಯ ಗೆದ್ದ ಸುದ್ದಿ ಕೇಳಿದವನೇ ಆ ಸಮಯದಲ್ಲಿ ಕೈಯಲ್ಲಿ ಹಿಡಿದಿದ್ದ ಇಸ್ಪೀಟೆಲೆಯೊಂದರ ಮೇಲೆ "ಸೆರೆ ಸಿಕ್ಕಿರುವ ಸ್ಕಾಟಿಶ್ ಸೈನಿಕರನ್ನೆಲ್ಲ ವಧೆಮಾಡಿ" ಎಂಬುದಾಗಿ ಫರ್ಮಾನು ಬರೆದು ಕೊಟ್ಟನಂತೆ. ಆ ಎಲೆಯೇ ಚೌಕಾನಿ ಒಂಬತ್ತು!

ಈ ರೀತಿ ಡೈಮಂಡ್ ಒಂಬತ್ತು ನೂರಾರು ಜನ ಸ್ಕಾಟಿಶ್ ಸೈನಿಕರ ಸಾವಿಗೆ ಕಾರಣವಾಯಿತಂತೆ.

ಸ್ಕಾಟ್‌ಲೆಂಡಿನವರ ದ್ವೇಷಕ್ಕೆ ಇನ್ನೊಂದು ಕಾರಣ ಡೈಮಂಡ್ ಒಂಬತ್ತರಿಂದಾಗಿ ಸ್ಕಾಟ್‌ಲೆಂಡಿನಲ್ಲಿ ಹಲವಾರು ಶ್ರೀಮಂತ ಕುಟುಂಬಗಳು ಸರ್ವನಾಶವಾದುವಂತೆ. ಅದು ಹೇಗೆಂದರೆ ಹಿಂದೆ ಆ ದೇಶದಲ್ಲಿ 'ಕ್ಯಾಮೆಟಿಲ್' ಎನ್ನುವ ಆಟವನ್ನು ಇಸ್ಪೀಟೆಲೆಗಳಿಂದ ಆಡಲಾಗುತ್ತಿತ್ತು. ಈ ಆಟದಲ್ಲಿ ಡೈಮಂಡ್ ಒಂಬತ್ತಕ್ಕೆ ಉಳಿದೆಲ್ಲವಕ್ಕಿಂತಲೂ ಹೆಚ್ಚು ಬೆಲೆ. ಈ ಎಲೆ ಬಂದವರು ಹೆಚ್ಚು ಕಮ್ಮಿ ಗೆದ್ದಂತೆಯೇ. ಈ ಕ್ಯಾಮೆಟಿಲ್ ಆಟದ ಹುಚ್ಚು ಅಂದಿನ ಸ್ಕಾಟ್‌ಲೆಂಡಿನಲ್ಲಿ ಎಷ್ಟು ಮಿತಿಮೀರಿತ್ತೆಂದರೆ ಜನ ಈ ಆಟದಲ್ಲಿ

ಕಳಾವರ್ ರಾಜ ಯಾರು ಗೊತ್ತೆ?

ಖಚಿತವಾಗಿ ಹೇಳಲಾಗದಿದ್ದರೂ ಇಸ್ಪೀಟಾಟವೆನ್ನುವುದು ಮಧ್ಯಯುಗದಿಂದ ಪ್ರಾರಂಭವಾಗಿದೆ ಎನ್ನಬಹುದು. ಅಂದಿನಿಂದ ಇಂದಿನವರೆಗೂ ಇಸ್ಪೀಟೆಲೆಗಳಲ್ಲಿರುವ ವಿನ್ಯಾಸಗಳಲ್ಲಿ (designs) ಮಾತ್ರ ಯಾವ ಬದಲಾವಣೆಯೂ ಆಗಿಲ್ಲವಂತೆ.

ಅವು ಇಸ್ಪೀಟ್ ಆಠೀನು (ಕುಂಬಳ), ಕಳಾವರ್, ಚೌಕಾನಿ (Diamond) ಇಸ್ಪೀಟೆಲೆಗಳ ಮೇಲಿರುವ ರಾಜರ ಚಿತ್ರಗಳು ಮಧ್ಯಯುಗಗಳಲ್ಲಿ ಜೀವಿಸಿದ್ದ ಪ್ರಸಿದ್ಧ ಚಕ್ರವರ್ತಿಗಳವು.

* ಆಠೀನು ರಾಜ: ಚಕ್ರವರ್ತಿ ಚಾರ್ಲ್‌ಮನ್ (Charle magne). ಈತ ಕ್ರಿಸ್ತಶಕ ೮೦೦ರಲ್ಲಿ ರೋಮನ್ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸಿದ.

*ಚೌಕಾನಿ ರಾಜ: ಚಕ್ರವರ್ತಿ ಜ್ಯೂಲಿಯಸ್ ಸೀಜರ್ ಇವನ ಕೈಯಲ್ಲಿ ಕತ್ತಿಯ ಜೊತೆಗೆ ಕೊಡಲಿಯೂ ಇರುತ್ತದೆ.

* ಇಸ್ಪೀಟ್ ರಾಜ: ಚಕ್ರವರ್ತಿ ಡೇವಿಡ್. ಈತ ಗೋಲಿಯೆತ್ ಚಕ್ರವರ್ತಿಯನ್ನು ಕೊಂದು ಇಸ್ರೇಲ್ ರಾಜ್ಯವನ್ನು ಪರಿಪಾಲಿಸಿದ.

* ಕಳಾವರ್ ರಾಜ: ಸುಪ್ರಸಿದ್ಧ ಚಕ್ರವರ್ತಿ ಅಲೆಕ್ಸಾಂಡರ್ ದಿ ಗ್ರೇಟ್.

ಲಕ್ಷಗಟ್ಟಲೆ ಆಸ್ತಿಯನ್ನು ಪಣವಾಗಿ ಒಡ್ಡುತ್ತಿದ್ದರು. ಇದರಿಂದಾಗಿ ಅನೇಕ ಶ್ರೀಮಂತ ಮನೆತನಗಳು ಹೇಳ ಹೆಸರಿಲ್ಲದಂತೆ ಮಣ್ಣುಗೂಡಿ ಹೋದ ವಂತೆ. ಆದ್ದರಿಂದ ಅಲ್ಲಿನ ಪ್ರಜೆಗಳು ಡೈಮಂಡ್ ಒಂಬತ್ತನ್ನು 'ಸ್ಕಾಟ್‌ಲೆಂಡಿನ ಶಾಪ'ವೆಂದು ಭಾವಿ ಸುತ್ತಾರೆ.

ಇಸ್ಪೀಟಾಟದ ಹುಚ್ಚು

೧೮, ೧೯ನೇ ಶತಮಾನಗಳಲ್ಲಿ ಯೂರೋಪ್ ಅಮೆರಿಕಗಳಲ್ಲಿ ಇಸ್ಪೀಟಾಟದ ಹುಚ್ಚು ಅತಿರೇಕವೆನ್ನುವ ಮಟ್ಟ ತಲುಪಿತ್ತು. ಜನ ಊಹೆಗೂ ನಿಲುಕದಷ್ಟು ಧನವನ್ನು ಪಣಕ್ಕೊಡ್ಡುತ್ತಿದ್ದರು. ಈ ಜೂಜಿನ ಹುಚ್ಚಿನಿಂದಾಗಿ ಹಾಳಾದ ಕುಟುಂಬಗಳು ಸಾವಿರಾರು.

ಈ ಇಸ್ಪೀಟಾಟದ ಹುಚ್ಚು ಆಕರ್ಷಣೆ ಎಷ್ಟರ ಮಟ್ಟಿಗಿತ್ತೆಂಬುದಕ್ಕೆ ಕೆಲ ಉದಾಹರಣೆಗಳು:

ಕೆನಡಾದಲ್ಲಿ ಕೆಲ ವರ್ಷ ಇಸ್ಪೀಟೆಲೆಗಳೇ ಪರ್ಯಾಯ ಕರೆನ್ಸಿ ನೋಟುಗಳಾಗಿ ಚಲಾವಣೆಯಾಗುತ್ತಿದ್ದವು!

ಅಮೆರಿಕದಲ್ಲಿನ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯ ಇಸ್ಪೀಟೆಲೆಗಳನ್ನು ಪ್ರವೇಶ ಚೀಟಿ (ಅಡ್ಮಿಶನ್ ಟಿಕೆಟ್)ಗಳೆಂದು ಮಾನ್ಯ ಮಾಡುತ್ತಿತ್ತು!

ಇಟಲಿಯಲ್ಲಿ ಇಸ್ಪೀಟೆಲೆಗಳ ಮೂಲಕ ಮಕ್ಕಳಿಗೆ ಪಾಠ ಹೇಳಲಾಗುತ್ತಿತ್ತು. ಇಸ್ಪೀಟೆಲೆಗಳ ಮೇಲೆ ಪಾಠಗಳನ್ನು ಮುದ್ರಿಸಿ ಮಕ್ಕಳಿಗೆ ಓದಿನ ಬಗ್ಗೆ ಆಸಕ್ತಿ ಉಂಟಾಗುವಂತೆ ಮಾಡಲಾಗುತ್ತಿತ್ತಂತೆ!

ಇನ್ನೂ ಕೆಲವು ವಿಶೇಷಗಳು


ಇಸ್ಪೀಟೆಲೆಗಳಲ್ಲಿ ನಮ್ಮ ಜೀವನಕ್ಕೆ ದೈನಂದಿನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಕೆಲವು ವಿಶೇಷಗಳಿವೆ ಎನ್ನುತ್ತಾರೆ. ಅವುಗಳನ್ನು ಈ ಕೆಳಗಿನಂತೆ ಸೂಚಿಸುತ್ತಾರೆ.

ಸದ್ಯ ಬಳಕೆಯಲ್ಲಿರುವ ಇಸ್ಪೀಟೆಲೆಗಳ ಸೆಟ್‌ನಲ್ಲಿನ ೫೨ ಎಲೆಗಳು ವರ್ಷದಲ್ಲಿನ ೫೨ ವಾರಗಳನ್ನು ಸೂಚಿಸುತ್ತವೆ. ಒಂದೊಂದು ಸೆಟ್‌ನಲ್ಲಿರುವ ೧೩ ಎಲೆಗಳು ಚಂದ್ರಮಾನ ಮಾಸಗಳಿಗೆ ಸಂಕೇತ; ಇನ್ನೂ ೫೨ ಎಲೆಗಳಲ್ಲಿರುವ ಚುಕ್ಕೆಗಳೆಲ್ಲವನ್ನೂ - ಚಿತ್ರಗಳನ್ನೂ, ಜೋಕರ್‌ನನ್ನೂ ಸೇರಿಸಿ ಎಣಿಸಿದರೆ ಅವು ೩೬೫ ಇರುತ್ತವೆ. ಇವು ವರ್ಷದಲ್ಲಿನ ೩೬೫ ದಿನಗಳಿಗೆ ಸಂಕೇತ. ಹಾಗೆಯೇ ಕೆಂಪು ಬಣ್ಣ ಹಗಲನ್ನು ಸೂಚಿಸಿದರೆ, ಕಪ್ಪು ಬಣ್ಣ ರಾತ್ರಿಯನ್ನು ಸಂಕೇತಿಸುತ್ತದಂತೆ!

ಬ್ರಿಟಿಶ್ ಮ್ಯೂಜಿಯಂನಲ್ಲಿ ಪೂರ್ವಕಾಲದಲ್ಲಿ ಬಳಕೆಯಲ್ಲಿದ್ದ ಇಸ್ಪೀಟೆಲೆಗಳ ಮಾದರಿಗಳನ್ನು ನೋಡಬಹುದು.

ಇಂದು ಇಸ್ಪೀಟಾಟ ಜಗತ್ತಿನ ಎಲ್ಲ ದೇಶಗಳಲ್ಲಿ ಬಹುವಾಗಿ ಪ್ರಚಾರದಲ್ಲಿದೆ. ಜನಪ್ರಿಯವೂ ಆಗಿದೆ. ಕುರುಡರು ಆಡಲು ಅನುಕೂಲವಾಗಲೆಂದು ಬ್ರೇಲ್ ಲಿಪಿಯುಳ್ಳ ಇಸ್ಪೀಟೆಲೆಗಳೂ ಬಳಕೆಯಲ್ಲಿವೆ.

(ಆಧಾರ)



ಸ್ವತಂತ್ರ ಭಾರತದಲ್ಲೂ ಆಚರಣೆಗೆ ತರಲು ಸಾಧ್ಯ

-ಟಿ.ಆರ್. ವೆಂಕಟೇಶಮೂರ್ತಿ

ಮುಂಬಯಿ ಹೈಕೋರ್ಟಿನ ಮೊದಲನೇ ಮಹಡಿಯ ಅಟ್ಟ ಹತ್ತುವಾಗ ಮೊದಲನೇ ಮೆಟ್ಟಿಲಿನ ಹತ್ತಿರವಿರುವ ಫಲಕವು ಕಟ್ಟಡ ನಿರ್ಮಾಣದ ವಿವರಗಳನ್ನು ನೀಡುತ್ತದೆ.

ಹೈಕೋರ್ಟು ಕಟ್ಟಡದ ನಿರ್ಮಾಣ ಪ್ರಾರಂಭಿಸಿದ ದಿನ - ಏಪ್ರಿಲ್ ೧, ೧೮೭೧.

ನಿರ್ಮಾಣ ಮುಗಿದ ದಿನ - ನವೆಂಬರ್ ೧೮, ೧೮೭೮

ಮಂಜೂರಾದ ಅಂದಾಜು - ೧೬,೪೭, ೧೯೬ ರೂ.ಗಳು

ತಗಲಿದ ವೆಚ್ಚ - ೧೬, ೪೪, ೫೨೮ ರೂ.

ಈ ಮಾಹಿತಿಯ ಜೊತೆಗೆ ಯೋಜನೆಯನ್ನು ತಯಾರಿಸಿಸದವರು, ಮಂಜೂರಾತಿ ನೀಡಿದವರು ಯಾರೆಂಬುದನ್ನು ಫಲಕದಿಂದಲೇ ತಿಳಿಯಬಹುದಾಗಿದೆ. ಯೋಜನೆಯ ಕಾಲಾವಧಿಯನ್ನು ನಮೂದಿಸದೇ ಇದ್ದರೂ ಯೋಜನೆ ಪೂರ್ಣಗೊಂಡಾಗ ತಗಲಿದ ವೆಚ್ಚ ಅಂದಾಜು ವೆಚ್ಚಕ್ಕಿಂತ ಕಡಿಮೆಯಾಗಿರುವುದರಿಂದ ಯೋಜನೆಯು ಸಕಾಲದಲ್ಲಿ ಪೂರ್ಣವಾಗಿರಬಹುದೆಂದು ಸ್ಪಷ್ಟವಾಗುತ್ತದೆ. ಒಂದು ನೂರ ಹದಿನೇಳು ವರ್ಷದಷ್ಟು ಹಳೆಯದಾಗಿದ್ದರೂ ಇನ್ನೂ ಹಲವಾರು ವರ್ಷ ಉಪಯೋಗಿಸಲು ಬರುವಷ್ಟು ಸುದೃಢವಾಗಿದೆ ಈ ಹೈಕೋರ್ಟು ಭವನ. ಇದೇ ಕಾಲದಲ್ಲಿ ನಿರ್ಮಾಣಗೊಂಡ ಮುಂಬಯಿ ಕಾರ್ಪೊರೇಷನ್ ಕಟ್ಟಡದ ಫಲಕವೂ ಈ ವಿವರಗಳನ್ನೊಳಗೊಂಡಿದೆ. ಈ ಫಲಕಗಳನ್ನು ನೋಡಿದಾಗ ನಮ್ಮ ಗಮನಕ್ಕೆ ಬರುವ ಎರಡು ಮುಖ್ಯ ಅಂಶಗಳೆಂದರೆ ಯೋಜನೆಯಲ್ಲಿ ಭಾಗವಹಿಸಿದ್ದವರ ಪಾರದರ್ಶಿಕತೆ (Transparecny) ಮತ್ತು ಹೊಣೆಗಾರಿಕೆ (Responsibility)ಗಳ ಸ್ಪಷ್ಟ ಆದರ್ಶ. ಇಂತಹ ಅನುಕರಣೀಯ ಆದರ್ಶ ಗುಣಗಳು ಚಲಾವಣೆಯಲ್ಲಿದ್ದುದು ಬ್ರಿಟಿಷರ ವಸಾಹತಾಗಿದ್ದ ಅಸ್ವತಂತ್ರ ಭಾರತದಲ್ಲಿ!

ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಪಾರದರ್ಶಿಕತೆ ಹಾಗೂ ಹೊಣೆಗಾರಿಕೆಗಳ ಅಭಾವ ಉಂಟಾಗಿರುವುದು ಸೋಜಿಗದ ವಿಷಯವಾಗಿದೆ. ಇದಕ್ಕೆ ಕಾರಣ ಹುಡುಕುವುದು ಎಲ್ಲಾ ವಿಚಾರವಂತರ ಕರ್ತವ್ಯ. ಯೋಜನೆ ತಯಾರಿಸುವ ಇಂಜಿನಿಯರ್‌ಗಳು, ಮಂಜೂರಾತಿ ನೀಡುವ ಯೋಜನಾ

ಸಮಿತಿ, ಟೆಂಡರನ್ನು ಪರಿಶೀಲಿಸಿ ಕಾಮಗಾರಿ ನಡೆಸಲು ಅನುಮತಿ ನೀಡುವ ಅಧಿಕಾರಿಗಳು, ಎನ್ ಓಸಿ ಅಥವಾ ನೋ ಅಬ್ಜೆಕ್ಷನ್ ಸರ್ಟಿಫಿಕೆಟ್ ನೀಡುವ ಪರಿಸರ ಇಲಾಖೆ, ಕೈಗಾರಿಕಾ ಇಲಾಖೆ, ಪ್ರಾಕ್ತನ ಸಂರಕ್ಷಣಾ ಇಲಾಖೆ ಮುಂತಾದವುಗಳ ಮಧ್ಯೆ ನಡೆಯುವ ವಿಳಂಬದ ಪೈಪೋಟಿಯಿಂದಾಗಿ ಯೋಜನಾವಧಿಯು ಹೆಚ್ಚಾಗಿ ಯೋಜನೆಗೆ ಬೇಕಾದ ಸರಕುಗಳ ಬೆಲೆ ಮತ್ತು ವೇತನಗಳ ಮೊತ್ತ ಹೆಚ್ಚಾಗಿ ನಿಗದಿತ ಮಂಜೂರು ಖರ್ಚಿಗಿಂತ ಎರಡು ಮೂರರಷ್ಟು ಹೆಚ್ಚಿ ಖರ್ಚು ಬೀಳುತ್ತದೆ. ಯೋಜನಾ ವೆಚ್ಚದಲ್ಲಿ ಪಾಲುಪಡೆಯುವವರ ಸಂಖ್ಯೆಯು ಹೆಚ್ಚದಷ್ಟೂ ನಿರ್ಮಾಣ ಆಗುವ ಕಟ್ಟಡ, ಜಲಾಶಯ, ಸೇತುವೆ ಅಥವಾ ರಸ್ತೆಗಳು ದುರ್ಬಲವಾಗುತ್ತವೆ. ಅಷ್ಟು ಮಟ್ಟಿಗೆ ಪಾರದರ್ಶಿಕತೆ ಹಾಗೂ ಪ್ರಾಮಾಣಿಕ ಹೊಣೆಗಾರಿಕೆಗಳು ಕಡಿಮೆಯಾಗುತ್ತವೆ.

ಪ್ರಜ್ಞಾವಂತ ಪೌರರು ಯೋಜನೆಗಳ ಸತ್ಯಾಸತ್ಯತೆಯನ್ನು ತಿಳಿಯಬಯಸಿ ಸಾರ್ವಜನಿಕ ಹಿತಾಸಕ್ತಿ (Public Interest Litigation) ಮೊಕದ್ದಮೆಗಳನ್ನು ಹೂಡಿದಾಗ, ನ್ಯಾಯಾಲಯಗಳು ಆಡಳಿತ ರಹಸ್ಯ ಕಾಯ್ದೆ (Secrecy of administration act)ಯ ಪ್ರಕಾರ ಸರ್ಕಾರದ ಇಲಾಖೆಗಳಿಗೆ ರಕ್ಷಣೆ ನೀಡುತ್ತವೆ. ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ಸಂಭವಿಸುವ ಅಕ್ರಮಗಳಿಗೆ ರಕ್ಷಣೆ ದೊರೆತು ಪಾರದರ್ಶಿಕತೆ ಮತ್ತು ಹೊಣೆಗಾರಿಕೆಗಳು ಅದೃಶ್ಯವಾಗುತ್ತವೆ.

ಬ್ರಿಟಿಷರ ಕಾಲದಲ್ಲಿ ಪ್ರಚಲಿತವಿದ್ದ ಶಿಲಾಫಲಕದ ಮೇಲೆ ಯೋಜನೆಯ ವಿವರಗಳನ್ನು ಪ್ರಕಟಿಸುವ ಪದ್ಧತಿಯನ್ನು ಸ್ವತಂತ್ರ ಭಾರತದಲ್ಲಿ ಶಾಸನದ ಮೂಲಕ ಕಡ್ಡಾಯಗೊಳಿಸಿ ಅನುಷ್ಠಾನಕ್ಕೆ ತರುವುದು ಅತ್ಯಗತ್ಯವಾಗಿದೆ.

ಬ್ರಿಟಿಷರ ಕಾಲದ (ಅಸ್ವತಂತ್ರ) ಭಾರತದಲ್ಲಿ ಪ್ರಚಲಿತವಾಗಿದ್ದ ಪಾರದರ್ಶಿಕತೆ ಹಾಗೂ ಹೊಣೆಗಾರಿಕೆಯಂತಹ ಆದರ್ಶಗಳನ್ನು ಪುನಃ ಸ್ವತಂತ್ರ ಭಾರತದಲ್ಲಿಯೂ ಆಚರಣೆಗೆ ತರಲು ಸಾಧ್ಯ. ಇದಕ್ಕೆ ಬೇಕಾದ್ದು ತೀವ್ರವಾದ ರಾಜಕೀಯ ಸಂಕಲ್ಪ ಶಕ್ತಿ ಹಾಗೂ ಜನತಾ ಕಲ್ಯಾಣದಲ್ಲಿ ಆಸಕ್ತಿ.

(ವಿವಿಧ ಆಧಾರಗಳಿಂದ)

ಅಚ್ಚಳಿಯದ ಪುಟಗಳು

ಜುಗಾರಿ ಕ್ರಾಸ್

ಈಗಿನ ಪ್ರಪಂಚದಲ್ಲಿ ಸಾಮಾಜಿಕ ಮೌಲ್ಯಗಳು ಕಳೆದು ಅದಕ್ಕೆ ತದ್ವಿರುದ್ಧವಾದ ವ್ಯವಸ್ಥೆಯ ಕೊಂಕು ನೋಟವನ್ನು ವಿಶಿಷ್ಟರೀತಿಯ ಬರಹಗಾರ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಜುಗಾರಿಕ್ರಾಸ್‌ನಲ್ಲಿ ಕಾಣಿಸಿದ್ದಾರೆ.

ಮಟ್ಕಾ-ಓಸಿ ರೀತಿಯ ಜುಗಾರಿಗಳಲ್ಲಂತೂ ಬರೀ ಬಾಯಿಮಾತಿನ ಮೇಲೆ ಲಕ್ಷಾಂತರ ರೂಪಾಯಿಗಳ ವ್ಯವಹಾರ ಅಡೆತಡೆಗಳಿಲ್ಲದೆ ಸಲೀಸಾಗಿ ನಡೆಯುತ್ತಿರುವುದನ್ನು ನೋಡಬಹುದಿತ್ತು. ಯಾವ ರಸೀತಿಯೂ ಇರುತ್ತಿರಲಿಲ್ಲ. ಯಾವ ಸ್ಟಾಂಪ್ ಪೇಪರ್ ಇರುತ್ತಿರಲಿಲ್ಲ. ಹೆಚ್ಚೆಂದರೆ ನಂಬರು ಮರೆತು ಹೋಗದಿರಲೆಂದು ಯಾವುದಾದರೂ ಸಿಗರೇಟು ಪ್ಯಾಕಿನ ಮೇಲೆ ಗುರುತು ಹಾಕಿಕೊಟ್ಟಿರುತ್ತಾರಷ್ಟೆ! ಬೆಳಗ್ಗೆ ಅವರು ಅದನ್ನು ತೋರಿಸುವ ಅಗತ್ಯವೂ ಇರಲಿಲ್ಲ. ಅವರ ನಂಬರಿಗೆ ದುಡ್ಡು ಬಂದಿದ್ದರೆ ಕರೆದು ಬಟವಾಡೆ ನಡೆಯುತ್ತಿತ್ತು. ಆಡಿದ ಮಾತಿಗೆ ತಪ್ಪದಿರುವುದು, ಹೇಳಿದ ಟೈಮಿಗೆ ಹೇಳಿದ ಜಾಗಕ್ಕೆ ಕಳ್ಳಮಾಲುಗಳ ಡೆಲಿವರಿ ಕೊಡುವುದು, ಯಾವುದು ಕೇಳುತ್ತೀರಾ, ಒಂದು ಉಚ್ಚ ನಾಗರಿಕತೆಯ ಎಲ್ಲ ಗುಣಲಕ್ಷಣಗಳೂ ಅಲ್ಲಿತ್ತು. ಆದರೆ ಎಲ್ಲಾ ಕಾಳಜಗತ್ತಿನಲ್ಲಿ! ಅದೇ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಇತರೆ ಸರ್ಕಾರಿ ಸ್ಕೀಮುಗಳ ಕಣದಲ್ಲಿ ನೋಡಿದರೆ ಅಧ್ಯಕ್ಷರಿಂದ ಹಿಡಿದು ಕಾರ್ಯದರ್ಶಿ ಹಾಗೂ ಸದಸ್ಯರವರೆಗೆ ಪ್ರತಿಯೊಬ್ಬರೂ ಪ್ರತಿ ಹಂತದಲ್ಲೂ ತಿಂದು ತೇಗಿ ಅವುಗಳ ಬಾಗಿಲು ಮುಚ್ಚಿಸಿದ್ದರು. ಸ್ಟಾಂಪ್ ಪೇಪರಿನ ಮೇಲೆ ದಸ್ಕತ್ ಹಾಕಿ ಬರೆದು ಕೊಟ್ಟ ಅಗ್ರಿಮೆಂಟ್‌ಗಳಿಗೆ ಪಂಗನಾಮ ಎಳೆದವರೆಲ್ಲ, ಸಿಗರೇಟು ಬೆಂಕಿಪೊಟ್ಟಣದ ಮೇಲೆ ಗೀಚಿದ ಸಂಜ್ಞೆಗಳಿಗೆ ಚಾಚೂ ಚಕರಾರೆತ್ತುತ್ತಿರಲಿಲ್ಲ.

ಸಂಗ್ರಹ: **ವಾ-ರಾಜ**

'ಭಯಾಗ್ರಫಿ'ಯಿಂದ...

ಹಾಸ್ಯ ಸಾಹಿತಿ ಬೀchiಯವರು'ನನ್ನ ಭಯಾಗ್ರಫಿ'ಎಂಬ ಗ್ರಂಥದಲ್ಲಿ ಹೇಳಿರುವ ಕೊನೆಯ ಮಾತು ಓದಿದಾಗ ಅವರು ಕಂಡ ಜೀವನ ಸತ್ಯ ಸ್ಪಷ್ಟವಾಗುತ್ತದೆ.

"ಯಾವನ ಬಾಳೂ ಬಾಳಲಾರದಷ್ಟು ಬಾಳಬಾರದಷ್ಟು ಕಷ್ಟವಲ್ಲ, ಕನಿಷ್ಟವೂ ಅಲ್ಲ. ಬಾಳಿನಿಂದ ಓಡಿ ಹೋಗಬೇಡ. ಅದನ್ನು ಇದಿರಿಸು. ಅದನ್ನೇ ಬಾಳು. ಇದು ಬಾಳಿನಿಂದ ನಾನು ಕಲಿತ ಪಾಠ. ನಿನ್ನ ಬಾಳು ನಿನ್ನಷ್ಟು ಕೆಡುಕಲ್ಲ, ಅದನ್ನು ಪ್ರೀತಿಸು, ಪ್ರೀತಿನಿನ್ನ ಬಾಳ ಹೊರೆಯನ್ನು ಹಗುರ ಮಾಡುತ್ತದೆ. ನಿನ್ನ ಹೃದಯದಲ್ಲಿ ದ್ವೇಷಕ್ಕೆ ಮಾತ್ರ ಎಂದೂ ಇಂಬುಕೊಡಬೇಡ, ಪ್ರೇಮವೇ ಬೆಳಕು, ದ್ವೇಷವೇ ಕತ್ತಲು, ನೀನೇ ಸೃಷ್ಟಿಸಿಕೊಂಡ ಕತ್ತಲಲ್ಲಿ ನೀನೇ ದಾರಿ ತಪ್ಪೀಯಾ! ಎಡವಿಬಿದ್ದೀಯಾ, ಎಚ್ಚರಿಕೆ. ಎಂದು ಆಗಾಗ ನನಗೆ ನಾನೇ ಹೇಳಿಕೊಳ್ಳುತ್ತಿದ್ದೇನೆ. ಹಾಗೆಯೇ ಬಾಳುತ್ತಿದ್ದೇನೆ!

ಇಂದು ಬಾಳಿಗೆ ಸ್ವಾಗತ, ನಾಳೆ ಸಾವಿಗೂ ಸ್ವಾಗತ, ನಮಸ್ಕಾರ ಸದ್ಯಕ್ಕೆ."

ಸಂಗ್ರಹ: **ಪವನ್‌ಕುಮಾರ್, ಗಂಗಾವತಿ.**

ಆದರ್ಶ-ವಾಸ್ತವ


ಪುಸ್ತಕದ ಹೆಸರು: ಆದರ್ಶ ವಾಸ್ತವ
ಲೇಖಕರು: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು
ಪ್ರಕಾಶಕರು: ತರಳಬಾಳು ಪ್ರಕಾಶನ, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ.
ಬೆಲೆ: ರೂ. ೨೫

ನಮ್ಮಲ್ಲಿಯೇ ಇರುವ ಮಂದಿರ- ಮಸೀದಿಗಳ ದುರಸ್ತಿಮಾಡಿ ಅಲ್ಲಿಯೇ ಪೂಜೆ- ಪ್ರಾರ್ಥನೆ ಸಲ್ಲಿಸುವುದೇ ನಿಜವಾದ ಧರ್ಮಾನುಯಾಯಿ ಮಾಡುವ ಪರಮ ಪವಿತ್ರ ಕರ್ತವ್ಯ. ಇದನ್ನು ಮಾಡದೆ ಗಾಳಿಸುದ್ದಿಗೆ ಮನಸೋತು ಹುಯ್ ಎಂದು ಹುಂಬರಂತೆ ವಿಕಾರ ಭಾವನೆಗಳಿಗೆ ಆಸ್ಪದ ನೀಡಿ ಹೊಡೆದಾಟಕ್ಕೆ ಮುಂದಾಗುವುದು ಅವಿವೇಕತನದ ಪರಮಾವಧಿ. ಇದರಿಂದ ತೊಂದರೆ ಅನುಭವಿಸುವವರು ನಾವೇ ಹೊರತು ನಮ್ಮನ್ನು ಮುಂದೆ ತುಳಿದವರಲ್ಲ. ಈ ನಿಟ್ಟಿನಲ್ಲಿ ಆವೇಶಕ್ಕೆ ಒಳಗಾಗದೆ, ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಡದೆ ವಿವೇಕಿಗಳಾಗಿ ಎಲ್ಲ ಸಂದರ್ಭಗಳಲ್ಲಿಯೂ ತಾಳ್ಮೆಯಿಂದ ವರ್ತಿಸುವುದನ್ನು ಕರಗತ ಮಾಡಿಕೊಳ್ಳಬೇಕು.

ಗಾಂಧಿಯವರಂತೆ ಸತ್ಯವನ್ನೇ ನುಡಿಯಬೇಕು, ಅಹಿಂಸೆ ಪಾಲಿಸಬೇಕು, ಸರ್ವರನ್ನು ಪ್ರೀತಿಸಬೇಕು ಎಂದು ಶಾಲೆಯಲ್ಲಿ ಶಿಕ್ಷಕರು ಹೇಳುವ ಆದರ್ಶದ ಮಾತುಗಳು ಮಗುವಿನ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ. ತಾನೂ ಅವರಂತೆ ಬದುಕಬೇಕು ಎನ್ನುವ ಆಸೆ ಅಂಕುರಿಸುತ್ತದೆ.

ಎಷ್ಟೋ ಜನರು ತುಂಬಾ ಉತ್ಸಾಹದಿಂದ ತಾವೇ ಬಂಡವಾಳ ಹಾಕಿ ಒಂದು ಕೃತಿಯನ್ನು ಹೊರತರುತ್ತಾರೆ. ಅದನ್ನು ಕೊಂಡು ಪ್ರೋತ್ಸಾಹಿಸುವವರು ಇಲ್ಲದಿದ್ದಾಗ ಸಾಕಪ್ಪ ಈ ಸಾಹಿತ್ಯದ ಸಹವಾಸ ಎಂದು ಮೂಲೆಯಲ್ಲಿ ಮುದುರಿಕೊಳ್ಳುತ್ತಾರೆ. ಇಂಥ ನಿದರ್ಶನಗಳಿಗೆ ಕೊರತೆ ಇಲ್ಲ. ಇದಕ್ಕೆಲ್ಲ ಕಾರಣ ನಮ್ಮ ಸಾಹಿತ್ಯದ ಒಲವು ಕ್ಷೀಣಿಸುತ್ತಿರುವುದು. ಯಾವಯಾವುದಕ್ಕೊ ಉದಾರವಾಗಿ ನಮ್ಮ ಜನರು ಹಣವನ್ನು ಖರ್ಚು ಮಾಡುತ್ತಾರೆ. ಆದರೆ ಒಂದು ಪತ್ರಿಕೆಯನ್ನೋ ಅಥವಾ ಪುಸ್ತಕವನ್ನೋ ಕೊಳ್ಳಲು ಮನಸ್ಸು ಮಾಡುವುದಿಲ್ಲ. ಒಂದು ಜೊತೆ ಚಪ್ಪಲಿಗೆ ನೂರಾರು ರೂಪಾಯಿ ಕೊಡುವ, ದುಶ್ಚಟಗಳಿಗೆ ಯಥೇಚ್ಛವಾಗಿ ಹಣಚೆಲ್ಲುವ ಜನರು ಪುಸ್ತಕದ ಬೆಲೆ ದುಬಾರಿಯಾಯಿತು ಎಂದು ಹೇಳುವುದೂ ಉಂಟು. ಇಲ್ಲಿಯ ಜನರನ್ನು ನೋಡಿದರೆ ಪುಸ್ತಕದ ಅಂಗಡಿಯವರಿಗೆ ಸಾಕಷ್ಟು ವ್ಯಾಪಾರವಾಗಿರಬೇಕು ಎನಿಸುತ್ತದೆ. ಆದರೆ ವಾಸ್ತವಿಕತೆ ಹಾಗಿಲ್ಲ.

ಸಂಗ್ರಹ: **ಹೆಚ್.ಎಂ. ಬಸವರಾಜು**



ಡಯಾನಾ ಎಂಬ ನಾಯಿ !

- ಪ್ರಕಾಶಚಂದ್ರ

ಅದು
ನಂಬಿದವನನ್ನು
ಕೊನೆಯುಸಿರವರೆಗೂ
ಪ್ರೀತಿಸುತ್ತದೆ
ಎಂಬುದಕ್ಕೆ
ಈ ಘಟನೆಯೆ ಸಾಕ್ಷಿ

ನಂಬಿಕೆ. ಎಂಬ ಮಾತು ಬಂದಾಗಲೆಲ್ಲ ನಾಯಿ ನೆನಪಾಗುತ್ತದೆ. ವಿಶ್ವಾಸ ಹಾಗೂ ಸ್ವಾಮಿ ಭಕ್ತಿಗೂ ಅದು ಹೆಸರುವಾಸಿಯಾದ ಸಾಕುಪ್ರಾಣಿ. ಯಜಮಾನ ತೋರಿಸುವ ಪ್ರೀತಿಗೆ ಅಷ್ಟೇವಿಶ್ವಾಸ ಪ್ರಕಟಿಸುವ ನಾಯಿ. ತನ್ನನ್ನು ನೋಡಿಕೊಂಡು ಅವರಿಗಾಗಿ ಎಷ್ಟೋವೇಳೆ. ಪ್ರಾಣ ಅರ್ಪಿಸಿದ ಘಟನೆಗಳೂ ಉಂಟು. ಒಮ್ಮೆ ಒಬ್ಬ ಯಜಮಾನನಿಗೆ ನಾಯಿ ತನ್ನ ಸೇವೆಯನ್ನು ಮುಡಿಪಾಗಿಟ್ಟರೆ ಸಾಕು ಏನೇ ಬಂದರೂ ಆ ಮನೆಯನ್ನು ಅದು ತೊರೆಯುವುದಿಲ್ಲ. ಕೆಲ ವರ್ಷದ ಹಿಂದೆ ವಿಜಾಪುರ ಜಿಲ್ಲೆಯ ಕೆಲಗ್ರಾಮಗಳಲ್ಲಿ ನೆರೆಹಾವಳಿ ಉಂಟಾಗಿ ಅನೇಕ ಗ್ರಾಮಗಳು ನೀರಿನಲ್ಲಿ ಮುಳುಗಿದರೂ ಸಾಕಿದ ನಾಯಿ, ಬೆಕ್ಕುಗಳು ತಮ್ಮ ಯಜಮಾನರ ಮನೆಗಳನ್ನು ತೊರೆಯದೇ ಅಲ್ಲೇ

ಉಳಿದುಬಿಟ್ಟಿದ್ದು ಇದಕ್ಕೆ ನಮ್ಮ ನಡುವಿನ ಉದಾಹರಣೆ.


ಆದರೆ ವಿಶ್ವಾಸದ ವಿಷಯದಲ್ಲಿ ಸ್ಪರ್ಧೆ ನಡೆಸಿದರು ಅದರಲ್ಲಿ ಇಟಲಿಯ ಡಯಾನಾ ಎಂಬ ನಾಯಿಗೇ ಗೆಲುವು ಖಂಡಿತ. ಜಯಮಾನ ಬದುಕಿದ್ದಾಗ ಸ್ವಾಮಿಭಕ್ತಿ ಪ್ರದರ್ಶಿಸುವುದು ಪ್ರತಿಯೊಂದು ಸಾಕುನಾಯಿ ಮಾಡುವ ಕೆಲಸವೇ. ಆದರೆ, ಈ ಡಯಾನಾ ಎಂಬ ನಾಯಿ ತನ್ನ ಯಜಮಾನ ಬದುಕಿದ್ದಾಗಲಂತೂ ಸರಿಯೆ, ಆತನ ನಂತರವೂ ಆತನ ಸೇವೆಗೈಯುತ್ತಿದೆ. ಕಳೆದ ನಾಲ್ಕು ವರ್ಷಗಳಿಂದ ಯಜಮಾನನ ಭಾವಚಿತ್ರ ನೋಡುತ್ತ ಅದು ಕುಳಿತಿದೆ ಎಂದರೆ ಯಾರಿಗಾದರೂ ಆಶ್ಚರ್ಯವಾಗದಿರದು. ಮರೆವು ಮನುಷ್ಯನಿಗೆ ವರವೊ ಶಾಪವೊ ಗೊತ್ತಿಲ್ಲ, ಗಂಡ ಸತ್ತರೆ ಕ್ರಮೇಣ ಆತನನ್ನು ಮರೆಯುವುದುಂಟು. ಆದರೆ ಈ ಸಾಕು ನಾಯಿ ಡಯಾನಾ ತನ್ನ ಒಡೆಯನನ್ನು ಮರೆಯುವ ಯೋಚನೆಯನ್ನೇ ಮಾಡಿಲ್ಲ.

ಇಟಲಿಯ ಸಿನಿಟೆಲ್ಲಾದಲ್ಲಿ ವಾಸಿಸುತ್ತಿದ್ದ ಅಲ್ಲಾಗ್ರೆಟ್ಟಿ ಕುಟುಂಬದ ಸಾಕುನಾಯಿ ಈ ಡಯಾನಾ. ಅಲ್ಲಾಗ್ರೆಟ್ಟಿ ಸಹ ಡಯಾನಳನ್ನು ತನ್ನ ಮಕ್ಕಳಷ್ಟೇ ಪ್ರೀತಿಯಿಂದ ಸಾಕುತ್ತಿದ್ದ. ಡಯಾನಾಗೆ ಊಟ, ತಿಂಡಿ ಅಥವಾ ಬಿಸ್ಕತ್ತು ತಿನ್ನಿಸಬೇಕಾದರೆ ಯಜಮಾನನೇ ಆಗಬೇಕು. ಪ್ರತಿದಿನವೂ ಡಯಾನಾಳನ್ನು ಅಲ್ಲಾಗ್ರೆಟ್ಟಿ ವಾಯುವಿಹಾರಕ್ಕೆ ಕರೆದೊಯ್ಯುತ್ತಿದ್ದ. ಹೀಗೆ ಸದಾ ಯಜಮಾನನ ಹಿಂದೆ ಮುಂದೆಯೇ ಈ ನಾಯಿ ಇರುತ್ತಿತ್ತು.

ಹೀಗಿರುವಾಗ ಅಲ್ಲಾಗ್ರೆಟ್ಟಿ ಹಠಾತ್ತನೆ ಹೃದಯಾಘಾತದಿಂದ ಮೃತಪಟ್ಟ. ಆತನ ಅಂತ್ಯಯಾತ್ರೆಯಲ್ಲಿ ಕಳೇಬರ ಸಂಪುಟದ ಪಕ್ಕದಲ್ಲೇ ಡಯಾನಾ ಅಲ್ಲಾಗ್ರೆಟ್ಟಿ ಸಮಾಧಿಯಾದ ನಂತರ ಡಯಾನಾಳನ್ನು ವಾಪಸು ಮನೆಗೆ ಕರೆತರಲಾಯಿತು.

ಮರುದಿನದಿಂದ ಅಲ್ಲಾಗ್ರೆಟ್ಟಿ ಕುಟುಂಬದವರು ಯಥಾಪ್ರಕಾರದಂತೆ ನಾಯಿಯನ್ನು ಮನೆಯ ಆವರಣದಲ್ಲಿ ರಾತ್ರಿ ಸ್ವೇಚ್ಛೆಯಿಂದ ಬಿಡುತ್ತಿದ್ದರು. ಆದರೆ ಕೆಲ ದಿನಗಳಲ್ಲೇ ಡಯಾನಾ ಆವರಣದಲ್ಲಿ ಓಡಾಡುತ್ತಿಲ್ಲ ಎಂಬ ಸಂಶಯ ಅವರಿಗೆ ಬಂದಿತು. ಹೀಗಾಗಿ ಸರಪಳಿಯಿಂದ ಅದನ್ನು ಕಟ್ಟಿಹಾಕಲಾರಂಭಿಸಿದರು.

ನಾಲ್ಕು ದಿನಗಳ ನಂತರ ಒಂದು ಬೆಳಿಗ್ಗೆ



ಅಲ್ಲಾಗ್ರೆಟ



ಡಯಾನಾ


ಡಯಾನಾ ಸರಪಳಿಯನ್ನು ತುಂಡರಿಸಿಕೊಂಡು ಓಡಿ ಹೋಯಿತು. ಎಲ್ಲಿ ಹೋಯಿತೆಂಬುದರ ಸುಳಿವೇ ಸಿಕ್ಕಲಿಲ್ಲ. ಅಲ್ಲಾಗ್ರೆಟ್ಟಿಯ ಸಾವಿನ ದುಃಖದಲ್ಲಿದ್ದ ಕುಟುಂಬದವರು ಎಲ್ಲ ಕಡೆ ಹುಡುಕಿ ಸುಸ್ತಾದರು. ನಾಯಿ ಕಾಣೆಯಾದ ಬಗ್ಗೆ ತಮ್ಮ ಬಂಧುಮಿತ್ರರಿಗೂ ಸುದ್ದಿ ಮುಟ್ಟಿಸಿದರು. ಇನ್ನು ಪೋಲೀಸರಿಗೆ ದೂರು ನೀಡುವುದೊಂದೆ ಬಾಕಿಯಿತ್ತು.

ಒಂದು ವಾರದನಂತರ ಪದ್ಧತಿಯಂತೆ ಪ್ರಾರ್ಥನೆ ಸಲ್ಲಿಸಲು ಪತಿಯ ಸಮಾಧಿಯ ಬಳಿಗೆ ಹೋದ ಅಲ್ಲಾಗ್ರೆಟ್ಟಿಯ ಪತ್ನಿಗೆ ಮಾರಿಯಾಗೆ ಸಾಕುನಾಯಿ ಡಯಾನಾ ಕಣ್ಣಿಗೆಬಿತ್ತು. ಸಮಾಧಿಯ ಮೇಲಿದ್ದ ತನ್ನ ಪತಿಯ ಭಾವಚಿತ್ರವನ್ನು ನೆಕ್ಕುತ್ತ ಡಯಾನಾ ದೀನವಾಗಿ ನಿಂತಿದ್ದನ್ನು ಕಂಡು ಮಾರಿಯಾ ಮೂಕಳಾದಳು.

ಪ್ರಾರ್ಥನೆ ಮುಗಿದ ನಂತರ ಡಯಾನಾಳನ್ನು ತನ್ನ ಕಾರಿಯಲ್ಲಿ ಹತ್ತಿಸಿಕೊಂಡು ಆಕೆ ಬರುತ್ತಿದ್ದಾಗ ಸ್ಮಶಾನದ ಕಾವಲುಗಾರ ಈ ಬಗ್ಗೆ ಪ್ರಶ್ನಿಸಿದ. ಅಲ್ಲದೆ ಡಯಾನಾಳನ್ನು ಬೀದಿ ನಾಯಿ ಎಂದು ಭಾವಿಸಿ ಅದನ್ನು ಸ್ಮಶಾನದಿಂದ ಹೊರಗಟ್ಟಲು ಬಹಳಷ್ಟು ಪ್ರಯತ್ನಿಸಿಸೋತೆ ಎಂದೂ ಹೇಳಿದ. ಡಯಾನಾ ಸಾಕುನಾಯಿ ಎಂದು ತಿಳಿದ ಮೇಲಂತೂ ಅದರ ಸ್ವಾಮಿ ಭಕ್ತಿಯಿಂದ ವಿಸ್ಮಿತನಾದ.

ಅಲ್ಲಾಗ್ರೆಟ್ಟಿ ಮೃತಪಟ್ಟು ಈಗ ನಾಲ್ಕು ವರ್ಷಗಳಾಗಿವೆ. ಈಗಲೂ ಆತನ ಸಾಕುನಾಯಿ ಡಯಾನಾಳ ವಸತಿ ಯಜಮಾನನ ಸಮಾಧಿಯ ಎದುರೇ.

ಆದರೂ ಆಗೀಗ ಅಲ್ಲಾಗ್ರೆಟ್ಟಿಯ ಮನೆಗೂ ಹೋಗಿ ಕುಟುಂಬದವರೊಂದಿಗೆ ಕೆಲಹೊತ್ತು ಇದ್ದು ಬರುತ್ತದೆ. ಆದರೆ ರಾತ್ರಿ ಮಾತ್ರ ಅದು ಸಮಾಧಿಯೆಡೆಗೆ ಹೆಜ್ಜೆ ಹಾಕುವುದನ್ನು ಮರೆಯುವುದಿಲ್ಲ. ●



ಬ್ರಹ್ಮನ ಅಬ್ಬ

ಸಹಸ್ರ ಭಾರತದಲ್ಲಿಂದು
ವಿಕ್ಷಿಪ್ತ ಕನಸುಗಳು
ಸಂಕ್ಷಿಪ್ತ ಮನಸುಗಳು
ಕನಸು ಕಾಮನಬಿಲ್ಲ
ಹರಿದೆಸೆವ ಹುನ್ನಾರ
ಕ್ಷಣ ಕ್ಷಣಕು ಗೂಡುಕಟ್ಟುವ
ಜಾತಿ ಮತಗಳ ಒಳಗೆ
ಸರಿದುಕೊಳ್ಳುವ
ಅದರಲ್ಲೇ ಅಳೆದುಕೊಳ್ಳುವ
ಅಂತರಂಗದ ಕುಸಿತ
ಎಲೆ ಎಲೆ ಮನಸೆ
ಏಕಿಷ್ಟು ವಸೆ
ಕಿತ್ತು ತಿನ್ನುವೆ
ಈ ನೆಲವನ್ನು ಜಲವನ್ನು
ಹಸಿರು ತುಂಬಿದ
ಭೂ ಒಡಲನ್ನು

ಬದುಕು ತಡವರಿಸುವುದು
ಹಸುಳೆಗಳು ಸೊರಗಿದವು
ಕನಸುಗಳು ಹಾರಿದವು
ದಿಕ್ಕುದಿಕ್ಕಿಗೆ
ಎಲ್ಲ ಭಗ್ನ
ಭಗ್ನತೆಗಷ್ಟೇ ನಿರ್ವಿಘ್ನ
ಸಹಮತದ ಹೆಸರಲ್ಲಿ
ಅನ್ಯಮತ
ವಿಭಜಿತ ಬದುಕಷ್ಟೇ ಕಥಾ
ಸಿಡಿಯುವುದು ಒಡೆಯುವುದು
ಕಿಡಿಯುವುದು
ಕ್ಷಣ ಕ್ಷಣದ ಬದುಕಲ್ಲಿ
ಗೋರಿಗಟ್ಟಿದ ಮನಸು
ನಿಶ್ಚಲ ನಿಶ್ಶಬ್ದ ನಿರ್ಲಜ್ಜ
ನಿಂತ ನೀರಲ್ಲಿ ಅರಳಲಾರದೆ
ಕಳವಳಿಸುತ್ತಿದೆ ಬ್ರಹ್ಮನ ಅಬ್ಜ.

* ಹೊರೆಯಾಲ ದೊರೆಸ್ವಾಮಿ

ಮಾತು - ಮಾಣಿಕ್ಯ ೩೪

ನೆಲ-ಎಲ್ಲರ ನೆಲೆ

ಇಹಲೋಕದಲ್ಲಿ ಬದುಕು ಸಾಗಿಸಲು ಜೀವಕ್ಕೆ ಐದರ ಅಗತ್ಯ: ನೆಲಸಲು ನೆಲ, ಹಸಿರಾಗಿ ನಳನಳಿಸಲು ಜಲ, ಕಾರ್ಯಪ್ರವೃತ್ತವಾಗಲು ಅನಲ, ಉಸಿರಾಡಲು ಅನಿಲ ಹಾಗೂ ತನಗಾಗಿ ಇಂಬು ದೊರಕಿಸಲು ಗಗನತಲ. ಈ ತೆರನಾಗಿ ನೆಲ-ಜಲ, ಅನಿಲ-ಅನಲ, ಗಗನತಲ ಎಂಬ ಪಂಚಮಹಾಭೂತಗಳ ನೆರವು ಇದ್ದಾಗಲೆ ಜೀವ ತನ್ನ ವ್ಯಕ್ತಿತ್ವವನ್ನು ಅರಳಿಸಲು ಸಾಧ್ಯ. ಸೂಕ್ಷ್ಮಾತಿಸೂಕ್ಷ್ಮವಾದ ಜೀವ ತನ್ನನ್ನು ಜತನವಾಗಿ ಕಾಪಾಡಿಕೊಳ್ಳಲು ಶರೀರವೆಂಬ ಗೂಡಿನಲ್ಲಿ ಬೀಡಾರ ಹೂಡುತ್ತದೆ. ನಿರಂತರವಾಗಿ ಹರಿಯುವ ವಿಶ್ವಚೈತನ್ಯದ ಸಣ್ಣದಾದ ಒಂದು ಕಣ ಈ ಜೀವ. ಪ್ರವಾಹದಿಂದ ಬೇರ್ಪಟ್ಟ ಇದಕ್ಕೆ ಪ್ರತ್ಯೇಕವಾದ ತಾಣವೊಂದನ್ನು ಕಲ್ಪಿಸುವ ಕಾರ್ಯ ಪೃಥ್ವಿಯದು. ಹೊಳೆಯಿಂದ ನೀರನ್ನು ಮೇಲೆತ್ತಿ ತರುವುದಾದರೆ ಬಿಂದಿಗೆಯಂತಹ ಪಾತ್ರೆಯೊಂದು ಬೇಕು ತಾನೆ? ಹಾಗೆಯೆ ಈ ಜೀವವೆಂಬ ಜಲಕ್ಕೆ ಪೃಥಿವಿಯದೇ ಪಾತ್ರೆ!

'ಪೃಥನಾತ್ ಪೃಥಿವಿ' ಎಂಬ ಶಬ್ದ ವ್ಯುತ್ಪತ್ತಿಯಲ್ಲಿ ಪ್ರತಿಬಿಂಬಿತವಾದಂತೆ ನಾವು ನೆಲೆ ನಿಂತಿರುವ ಈ ಭೂಮಿ ವಿಸ್ತಾರವಾಗಿ ಹಾಸಿದೆ-ಹರಡಿಕೊಂಡಿದೆ. ಇದೆಲ್ಲ ಮೃಣ್ಮಯ ಎಂದರೆ ಮಣ್ಣಿನಿಂದ ಕೂಡಿದುದು. ಇದುವೆ ನೆಲ, ಜೀವಕೋಟಿ ನೆಲೆಸುವ ನೆಲ. ಜಲದೊಳಗೆ ಅಲೆದಾಡುವ ಮೀನು-ಮೊಸಳೆಗಳಂತಹ ಜಲಚರಗಳೇ ಆಗಲಿ, ಆಕಾಶದಲ್ಲಿ ಹಾರಾಡುವ ಕಾಗೆ-ಹದ್ದುಗಳಂತಹ ಖೇಚರಗಳೇ ಆಗಿರಲಿ- ಇಂಥವುಗಳಿಗೂ ಒಂದಿಲ್ಲೊಂದು ಗಳಿಗೆ ನೆಲದ ನೆಲೆ ಅಗತ್ಯ. ಪ್ರಪಂಚದಲ್ಲಿ ಏನೆಲ್ಲವನ್ನೂ ಅಲ್ಲಗಳೆದರೂ ತಾಯಿಯ ಸಂಬಂಧವನ್ನು ಮಾತ್ರ 'ಇಲ್ಲ' ಎನ್ನುವಂತಿಲ್ಲ. ಪೃಥಿವಿಯೆ ಜೀವಕೋಟಿಗೆಲ್ಲ ತಾಯಿ, ಆಕೆಯೆ ಭೂಮಾತೆ. ಬರಿ ಕೃಷಿಕರು ಅಥವಾ ರೈತಾಪಿ ಜನರಷ್ಟೆ ಮಣ್ಣಿನ ಮಕ್ಕಳಲ್ಲ ಸಮಸ್ತ ಮಾನವರೆಲ್ಲ ಮಣ್ಣಿನ ಮಕ್ಕಳೆ!

ದಿನದ ಬಳಕೆಗೆ ಬೇಕಾಗುವ ಮಡಕೆಯ ನಿರ್ಮಾಣ ಮಣ್ಣಿನಿಂದಲೆ. ಪೂಜೆಗಾಗಿ ಬೇಕಾಗುವ ದೇವತೆ ಆಕಾರ ಪಡೆಯುವುದು ಮಣ್ಣಿನಿಂದಲೆ. ಕಾರ್ಯವೆಸಗಲು ಹೊರಟ ಜೀವವು ಧಾರಣಮಾಡುವ ಶರೀರವಾದರೂ ಮಣ್ಣಿನಿಂದಲೆ ನಿರ್ಮಿತ. ಜೀವಕ್ಕೂ-ಮಣ್ಣಿಗೂ ಇರುವ ನಿಕಟ ಸಂಬಂಧ ಈ ಮಾತಿನಿಂದ ಸುವ್ಯಕ್ತ.

ಜೀವಿ ಉದಯಿಸಲು ಮಣ್ಣು ಕಾರಣ. 'ಅನ್ನಾದ್ ಭವಂತಿ ಭೂತಾನಿ' (ಭೂತಗಳು ಉಂಟಾಗುವುದು ಅನ್ನ ಮೂಲಕ) ಎಂಬ ಗೀತೋಕ್ತಿ ವಿವರಿಸುವಂತೆ ಪರ್ಜನ್ಯವು ಭೂಮಿಯ ಉದರವನ್ನು ಭೇದಿಸಿದಾಗ ಈ ಅನ್ನವು ಜನಿಸುವಂಥದು.

ಈ ಅಂಶವನ್ನು ಅನುಲಕ್ಷಿಸಿಯೆ 'ಮಣ್ಣು ನೀನಾಗಿರುವಿ' ಎಂಬ ಬೈಬಲ್‌ವಾಣಿ ಹೊರಹೊಮ್ಮಿರಲು ಸಾಕು.

ಬೀಜ ಉಂಟಾದುದು ಮಣ್ಣಿನ ಕಣದಿಂದಲೆ. ಬಿತ್ತಿದಾಗ ಅದು ಮೊಳಕೆಯೊಡೆಯುವುದು ಮಣ್ಣಿನಲ್ಲಿಯೆ. ಸಾರವನ್ನು ಹೀರಿ ಬೆಳೆದು ಅದು ಫಲವನ್ನು ನೀಡುವುದು ಮಣ್ಣಿನ ಶಕ್ತಿಯಿಂದಾಗಿಯೆ. ಬೆಳೆದ ಹಣ್ಣಿನ ಬೀಜ ಮತ್ತೆ ಮೊಳಕೆಯೊಡೆಯಲು ಉದುರುವುದು ಆ ಮಣ್ಣಿನಲ್ಲಿಯೆ. ಹೀಗಿದೆ ಮಣ್ಣಿನ ಮಹಿಮೆಯ ನಿರಂತರ ಚಕ್ರ! ಮಾನವನು ಕೂಡ ಈ ಮಾತಿಗೆ ಹೊರತಲ್ಲ, ಮಣ್ಣಿನಿಂದ ಬಂದು, ಅಲ್ಲಿಯೇ ನಿಂದು, ಅದು ಒದಗಿಸುವ ಅನ್ನವನ್ನು ತಿಂದು, ಅದರಿಂದಲೇ ಆನಂದವನ್ನು

ಹೊಂದುವೆನೆಂದುಕೊಂಡು ಕೊನೆಗೊಮ್ಮೆ ಅದರಲ್ಲಿಯೆ ಒಂದಾಗುವನು. ಹೀಗೆಂದಮಾತ್ರಕ್ಕೆ ಈ ಬದುಕು ಬರಿ ಮಣ್ಣಿನಿಂದಾದುದು ಎನ್ನಲಿಕ್ಕಾಗದು. ಬರಿ ಬುರುಡೆ ಬೆಳಕು ಬೀರಲಾರದು. ಅದರಲ್ಲಿ ವಿದ್ಯುತ್ ಪ್ರವಾಹ ಹರಿಯಬೇಕು. ಹಾಗೆಯೆ ಮನುಜ ಶರೀರ ಕ್ರಿಯಾಶೀಲವಾಗಲು ವಿಶ್ವಚೈತನ್ಯವು ಅದರಲ್ಲಿ ಸನ್ನಿಹಿತವಾದಾಗಲೆ ಸಾಧ್ಯ. ಈ ಅರ್ಥದಲ್ಲಿ ಮಣ್ಣು ಚೈತನ್ಯಕ್ಕೆ ಆಧಾರ.

ಇಂತಹ ಮಣ್ಣು ಅರ್ಥಾತ್ ಪೃಥಿವಿ ಬಂದುದಾದರೂ ಎಲ್ಲಿಂದ? ಆದಿಶೇಷ ತನ್ನ ತಲೆಯ ಮೇಲೆ ಧರಿಸಿದ ಈ ಪೃಥಿವಿಯನ್ನು ಹಿರಣ್ಯಾಕ್ಷನು ಅಪಹರಿಸಿ ನೀರೊಳಗೆ ಬಚ್ಚಿಟ್ಟಿರಲು ಕೃಷ್ಣವರ್ಣದ ವರಾಹರೂಪಿ ಭಗವಂತನು ತನ್ನ ನೂರಾರು ತೋಳುಗಳ ಬಲದಿಂದ ಮೇಲೆತ್ತಿ ಕೋರೆಯ ಹಲ್ಲುಗಳಲ್ಲಿರಿಸಿಕೊಂಡು ಅದಕ್ಕೆ ಸುಸ್ಥಿತಿಯನ್ನು ದಯಪಾಲಿಸಿದನೆಂದು ಹೇಳಲಾಗುತ್ತದೆ.

ಪಂಚಮಹಾಭೂತಾತ್ಮಕವೆನಿಸುವ ಶರೀರದ ನಿರ್ಮಿತಿಯಲ್ಲಿ ಪೃಥಿವಿಯ ಪಾಲು ಅಧಿಕತರ. ಮೃತದೇಹವನ್ನು ಪಾರ್ಥಿವ ಶರೀರವೆಂದೆ ಕರೆಯುವ ವಾಡಿಕೆ. ಹಿರಿಯ ಧುರೀಣನಾಗಲಿ ಸಾಮಾನ್ಯ ನರನಾಗಲಿ ಅಂತ್ಯಸಂಸ್ಕಾರ ನೆರವೇರುವುದು ಅವನ ಈ ಪಾರ್ಥಿವ ಶರೀರಕ್ಕೆ ತಾನೆ? ಏಕೆಂದರೆ ಮರಣಕಾಲಕ್ಕೆ ಬಸಿರಿನೊಳಗಿನ ಉಸಿರು ಎಂದರೆ 'ವಾಯು' ಹೊರಟುಹೋಗುತ್ತದೆ, ಮೈಯ ಕಾವು ಆರುತ್ತದೆ, ಜಲಾಂಶ ಸೋರಿಹೋಗುತ್ತದೆ, ಆಂತರಿಕ ಆಕಾಶ ಹೊರಗಣ ಆಕಾಶದೊಂದಿಗೆ ಒಂದಾಗಿ ದೇಹ ಕುಸಿದು ಒಣಕಲು ಕಟ್ಟಿಗೆಯಂತಾಗುತ್ತದೆ. ಕೂಡಿರ್ದ ಐದರಲ್ಲಿ ಹಿಂದೆ ಉಳಿದುಕೊಳ್ಳುವುದು ಒಂದೇ ಒಂದು - ಪೃಥಿವಿಯ ಅಂಶ - ಎಂಬುದು ಗಮನಾರ್ಹ. ನೆಲಕ್ಕೆ ಒಡೆಯನೆನಿಸಿದ ಅರಸನನ್ನು ಕೂಡ ಪಾರ್ಥಿವ ಎಂದೇ ಕರೆಯಲಾಗುತ್ತದೆ.

ಜೀವಿಗೆ ಪೃಥಿವಿ ಅತ್ಯಂತ ನಿಕಟವರ್ತಿ. ಅಂತೆಯೇ ಒಂದು ಬಗೆಯ ಅನಾದರವೇನೊ. ಅದಕ್ಕಾಗಿಯೇ ಮಣ್ಣೆಂದರೆ ಅಸಡ್ಡೆ ಏನೊ? ಕೊಂಚ ಕೂಡ ಅರಿಯದವನನ್ನು ಕುರಿತು 'ಅವನಿಗೇನು ಮಣ್ಣು ಗೊತ್ತು?' ಎಂದು ಮೂದಲಿಸಲಾಗುತ್ತದೆ. ಅತಿ ದರಿದ್ರನ ವಿಷಯದಲ್ಲಿ 'ಮಣ್ಣು ತಿನ್ನಬೇಕಷ್ಟೆ' ಎಂದೆನ್ನುತ್ತೇವೆ. ಮಹಾಭೂತಗಳ ಪಂಚಕದಲ್ಲಿ ಪೃಥಿವಿಗೆ ನೀರಿನ ರಸವಂತಿಕೆ ಇಲ್ಲ, ತೇಜಸ್ಸಿನ ಹೊಳಪಿಲ್ಲ, ವಾಯುವಿನ ಚಲನ ಶಕ್ತಿಯಿಲ್ಲ, ಆಕಾಶದ ವ್ಯಾಪಕತ್ವ ಇಲ್ಲ. ಇಂತಿದ್ದರೂ ಪೃಥಿವಿಯನ್ನು ಕಡೆಗಣಿಸುವಂತಿಲ್ಲ. ಈಶ್ವರ ಸೃಷ್ಟಿಯಲ್ಲಿ ಮೇಲು-ಕೀಳೆಂಬುದಿಲ್ಲ. ಒಂದೊಂದೂ ಒಂದೊಂದು ವಿಧ. ಪೃಥಿವಿಗಿರುವ 'ಗಂಧ'ವೆಂಬ ವಿಶಿಷ್ಟ ಗುಣ ಬೇರಿನ್ನಾರಿಗುಂಟು? ಗಾಳಿಯಲ್ಲಿ ತೂರಿಬರುವ ಪರಿಮಳವಾಗಲಿ, ದುರ್ಗಂಧವಾಗಲಿ, ಅದರ ಸೊತ್ತಲ್ಲ, ಅದು ಹೊತ್ತು ತರುವ ಪೃಥಿವಿಯ ಕಣಗಳ ಗುಣವಿಶೇಷ. ಹಾಗೆಯೆ ಪನ್ನೀರಿಗಿರುವ ಪರಿಮಳ ಅದರದಲ್ಲ, ಅದರಲ್ಲಿ ಬೆರೆತ ಪೃಥಿವಿಯ ಅಂಶದಿಂದ ಅಂಥ ದ್ರವಸುಗಂಧಯುತ.ಹೂವು, ಕಸ್ತೂರಿಮೃಗ ಮೊದಲಾದವುಗಳಲ್ಲಿ ಕಂಡುಬರುವ ಸುವಾಸನೆಯೆಲ್ಲ ಪೃಥಿವಿಯ ಕೊಡುಗೆಯೇ ಆಗಿದೆ.

ಉಳಿಮೆ ಮಾಡಲಿ, ಬಾವಿ ತೋಡಲಿ, ಅಗಿಯಲಿ-ಹುಗಿಯಲಿ, ರಂಧ್ರ ಕೊರೆಯಲಿ, ಮಲ-ಮೂತ್ರಾದಿ ವಿಸರ್ಜಿಸಲಿ- ಏನೆಲ್ಲವನ್ನೂ ತಾಳ್ಮೆಯಿಂದ ಅನುಭವಿಸುವ ಉದಾರ ಸ್ವಭಾವ ಪೃಥಿವಿಯದು. ಸಸ್ಯಾದಿಯಿಂದ ಮೊದಲಾಗಿ ಮಾನವಕುಲದವರೆಗಿನ ಸಕಲ ಜೀವರಾಶಿಗೆ ಅನ್ನವನ್ನು ಒದಗಿಸಿ ಪೋಷಿಸುವ ಮಹಾಮಾತೆ ಈ ಪೃಥಿವಿ. ಎಂತಲೆ 'ಸರ್ವಂ ಸಹಾ ಉದರಂಭರಾ!' ಎಂದೆನಿಸಿಕೊಳ್ಳುವುದು. ಭೂಮಿಗಿರುವ ಕ್ಷಮಾಗುಣದಿಂದಾಗಿ 'ಕ್ಷಮಾ' ಎಂಬ ಶಬ್ದವು ಇದಕ್ಕೆ ಪರ್ಯಾಯ ಪದವಾಗಿರಲು ಸಾಕು.

ನೆಲೆಸಲು ಎಲ್ಲರಿಗೆ ನೆಲೆ ನೀಡುವ ನೆಲ ಸಮಸ್ತರ ಸೊತ್ತು. 'ಸಬ್ ಭೂಮಿ ಗೋಪಾಲಕಿ' ಎಂಬ ವಿನೋಬಾಜಿಯ ವಾಣಿ ತುಂಬಾ ಅರ್ಥಪೂರ್ಣ. ಭಗವಂತನ ಸ್ವಾಮ್ಯದಲ್ಲಿರುವ ಈ ಭೂಮಿ ಎಲ್ಲರಿಗೂ ನೆಮ್ಮದಿಯನ್ನು ನೀಡುವಂಥದು. ಅದಕ್ಕಿರುವ ತಾಳ್ಮೆಯಂತಹ ಸದ್ಗುಣವು ನಮ್ಮಲ್ಲಿ ಬೇರೂರುವಂತಾದರೆ ನಮಗೆದುರಾಗುವ ಸಂಕಟ ಸಂಘರ್ಷಗಳೆಲ್ಲ ದೂರವಾಗುವಲ್ಲಿ ಸಂದೇಹವಿಲ್ಲ.

- ಶ್ರೀನಿವಾಸ ತೋಫಖಾನೆ

ಕ್ಲಬ್ಬಿನೆದುರಿನ ನೆಲದ ಮೇಲಿಟ್ಟ ಚಟ್ಟದಲ್ಲಿ, ಹಾಕಿದ ಹಾರಗಳಡಿ ಮಲಗಿತ್ತು ರಾಮಜ್ಜನ ಹೆಣ. ಕ್ಲಬ್ಬಿನ ಪದಾಧಿಕಾರಿಗಳು, ಸದಸ್ಯರು ನೌಕರವರ್ಗ, ಎಲ್ಲರೂ ಸರದಿಯ ಪ್ರಕಾರ ಒಂದು, ಹಾರ ಹಾಕಿ, ಗುಂಪು ಕಟ್ಟಿ ಮಾತಾಡುತ್ತಿದ್ದಾರೆ, ರಾಮಜ್ಜನನ್ನು ಕುರಿತು. ಶಾಸ್ತ್ರಿಗಳು ಬಂದಾಗ ನಡೆಯಬೇಕಾದ ಸಂಪ್ರದಾಯಗಳೆಲ್ಲ ನಡೆದು, ಪ್ರತಿಯೊಬ್ಬರೂ ಅಕ್ಕಿ ಕಾಳು ಹಾಕಿ ಶರೀರವನ್ನು ಸುತ್ತಿ ಬಂದರು. ಮೊದಲೊಮ್ಮೆ ಅಕ್ಕಿ ಕಾಳು ಹಾಕಿ ಸುತ್ತಿ ಬಂದ ಜವಾನ್ ಕೆಂಪ, ಮತ್ತೊಮ್ಮೆ ಸುತ್ತಿ ಬಂದು ಅಕ್ಕಿ ಕಾಳು ಹಾಕಿದಾಗ ನನಗೆ ಆಶ್ಚರ್ಯವಾಗಿ ಕೇಳಿದೆ, "ಮತ್ತೇಕೆ ಎರಡನೆಯ ಸುತ್ತು ಹಾಕಿದೆ?"

"ನಮ್ಮಣ್ಣನೂ ಕ್ಲಬ್ಬಿನಲ್ಲೇ ಕೆಲ್ಸ ಮಾಡ್ತಾನೆ. ಅವನಿಗೆ ರಾಮಜ್ಜ ಅಂದ್ರೆ ಪ್ರಾಣ. ಇವತ್ತು ಅವನಿಗೆ ಹುಷಾರಿಲ್ದೆ ಮಲಗಿರೋದ್ರಿಂದ, ಇಲ್ಲಿಗೆ ಬರೋಕೂ ಆಗ್ಲಿಲ್ಲ. ಆದ್ರಿಂದ ಅವರ ಪರವಾಗೂ ನಾನೇ ಕಾಳು ಹಾಕಬೇಕೆಂದು ಹೇಳಿದ್ದರಿಂದ, ಇನ್ನೊಂದು ಬಾರಿ ಹಾಕಿದೆ." ಬಾಳ ಸಾರ್ಥಕತೆಯ ನಿದರ್ಶನಕ್ಕೆ ಬೇರಾವ ಒರೆಗಲ್ಲು ಬೇಕು? ಎಂದು ತಲೆದೂಗುವಂತಾಯಿತು ನನಗೆ. ಇಷ್ಟು ಜನರ ಪ್ರೀತಿ, ಗೌರವಗಳಿಗೆ ಪಾತ್ರವಾದ ಈ ರಾಮಜ್ಜ ಬಡ ಕುಟುಂಬವೊಂದರಲ್ಲಿ ಇತರ ಸಾಧಾರಣ ವ್ಯಕ್ತಿಗಳಂತೆಯೇ ಹುಟ್ಟಿದವ. ಆದರೆ, ಆತ ಅಸಾಧಾರಣವೆನಿಸಿದ್ದು ತಮ್ಮ ಕೆಲವು ಅಸಾಧಾರಣ ಗುಣಗಳಿಂದ.


ಜಗತ್ತೇನೋ ವಿಶಾಲವಾಗಿದೆ. ಆದರೆ ಜಗತ್ತಿನ



ಜೀವಿಗೆ ಸಿಗುವುದು ಅವರಿಗೆ ಲಭ್ಯವಿದ್ದಷ್ಟೇ ಜಾಗ. ಈ ತತ್ವಕ್ಕೆ ರಾಮಜ್ಜನೂ ಹೊರತಲ್ಲ. ರಾಮಜ್ಜನಿಗೆ ಸಿಕ್ಕಿದ್ದೂ ಕ್ಲಬ್ಬಿನ ಗ್ರಂಥಾಲಯದ ಬದಿಗಿನ ಒಂದು ಪುಟ್ಟ ಕೊಠಡಿ. ಗ್ರಂಥಾಲಯಕ್ಕೆ ಜಾಗ ಸಾಲದೆಂದು, ಆ ಕೊಠಡಿಯಲ್ಲೂ ಅಷ್ಟಿಷ್ಟು ಹಳೆಯ ವೃತ್ತ ಪತ್ರಿಕೆಗಳನ್ನೂ, ಪುಸ್ತಕಗಳನ್ನೂ ಒಟ್ಟಲಾಗಿತ್ತು. ಮರದ ಹಲಗೆ ಜೋಡಿಸಿದ ಮಂಚ, ಮೇಲೊಂದು ಹಾಸಿಗೆ. ಇದು ರಾಮಜ್ಜನ ಪ್ರೀತಿಯ 'ತನ್ನದೇ' ಆದ ಅರಮನೆ. ಕ್ಲಬ್‌ನ ಹಿಂದಿನ ನಲ್ಲಿಯಲ್ಲಿ ಸ್ನಾನ. ರಸ್ತೆಯಂಚಿನ ಮೆಸ್‌ನಲ್ಲಿ ಊಟ-ತಿಂಡಿ. ಮಳೆಯೋ, ಛಳಿಯೋ ಆಗಿ ಮೆಸ್‌ಗೆ ಹೋಗಲಾಗದಿದ್ದಾಗ ಪಕ್ಕದ ಬೇಕರಿಯ ತುಂಡು ಬ್ರೆಡ್ಡು, ಬಾಳೆಹಣ್ಣನಿಂದಲೇ ದಿನ ಕಳೆಯುತ್ತಿತ್ತು.

"ಏನೋ ಜೀವನವೆಲ್ಲ
ಹೀಗೇ ಆಯ್ತು.
ನಾವಂದುಕೊಳ್ಳೋದೇ ಒಂದು
ಆಗುವುದೇ ಇನ್ನೊಂದು.
ಬೇಕೆಂದುಕೊಂಡಂತೆ
ಆಗೋದೇ ಇಲ್ಲ" ಅಂದ
ರಾಮಜ್ಜ.

- ಟಿ.ಎಸ್. ಲಲಿತ



ಸಂಜೆ ಕ್ಲಬ್‌ಗೆ ಬರುವ ಸದಸ್ಯರಿಗೆ ಬೇಕಾದ ಪತ್ರಿಕೆಗಳನ್ನು ನಗುನಗುತ್ತಾ ಒದಗಿಸಿ, ರಾತ್ರಿ ಅವರು ಹೊರಟಾಗ, ಎಲ್ಲ ಪತ್ರಿಕೆಗಳನ್ನೂ ಸರಿಯಾಗಿ ಜೋಡಿಸಿಡುವ ಜವಾಬ್ದಾರಿ ರಾಮಜ್ಜನದು. ಎಲ್ಲಾ ಮುಗಿಯುವಾಗ, ರಾತ್ರಿ ಗಂಟೆ ಹತ್ತಾಗಲೀ ಹನ್ನೆರಡಾಗಲೀ ಆತ ಗೊಣಗಿದ್ದೇ ಇಲ್ಲ. ಜೀವನದಲ್ಲಿ ವಸಂತ ಕಾಣದಿದ್ದರೂ, ಆಯಸ್ಸಿನ ೭೫ ವಸಂತಗಳನ್ನು ಹಿಂದೆ ಹಾಕಿದ್ರ ರಾಮಜ್ಜನ ಎಷ್ಟೋ ವರ್ಷಗಳ ದಿನಚರಿ ಚಾಚೂ ತಪ್ಪದೆ ಹೀಗೇ ಮುಂದುವರಿದಿತ್ತಲ್ಲ. ಇಷ್ಟು ದೀರ್ಘ ಜೀವನದ ಹಾದಿ ಸವೆಸಿದ ರಾಮಜ್ಜನಿಗೂ ಈ ಕ್ಲಬ್ಬಿಗೂ ಏನು ಸಂಬಂಧ? ಕ್ಲಬ್ಬಿನಲ್ಲಿ ಒಂಟಿಯಾಗಿ ಕಾಲಹಾಕುತ್ತಿದ್ದ ರಾಮಜ್ಜ ಈ ಜೀವನದಲ್ಲೂ ಏಕಾಂಗಿಯೆ?

ಛೆ, ಛೆ, ಖಂಡಿತಾ ಇಲ್ಲ. ರಾಮಜ್ಜನಿಗೆ ಎಲ್ಲರೂ ಇದ್ದರು. ತಂದೆ-ತಾಯಿ, ನಾಲ್ಕಾರು ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರಿಂದ ತುಂಬಿದ ಮನೆಯ ದೊಡ್ಡ ಕುಟುಂಬದಲ್ಲೇ ಆತ ಹುಟ್ಟಿದ್ದು. ನಮ್ಮ ಜೀವನವನ್ನು ರೂಪಿಸಿಕೊಳ್ಳುವ ರೂವಾರಿಗಳು ನಾವೇ ಎಂಬ ಅಹಮಿಕೆ ಒಮ್ಮೊಮ್ಮೆ ತಲೆ ಎತ್ತಿದರೂ, ಹುಟ್ಟು ಹೇಗೆ ನಮ್ಮ ಕೈಲಿಲ್ಲವೋ, ಮುಂದಿನ ಜೀವನವೂ ಹಾಗೆ, ನಮ್ಮ ನಿಯಂತ್ರಣಕ್ಕೆ ಮೀರಿದ್ದು ಅನಿಸುತ್ತದೆ ಮತ್ತೊಮ್ಮೆ. ಮನೆಯ ಬಡತನದ ನಡುವೆಯೂ ಹೇಗೋ ವಿದ್ಯಾಭ್ಯಾಸ ಮುಗಿಸಿದ ಅಣ್ಣತಮ್ಮಂದಿರು ಜೀವನದಲ್ಲಿ ತಮ್ಮದ್ದೇ ಆದ ಒಂದು ಸ್ಥಾನ ಗಳಿಸಿದರು. ಅವರವರದೇ ಮನೆ, ಸಂಸಾರ, ಮಕ್ಕಳು ಎಂದು ನೆಲೆ ಕಂಡದ್ದಾಯಿತು. ಅಸಮಾನವಾದ ಕೈಬೆರಳುಗಳಂತೆ, ಒಂದೇ ತಾಯಿಯ ಮಕ್ಕಳಾದರೂ ರಾಮಜ್ಜ ತನ್ನ ಅಣ್ಣ-ತಮ್ಮಂದಿರ ಸಮಾನಾಂತರಕ್ಕೆ ನಿಲ್ಲಲಾಗಲಿಲ್ಲ. ಜೀವನ ಕವಲೊಡೆದು ಅವರವರ ದಾರಿಯಲ್ಲಿ ಅವರು ನಡೆದರೂ ರಾಮಜ್ಜನಿಗೆ ಮಾತ್ರ ಮುಂದಿನ ದಾರಿ ಅಸ್ಪಷ್ಟ.

ಹಾಗೂ ಹೀಗೂ ಲೋವರ್ ಸೆಕೆಂಡರಿವರೆಗೆ ಓದಿದ ರಾಮಜ್ಜ, ಓದು ಮುಂದುವರಿಸಬೇಕೆಂದಾಗ ಮುಂದಾದದ್ದು ಬರೀ ಎಡರುತೊಡರುಗಳೇ. ತಂದೆ ತೀರಿದ ಮೇಲೆ ಮನೆಯ ಹೊಣೆ ನಿರ್ವಹಿಸುವುದೇ ತಾಯಿಗೆ ಕಷ್ಟ. ಅಂಥಾದರಲ್ಲಿ ರಾಮಜ್ಜನ ಫೀಸು, ಪುಸ್ತಕಗಳ ಏರ್ಪಾಡಿನ ಪಾಡೇನು? ಉಳಿದ ಅಣ್ಣಂದಿರಷ್ಟು ತೀಕ್ಷ್ಣ ಬುದ್ಧಿ ಇಲ್ಲವಾದರೂ, ಅವರ ವ್ಯವಹಾರಜ್ಞಾನ, ಸಾಹಿತ್ಯ ಹಾಗೂ ಓದಿನ ಬಗೆಗಿನ ಅವರ ಅಪಾರ ಆಸಕ್ತಿ ಅಸಾಧಾರಣವಾದದ್ದು. ಆದರೆ ಮನೆಯ ಆರ್ಥಿಕ ಪರಿಸ್ಥಿತಿ ಮಾತ್ರ, ಜೀವನ ನಿರ್ವಹಣೆಗೆ ಏನಾದರೊಂದು ಹಾದಿ ಹುಡುಕಿಕೊಳ್ಳಲೇಬೇಕಾದ ಅನಿವಾರ್ಯತೆಯನ್ನು ಒತ್ತಿ ಹೇಳಿತ್ತು. 'ಆಪತ್ತಿಗೆ ಆದವನೇ ನೆಂಟ' ಅಂತೆಯೇ ಈ ವೇಳೆಯಲ್ಲಿ ನೆರವಿಗೆ ಬಂದವರು. ಎದುರು ಮನೆಯ ಮಾದಪ್ಪ. ತಮಗೆ ಪರಿಚಿತರಾದವರೊಬ್ಬರಲ್ಲಿ ಹೇಳಿ, ಪ್ರೆಸ್ ಒಂದರಲ್ಲಿ ಕೆಲಸಕ್ಕೆ ಸೇರಿಸಿದರು ರಾಮಜ್ಜನನ್ನು. ಅದಕ್ಕಾಗಿ ಬೆಂಗಳೂರು ಬಿಟ್ಟು ಮೈಸೂರು ಸೇರಿದ ರಾಮಜ್ಜನಿಗೆ, ಆಗ ಶುರುವಾದ ಕೋಣೆಯ ವಾಸ, ಹೊಟೇಲೂಟ, ಅವರ ಜೀವನದುದ್ದಕ್ಕೂ ನಡೆದು ಬಂತು. ನಡೆಯಲು ಇರುವ ಹಾದಿ ಒಂದೇ ಎಂದು ಕಂಡಾಗ, ಅಲ್ಲಿ ಮನುಷ್ಯನ ಬೇಕು ಬೇಡಗಳಿಗೆ ಎಡೆ ಎಲ್ಲಿ?

ಮದುವೆ, ಮನೆ, ಮಕ್ಕಳ ಸುಖ, ಅವರ ಜೀವನದಲ್ಲೊದಗಿ ಬರಲೇ ಇಲ್ಲ. ತಾನಾಗಿಯೇ ಆತ ಆ ದಿಸೆಯಲ್ಲಿ ಪ್ರಯತ್ನ ಪಟ್ಟಿದ್ದೂ ಇಲ್ಲ. ಅವರಿಗಾಗಿ ಇತರರು ಪ್ರಯತ್ನಪಟ್ಟರೋ ಇಲ್ಲವೋ, ಅಂತೂ ಯಾವುದೂ ಕೈಗೂಡಲಿಲ್ಲ. ತಾಯಿ ಇರುವವರೆಗೂ, ಅವರನ್ನು ನೋಡಲಾದರೂ ಆಗಾಗ ಅಣ್ಣಂದಿರ ಮನೆಗೆ ಹೋಗುತ್ತಿದ್ದ ರಾಮಜ್ಜನಿಗೆ, ತಾಯಿಯೂ ಸತ್ತ ನಂತರ ಸಂಬಂಧದ ಎಳೆಗಳು ಕಡಿದು ಹೋದವೆಂದೇ ಹೇಳಬೇಕು. ಮೈಸೂರಿನಲ್ಲಿದ್ದ ಅಷ್ಟಿಷ್ಟು ನೆಂಟರು ಅಕ್ಕನ ಮಕ್ಕಳು, ಅಕ್ಕ-ಭಾವನ ತಿಥಿಗೆಂದೋ, ಇಲ್ಲವೇ ಯಾವುದೋ ಹಬ್ಬ ಹರಿದಿನಗಳಲ್ಲೊಮ್ಮೆ ಕರೆದಾಗಲೋ ಭೇಟಿ ಕೊಟ್ಟರಾಯಿತು. ಅದೂ ಕ್ಲಬ್ಬಿನ ಕೆಲಸದ ವೇಳೆಯಾಗಿಲ್ಲದಿದ್ದಲ್ಲಿ ಮಾತ್ರ. ಯಾವುದೇ ಕಾರಣಕ್ಕೂ ಕ್ಲಬ್ಬಿನ ಕೆಲಸಗಳಿಗೆ ತೊಂದರೆಯಾಗಬಾರದೆನ್ನುವುದೇ ರಾಮಜ್ಜನ ಉದ್ದೇಶ.

ಕ್ಲಬ್ಬಿಗೆ ಸಮೀಪ ನಾವಿದ್ದುದು. ಆಗಾಗ್ಗೆ ನಮ್ಮಲ್ಲಿಗೆ ಬರುವ ರಾಮಜ್ಜನೆಂದರೆ ಮನೆಯಲ್ಲಿ ಎಲ್ಲರಿಗೂ ಇಷ್ಟ. ಹಲ್ಲಿಲ್ಲದ ಅವನಿಗೆ ಮೆತ್ತಗಿನ ಅನ್ನ, ತಿಳಿಸಾರೆಂದರೆ ಬಹಳ ಇಷ್ಟ. ಊಟ ಮಾಡಿ,

ರಗ್ಗು ಹೊದೆದು ಅಲ್ಲಿಯೇ ಇದ್ದ ಮಂಚದ ಮೇಲೆ ಒಂದೆರಡು ಗಂಟೆ ಮಲಗುವುದು ಅವನಿಗೆ ಹಿತ. ಒಂದು ದಿಂಬು ಕೊಟ್ಟರಾಯಿತು. ಎದ್ದ ಮೇಲೊಂದು ಬಟ್ಟಲು ಬಿಸಿ ಕಾಫಿಯಿಂದ ಸಂತೃಪ್ತವಾಗುತ್ತಿದ್ದ ಜೀವಕ್ಕೆ ಜೀವನ ತಂದ ನಲಿವಿಗಿಂತ ಒಂಟಿತನದ ನೋವು ಕಂಡುಂಡುದ್ದೇ ಹೆಚ್ಚು. ಆದರೂ ಮುಖದಲ್ಲಿ ಸದಾ ಸಮಾಧಾನ. ಯಾರೊಂದಿಗೂ ತನ್ನ ಸುಖ-ದುಃಖ, ಬೇಕು-ಬೇಡಗಳನ್ನು ಹೇಳಿಕೊಂಡವನೇ ಅಲ್ಲ. ಯಾರ ಬಗೆಗೂ ಒಂದು ಸಲ್ಲದ ಮಾತಾಡಿದ್ದೂ ಇಲ್ಲ. ಷರಟು, ಕೋಟು ಎಲ್ಲವೂ ಅದೇ ಆಗಿದ್ದ ದೊಗಳೆ ಅಂಗಿಯೊಂದಿಗೆ, ತುಂಡು ಪಂಚೆಯಷ್ಟೇ. ವರ್ಷದ ಹನ್ನೆರಡು ತಿಂಗಳೂ ಅವನ ಉಡುಪು, ಕ್ಷೌರ ಕಾಣದ ಮುಖದಲ್ಲಿದ್ದ ಬಿಳಿಯ ಗಡ್ಡ, ಅದರೊಂದಿಗೆ ಬೆಳೆದ ತಲೆಗೂದಲು ಎಂದೂ ಬದಲಾವಣೆ ಕಂಡಿದ್ದಿಲ್ಲ.

ಎಡವಿದ ಕಾಲೇ ಎಡವುವಂತೆ, ರಾಮಜ್ಜ ಕೆಲಸ ಮಾಡುತ್ತಿದ್ದ ಪ್ರೆಸ್ಸಿಗೆ ಆರ್ಥಿಕ ಮುಗ್ಗಟ್ಟಿನಿಂದಾಗಿ ಮುಚ್ಚುವ ಸ್ಥಿತಿ. ಕೆಲಸವಿರುವವರೆಗೂ ಬರುತ್ತಿದ್ದ ವರಮಾನ ಊಟ-ತಿಂಡಿಗೆ ಅಲ್ಲಿಂದಲ್ಲೇ ನೇರವಾಗುತ್ತಿತ್ತು. ಏನೋ ಒಂದು ರೀತಿಯ ಜೀವನ ನಡೆದುಹೋಗುತ್ತಿತ್ತು.

ಪ್ರೆಸ್ ಮುಚ್ಚಿದಾಗ ಮುಂದೇನು? ಹಣಕ್ಕೆ ಪ್ರಾಧಾನ್ಯವುಳ್ಳ ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ತನ್ನಂಥವರು ಎಲ್ಲಿ ನಿಲ್ಲಬಹುದು? ಯೋಚಿಸಿ ಹಣ್ಣಾದ ರಾಮಜ್ಜ. ಈ ಕಾರಣವೇ ಅವನಿಗೆ ಸಂಸಾರದ ಹೊಣೆ ಹೊರಲು ಅಸಾಧ್ಯವೆನಿಸಿ, ಸಾಂಸಾರಿಕ ಜೀವನದಿಂದ ಅವನನ್ನು ವಿಮುಖನನ್ನಾಗಿಸಿತ್ತೆ? ಏನೇ ಇರಲಿ, ಮನುಷ್ಯನ ಒಳ್ಳೆಯ ಗುಣಗಳು ಎಲ್ಲಿಯೋ ಒಂದೆಡೆ ಗುರುತಿಸಲ್ಪಡುತ್ತವೆ. ಅಂತೆಯೇ ಇವರ ನಿಸ್ಪೃಹತೆ, ಶಿಸ್ತು ಜವಾಬ್ದಾರಿಯುತ ನಡವಳಿಕೆಗಳನ್ನರಿತ ಪ್ರೆಸ್ಸಿನ ಮಾಲೀಕರು, ತಮಗೆ ನಷ್ಟವಾದರೂ ಅವನ ಕೈಬಿಡದೆ, ಕ್ಲಬ್ಬಿಗೆ ತಂದು ಕೆಲಸಕ್ಕೆ ಸೇರಿಸಿದರು. ತನ್ನ ವಿನಯ ಹಾಗೂ ಸಮಾಧಾನದ ಗುಣಗಳಿಂದ ಎಲ್ಲರ ಮನಗೆದ್ದು, ಕ್ಲಬ್ಬಿನವರಿಗೆಲ್ಲ ಅಚ್ಚು ಮೆಚ್ಚಿನವನಾದ ರಾಮಜ್ಜ.

ಬೆಳಗಿನ ಜಾವವೇ ಫೋನ್ ಕರೆ ಬಂದಾಗ,

> ಷರ್ಲಾಕ್ ಹೋಮ್ಸ್ ಸ್ವರ್ಗದ ಬಾಗಿಲು ತಟ್ಟುತ್ತಿದ್ದ.
>
> "ಯಾರಪ್ಪಾ ನೀನು?" ದೇವದೂತ ಹೊರಬಂದು ಕೇಳಿದ.
>
> "ಷರ್ಲಾಕ್ ಹೋಮ್ಸ್."
>
> "ಭೂಮಿಯ ಮೇಲೆ ಏನು ಮಾಡುತ್ತಿದ್ದೆ?"
>
> "ಪತ್ತೇದಾರಿ ಕೆಲಸ."
>
> "ಹಾಗಾದರೆ ಸ್ವರ್ಗದಲ್ಲಿರುವ ಲಕ್ಷಾಂತರ ಜನರಲ್ಲಿ ಆಡಂ- ಈವ್‌ರನ್ನು ಗುರುತಿಸಿ ತೋರಿಸು. ಅಂದರೆ ಕಾಯಂ ಆಗಿ ಸ್ವರ್ಗದಲ್ಲಿರಲು ಅನುಮತಿ ಕೊಡುತ್ತೇನೆ."
>
> "ಅದರಲ್ಲೇನು ಮಹಾ! ಅವರಿಬ್ಬರಿಗೆ ಮಾತ್ರ ಹೊಕ್ಕಳು ಇರುವುದಿಲ್ಲ" ಕೂಡಲೇ ಬಂತು ಉತ್ತರ.
>
> - 'ರೀಡರ್ಸ್ ಡೈಜೆಸ್ಟ್'ನಿಂದ

ರಾಮಜ್ಜನಿಗೆ ಲಘು ಹೃದಯಾಘಾತವಾಗಿ ಆಸ್ಪತ್ರೆಗೆ ಸೇರಿಸಿರುವುದಾಗಿ ತಿಳಿಸಿದರು ಕ್ಲಬ್‌ನ ಕಾರ್ಯದರ್ಶಿ. ಮುಂದೆ ಎಂಟ್ಹತ್ತು ದಿನ ಆಸ್ಪತ್ರೆಯ ವಾಸ. ನಾನೂ ಹೋಗಿ ನಾಲ್ಕಾರು ಗಂಟೆ ಅವನೊಂದಿಗೆ ಕುಳಿತಿದ್ದು ಬರುತ್ತಿದ್ದೆ. ಔಷಧಿ ಮಾತ್ರೆಗಳು, ಪರಿಣಾಮವಾಗಿ ಅದರೊಂದಿಗೆ ಬರುತ್ತಿದ್ದ ತಲೆನೋವು ತಡೆಯಲಾರದೆ ಹೊರಳಾಡುತ್ತಿದ್ದ ರಾಮಜ್ಜನನ್ನು ಕಂಡಾಗ ಮನಸ್ಸಿಗೆ ಹಿಂಸೆಯಾಗುತ್ತಿತ್ತು. ಸ್ವಲ್ಪ ಸಮಾಧಾನವೆನಿಸಿದಾಗ ಏನನಿಸುತ್ತಿತ್ತೋ ಅವನಿಗೆ, "ಏನೋ ಜೀವನವೆಲ್ಲ ಹೀಗೇ ಆಯ್ತು, ನಾವಂದು ಕೊಳ್ಳುವುದೇ ಒಂದು, ಆದಾಗುವುದೇ ಒಂದು. ಒಬ್ಬೊಬ್ಬರ ಜೀವನ ಬೇಕೆಂದು ಕೊಂಡಂತೆ ಆಗುವುದೇ ಇಲ್ಲ" ಎನ್ನುವಾಗ ಅವನ ಮನದಾಳದಲ್ಲಿ ಜಿನುಗುತ್ತಿದ್ದ ನೋವಿನ ಸೆಲೆಯ ಅರಿವಾಗುತ್ತಿತ್ತು ನನಗೆ. ನೋವೆನಿಸಿದಾಗ ಹಿಡಿದು ನೇವರಿಸುವ ಕೈಯ್ಯಾಸರೆ ಇಲ್ಲದ ಒಂಟಿತನದ ಶಿಕ್ಷೆ ಎಷ್ಟೊಂದು ಘೋರ!

ಇದ್ದಕ್ಕಿದ್ದಂತೆ ಆಸ್ಪತ್ರೆ ಸೇರಿ, ಅಷ್ಟು ದಿನಗಳಿದ್ದಾಗ, ಅವನ ಬಟ್ಟೆ-ಬರೆ ಹಾಗೂ ಇತರ ಅಗತ್ಯ ವಸ್ತುಗಳನ್ನು ಕ್ಲಬ್ಬಿನಿಂದ ತರಿಸಬೇಕಾಗುತ್ತಿತ್ತು. ಸದಾ ತನ್ನೊಂದಿಗೆ ಇಟ್ಟುಕೊಳ್ಳುತ್ತಿದ್ದ ಬೀಗದ ಕೈ

ಕೂಡ ಯಾರಿಗೂ ಕೊಡಲೊಪ್ಪುತ್ತಿರಲಿಲ್ಲ ರಾಮಜ್ಜ. 'ಯಾರನ್ನೂ ನಂಬಕ್ಕಾಗಲ್ಲ. ನನ್ನ ರೂಂನಲ್ಲಿ ಕ್ಲಬ್ಬಿನ ಪುಸ್ತಕಗಳೆಲ್ಲ ತುಂಬಿವೆ. ಹುಡುಗರು ಬೇಜವಾಬ್ದಾರಿಯಿಂದ ಎಲ್ಲಾದ್ರು ಹಾಕ್ಬಿಟ್ರೆ ತೊಂದರೆಯಾಗುತ್ತೆ' ಅನ್ನುತ್ತಿದ್ದ. ರಾಮಜ್ಜನಿಗೆ ತನ್ನ ಜವಾಬ್ದಾರಿಯ ಬಗ್ಗೆ ಆ ಸಮಯದಲ್ಲೂ ಅಷ್ಟು ಮುತುವರ್ಜಿ! ಈ ಗುಣದಿಂದಲೇ ಅಲ್ಲವೇ ಕ್ಲಬ್ಬಿನ ಅಧಿಕಾರ ವರ್ಗವೇ ಅವನನ್ನು ಜೀವನ ಪೂರ್ತಿ ನೋಡಿಕೊಳ್ಳುವ ಹೊಣೆ ಹೊತ್ತದ್ದು?

ಹುಟ್ಟಿದವರೊಂದು ದಿನ ಹೋಗಲೇಬೇಕಲ್ಲಾ. ಇಂದು ರಾಮಜ್ಜ ತೀರಿಕೊಂಡ ಸುದ್ದಿ ಸಾರಿತ್ತು ಫೋನು. ತಕ್ಷಣ ಆಸ್ಪತ್ರೆಗೆ ಧಾವಿಸಿದೆ. ಜಗದ ಜಂಜಾಟವೆಲ್ಲ ಕಳೆದು, ಶಾಂತ ಸ್ಥಿತಿಯನ್ನನುಭವಿಸುತ್ತಿರುವಂತೆ ಮಲಗಿದ್ದ ರಾಮಜ್ಜ.

ಸತ್ತ ವ್ಯಕ್ತಿಗೇನು ಬೆಲೆ? ಆದಷ್ಟು ಬೇಗ ಮಂಚ ಖಾಲಿಯಾದರೆ, ಕಾಯುತ್ತಿರುವ ಮತ್ತೊಬ್ಬ ರೋಗಿಗೆ ಜಾಗ ಸಿಕ್ಕೀತೆನ್ನುವ ಆತುರ ಅಷ್ಟೇ. ಬದುಕಿನಲ್ಲಿ ಸಂಬಂಧಗಳೆಷ್ಟೇ ನಿಕಟವಾದುದಾಗಿರಲಿ, ಸತ್ತ ಮೇಲೆ, ವ್ಯಕ್ತಿಯನ್ನು ಆದಷ್ಟು ಬೇಗ ಸಾಗಿಸುವುದೇ ಎಲ್ಲರ ಉದ್ದೇಶ. ಅಂದ ಮೇಲೆ ರಾಮಜ್ಜನೇನು ಹೊರತು ಇದಕ್ಕೆ?

ಮಂಚ ತೊಳೆದು ಮತ್ತೊಬ್ಬ ರೋಗಿಗಾಗಿ ಸಿದ್ಧಪಡಿಸಲು ರಾಮಜ್ಜನನ್ನು ಕೆಳಗೆ ಮಲಗಿಸಲು ಎತ್ತಿದಾಗ, ದಿಂಬಿನ ಬಳಿಯಿದ್ದ ಅವನ ಡೈರಿ ಬಿದ್ದಿತು. ದೈನಂದಿನ ಸಣ್ಣ ಸಣ್ಣ ವಿವರಗಳನ್ನೂ ಬರೆದು, ಡೈರಿಯನ್ನು ಬಳಿಯಲ್ಲೇ ಇಟ್ಟುಕೊಳ್ಳುವುದು ರಾಮಜ್ಜನ ಅಭ್ಯಾಸ. ಕುತೂಹಲದಿಂದ, ಬಿದ್ದ ಡೈರಿಯನ್ನೆತ್ತಿ ಪುಟ ತಿರುವಿದಾಗ, "ಮನುಷ್ಯ ಸಮಾಜದಿಂದ ಒಂದಲ್ಲ ಒಂದು ರೀತಿ ಉಪಕೃತನಾಗಿರುತ್ತಾನೆ. ಹಲವರು ತಮ್ಮ ಜೀವಿತಾ ವಧಿಯಲ್ಲೇ ಸಮಾಜದ ಋಣ ಸಂದಾಯ ಮಾಡಲೆತ್ನಿಸುತ್ತಾರೆ. ಆದರೆ ಜೀವನದಲ್ಲಿ ತಾನಿದ್ದ ಪರಿಸ್ಥಿತಿಯಿಂದಾಗಿ, ಯಾರಿಗೂ ತಾನೇನೂ ಒಳಿತು ಮಾಡಲಾಗಿಲ್ಲ. ಆದ್ದರಿಂದ ತನ್ನ ತರುವಾಯ ತನ್ನ ಕಣ್ಣುಗಳನ್ನು ದಾನ ಮಾಡಬೇಕೆಂದೂ, ಇದರಿಂದ ಕಿಂಚಿತ್ತಾದರೂ ಸಮಾಜಕ್ಕೆ ತನ್ನ ಋಣ ಸಂದಾಯವಾದೀತೆಂಬ ಆಸೆಯನ್ನು ಸ್ಫುಟವಾಗಿ ಬರೆದಿಟ್ಟಿದ್ದ ರಾಮಜ್ಜ. ಎಲ್ಲ ಭಾವನೆಗಳನ್ನೂ ಮನದಲ್ಲೇ ನುಂಗಿಕೊಳ್ಳುವಂತೆ, ಈ ಆಸೆಯನ್ನೂ ಆತ ಯಾರಲ್ಲಿಯೂ ಬಾಯಿ ಬಿಟ್ಟು ಹೇಳಿರಲಿಲ್ಲ. ಇಷ್ಟಕ್ಕೂ ಹೇಳಿದ್ದರೂ ಆಸೆ ನೆರವೇರೀತೆಂಬ ಭರವಸೆ ಎಲ್ಲಿ?

ನೇತ್ರತಜ್ಞರು, ದಾದಿಯರು ಬಂದಾಗ ಮುಂದಿನ ಕ್ರಮಗಳು ಜರುಗಿದವು. ಯಾವ ಅದೃಷ್ಟಶಾಲಿಯ, ಜೀವನದ ಕತ್ತಲನ್ನು ದೂರಾಗಿಸಿ, ಬಾಳಿನ ಬೆಳಕು ಹೊತ್ತಿಸಿವೆಯೋ ಈ ಜೋಡಿ ಕಣ್ಣುಗಳು! ಯಾರಿಗೆ ಗೊತ್ತು!

"ಫ್ಲಾಯಿಂಗ್ ಸ್ಟಾರ್"

ಈಚೆಗೆ ಒಂದು ಸಂಸ್ಥೆ "ಫ್ಲಾಯಿಂಗ್ ಸ್ಟಾರ್"ಎಂಬ ಕಾರನ್ನು ಹೊರತಂದಿದೆ. ಅದು ಚಾಲನೆಗೊಂಡ ಏಳನೆ ಸೆಕೆಂಡಿಗೆ ಗಂಟೆಗೆ ೯೬.೫ ಕಿ.ಮೀ. ವೇಗವನ್ನು ಪಡೆಯುತ್ತದೆ. ಅದರ ಗರಿಷ್ಠ ವೇಗ ಗಂಟೆಗೆ ೨೨೫ ಕಿ.ಮೀ. ಅದರ ಬೆಲೆ ೧,೨೬,೦೦೦ ಡಾಲರ್ (೪೪,೧೦,೦೦೦ ರೂ). ಆ ಕಾರು ಸಂಪೂರ್ಣವಾಗಿ ಎಲೆಕ್ಟ್ರಾನಿಕ್ ಬಿಡಿಭಾಗಗಳಿಂದ ಯುಕ್ತವಾದದ್ದು.

ಹೋಲಿಕೆ


ಅಮೇರಿಕದ ಅಧ್ಯಕ್ಷರಾಗಿದ್ದ ಅಬ್ರಹಾಮ್ ಲಿಂಕನ್ ಒಬ್ಬ ಕೊಲೆಗಡುಕನಿಗೆ ಬಲಿಯಾದ ವಿಚಾರವನ್ನು ನೀವು ಬಲ್ಲಿರಿ. ಲಿಂಕನ್ನರ ಅಜ್ಜನ ಹೆಸರು ಅಬ್ರಹಾಮ್. ಅಜ್ಜಿಯ ಹೆಸರು ಮೇರಿ. ಅವರಿಬ್ಬರ ಮಗನ ಹೆಸರು ಥಾಮಸ್. ಗಮನಿಸಬೇಕಾದ ಅಂಶವೆಂದರೆ ಲಿಂಕನ್ನರ ಪತ್ನಿಯ ಹೆಸರೂ ಮೇರಿ, ಮಗನ ಹೆಸರೂ ಥಾಮಸ್. ಇನ್ನೂ ಒಂದು ವಿಶೇಷವೆಂದರೆ ಅಜ್ಜ ಅಬ್ರಹಾಮ್‌ರನ್ನೂ ಒಬ್ಬ ಕೊಲೆಗಡುಕ ಗುಂಡಿಕ್ಕಿ ಕೊಂದಿದ್ದ.

- ವಿಜಯ ಸಿ. ಪೂಜಾರಿ

ಮಹಾತ್ಮಾಜಿ ಕಣ್ಣೀರು ಸುರಿಸಿದಾಗ

ಸಂಗ್ರಹ: ಎಸ್.ವ್ಹಿ. ಪಾಟೀಲ

'ದೇವರ ಇಚ್ಛೆ ಏನೇನಿದೆಯೋ ಏನೋ' ಎಂದು ಗಾಂಧೀಜಿ ಒಮ್ಮೆಂದೊಮ್ಮೆಲೇ ಕಣ್ಣಲ್ಲಿ ನೀರು ತಂದುಕೊಂಡರು.



ಗಾಂಧೀಜಿಗೆ ಆಗ ೪೮ ವರ್ಷ. ೧೯೧೭ರಲ್ಲಿ ಲೋಕಮಾನ್ಯ ತಿಲಕ ಮತ್ತು ಡಾ. ಅನಿಬೆಸೆಂಟರ ಮುಂದಾಳತ್ವದಲ್ಲಿ 'ಹೋಮ್ ರೋಲ್' ಚಳವಳಿ ಪ್ರಾರಂಭವಾಗಿತ್ತು. ಒಂದು ಕಡೆ ಬಿಹಾರದ ಚಂಪಾರಣ್ಯದಲ್ಲಿ ಗಾಂಧೀಜಿಯ ನೇತೃತ್ವದಲ್ಲಿ ನೀಲಿ ಬೆಳೆ ಬೆಳೆಯುವ ಬಡ ರೈತರ ಮೇಲೆ ಸರಕಾರದ ಕುಮ್ಮಕ್ಕಿನಿಂದ ಬ್ರಿಟಿಶ್ ಪ್ಲಾಂಟರರು ಎಸಗುತ್ತಿದ್ದ ದೌರ್ಜನ್ಯವನ್ನು ಕುರಿತು ಕೂಲಂಕಶ ಚೌಕಶಿ; ಇನ್ನೊಂದೆಡೆ ಗುಜರಾತಿನ ಖೇಡಾದಲ್ಲಿ ಭೂ ಕಂದಾಯವನ್ನು ವಿಪರೀತವಾಗಿ ಹೆಚ್ಚಿಸಿದ್ದರ ವಿರುದ್ಧ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ಸುಸಂಘಟಿತ ಪ್ರತಿಭಟನೆ. ಇವರಡೂ ಆಂದೋಲನಗಳಲ್ಲಿ ಗಾಂಧೀಜಿ ಅಹೋರಾತ್ರಿ ಕೆಲಸ ಮಾಡಿ, ತತ್ಪರಿಣಾಮವಾಗಿ ಅನಾರೋಗ್ಯದಿಂದ ಹಾಸಿಗೆ ಹಿಡಿದರು. ದೇಹಸ್ಥಿತಿ ಚಿಂತಾಜನಕವಾಯಿತು. ಆ ಸಮಯದಲ್ಲಿ ಅವರು ಅಹಮದಾಬಾದಿನಲ್ಲಿಯ ಸೇಠ್ ಅಂಬಾಲಾಲ ಸಾರಾಭಾಯಿ ಇವರ (ಅರ)ಮನೆಯಲ್ಲಿ ಉಳಿದುಕೊಂಡಿದ್ದರು. ದಿನಾಲು ಡಾಕ್ಟರರು ಬಂದು ನೋಡಿಕೊಂಡು ಹೋಗುತ್ತಿದ್ದರು. ಆದರೆ ಗಾಂಧೀಜಿ ಔಷಧ ತೆಗೆದುಕೊಳ್ಳಲು ಸಿದ್ಧರಿರಲಿಲ್ಲ. ಇಂಥಾ ಸಮಯದಲ್ಲೇ ಗಾಂಧೀಜಿಯನ್ನು ನೋಡಿಕೊಂಡು ಬರಲು ಡಾ. ರಾಜೇಂದ್ರಬಾಬು ಅವರು ಮುಂಬಯಿಯಿಂದ ಅಹಮದಾಬಾದಿಗೆ

ಹೋದದ್ದು.

ಒಂದು ದಿನ ರಾಜೇಂದ್ರಪ್ರಸಾದರು ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ಬರಲು ಪರಸ್ಥಳಕ್ಕೆ ಹೋದಾಗ ಗಾಂಧೀಜಿಗೆ ಜ್ವರ ಹೆಚ್ಚಾಗಿ ಸಾಬರಮತಿ ಆಶ್ರಮಕ್ಕೆ ಹೋಗಲು ನಿರ್ಧರಿಸಿದರು. ಆದರೆ ಆಗ ಸಾಬರಮತಿ ಆಶ್ರಮ ಇನ್ನೂ ಪೂರ್ತಿ ಅಭಿವೃದ್ಧಿಗೊಂಡಿರಲಿಲ್ಲ. ಕೆಲವು ಮನೆಗಳು ತಲೆ ಎತ್ತಿ ಅವುಗಳಲ್ಲಿ ಜನರು ವಾಸಿಸಲು ಬರತೊಡಗಿದ್ದರೂ ಅಹಮದಾಬಾದಿನಲ್ಲಿ ಲಭ್ಯವಿದ್ದ ಸೌಕರ್ಯಗಳು ಅಲ್ಲಿ ದೊರಕುವಂತಿರಲಿಲ್ಲ. ಈ ಕಾರಣಕ್ಕಾಗಿ ಅಹಮದಾಬಾದಿನಲ್ಲಿ ಗಾಂಧೀಜಿಯನ್ನು ಮನವೊಲಿಸಿ ಉಳಿಸಿಕೊಳ್ಳಲು ಅವರ ಹಿತೈಷಿಗಳು ಪ್ರಯತ್ನಿಸಿ ವಿಫಲರಾಗಿದ್ದರು.

ಪ್ರವಾಸದಿಂದ ಹಿಂದಿರುಗಿದ ಡಾ. ಪ್ರಸಾದರು ವಿಷಯ ತಿಳಿದ ತಕ್ಷಣ ಅದೇ ಸಂಜೆ ಸಾಬರಮತಿಗೆ ಹೊರಟುಹೋದರು. ಮರುದಿನ ಮುಂಜಾನೆ ಅವರು ಗಾಂಧೀಜಿಯ ಬಳಿ ಹೋದಾಗ ಗಾಂಧೀಜಿ ಹೊರಸಿನ ಮೇಲೆ ಕುಳಿತಿದ್ದರು. ಜ್ವರ ಕಡಿಮೆಯಾಗಿತ್ತು. ಆದರೆ ಅಶಕ್ತತೆ ಇನ್ನೂ ಇತ್ತು. ಶ್ರೀ ಛಗನಲಾಲರನ್ನು ಬರಹೇಳಿ ಗಾಂಧೀಜಿ ಮಾತು ಪ್ರಾರಂಭಿಸಿದರು. ಅವರು ಉದ್ವೇಗಗೊಂಡಂತೆ ಅನಿಸಿತು ಮತ್ತು ಭಾವನಾಪರವಶರಾಗಿ ಬಿಟ್ಟೂ ಬಿಡದೆ ಸುಮಾರು ಸಮಯ ಮಾತನಾಡಿದರು. ಪರಿಣಾಮವಾಗಿ ಮತ್ತೆ ಜ್ವರ ಏರಿತು.

"ಈ ಪ್ರಸಂಗವನ್ನು ನಾನು ಎಂದೂ ಮರೆಯಲಾರೆ" ಎಂದಿದ್ದಾರೆ ರಾಜೇಂದ್ರ ಪ್ರಸಾದರು. ಆಗ 'ಗಾಂಧೀಜಿ ಹೇಳಿದ್ದನ್ನು ಅವರ ಮಾತುಗಳಲ್ಲೆ ಸಂಕ್ಷಿಪ್ತವಾಗಿ ಹೀಗೆ ಬಾಬೂಜಿ ಬರೆದಿದ್ದಾರೆ:

"ಅಹಮದಾಬಾದಿನಲ್ಲಿ ಜ್ವರ ನನ್ನ ದೇಹಕ್ಕೆ ಮಾತ್ರ ತಾಗಿತ್ತು. ಆದರೆ ಅಲ್ಲಿಯ ಐಷಾರಾಮದ ಅರಮನೆ ವಾಸವು ನನ್ನ ಮನಸ್ಸನ್ನು ಕೊರೆಯುವಂತೆ ಮಾಡಿತು. 'ಗಾಂಧೀ, ನಿನಗೆ ಇಲ್ಲಿ ಏನಾಗಬೇಕಿದೆ? ನೀನು ಇಲ್ಲಿ ಅಸಂಗತ. ನಿನ್ನ ಸ್ಥಳ ಇರುವುದು ಆಶ್ರಮದ ಬಡ ಜನರ ಕುಟೀರದಲ್ಲಿ ಹೊರತು ಇಲ್ಲಿ ಅಲ್ಲ. ನೀನು ಇಲ್ಲಿಂದ ಕೂಡಲೇ ಹೊರಡು' ಎಂದು ಒಂದೆ ಸಮನೆ ಅಂತಃಸಾಕ್ಷಿ ನುಡಿಯುತ್ತಿತ್ತು. ಇಷ್ಟಕ್ಕೂ ಅಲ್ಲಿಗೆ ಹೋದ ನಂತರವೇ ಜ್ವರವನ್ನು ಹತೋಟಿಯಲ್ಲಿ ತರಬಲ್ಲೆನೆನಿಸಿತು. ಹೀಗಾಗಿ ನಾನು ಸಾಬರಮತಿಗೆ ಹೋಗಲೇಬೇಕೆಂದು ಒತ್ತಾಯಪಡಿಸಿದೆ. ನೀವು ನನ್ನ ಈ ಹಟಮಾರಿತನವನ್ನು ಮೆಚ್ಚಲಿಕ್ಕಿಲ್ಲ. ಆದರೆ ಹಾಗೆ ಮಾಡುವುದು ನನಗೆ ಅನಿವಾರ್ಯವೇ ಆಗಿತ್ತು.

"ಇಲ್ಲಿಗೆ ಬಂದ ನಂತರ ಕೂಡ ನನಗೆ ನಿದ್ದೆ ಬರಲಿಲ್ಲ. ಹಾಸಿಗೆಯ ಮೇಲೆ ಕಣ್ತೆರೆದುಕೊಂಡು ಹಾಗೇ ಚಿಂತಿಸುತ್ತ ಮಲಗಿರುತ್ತಿದ್ದೆ. ನನ್ನ ಜೀವನ ವ್ಯರ್ಥವಾಗುವುದೆ? ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ ಬಳಿಕ ನಾನು ಅನೇಕ ಕೆಲಸಗಳನ್ನು ಕೈಗೆತ್ತಿಕೊಂಡೆ. ಆದರೆ ಒಂದನ್ನೂ ಪೂರ್ತಿಗೊಳಿಸಲು ಆಗಲಿಲ್ಲ. ಗಿರಣಿ ಕಾರ್ಮಿಕರ ಸಂಪಿನಲ್ಲಿ ಆಸಕ್ತಿ ವಹಿಸಿದೆ. ಅವರ ಕೆಲವು ಬೇಡಿಕೆಗಳಿಗೆ ಒಪ್ಪಿಗೆ ದೊರೆಯುವಂತೆಯೂ ಮಾಡಿದೆ. ಆದರೆ ಕಾರ್ಮಿಕರು ಇನ್ನೂ ಕೆಲವು ಕಷ್ಟಗಳನ್ನು ಅನುಭವಿಸುತ್ತಲೇ ಇದ್ದಾರೆ. ಅವರ ಮಧ್ಯದಲ್ಲಿ ಉಳಿದು ಅವರ ಕಷ್ಟಗಳನ್ನು ಪರಿಹರಿಸಲು ಪ್ರಯತ್ನಿಸಬೇಕೆಂದಿದ್ದೆ. ಆದರೆ ಅದನ್ನು ಬಿಟ್ಟು ಚಂಪಾರಣ್ಯಕ್ಕೆ ಹೋಗಬೇಕಾಗಿ ಬಂತು. ಅಲ್ಲಿ ನೀಲಿ ಬೆಳೆ ತೋಟಿಗರಿಂದ ರೈತರಿಗೆ ಕೆಲವೊಂದು ಪರಿಹಾರ ದೊರಕಿಸಿಕೊಡಲು ಸಾಧ್ಯವಾದರೂ ಅವರ ಪರಿಸ್ಥಿತಿ ಸುಧಾರಿಸಲು ಇನ್ನೂ ಬಹಳಷ್ಟು ಕೆಲಸ ಆಗಬೇಕಿದೆ. ಕೆಲವು ಶಾಲೆಗಳನ್ನು ತೆರೆದೆ. ಆದರೆ ಇದು ಸಾಲದು. ಚಂಪಾರಣ್ಯದಲ್ಲಿ ಆಗಬೇಕಾದ ಕಾರ್ಯಗಳಲ್ಲಿ ಸಂಪೂರ್ಣ ತೊಡಗಿಕೊಳ್ಳಬೇಕೆಂದಿದ್ದೆ. ಮತ್ತು ನನಗೆ ದೊರೆತ ಸಮರ್ಥ ಹಾಗೂ ನಿಃಸ್ವಾರ್ಥ ಕಾರ್ಯಕರ್ತರ ಸಹಯೋಗದಿಂದ ಕೆಲಸಗಳನ್ನು ಪೂರ್ತಿಗೊಳಿಸಲು ಬಯಸಿದ್ದೆ. ಆದರೆ ಆ ಕಾರ್ಯವನ್ನು ಮತ್ತೆ ಅರ್ಧಕ್ಕೇ ಬಿಟ್ಟು ಖೇಡಾಕ್ಕೆ ಬರಬೇಕಾಯಿತು. ಖೇಡಾದಲ್ಲಿ ಸತ್ಯಾಗ್ರಹ ಯಶಸ್ವಿಯಾಯಿತು. ಅಲ್ಲಿಯ ಜನರ ಮಧ್ಯೆ ಉಳಿದು ಇನ್ನಷ್ಟು ಕೆಲಸ ಮಾಡಲು ಅಸ್ಪದವಿತ್ತು, ಆದರೆ ಇದಕ್ಕೂ ನನಗೆ ಗಮನ ಕೊಡಲು ಆಗಲಿಲ್ಲ. ಬದಲು ಸೈನ್ಯ ಭರ್ತಿ ಆಂದೋಲನವನ್ನು ಕೂಡಿಕೊಂಡೆ.

"ಮತ್ತೆ ಈಗ ನೋಡಿದರೆ ನಾನು ಹಾಸಿಗೆ ಹಿಡಿದಿರುವೆ. ಎಂದಾದರೂ ಈ ಕಾಯಿಲೆಯಿಂದ

ಮುಕ್ತನಾಗುತ್ತೇನೋ ಇಲ್ಲವೋ ತಿಳಿಯದು. ಒಂದು ವೇಳೆ ಗುಣವಾದರೆ ಹಾಗಾಗಲು ಎಷ್ಟು ಕಾಲ ಬೇಕೆಂಬುದೂ ತಿಳಿಯದು. ನಾನು ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ ಸಮಯದಿಂದ ನನ್ನ ಜೊತೆಗಿದ್ದ ನಿಮ್ಮೆಲ್ಲರಿಗೆ ನನ್ನ ದೇಹಸ್ಥಿತಿಯ ಕಾರಣ ಯಾವೊಂದು ಕೆಲಸವನ್ನೂ ಸಂಪೂರ್ಣವಾಗಿ ವಹಿಸಿಕೊಳ್ಳಲು ಸಾಧ್ಯವಾಗಿಲ್ಲ. ನಿಮ್ಮ (ರಾಜೇಂದ್ರ ಪ್ರಸಾದ) ಆರೋಗ್ಯವೂ ಅಷ್ಟಕ್ಕಷ್ಟೆ. ಈ ಆಶ್ರಮವನ್ನು ಬಹಳಷ್ಟು ನಿರೀಕ್ಷೆಯಿಂದ ಸ್ಥಾಪಿಸಿದೆ. ಆದರೆ ಈ ಸಂಸ್ಥೆಗೆ ಅಗತ್ಯವಾದ ಗಮನ ಕೊಟ್ಟಿದ್ದೇನೆಯೆ? ಖಂಡಿತವಾಗಿ ಇಲ್ಲ. ಚಂಪಾರಣ್ಯದಿಂದ ಸಂದೇಶ ಕಳುಹಿ ಆಶ್ರಮ ಉದ್ಘಾಟಿಸಿದೆನೇ ಹೊರತು ಆ ಪ್ರಸಂಗದಲ್ಲಿ ಸ್ವತಃ ಹಾಜರು ಇರಲು ಆಗಲಿಲ್ಲ. ಆ ಹೊತ್ತಿನಿಂದ ಒಂದಿಲ್ಲೊಂದು ಕಾರಣದಿಂದ ಹೊರಗೇ ಇದ್ದೇನೆ. ಮತ್ತೆ ಇಂದು ಈ ಸ್ಥಿತಿಯಲ್ಲಿ ಇದ್ದೇನೆ. ದೇವ ಇಚ್ಛೆ ಏನಿದೆಯೋ ತಿಳಿಯದಾಗಿದೆ."

ಎನ್ನುತ್ತಾ ಅವರು ಒಮ್ಮಿಂದೊಮ್ಮೆ ಮಗುವಿನಂತೆ ಅಳತೊಡಗಿದರು. ಶ್ರೀ ಛಗನಲಾಲರೂ ನಾನೂ ಈ ಹೃದಯಸ್ಪರ್ಶಿ ಘಟನೆಯಿಂದ ಭಾವವಿಭೋರರಾಗಿದ್ದರಿಂದ ಗಾಂಧೀಜಿಯನ್ನು ಸಂತೈಸಲು ಆಗಲಿಲ್ಲ. ಕೆಲವು ಸಮಯದ ನಂತರ ಅವರು ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಂಡು ನಿದ್ದೆಗೇಡಾಗಲು ಕಾರಣವಾದ ಮಾನಸಿಕ ಒತ್ತಡವನ್ನು ಕಣ್ಣೀರು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿತೆಂದು ಹೇಳಿದರು. ಇದೆಲ್ಲ ನಡೆಯುತ್ತಿರುವಾಗ ನಾನು ಮನಸ್ಸಿನಲ್ಲಿ ಅಂದುಕೊಂಡೆ, ಇಂಥ ಶ್ರೇಷ್ಠ ವ್ಯಕ್ತಿಯ ಸಂಗ ನನಗೆ ದೊರಕಿದುದು ನನ್ನ ಸೌಭಾಗ್ಯವೇ!

(ಡಾ. ರಾಜೇಂದ್ರಪ್ರಸಾದರ ಆತ್ಮಚರಿತ್ರೆಯಿಂದ)

ಭಾರತದ ಆತ್ಮ

ಮಹಾತ್ಮಾ ಗಾಂಧಿ ಹಾಗೂ ಠಕ್ಕರ್ ಬಾಪಾ ಒಡಿಸ್ಸಾ ರಾಜ್ಯದ ಚಿಕ್ಕ ನಿಲ್ದಾಣವೊಂದರಲ್ಲಿ ರೈಲಿಗಾಗಿ ದಾರಿಕಾಯುತ್ತಿದ್ದಾಗ ಓರ್ವ ಆದಿವಾಸಿ ಮನುಷ್ಯ ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿದ. ಲಂಗೋಟಿಯನ್ನು ಹೊರತುಪಡಿಸಿ ಆತನ ಮೈಮೇಲೆ ಏನೂ ಇರಲಿಲ್ಲ. ದೇಹದ ಮೂಳೆಗಳು ಎದ್ದು ಕಾಣಿಸುವಷ್ಟು ಕೃಶಕಾಯ. ನಿಧಾನವಾಗಿ ಆತ ಸೊಂಟದಲ್ಲಿ ಭದ್ರಪಡಿಸಿ ಇಟ್ಟುಕೊಂಡಿದ್ದ ಒಂದು ಕಾಸನ್ನು ಮಹಾತ್ಮಾಜಿಯ ಪಾದಗಳ ಬಳಿ ಇಟ್ಟ.

"ಈ ಕಾಸನ್ನು ಏಕೆ ಇಟ್ಟೆ?" ಗಾಂಧೀಜಿ ಕೇಳಿದರು.

"ದೇವರ ದರ್ಶನಕ್ಕೆ ಹೋಗುವಾಗ ಏನಾದರೂ ತೆಗೆದುಕೊಂಡು ಹೋಗುವುದು ರೂಢಿ," ಎಂದ ಆದಿವಾಸಿ.

"ಈ ಕಾಸನ್ನು ತೆಗೆದುಕೊಂಡು ನಾನೇನು ಮಾಡಲಿ?" ಗಾಂಧೀಜಿ ಪ್ರಶ್ನಿಸಿದರು.

"ಯಾವನಾದರೂ ಬಡಮನುಷ್ಯನಿಗೆ ಕೊಟ್ಟುಬಿಡಿ," ಎಂದನಾತ.

ಗಾಂಧೀಜಿಯ ಕಣ್ಣುಗಳು ಮಿಂಚಿದವು. ಅವರು ಆ ಕಾಸನ್ನು ತೆಗೆದುಕೊಳ್ಳುತ್ತಾ ಹತ್ತಿರದಲ್ಲೆ ಇದ್ದ ಒಡಿಸ್ಸಾದ ನಿಃಸ್ವಾರ್ಥ ಸೇವಕ ಗೋಪಬಂಧುದಾಸರಿಗೆ ಹೇಳಿದರು:

"ಕಂಗೆಟ್ಟ ಕಂಗಾಲ ಕೂಡ ತನಗಿಂತ ಬಡವನಾದವನಿಗೆ ಸಹಾಯ ಮಾಡಬಯಸುತ್ತಾನೆ. ಭಾರತದ ಆತ್ಮವಿರುವುದು ಇಲ್ಲಿಯೆ."

- ವೆಂಕಟೇಶ ಗಂಗಾವತಿ

ಪುಸ್ತಕ ಪ್ರೀತಿ

—ಶಂಪ

ನಾನು ಕಾಶಿಗೆ ಹೋಗುವುದಿಲ್ಲ ಎಂದು ದೃಢಸಂಕಲ್ಪ ಮಾಡಿದ್ದೇನೆ. ಅಲ್ಲಿ ನಮಗೆ ಪ್ರಿಯವಾದುದೇನನ್ನಾದರೂ ಬಿಟ್ಟು ಬರಬೇಕಂತಲ್ಲ? ನನಗೆ ಅತ್ಯಂತ ಪ್ರಿಯವಾದುದೆಂದರೆ ಪುಸ್ತಕ. ಪುಸ್ತಕಗಳನ್ನೇ ಬಿಟ್ಟುಬಿಟ್ಟಮೇಲೆ ನಾನು ಬದುಕಿರುವುದಾದರೂ ಹೇಗೆ? ಅಥವಾ ಬದುಕಿರುವುದಾದರೂ ಏಕೆ?

ನನ್ನ ಪುಸ್ತಕ ಪ್ರೀತಿಯನ್ನು ಕುರಿತಂತೆ ಅನೇಕರು ಅನೇಕ ಬಗೆಯ ಗೇಲಿ, ಲೇವಡಿ ಮಾಡಿದ್ದಾರೆ. 'ಅಷ್ಟೊಂದು ಪುಸ್ತಕಗಳನ್ನು ಎಲ್ಲಿ, ಯಾವಾಗ ಓದುತ್ತಾನೆ? ಸುಮ್ಮನೆ ಖಯಾಲಿಗೆ ಸಂಗ್ರಹಿಸಿ ಮನೆಯಲ್ಲಿ ಗುಡ್ಡೆ ಹಾಕುತ್ತಾನೆ,' 'ಇವನು ಪುಸ್ತಕ ಖರೀದಿಸಲು ವ್ಯಯಿಸಿರುವ ಹಣವನ್ನೇ ಪ್ರತ್ಯೇಕವಾಗಿ ತೆಗೆದಿರಿಸಿದ್ದರೆ ಮನೆಯ ಮೇಲೆ ಮಹಡಿ ಕಟ್ಟಿಸಿಕೊಳ್ಳಬಹುದಿತ್ತು', ಇತ್ಯಾದಿ.... ಇತ್ಯಾದಿ.

ಯಾರು ಏನೇ ಹೇಳಲಿ, ನನಗೆ ಪುಸ್ತಕಗಳ ಬಗೆಗಿರುವ ಪ್ರೀತಿ ಶಾಶ್ವತ. ಇದಕ್ಕೊಂದು ಐತಿಹಾಸಿಕ ಹಿನ್ನೆಲೆಯೂ ಇದೆ. ನನ್ನ ಪುಸ್ತಕ ಪ್ರೀತಿ ಅನುವಂಶಿಕವಾಗಿ, ಹಂತ ಹಂತವಾಗಿ ಬೆಳೆದು ಬಂದದ್ದು, ಇದ್ದಕ್ಕಿದ್ದಂತೆ ಉದ್ಭವಿಸಿದ್ದಲ್ಲ.

೧೯೫೦ರ ದಶಕದ ವರ್ಷಗಳ ಮಾತು. ಆಗ ನನ್ನಗಿನ್ನೂ ಹತ್ತು ಹನ್ನೆರಡು ವರ್ಷ. ಅಕ್ಷರಾಭ್ಯಾಸ ಮಾಡಿಸುವ ಮೊದಲೇ ಕಥೆಗಳ ಬಗ್ಗೆ ತಂದೆ ನನ್ನಲ್ಲಿ ಆಸಕ್ತಿ ಮೂಡಿಸಿದ್ದರು. ರಾಮಾಯಣ, ಮಹಾಭಾರತ, ಭಾಗವತ ಕಥೆಗಳನ್ನಷ್ಟೇ ಅಲ್ಲದೆ, ಪಂಚತಂತ್ರ, ತೆನಾಲಿ ರಾಮನ ಕಥೆ, ಆ ಕಾಲದಲ್ಲಿ ಪ್ರಚಲಿತವಾಗಿದ್ದ ಹೊಸಗನ್ನಡ ಕಥೆಗಳನ್ನೂ ಹೇಳುತ್ತಿದ್ದರು. ಪಂಜೆ, ಹುರುಳಿ, ಐರೋಡಿ, ಹಟ್ಟಂಗಡಿ, ಬೆನಗಲ್ ಮುಂತಾದವರ ಕೃತಿಗಳನ್ನು ಓದಿದ್ದ ತಂದೆ, ನಾನು ಚಿಕ್ಕವನಾಗಿದ್ದಾಗ ಹೇಳುತ್ತಿದ್ದ, ಕೋಟಿ ಚೆನ್ನಯನ ಕಥೆ, ತಟಪಟ ಹನಿಯಪ್ಪ, ಗುಡುಗುಡು ಗುಮ್ಮಟ ದೇವರು, ಇಲಿಗಳ ಥಕಥೈ, ಹೇನು ಸತ್ತು ಕಾಗೆ ಬಡವಾಯಿತು- ಇವೆಲ್ಲ ನಿನ್ನೆ ತಾನೇ ಕೇಳಿಸಿಕೊಂಡಂತೆ ಇನ್ನೂ ನನ್ನ ಮನಸ್ಸಿನಲ್ಲಿ ಹಚ್ಚ ಹಸಿರಾಗಿ ಉಳಿದಿವೆ.

ಆಗ ಕನ್ನಡ ಸಾಹಿತ್ಯ ಈಗಿನಷ್ಟು ಸಮೃದ್ಧವಾಗಿ ಬೆಳೆದಿರಲಿಲ್ಲ. ಆಗ ಈಗಿನಂತೆ ಬರಹಗಾರರ ಸಂಖ್ಯೆ ಓದುಗರ ಸಂಖ್ಯೆಗಿಂತ ಹೆಚ್ಚಾಗಿರಲಿಲ್ಲ. ಕನ್ನಡದಲ್ಲಿ ಕಥೆ, ಕವಿತೆ, ಬರೆಯುವವರನ್ನು ಕಂಡರೇ, ಅವರ ಬುದ್ಧಿವಂತಿಕೆಗಾಗಿ, ಪ್ರತಿಭೆಗಾಗಿ ಆಶ್ಚರ್ಯಪಡುವ, ಅವರನ್ನು ಗೌರವಭಾವದಿಂದ ಕಾಣುವ ಕಾಲ ಅದಾಗಿತ್ತು. 'ಪಂಚಾಂಗ ಬರೆಯುವ ಮೊಗೇರಿ ಅಡಿಗಳ ಮಗ ಮೈಸೂರಿನಲ್ಲಿ ಕವನ ಸಂಗ್ರಹ ಪ್ರಿಂಟುಮಾಡಿದ್ದಾನಂತೆ' ಎಂದು ತಂದೆ ಊರಿನಲ್ಲಿ ಪ್ರಚಾರ ಮಾಡಿದ್ದು ನನಗಿನ್ನೂ ನೆನಪಿದೆ.

ತಂದೆಗೂ ಪುಸ್ತಕಗಳ ಹುಚ್ಚು ಎಂದೆ. ಅದು ದೈನಂದಿನ ಕಿಷ್ಕಿಂಧಾ ಕಾಂಡ ಪಾರಾಯಣ ಅಥವಾ ಗದುಗಿನ ಭಾರತದ ವಾಚನಕ್ಕಷ್ಟೇ ಸೀಮಿತವಾಗಿದ್ದಿರಲಿಲ್ಲ. ಕನ್ನಡ ಕಥೆ- ಕಾದಂಬರಿಗಳು ಅವರಿಗೆ ತುಂಬ ಇಷ್ಟ. ಆದರೆ ಅವು ಆಗ ಸುಲಭ ಲಭ್ಯವಾಗಿರಲಿಲ್ಲ. ನಮ್ಮೂರಿನಲ್ಲಿ ಲೈಬ್ರರಿಯಿರಲಿಲ್ಲ. ಊರ ಶಾಲೆಯ ಮುಖ್ಯೋಪಾಧ್ಯಾಯರ ಪ್ರಯತ್ನದಿಂದಾಗಿ ಶಾಲೆಯ ಕೊಠಡಿಯೊಂದರಲ್ಲಿ ನಾಮಕಾವಾಸ್ತೆ ಗ್ರಂಥಾಲಯ ಆಗಷ್ಟೇ ಶುರುವಾಗಿತ್ತು. ಕುಂದಾಪುರದ ಸಾರ್ವಜನಿಕ ಗ್ರಂಥಾಲಯದಿಂದ ೨೫೦ ಪುಸ್ತಕಗಳನ್ನು ಎರವಲು ತಂದು ಅಲ್ಲಿಡಲಾಗಿತ್ತು. ಆ ಮಿನಿ ಗ್ರಂಥಾಲಯವನ್ನು ನೋಡಿಕೊಳ್ಳಲು ಬ್ರಹ್ಮಚಾರಿಗಳಾದ ದಾಸಪ್ಪ ಮೇಷ್ಟು ತಾವಾಗಿ ಮುಂದೆ ಬಂದಿದ್ದರು. ಅವರಿಗೆ ಸಂಬಳ-ಗಿಂಬಳ ಇರಲಿಲ್ಲ, ಆದರೂ ವಾರದಲ್ಲಿ ಆರು ದಿನ ಸಂಜೆ ಆರು ಗಂಟೆಯಿಂದ ಎಂಟು ಗಂಟೆಯವರೆಗೆ ಅವರು ಅಲ್ಲಿದ್ದು ಗ್ರಂಥಾಲಯದ ಮೇಲ್ವಿಚಾರಣೆ ನೋಡಿ

ಕೊಳ್ಳುತ್ತಿದ್ದರು. ಅವರಿಗೆ ಪುರುಸೊತ್ತಿಲ್ಲದ ದಿನ ಗ್ರಂಥಾಲಯಕ್ಕೆ ರಜೆ. ತಿಂಗಳಿಗೊಮ್ಮೆ ಕುಂದಾಪುರಕ್ಕೆ ತೆರಳಿ ಅವರೇ ಪುಸ್ತಕಗಳನ್ನು ಬದಲಾಯಿಸಿ ಕೊಂಡು ಬರಬೇಕು. ನನ್ನ ತಂದೆ ಆ ಗ್ರಂಥಾಲಯಕ್ಕೆ ಸದಸ್ಯರು. ಪುಸ್ತಕಗಳನ್ನು ಬದಲಾಯಿಸಿಕೊಂಡು ಬರುವ ಹೊಣೆ ನನ್ನದಾಗಿತ್ತು. ತಂದೆಗೆ ದೃಷ್ಟಿ ಸರಿಯಾಗಿಲ್ಲವಾದುದರಿಂದ, ಪ್ರತಿದಿನ ರಾತ್ರಿ ಊಟ ವಾದ ಮೇಲೆ, ನಾನು ಅವರಿಗೆ ಅರ್ಧ ಅಥವಾ ಮುಕ್ಕಾಲು ಗಂಟೆಯವರೆಗೆ ಪುಸ್ತಕ ಓದಿ ಹೇಳ ಬೇಕು. ಅದು ಸುಮಾರು ೨೦-೨೫ ಪುಟಗಳ ಪಾರಾಯಣ ಕಾರ್ಯಕ್ರಮ. ನಮ್ಮ ಕಥಾ ವಾಚನ-ಶ್ರವಣ ಶುರುವಾದಾಗಲೆಲ್ಲ, 'ಶುರುವಾಯಿತೆ ನಿಮ್ಮ ಪುರಾಣ, ಪಾರಾಯಣ?' ಎಂದು ಅಮ್ಮ ರೇಗುತ್ತಿದ್ದಳು. 'ನಿಮಗಂತೂ ನಿದ್ರೆ ಬರುವುದಿಲ್ಲ, ಮಾಣಿ ಯಾದರೂ ಮಲಗಿಕೊಳ್ಳಬಾರದೇ?' ಅವಳು ಅಪ್ಪನನ್ನು ಬಯ್ಯುತ್ತಿದ್ದುದೂ ಉಂಟು.

ಆದರೆ ಈ ಮಾಣಿಗೂ ಕಥೆ-ಕಾದಂಬರಿಗಳೇ ದರೆ ಇಷ್ಟವೆಂದು ಅಮ್ಮನಿಗೆ ಮನದಟ್ಟು ಮಾಡಿಕೊಡುವವರಾದರೂ ಯಾರು?

ಹೀಗೆ ನನಗೆ ಮೊದಲು ಪರಿಚಯವಾದದ್ದು ಕಾರಂತ, ಕಟ್ಟೀಮನಿಯವರ ಪುಸ್ತಕಗಳು, ಅನಂತರ ನಿಧಾನವಾಗಿ ತರಾಸು, ನಿರಂಜನ, ಕಡೆಂಗೊಡ್ಲು, ಕೃಷ್ಣಮೂರ್ತಿ ಪುರಾಣಿಕ, ಬೀಚಿ, ದೇವುಡು ಮುಂತಾದವರೂ ನನಗೆ ಪುಸ್ತಕಗಳ ಮೂಲಕ ಪರಿಚಿತರಾದರು. ಎನ್. ನರಸಿಂಹಯ್ಯನವರ ಪತ್ತೇದಾರಿ ಸಾಹಸಗಳು ಮೊದಮೊದಲು ನನಗೆ ರೋಚಕ ಅನುಭವ ನೀಡಿದರೂ, ನಾನು ಪತ್ತೆದಾರಿ ಕೃತಿಗಳ ನಿಜವಾದ ಸೊಗಸನ್ನು ಅನುಭವಿಸಿದ್ದು 'ಓದುಗರನ್ನು ಎಂದೂ ಮೋಸಗೊಳಿಸದ' ಮ. ರಾಮಮೂರ್ತಿಯವರ ಒಂಬತ್ತಾಣೆ ಕಾದಂಬರಿಗಳಿಂದ.

ಆದರೆ ನನ್ನ ಓದಿನ ಹಸಿವಿಗೆ ಸಾಕಷ್ಟು ಆಹಾರ ಆಗ ದೊರೆಯುತ್ತಿರಲಿಲ್ಲ. ಲೇಖಕರೂ ಕಮ್ಮಿ ಪುಸ್ತಕಗಳನ್ನು ಪ್ರಕಟಿಸುವವರೂ ಕಮ್ಮಿ ಹೊಸ



ಪುಸ್ತಕಗಳು ಪ್ರಕಟವಾದರೂ ಅವುಗಳ ಮಾಹಿತಿಯೇ ಸಿಗದ ಪರಿಸ್ಥಿತಿ. ಬೆಂಗಳೂರಿನಲ್ಲಿಯೋ ಮೈಸೂರಿನಲ್ಲಿಯೋ ಪ್ರಕಟವಾದ ಕೃತಿಗಳು ನಮ್ಮೂರಿಗೆ ಬರುವಾಗ ಎರಡು-ಮೂರು ವರ್ಷಗಳೇ ಕಳೆದಿರುತ್ತಿದ್ದುವು. ಆಗ ನಿಯತಕಾಲಿಕಗಳೂ ಹೆಚ್ಚು ಪ್ರಕಟವಾಗುತ್ತಿರಲಿಲ್ಲ. ಆಗ ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಾರ-ಪ್ರಸಾರಗಳನ್ನು ಹೊಂದಿದ್ದ ದಿನ ಪತ್ರಿಕೆಯೆಂದರೆ ಮಂಗಳೂರಿನ 'ನವಭಾರತ'ವೊಂದೇ. ಅದೂ ನದಿ-ಗುಡ್ಡ-ಬೆಟ್ಟಗಳನ್ನು ದಾಟಿ ನಮ್ಮೂರಿಗೆ ಬರುವುದು ಮಧ್ಯಾಹ್ನ ೧೧-೧೨ ಗಂಟೆಯ ನಂತರವೇ. 'ನವಯುಗ', 'ಪ್ರಕಾಶ' ಮೊದಲಾದ ಸಾಪ್ತಾಹಿಕಗಳು ಪ್ರಕಟವಾಗತೊಡಗಿದ್ದರೂ ಅವುಗಳ ಪ್ರಸಾರ ಕಮ್ಮಿ. ದಾಸಪ್ಪ ಮೇಷ್ಟ್ರೇನೋ ಪ್ರತಿ ತಿಂಗಳು ಪುಸ್ತಕಗಳ ವಿನಿಮಯಕ್ಕಾಗಿ ಕುಂದಾಪುರದ ಲೈಬ್ರರಿಗೆ ಹೋದವರು, ಬರುವಾಗ 'ಕಥೆಗಾರ', 'ಕಥಾವಳಿ', 'ನಗುವ ನಂದ', 'ವಿಕಟ ವಿನೋದಿನಿ', 'ಕೊರವಂಜಿ'ಗಳ ಹಳೆಯ ಸಂಚಿಕೆಗಳನ್ನು ತರುತ್ತಿದ್ದರು. ಆದರೆ ಓದಲು ಅವುಗಳನ್ನು ಮನೆಗೆ ಕೊಡುತ್ತಿರಲಿಲ್ಲ. ಅಲ್ಲಿಯೇ ಕುಳಿತು ಓದಬೇಕು. 'ಗೋಕುಲ', 'ಕೈಲಾಸ', 'ತಾಯಿನಾಡು', 'ಪುಸ್ತಕ ಪ್ರಪಂಚ' ಇತ್ಯಾದಿ ಪತ್ರಿಕೆಗಳ ಪ್ರತಿಗಳು ಯಾವಾಗಲಾದರೂ ಒಮ್ಮೊಮ್ಮೆ ನಮ್ಮ ಶಾಲೆಯ ಗ್ರಂಥಾಲಯಕ್ಕೆ ಅವರಿವರಿಂದ ಕೊಡುಗೆಯಾಗಿ ಬರುತ್ತಿದ್ದವು ಅಷ್ಟೆ. ಅವುಗಳಿಗೆಲ್ಲ ಚಂದಾದಾರರಾಗಿ ನಿಯತವಾಗಿ ಪ್ರತಿಗಳನ್ನು ಪಡೆಯುವವರಾದರೂ ಯಾರಿದ್ದರು ನಮ್ಮೂರಲ್ಲಿ? ಹೀಗಾಗಿ ದಾಸಪ್ಪ ಮೇಷ್ಟ್ರು ಕುಂದಾಪುರದಿಂದ ತರುವ ಹಳೆಯ ಪತ್ರಿಕೆಗಳೇ ನಮ್ಮ ಪಾಲಿಗೆ ಮೃಷ್ಟಾನ್ನ ಭೋಜನ. ನಾನು ಕೈಗೆ ಸಿಗುವ ಪ್ರತಿ ಪತ್ರಿಕೆಯ ಪ್ರತಿ ಸಂಚಿಕೆಯನ್ನೂ ಓದುವ ಹವ್ಯಾಸವಿಟ್ಟುಕೊಂಡಿದ್ದೆ. ಯಾವುದಾದರೂ ಪತ್ರಿಕೆಯ ಸಂಚಿಕೆ ಕೈಗೆ ಸಿಗದೆ ಇದ್ದಾಗ, ಅವನ್ನೂ ಕುಂದಾಪುರದ ಲೈಬ್ರರಿಯಲ್ಲಿ ಹುಡುಕಿ ತಂದುಕೊಡುವಂತೆ ದಾಸಪ್ಪ ಮೇಷ್ಟ್ರಲ್ಲಿ ಗೋಗರೆಯುತ್ತಿದ್ದೆ.

ನಮ್ಮ ಬಂಧುವರ್ಗದವರಲ್ಲೊಬ್ಬರು ಉಡುಪಿಯಲ್ಲಿ ಶಿಕ್ಷಕರಾಗಿದ್ದರು. ಅವರಿಗೆ ಬರೆಯುವ ಹವ್ಯಾಸವೂ ಸ್ವಲ್ಪ ಇತ್ತು. ಅವರ ಲೇಖನಗಳು ನಿಯತಕಾಲಿಕಗಳಲ್ಲಿ ಆಗಾಗ ಪ್ರಕಟವಾಗುತ್ತಿದ್ದುದರಿಂದ, ಅವರಿಗೆ ಗೌರವ ಪ್ರತಿಗಳು ಬರುತ್ತಿದ್ದುವು. ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ಅವರು ಊರಿಗೆ ಬರುವಾಗ ಆ ಪತ್ರಿಕೆಗಳನ್ನೆಲ್ಲ ನನಗೆ ತಂದುಕೊಡುತ್ತಿದ್ದರು. ಒಂದಾಣೆ ಮಾಲೆಯ ಕೆಲವು ಕಿರು ಪುಸ್ತಕಗಳನ್ನೂ ತರುತ್ತಿದ್ದರು. ಅವುಗಳನ್ನು ವಾಪಸ್ ಕೊಡಬೇಕಾಗುತ್ತಿರಲಿಲ್ಲ. ಆ ಸಂಚಿಕೆಗಳಲ್ಲಿ ಈಗಲೂ ಕೆಲವು ವಿಕಟ ವಿನೋದಿನಿ, ಕೊರವಂಜಿ ಇತ್ಯಾದಿ ನನ್ನ ಬೀರುವಿನಲ್ಲಿವೆ. ಅವು ನನ್ನ ಪುಸ್ತಕ ಕಪಾಟಿನ ಅಮೂಲ್ಯ ಆಸ್ತಿಗಳು.

ನನ್ನ ಪುಸ್ತಕ ಪ್ರೀತಿಯನ್ನು ಅರಿತ ಶಿಕ್ಷಕರೂ, ನಾನು ಪ್ರೌಢಶಾಲೆಯ ವಿದ್ಯಾರ್ಥಿಯಾಗಿರುವ ಮೂರು ವರ್ಷಗಳ ಅವಧಿಯಲ್ಲಿ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಪ್ರಥಮ, ದ್ವಿತೀಯ ಸ್ಥಾನಗಳನ್ನು ಪಡೆದಾಗ, ಬಹುಮಾನವಾಗಿ ಪುಸ್ತಕಗಳನ್ನೇ ಕೊಡುತ್ತಿದ್ದರು.

ಮುಂದೆ ಕಾಲೇಜು ಅಭ್ಯಾಸಕ್ಕಾಗಿ ಉಡುಪಿ ಸೇರಿದ ಅನಂತರ, ಪುಸ್ತಕಗಳ ಸಖ್ಯ ಇನ್ನಷ್ಟು ಹೆಚ್ಚಿತು. ತರುವಾಯ ಶಿಕ್ಷಕನಾಗಿ ನೌಕರಿಗೆ ಸೇರಿದ ಬಳಿಕ ಪುಸ್ತಕಗಳನ್ನು ಖರೀದಿಸಲೂ ತೊಡಗಿದೆ. ಪ್ರತಿದಿನ ಸಾಯಂಕಾಲ ರಥಬೀದಿಯ ಪುಸ್ತಕದಂಗಡಿಯಲ್ಲಿ ಅರ್ಧ ಗಂಟೆ ವೇಳೆ ಕಳೆಯುವುದೂ ಪ್ರತಿ ತಿಂಗಳು ಸಂಬಳ ಬಂದೊಡನೆ, ಒಂದೋ ಎರಡೋ ಹೊಸ ಪುಸ್ತಕಗಳನ್ನು ಆಯ್ಕೆಮಾಡಿ ಕೊಂಡುಕೊಳ್ಳುವುದೂ ನನ್ನ ಜೀವನದ ಒಂದು ಭಾಗವಾಗಿಬಿಟ್ಟಿತು. ಆಗ ಪುಸ್ತಕಗಳನ್ನು ಕೊಳ್ಳುವುದೂ ಸುಲಭವಾಗಿತ್ತು. ಮುಕ್ಕಾಲಾಣೆ- ಒಂದಾಣೆಗಳಿಗೆ ದೊಡ್ಡ ತೆಂಗಿನಕಾಯಿ ಸಿಗುತ್ತಿದ್ದ ಸುವರ್ಣ ಕಾಲ ಅದಾಗಿತ್ತು. ಇನ್ನೂರು-ಮುನ್ನೂರು ಪುಟಗಳ ಸರಳ-ಸುಂದರ ಸಾಮಾಜಿಕ ಕಾದಂಬರಿಗಳು ಒಂಬತ್ತು ಅಥವಾ ಹನ್ನೆರಡಾಣೆಗೆ ಸಿಗುತ್ತಿದ್ದವು.

ಹವ್ಯಾಸಗಳು ತಾತ್ಕಾಲಿಕ ಎಂಬುದು ಕೆಲವರ ಅಭಿಪ್ರಾಯ. ಆದರೆ ನನ್ನ ವಿಷಯದಲ್ಲಿ ಹಾಗಾಗಲಿಲ್ಲ. ೧೯೭೦ರ ದಶಕದಲ್ಲಿ ಮೈಸೂರಿಗೆ ಬಂದದ್ದು ನನ್ನ ಪುಸ್ತಕ ಪ್ರೀತಿಗೆ ನೀರೆರೆದಂತಾಯಿತು. ಹೊಸ ಪುಸ್ತಕಗಳನ್ನು ಕೊಂಡುಕೊಳ್ಳಲು ಸಾಧ್ಯವಾಗದೆ ಇರುವಾಗಲೂ, ಅವುಗಳನ್ನು ಕಣ್ಣಿನಿಂದ ನೋಡುವ, ಮುಟ್ಟಿ ಏನೋ ಒಂದು ಬಗೆಯ ಸುಖ ಅನುಭವಿಸುವ ಸದವಕಾಶ ಒದಗಿಬಂತು. ಮುದ್ರಣ ವಿನ್ಯಾಸದಲ್ಲಿ ಹೊಸಹೊಸ ಶೈಲಿಗಳನ್ನು ಅಳವಡಿಸಿಕೊಂಡು ಬಣ್ಣ ಬಣ್ಣದ ಆಕರ್ಷಕ ಮುಖಪುಟಗಳೊಡನೆ ಹೊರಬರುವ ಪುಸ್ತಕಗಳನ್ನು ನೋಡುವುದೇ ಒಂದು ಸೌಭಾಗ್ಯ. ಆಗಾಗ ನಡೆಯುವ ಪುಸ್ತಕ ಪ್ರದರ್ಶನಗಳಿಗೆ ಭೇಟಿ ನೀಡಿ ಅಂದಚಂದದ ಪುಸ್ತಕಗಳನ್ನು ಒಮ್ಮೆ ತಿರುವಿಹಾಕಿ

ಬರುವುದೇ ಒಂದು ಸಂತೋಷದಾಯಕ ಅನುಭವ. ಗೀತಾ ಬುಕ್ ಹೌಸಿನಲ್ಲಿ ತಿಂಗಳಿಗೊಂದು ಪುಸ್ತಕ ಖರೀದಿಸುವ ಹೊಸ 'ದುಶ್ಚಟ'ವನ್ನೂ ಪ್ರಾರಂಭಿಸಿದೆ. ಆದರೆ ಈಗ ಅದೂ ಸಾಧ್ಯವಾಗುತ್ತಿಲ್ಲ. ಲ್ಯಾನ್ಸ್‌ಡೌನ್ ಕಟ್ಟಡದಲ್ಲಿರುವ ಹಳೆಯ ಪುಸ್ತಕದಂಗಡಿಗಳು ನನ್ನ ಪಾಲಿಗೆ ಕಾಶಿ-ರಾಮೇಶ್ವರಗಳಾಗಿಬಿಟ್ಟಿವೆ. ಆದರೆ ಅಲ್ಲಿ ಸೆಕೆಂಡ್ ಹ್ಯಾಂಡ್ ಪುಸ್ತಕಗಳನ್ನು ಕೊಳ್ಳಬಯಸುವವನಿಗೆ ಅರ್ಧಗಂಟೆ ಹೊತ್ತು ಚೌಕಾಸಿ ಮಾಡುವ ಜಾಣತನವೂ ಅಗತ್ಯ. ಯಾವ ಲೈಬ್ರರಿಯಲ್ಲಿಯೂ ಸಿಗದ ಅಪೂರ್ವ ಪುಸ್ತಕಗಳು ಈ ಸೆಕೆಂಡ್ ಹ್ಯಾಂಡ್ ಪುಸ್ತಕದಂಗಡಿಗಳಲ್ಲಿ ದೊರೆಯುವುದು ವಿಚಿತ್ರವೆನಿಸಿದರೂ ಸತ್ಯ.

ಹೀಗೆ ಪುಸ್ತಕಗಳು ನನ್ನ ಜೀವನದ ಅವಿಭಾಜ್ಯ ಭಾಗವಾಗಿಬಿಟ್ಟಿವೆ. ಇವೇ, ಪ್ರವಾಸ ಕಾಲದಲ್ಲಿ ಮಡದಿ-ಮಕ್ಕಳು ಬೇಸಗೆ ರಜೆಯಲ್ಲಿ ಊರಿಗೆ ಹೋಗಿ ನಾನು ಮನೆಯಲ್ಲಿ ಒಂಟಿಯಾಗಿರುವಾಗ, ಕಚೇರಿಯಲ್ಲಿ ಕೆಲಸದ ಒತ್ತಡವಿಲ್ಲದಾಗ ನನ್ನ ಆತ್ಮೀಯ ಸಂಗಾತಿಗಳಾಗಿಬಿಟ್ಟಿವೆ. ಹೊಸ ಪುಸ್ತಕಗಳನ್ನು ಓದುವಷ್ಟೇ ಆಸ್ಥೆ-ಕುತೂಹಲಗಳಿಂದ ಹಳೆಯ ಪುಸ್ತಕಗಳನ್ನು ಮತ್ತೆ ಮತ್ತೆ ಓದುತ್ತೇನೆ. ಆದರೆ ನಲ್ವತ್ತು, ಐವತ್ತು, ಅರುವತ್ತರ ದಶಕಗಳಲ್ಲಿ ಪ್ರಕಟವಾದ ಅನೇಕ ಜನಪ್ರಿಯ ಕೃತಿಗಳ ಪ್ರತಿಗಳು ಈಗ ಯಾವ ಗ್ರಂಥಾಲಯದಲ್ಲಿಯೂ ಸಿಗದಂತಾಗಿರುವುದು ವಿಷಾದದ ವಿಷಯ. ಆ ಕಾಲದ ಪ್ರಮುಖ ಕೃತಿಗಳ ಮರುಮುದ್ರಣ ಕಾರ್ಯವನ್ನು ಯಾವುದಾದರೂ ಸಂಘ ಸಂಸ್ಥೆಗಳು ಮಾಡಬೇಕಾದ್ದು ಅತ್ಯಗತ್ಯ. ಇಲ್ಲವಾದರೆ, ಎಷ್ಟೋ ಪ್ರಮುಖ ಕನ್ನಡ ಬರಹಗಾರರು ಕನ್ನಡಿಗರ ನೆನಪಿನಿಂದಲೇ ಮರೆಯಾಗಿಹೋಗುವ ಅಪಾಯವಿದೆ. ಅಷ್ಟೇ ಅಲ್ಲ, ಟಿವಿ ಸಂಸ್ಕೃತಿ ಬೆಳೆಯುತ್ತಿರುವ ಈ ದಿನಗಳಲ್ಲಿ ತಮ್ಮ ಮಕ್ಕಳಲ್ಲಿ ಪುಸ್ತಕ ಪ್ರೀತಿ ಮೂಡಿಸುವ ಪ್ರಯತ್ನವನ್ನೂ ಮಾಡಬೇಕಾದ ಜವಾಬ್ದಾರಿ ಪ್ರತಿಯೊಬ್ಬ ತಂದೆ-ತಾಯಿಯ ಹೆಗಲ ಮೇಲೆ ಇದೆ.





• ಆದಿಕೇಶವ

ಅಂದಿನ ಆಟ !
ಇಂದಿನ ನೋಟ !

ಕ್ರಿಕೆಟ್ ಜಗತ್ತಿನ ಕಡು ವೈರಿಗಳಾದ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಡುವಣ ಈ ಟೆಸ್ಟ್‌ಗೆ ಮೊದಲು ನಡೆದ ಮೂರು ನಿರ್ಣಾಯಕ ಪಂದ್ಯಗಳು ನೀರಸವಾಗಿದ್ದುದರ ಜತೆಗೆ 'ಡ್ರಾ'ದಲ್ಲಿ ಕೊನೆಗೊಂಡಿದ್ದವು. ಮೊದಲಿನ ಎರಡು ಪಂದ್ಯಗಳಲ್ಲಿ ಉಭಯ ತಂಡಗಳ ಬ್ಯಾಟಿಂಗ್ ಪ್ರದರ್ಶನ ನೋಡಲಾದರೂ ಸಿಕ್ಕಿತು. ಆದರೆ ಮೂರನೆ ಟೆಸ್ಟ್‌ನಲ್ಲಿ ವರುಣದೇವ ಕೃಪೆದೋರಲಿಲ್ಲ.

ಇಂಗ್ಲೆಂಡ್ ತಂಡದ ನಾಯಕತ್ವವಹಿಸಿಕೊಂಡು ಬಲಿಷ್ಠ ಕ್ರೀಡಾಳುಗಳೊಂದಿಗೆ ಆಸ್ಟ್ರೇಲಿಯಕ್ಕೆ ಬಂದಿಳಿದಿದ್ದ ಇಲ್ಲಿಂಗ್‌ವರ್ಥ್ ತಲೆಯಲ್ಲಿ ಒಂದೇ ಯೋಚನೆ, ಒಂದೇ ಗುರಿ: ಹೇಗಾದರೂ ಮಾಡಿ 'ಆಷಸ್'ನ್ನು ಮರಳಿ ತಾಯ್ನಾಡಿಗೆ ತೆಗೆದುಕೊಂಡು ಹೋಗಬೇಕು. ಇದಕ್ಕನುಗುಣವಾಗಿ ಪ್ರಮುಖ ಬ್ಯಾಟ್ಸ್‌ಮನ್ ಜೆಫ್ ಬಾಯ್ಕಾಟ್ ಮತ್ತು ವೇಗದ ಬೌಲರ್ ಜಾನ್ ಸ್ನೋ ಉತ್ತಮ ಫಾರ್ವರ್ಡ್‌ನಲ್ಲಿರುವದು ನಾಯಕನ ಆಸೆಯನ್ನು ಇಮ್ಮಡಿಗೊಳಿಸಿತ್ತು.

ಮೈದಾನದಲ್ಲಿ

ಸಿಡ್ನಿ ಮೈದಾನದಲ್ಲಿ ಮೊದಲು ಬ್ಯಾಟಿಂಗ್‌ಗೆ

ತನ್ನವರ ರಕ್ಷಿಸಿದ ಅನಿರೀಕ್ಷಿತ ಆಪದ್ಬಾಂಧವ

ಆಸ್ಟ್ರೇಲಿಯಾ-ಇಂಗ್ಲೆಂಡ್ ನಾಲ್ಕನೇ ಟೆಸ್ಟ್
ಸ್ಥಳ: ಸಿಡ್ನಿ
ದಿನಾಂಕ: ೧೯೭೦-೭೧, ಜನವರಿ ೯, ೧೦, ೧೧, ೧೩, ೧೪

ಇಳಿದ ಇಂಗ್ಲೆಂಡಿಗೆ ಆರಂಭಿಕ ಬ್ಯಾಟ್ಸ್‌ಮನ್‌ಗಳಾದ ಜೆಫ್ ಬಾಯ್ಕಾಟ್ ಹಾಗೂ ಬ್ರಿಯಾನ್ ಲಕ್‌ಹರ್ಸ್ಟ್ ಭಾರೀ ಆರಂಭ ಒದಗಿಸಿಕೊಟ್ಟರು. ಈ ಜೋಡಿಯು ಕೇವಲ ೩೧ ಓವರುಗಳಲ್ಲಿ ೧೧೬ ಓಟ ಸೇರಿಸಿ ಅಪಾಯಕಾರಿಯಾಗಿ ಕಾಣುತ್ತಿದ್ದಾಗ ಗ್ಲೀಸನ್ ಲಕ್‌ಹರ್ಸ್ಟ್(೩೮) ವಿಕೆಟ್ ಎಗುರಿಸಿ ಇವರಿಬ್ಬರನ್ನು ಬೇರ್ಪಡಿಸಿದ.

ಮುಂದೆ ಬಾಯ್ಕಾಟ್‌ನನ್ನು ಸೇರಿಕೊಂಡ ಎಡ್ರಿಚ್(೪೪) ಆಸ್ಟ್ರೇಲಿಯಾದ ಬೌಲರ್‌ಗಳಿಗೆ ಸಾಕಷ್ಟು ಬೆವರಿಸಿಳಿಸಿದರೆ ಆರಂಭದಿಂದಲೇ ಸಿಂಹಸ್ವಪ್ನರಾಗಿ ಕಾಡಿದ್ದ ಬಾಯ್ಕಾಟ್(೭೭) ತನ್ನ ಬ್ಯಾಟನ್ನು ಮತ್ತಷ್ಟು ಉದ್ದ ಹರಿಬಿಟ್ಟು ನಿರಾಯಾಸವಾಗಿ ರನ್‌ಗಳಿಸಲಾರಂಭಿಸಿದ.

ಇಂಗ್ಲೆಂಡಿನ ಎರಡನೇ ವಿಕೆಟ್ ಪತನಗೊಂಡಾಗ ಸ್ಕೋರು ೨೦೧. ಆದರೆ ಈ ಹಂತದಲ್ಲಿ ಅನಗತ್ಯ ಅವಸರದಿಂದ ಪಟಪಟನೆ ನಾಲ್ಕು ವಿಕೆಟ್‌ಗಳು ಪೆವಿಲಿಯನ್ ಕಂಡಿದ್ದು ಇಂಗ್ಲೆಂಡಿನ ಭರ್ಜರಿ ಸ್ಕೋರಿನ ಆಸೆಗೆ ಅಡ್ಡಿಯಾಯಿತು. ನಾಯಕ ಇಲ್ಲಿಂಗ್‌ವರ್ಥ್ ಬರೀ ೨೪ ರನ್ ಗಳಿಸಿ ಗ್ಲೀಸನ್‌ಗೆ ಬಲಿಯಾದ. ಚಹಾ ಸೇವಿಸಿ ಬಂದ ಕೂಡಲೇ ಆರು ರನ್‌ಗಳಿಗೆ ಮೂರು ವಿಕೆಟ್ ಎಗುರಿಸಿದ ಆಫ್ ಸ್ಪಿನ್ನರ್ ಆಸ್ಲೆ ಮಾಲೆಟ್ ಇಂಗ್ಲೆಂಡಿನ ಈ ದಿಢೀರ್ ಕುಸಿತಕ್ಕೆ ಕಾರಣನೆನಿಸಿದ.

ಆದರೆ ಕೊನೆಯ ನಾಲ್ವರು ಬ್ಯಾಟ್ಸ್‌ಮನ್‌ಗಳು ಆಸ್ಟ್ರೇಲಿಯಕ್ಕೆ ಅನಿರೀಕ್ಷಿತ ತಲೆ ನೋವಾದರು. ಪ್ರಮುಖರನ್ನು ಸಲೀಸಾಗಿ ಕಬಳಿಸಿದ ಹುರುಪಿನಲ್ಲಿದ್ದ ಕಾಂಗ್ರೂಗಳಿಗೆ ಕಾಡಿದ ಜಾನ್ ಸ್ನೊ(೩೭) ಪೀಟರ್ ಲೀವರ್(೩೬) ಹಾಗೂ ಬಾಬ್ ವಿಲ್ಲಿಸ್ (ಔಟಾಗದೆ ೧೪) ತಮ್ಮ ಜೊತೆಯಾಟದಲ್ಲಿ ಅಮೂಲ್ಯ ೧೧೯ ರನ್ ಸೇರಿಸಿ ಇಂಗ್ಲೆಂಡಿನ ಮೊತ್ತ ೩೩೨ ತಲುಪುವಂತೆ ಮಾಡಿದರು.

ಆತಿಥೇಯರ ಪರ ಗ್ಲೀಸನ್ ಹಾಗೂ ಮ್ಯಾಲೆಟ್ ತಲಾ ನಾಲ್ಕು ವಿಕೆಟ್ ಗಳಿಸಿಕೊಂಡರು.

ಇಂಗ್ಲೆಂಡಿಗೆ ಬಿದ್ದಂಥ ಭದ್ರ ಅಡಿಪಾಯ ಆಸ್ಟ್ರೇಲಿಯಾಕ್ಕೆ ಬೀಳಲಿಲ್ಲ. ತಂಡದ ಮೊತ್ತ ೧೮ ರನ್ ಆಗಿದ್ದೇ ತಡ ಲಿವರ್ ನಾಯಕ ಬಿಲ್ ಲಾರಿ(೯)ನನ್ನು ಕೆಡವಿ ಇಂಗ್ಲೆಂಡ್ ಶಿಬಿರದಲ್ಲಿ ಸಂತಸ ಮೂಡಿಸಿದ.

ಇದಾದ ಸ್ವಲ್ಪ ಹೊತ್ತಿನ ನಂತರ ಮತ್ತೊಬ್ಬ ಆರಂಭಿಕ ಬ್ಯಾಟ್ಸ್‌ಮನ್ ಇಯಾನ್ ಚಾಪೆಲ್(೧೨) ಪೆವಿಲಿಯನ್ ಸೇರಿದ. ಇಂತಹ ಪರಿಸ್ಥಿತಿಯಲ್ಲಿ ತಂಡದ ಬ್ಯಾಟಿಂಗ್ ಜವಾಬ್ದಾರಿ ಹೊತ್ತ ಇಯಾನ್ ರೆಡ್‌ಪಾಲ್(೬೪) ಮತ್ತು ಡಗ್ ವಾಲ್ಟರ್ಸ್(೫೫) ಇಂಗ್ಲೆಂಡ್ ಆಕ್ರಮಣವನ್ನು ಸಮರ್ಥವಾಗಿ ಎದುರಿಸಿ ಅಮೂಲ್ಯ ೯೯ರನ್ ಶೇಖರಿಸಿ ಉಳಿದವರಲ್ಲಿ ಆತ್ಮವಿಶ್ವಾಸ ಮೂಡಿಸಿದರು.

ಪಂದ್ಯದ ಮೂರನೇ ದಿನವೂ ಆಸ್ಟ್ರೇಲಿಯಕ್ಕೆ ಮತ್ತೆ ಆಘಾತಕಾರಿಯಾಗೇ ಪರಿಣಮಿಸಿತು. ರೆಡ್‌ಪಾತ್, ವಾಲ್ಟರ್ಸ್‌ರಿಂದ ಸ್ವಲ್ಪ ಚೇತರಿಸಿಕೊಂಡಿದ್ದ ಕಾಂಗ್ರೂಗಳಿಗೆ ಈ ಬಾರಿ ಡೆರಿಕ್ ಅಂಡರ್‌ವುಡ್ ಪೆಟ್ಟು ನೀಡಿದ ವಾಲ್ಟರ್ಸ್ ನಿರ್ಗಮನವನ್ನೇ ಕಾಯುತ್ತಿದ್ದ ಅಂಡರ್‌ವುಡ್ ಕಡೆಯ ಆರು ವಿಕೆಟ್‌ಗಳಲ್ಲಿ ನಾಲ್ಕನ್ನು ತನ್ನ ಬಲೆಗೆ ಹಾಕಿಕೊಂಡ. ಹೀಗಾಗಿ ಆಸ್ಟ್ರೇಲಿಯಾ ಕೇವಲ ೨೩೬ ರನ್ ಮಾತ್ರ ಗಳಿಸಿ ಎಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು.

ಪ್ರಥಮ ಇನಿಂಗ್ಸ್‌ನಲ್ಲಿ ೯೬ ರನ್ ಲೀಡ್ ಪಡೆದ ಇಂಗ್ಲೆಂಡ್ ತನ್ನ ಎರಡನೇ ಸರದಿಯ ಆರಂಭದಲ್ಲೇ ಮುಗ್ಗರಿಸಿತ್ತಾದರೂ ಪ್ರಾರಂಭಿಕ ಬ್ಯಾಟ್ಸ್‌ಮನ್ ಜೆಫ್ ಬಾಯ್ಕಾಟ್ ಹೊಡೆದ ಅಮೋಘ ಅಜೇಯ ಶತಕದ(೧೪೨) ನೆರವಿನಿಂದ ಐದು ವಿಕೆಟ್‌ಗಳ ನಷ್ಟಕ್ಕೆ ೩೧೯ ರನ್ ಗಳಿಸಿ ಇನ್ನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು.

ಬಾಯ್ಕಾಟ್ ಶತಕದ ಹೊರತಾಗಿ ಬಿ.ಡಿ. ವೊಲಿವಿರಾ (೫೬) ಮತ್ತು ನಾಯಕ ಇಲ್ಲಿಂಗ್‌ವರ್ಥ್ (೫೩) ಅರ್ಧ ಶತಕ ಗಳಿಸಿದ್ದಲ್ಲದೆ ಐದನೆ ವಿಕೆಟ್ ಜೊತೆಯಾಟದಲ್ಲಿ ೯೫ ರನ್ ಸೇರಿಸಿದ್ದು ಇಂಗ್ಲೆಂಡ್ ೩೦೦ರ ಗಡಿದಾಟಲು ನೆರವಾಯಿತು.

ಜಯಗಳಿಸಲು ಸುಮಾರು ಒಂಭತ್ತು ತಾಸುಗಳ ಅವಧಿಯಲ್ಲಿ ೪೧೬ ರನ್ ಮಾಡಬೇಕಿದ್ದ ಆಸ್ಟ್ರೇಲಿಯ ಎರಡಂಕಿ ಮೊತ್ತ ದಾಟುತ್ತಿದ್ದಂತೆಯೇ ಪ್ರಮುಖ ಬ್ಯಾಟ್ಸ್‌ಮನ್ ಇಯಾನ್ ಚಾಪೆಲ್ ವಿಕೆಟ್ ಕಳೆದುಕೊಂಡಿತು.

ಪಂದ್ಯದ ಕಡೆಯ ದಿನ. ಹೆಬ್ಬಾಗಿ ಸ್ಪಿನ್ ಬೌಲಿಂಗಿಗೆ ನೆರವಾಗುತ್ತಿದ್ದ ಸಿಡ್ನಿ ಮೈದಾನದಲ್ಲಿ ತಮ್ಮ ಕ್ರಿಕೆಟ್ ಜೀವನದ ಅತ್ಯಂತ ಶ್ರೇಷ್ಠ ಪ್ರದರ್ಶನ ನೀಡಿದ ಜಾನ್ ಸ್ನೊ ಕಾಂಗ್ರೂ ಬ್ಯಾಟ್ಸ್‌ಮನ್‌ಗಳು ಬರೀ ಪೆವಲಿಯನ್‌ಗೆ ಬಂದು ಹಾಜರಿ ಹಾಕಿ ಹೋಗುವಂತೆ ಮಾಡಿದ.

ಒಂದೆಡೆ ಮೇಲಿಂದ ಮೇಲೆ ವಿಕೆಟ್ ಪತನ ಗೊಳ್ಳುತ್ತಿರುವುದನ್ನು ನೋಡುತ್ತ ನಿಂತಿದ್ದ ಆರಂಭಿಕ ಬ್ಯಾಟ್ಸ್‌ಮನ್ ಬಿಲ್ ಲಾರಿಗೆ (ಅಜೇಯ ೬೦) ಯಾರೊಬ್ಬರೂ ಕಂಪನಿ ನೀಡಲೇ ಇಲ್ಲ. ಲಾರಿ ನಂತರ ಸ್ಟಾಕ್ ಪೋಲ್ ಇದ್ದುದರಲ್ಲೇ ಎದುರಾಳಿಗೆ ಸ್ವಲ್ಪ ಪ್ರತಿರೋಧ ನೀಡಿ ೩೦ ರನ್ ಗಳಿಸಿದ. ಆದರೆ ಇವರಿಬ್ಬರನ್ನು ಬಿಟ್ಟರೆ ಉಳಿದ ಯಾವ ಆಟಗಾರನೂ ಎರಡಂಕಿ ದಾಟಲಿಲ್ಲ.

ಮುಂದೆ ಒಂದೊಂದು ರನ್‌ಗೂ ತಿಣುಕಾಡಿದ ಆಸ್ಟ್ರೇಲಿಯಾ ಕೇವಲ ೧೧೬ ರನ್‌ಗಳಿಗೆ ತನ್ನೆಲ್ಲ ವಿಕೆಟ್‌ಗಳನ್ನು ಕಳೆದುಕೊಂಡು ೨೯೯ ರನ್‌ಗಳ ಹೀನಾಯ ಸೋಲು ಅನುಭವಿಸಿತು.

ಇಂಗ್ಲೆಂಡಿಗೆ ಅನಿರೀಕ್ಷಿತ ಆಪತ್‌ಬಾಂಧವನಂತೆ ಬಂದ ಜಾನ್ ಸ್ನೊ ತನ್ನ ಲೆಗ್ ಕಟರ್ ಮೂಲಕ ಕೇವಲ ೪೦ ರನ್ ನೀಡಿ ಏಳು ವಿಕೆಟ್‌ಗಳನ್ನು ಬಲಿ ಹಾಕಿದ.

ಜಾನ್ ಸ್ನೊ "ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ನಾನು ಎಂದೆಂದಿಗೂ ಮರೆಯಲಾರದ ದಿನವಿದು. ಜೆಫ್ ಬಾಯ್ಕಾಟ್ ಗಳಿಸಿದ ಆಕರ್ಷಕ ಶತಕದ ನೆರವಿನಿಂದ ನಾವು ಸಾಕಷ್ಟು ರನ್ ಸಂಪಾದಿಸಿ ಎದುರಾಳಿಯ ಮೇಲೆ ಒತ್ತಡ ಹೇರಲು ಸಾಧ್ಯವಾಯಿತು. ಮುಖ್ಯವಾಗಿ ತಂಡದ ಉಳಿದ ಆಟಗಾರರ ಉತ್ತಮ ಕ್ಷೇತ್ರರಕ್ಷಣೆ ನನ್ನ ಶ್ರೇಷ್ಠ ಬೌಲಿಂಗ್ ಪ್ರದರ್ಶನಕ್ಕೆ ಕಾರಣ," ಎಂದು ಅಭಿಪ್ರಾಯಪಟ್ಟ.

ರೇ ಇಲ್ಲಿಂಗ್ ವರ್ಥ್, "ಜಾನ್ ಸ್ನೊರಂಥ ವೇಗದ ಬೌಲರ್‌ಗಳನ್ನೂ ನಾನು ಇದುವರೆಗೆ ನೋಡಿಯೇ ಇರಲಿಲ್ಲ. ಸಿಡ್ನಿ ಮೈದಾನದಲ್ಲಿ ಆತ ಎಸೆದ 'ಲೆಗ್ ಕಟರ್' ಅವರ್ಣನೀಯ. ನಾವು ಉತ್ತಮ ಸ್ಥಿತಿಯಲ್ಲಿದ್ದರೂ ಇಷ್ಟು ಸುಲಭವಾಗಿ ಗೆಲ್ಲುತ್ತೇವೆ ಎಂದು ನಿರೀಕ್ಷಿಸಿದ್ದಿಲ್ಲ. ಜಾನ್ ಅವರ ಅದ್ಭುತ ಬೌಲಿಂಗ್ ಜೊತೆಗೆ ಜೆಫ್ ಬಾಯ್ಕಾಟ್ ಗಳಿಸಿದ ಆಕರ್ಷಕ ಶತಕ ನಮ್ಮ ಈ ಭಾರೀ ಗೆಲುವಿಗೆ ಕಾಣವಾಯಿತು," ಎಂದು ಪ್ರಶಂಸಿಸಿದ.

ದಾಖಲೆಯಲ್ಲಿ

ಐದು ಮತ್ತು ಆರನೆ ಟೆಸ್ಟ್ ಸಹ ಯಾವುದೇ ಫಲಿತಾಂಶ ಬಾರದೆ ಡ್ರಾದಲ್ಲಿ ಸಮವಾದವು.

ಸರಣಿಯ ಏಳನೇ ಹಾಗೂ ಅಂತಿಮ ಟೆಸ್ಟ್ ಪಂದ್ಯ ಎರಡೂ ತಂಡಗಳಿಗೆ ಅತ್ಯಂತ ಮಹತ್ವದ್ದಾಗಿತ್ತು. ಮುಖ್ಯವಾಗಿ ಆಷಸ್‌ನ್ನು ತನ್ನಲ್ಲಿಯೇ ಉಳಿಸಿಕೊಳ್ಳಬೇಕಾದರೆ ಆಸ್ಟ್ರೇಲಿಯ ಈ ಪಂದ್ಯ ಗೆಲ್ಲಲೇಬೇಕಿತ್ತು. ಆದರೆ ಇಂಗ್ಲೆಂಡ್ ಆತಿಥೇಯರಿಗೆ ಅಂತಹ ಅವಕಾಶ ನೀಡದೆ ೬೨ ರನ್‌ಗಳಿಂದ ವಿಜಯ ಸಾಧಿಸಿ ೨-೦ ಅಂತರದಿಂದ ಆಷಸ್‌ನ್ನು ಮರಳಿ ಗಳಿಸಿತು.

ಇಂಗ್ಲೆಂಡಿಗೆ ಜಯ ತಂದುಕೊಟ್ಟ ಈ ಪಂದ್ಯ ಕೆಲವು ಆತಂಕದ ಕ್ಷಣಗಳನ್ನು ಎದುರಿಸಬೇಕಾಯಿತು. ಜಾನ್ ಸ್ನೊ ಎಸೆದ ಬೌನ್ಸರ್‌ಗಳಿಂದ ಟೆರ್ರಿ ಜೆನ್ನರ್ ತಲೆಗೆ ಚೆಂಡು ಬಿದ್ದಾಗ ಕುಪಿತಗೊಂಡ ಪ್ರೇಕ್ಷಕರು ಕ್ಷೇತ್ರರಕ್ಷಕರ ಮೇಲೆ ಕೈಗೆ ಸಿಕ್ಕ ವಸ್ತುಗಳನ್ನು ತೂರತೊಡಗಿದಾಗ ಇಲ್ಲಿಂಗ್‌ವರ್ಥ್ ನೇತೃತ್ವದ ತಂಡ ಸ್ವಲ್ಪ ಹೊತ್ತು ಮೈದಾನದಿಂದ ಹೊರ ನಡೆದಿತ್ತು.

"ಇಲಿ ಫಾರಂ"

ಜೆಕೋಸ್ಲಾವಾಕಿಯಾದಲ್ಲಿ ವೈಜ್ಞಾನಿಕ ಶೋಧನೆಗಳಿಗಾಗಿ ಅಸಂಖ್ಯಾತ ಇಲಿಗಳು ಬೇಕಾಗುತ್ತವೆ. ಈ ಕಾರಣದಿಂದ ಪ್ರಾಗ್ ಪಟ್ಟಣದಲ್ಲಿ ಒಂದು ಇಲಿಯ ಫಾರಂ ಅನ್ನು ನಡೆಸಲಾಗುತ್ತಿದೆ. ಅಲ್ಲಿ ವರ್ಷಕ್ಕೆ ಮೂರು ಲಕ್ಷ ಇಲಿಗಳನ್ನು ಬೆಳೆಸಲಾಗುತ್ತಿದೆ. ಹೀಗೆ ವೃದ್ಧಿಗೊಳ್ಳುವ ಇಲಿಗಳಲ್ಲಿ ಅತ್ಯುತ್ತಮವೆನ್ನುವಂಥವುಗಳನ್ನು ಮಾತ್ರ ಪ್ರಯೋಗಗಳಿಗೆ ಆಯ್ಕೆ ಮಾಡಲಾಗುತ್ತದೆ.

- ಕೊಕ್ಕರೆ ಬೆಳ್ಳೂರು ಬಿ.ಟಿ. ಲಕ್ಷ್ಮಣ



ಹಿತ್ತಲ ಗಿಡಕ್ಕೆ 'ಪೇಟೆಂಟ್'ನ ಪಟ್ಟ

"ಈ ಬಾರಿಯ ರಜದಲ್ಲಿ ಊಟಿಗೋ, ಕೊಡೈಕನಾಲಿಗೋ ಹೋಗಿ ಬರೋಣವಾ? ಪ್ಲೀಸ್....ನಿಜ ಹೇಳಲಾ? ಬ್ರಹ್ಮಚರ್ಯದ ಬದುಕಲ್ಲೇ ನಾವು ದೇಶ ಸುತ್ತಬೇಕು ಕಣ್ರೋ....ಮೊದಲು ನೀವು ನಮ್ಮೂರಿಗೆ ಬಂದುಬಿಡಿ....ಆನಂತರ ಇಲ್ಲಿಂದಲೇ ನಮ್ಮ ಯಾತ್ರೆ ಶುರುಮಾಡಬಹುದು" ಎಂದೆಲ್ಲಾ ಪತ್ರ ಬರೆದಿದ್ದ ಗೆಳೆಯ ರಘು. ನಾವು ನೂರಾರು ಕನಸುಗಳೊಂದಿಗೆ ತುಮಕೂರು ಸಮೀಪದ ಅವನೂರಿಗೆ ಹೋದ ನಂತರದ ದಿನಗಳಲ್ಲಿಯೇ ಕಾಮಾಲೆಗೆ ಸಿಕ್ಕಿಬಿದ್ದ. ದಿಢೀರೆಂದು ಎದುರಾದ ಈ ಕಾಯಿಲೆಯಿಂದ ಕಂಗಾಲಾಗಿ ನಾವು ಸರ್ಕಾರಿ ಆಸ್ಪತ್ರೆ ಹಿಡಿದು ಖಾಸಗಿ ಕ್ಲಿನಿಕ್‌ಗಳ ಬಾಗಿಲನ್ನೆಲ್ಲಾ ಎಡತಾಕಿದರೂ ಯಾವುದೇ ಪ್ರಯೋಜನವಾಗಲಿಲ್ಲ. ನಮ್ಮ ಪಡಿಪಾಟಲು ನೋಡಲಾಗದೆ ಕೊನೆಗೆ ಅದೇ ಊರಿನ ಹಿರಿಯರೊಬ್ಬರು, "ಡಾಕ್ಟರೇಕೆ? ಔಷಧಿಯೆ? ಒಂದು ವಾರ ನೆಲನೆಲ್ಲಿಯ ರಸ ಕುಡೀತಾ ಬಂದರೆ ಎಂತಹ ಕಾಮಾಲೆಯೂ ಕಾಲು ಕೀಳ್ತದೆ" ಎಂದು ಸೂಚಿಸಿದ್ದೇ ಅಲ್ಲದೆ ಮನೆಯ ಹಿತ್ತಲಲ್ಲೇ ಇದ್ದ ಏಳೆಂಟು ಇಂಚುಗಳೆತ್ತರದ ನೆಲನೆಲ್ಲಿಯ ಗಿಡವನ್ನೂ ತೋರಿಸಿಕೊಟ್ಟರು. ಹಿತ್ತಲ ಗಿಡವೇ ಯಾಕೆ ಮದ್ದಾಗಬಾರದು? ಎಂಬ ಕುತೂಹಲದಿಂದಲೇ ಹಿರಿಯರ ಮಾತಿನಂತೆ ರಘು ನೆಲನೆಲ್ಲಿಯನ್ನು ಜಜ್ಜಿ ಅದರ ರಸವನ್ನು ಮಜ್ಜಿಗೆಯೊಂದಿಗೆ ಕುಡಿಯುತ್ತಾ ಬಂದ.

ಆಶ್ಚರ್ಯ! ಡಾಕ್ಟರುಗಳ ಹತ್ತಾರು ಬಗೆಯ ಟಾನಿಕ್‌ಗೆ, ಇಂಜಕ್ಷನ್‌ಗೆ ಯಾವ ಪರಿಣಾಮವನ್ನೂ ತೋರಿಸದ ಕಾಮಾಲೆರೋಗ ಹಿರಿಯರು ಹೇಳಿದ್ದ ಚಿಕಿತ್ಸೆಯನ್ನೇ ಮುಂದುವರಿಸಿದಾಗ ೧೫

- ಎ.ಆರ್. ಮಣಿಕಾಂತ್
ಜಿ. ಕೃಷ್ಣಪ್ರಸಾದ್

ರೇಖಾ ಚಿತ್ರ: ಸೋಮು, ಮಂಡ್ಯ

ನೆಲನೆಲ್ಲಿಯ ಬಗ್ಗೆ ಇನ್ನಷ್ಟು...

ನೆಲ್ಲಿಕಾಯಿ ಗಿಡದ ಪುಟ್ಟದೊಂದು ರೂಪದಂತಿರುವ ನೆಲನೆಲ್ಲಿ ಗಿಡ ಹಸಿರಿನಿಂದ ಕೂಡಿದ ಚಿಕ್ಕ ಎಲೆಗಳನ್ನು ಹೊಂದಿರುತ್ತದೆ. ಕಾಳು ಮೆಣಸಿನಷ್ಟೇ ಸಣ್ಣವಿರುವ ಕಾಯಿಗಳು ಹಸಿರಾಗಿರುತ್ತವೆ. ಹಣ್ಣಾದಂತೆಲ್ಲ ಕಾಯಿ ಹಸಿರಿನಿಂದ ಹಳದಿ ಬಣ್ಣಕ್ಕೆ ತಿರುಗುತ್ತಾ ಹೋಗುತ್ತದೆ. ನೆಲನೆಲ್ಲಿಯ ಎಲೆ, ಬೀಜ ಎರಡೂ ಹುಳಿ ರುಚಿಯವಾಗಿರುತ್ತವೆ ಅಥವಾ ಒಗರು ಒಗರಾಗಿರುತ್ತವೆ.

ಕಾಮಾಲೆಗೆ ರಾಮಬಾಣದಂತೆ ಕೆಲಸ ಮಾಡುವ ನೆಲನೆಲ್ಲಿಯ ಎಲೆ, ಕಾಂಡ, ಬೇರುಗಳಿಂದ ಕೂಡಿದ ಇಡೀ ಗಿಡವನ್ನೇ ತೆಗೆದುಕೊಂಡು ಜಜ್ಜಿ ಕಷಾಯ ತಯಾರಿಸಬಹುದು. ಔಷಧಿ ತಯಾರಿಸುವ ಮುನ್ನ ಗಿಡವನ್ನು ತೊಳೆಯಬೇಕು ಎಂಬುದನ್ನು ಬಿಟ್ಟರೆ ಈ ಗಿಡದ ಯಾವುದೇ ಭಾಗವನ್ನೂ ಬೇರ್ಪಡಿಸಬೇಕೆಂಬ ಪ್ರಮೇಯವೇ ಬರುವುದಿಲ್ಲ.

(ಕೃತಜ್ಞತೆಗಳು: ಕೆಲವು ಅಗತ್ಯ ಮಾಹಿತಿ ನೀಡಿದ ಡಾ. ಸತೀಶ್ ಶೃಂಗೇರಿ ಅವರಿಗೆ.)

- ಮಣಿ

ದಿನಗಳಲ್ಲೇ ಮಾಯವಾಯಿತು.

ಆದರೆ ಭಾರತೀಯ ವೈದ್ಯಕೀಯ ಪದ್ಧತಿ, ಆಯುರ್ವೇದ ಪದ್ಧತಿಗಳೊಂದಿಗೆ ಸಾವಿರಾರು ವರ್ಷಗಳಿಂದ ಬೆರೆತುಹೋಗಿರುವ ನೆಲನೆಲ್ಲಿಗೆ ಇದೀಗ ಬಂದಿದೆ ಕುತ್ತು. ಕಾಮಾಲೆಗೆ ನೆಲನೆಲ್ಲಿಯನ್ನು ಬಳಸಿ ಗುಣಪಡಿಸುವ ಸಂಶೋಧನೆಯಲ್ಲಿ ತಾನು ಯಶಸ್ವಿಯಾಗಿರುವುದಾಗಿ ತಿಳಿಸಿರುವ ಅಮೆರಿಕದ ಕಂಪನಿಯೊಂದು ನೆಲನೆಲ್ಲಿಯ 'ಪೇಟೆಂಟ್' ಪಡೆಯಲು ಸಜ್ಜಾಗಿದೆ.

ಈ ಔಷಧಿಯಿರಲಿ, ಕಾಮಾಲೆ ಅಥವಾ ಹಳದಿ ಕಾಮಾಲೆ (ಜಾಂಡೀಸ್) ರೋಗ ಬರುವುದಾದರೂ ಯಾಕೆ ಎಂಬುದನ್ನು ಮೊದಲೇ ತಿಳಿದುಕೊಳ್ಳುವುದು ಸೂಕ್ತ.

ರಕ್ತದಲ್ಲಿ "ಬಿಲಿರುಬಿನ್" ಎಂಬ ಅಂಶ ಜಾಸ್ತಿಯಾದಾಗ ಕಾಮಾಲೆ ಬರುತ್ತದೆ. ಚರ್ಮದಲ್ಲಿ ಹಳದಿ ಬಣ್ಣ ಕಾಣಿಸಿವುದು ಕಣ್ಣಿನ ಬಿಳಿಭಾಗದಲ್ಲಿ ಮತ್ತು ಉಗುರಿನಲ್ಲಿ ಹಳದಿಬಣ್ಣ ಕಾಣಿಸುವುದು ಈ ರೋಗ ಉಲ್ಬಣಗೊಂಡಿದ್ದರ ಲಕ್ಷಣಗಳಾಗಿವೆ.

ಜಾಂಡೀಸ್‌ನಲ್ಲಿ, ಹೀಮೋಲಿಟಿಕ್ ಜಾಂಡೀಸ್, ಹೆಪಾಟೋ ಸೆಲ್ಯುಲಾರ್ ಮತ್ತು ಅವರೋಧಜನ್ಯ ಜಾಂಡೀಸ್ ಎಂದು ಮೂರು ವಿಧಗಳಿವೆ. ಇವುಗಳಲ್ಲಿ ರಕ್ತಕಣಗಳ ವಿಭಜನೆ ಮತ್ತು ನಾಶ ಅತ್ಯಧಿಕವಾಗುವುದರಿಂದ ಹಿಮೋಲಿಟಿಕ್ ಜಾಂಡೀಸ್ ಬಂದರೆ, ಯಕೃತ್ ಜೀವಕೋಶಗಳ ವಿಕೃತಿಯಿಂದ ಹೆಪಾಟೋ ಸೆಲ್ಯುಲಾರ್ ಜಾಂಡೀಸ್ ಬರುತ್ತದೆ. ಪಿತ್ತರಸವು ಯಕೃತ್‌ನಿಂದ ಕರುಳಿನ ಮೊದಲ ಭಾಗಕ್ಕೆ ಬರುವಲ್ಲಿ ಇರುವ ನಾಳದಲ್ಲಿ ತಡೆಯುಂಟಾದರೆ ಅವರೋಧಜನ್ಯ ಜಾಂಡೀಸ್ ಬರುತ್ತದೆ.

ಇಷ್ಟಲ್ಲದೆ ಮಕ್ಕಳಲ್ಲಿ ಹುಟ್ಟುವಾಗಲೇ Physiological Jaundice ಹೆಸರಿನಲ್ಲಿ ಒಂದು ರೋಗ ಬರುತ್ತದೆಯಾದರೂ ಸೂರ್ಯ ಕಿರಣಗಳಲ್ಲಿನ ಅತಿನೇರಳೆ ಅಂಶದಿಂದ ತಂತಾನೆ ಗುಣವಾಗುತ್ತದೆ.

ನೆಲನೆಲ್ಲಿಯ ಕುರಿತಂತೆ....

ನೆಲನೆಲ್ಲಿ, ಕೀರನೆಲ್ಲಿ ಎಂದೆಲ್ಲಾ ಕರೆಯಲ್ಪಡುವ ಈ ಗಿಡದ ವೈಜ್ಞಾನಿಕ ಹೆಸರು ಫೈಲಾಂಥಸ್ ನಿರುರಿ. ನೆಲನೆಲ್ಲಿಗೆ 'ಭೂಮ್ಯಾಮಲಂ' ಎಂದೂ ಹೆಸರಿದೆ. ಶತಮಾನಗಳಿಂದಲೂ ಕಾಮಾಲೆ ರೋಗಕ್ಕೆ ಸಿದ್ಧೌಷಧವನ್ನಾಗಿ ಈ ಗಿಡವನ್ನು ಭಾರತದ ವೈದ್ಯಕೀಯ ಪದ್ಧತಿಯಲ್ಲಿ ಬಳಸಲಾಗುತ್ತಿದೆ. ನಾಡಕರ್ಣಿಯ (ನಾಟಿ)ವೈದ್ಯಶಾಸ್ತ್ರ ಪದ್ಧತಿಯಲ್ಲೂ 'ನೆಲನೆಲ್ಲಿ'ಯನ್ನು ಕಾಮಾಲೆಗೆ ಔಷಧಿಯಾಗಿ ಬಳಸುವ ವಿಷಯದ ಪ್ರಸ್ತಾಪವಿದೆ.

ವಾಸ್ತವವೆಂದರೆ ಅಲೋಪತಿಕ್ ವೈದ್ಯಕೀಯ ಪದ್ಧತಿಯಲ್ಲಿ ಕಾಮಾಲೆಯನ್ನು ಗುಣಪಡಿಸಲಿಕ್ಕೆ ಯಾವುದೇ ಔಷಧ ಇಲ್ಲ. ಅಲೋಪತಿಕ್ ಪದ್ಧತಿಯಲ್ಲಿ ಬಲಬರುವಂತಹ ಔಷಧಗಳನ್ನಷ್ಟೆ ಬಳಸುತ್ತಾರೆ. ಆಯುರ್ವೇದದಲ್ಲಿ ಅನೇಕ ಯಕೃತ್ ಉತ್ತೇಜಕಗಳನ್ನು ಬಳಸುತ್ತಾರೆ.

ಬಹುಶಃ ಭಾರತದ ಎಲ್ಲೆಡೆಯೂ ಲಭ್ಯವಿರುವ ನೆಲನೆಲ್ಲಿಯು ಕಾಮಾಲೆ ರೋಗಕ್ಕೆ ರಾಮಬಾಣ. ನೆಲನೆಲ್ಲಿಯ ಇಡೀ ಗಿಡವನ್ನು ತಂದು ತೊಳೆದು ರಸ ತೆಗೆಯಬೇಕು. ನಂತರ ಈ ರಸವನ್ನು ಹಸೀ ಹಾಲಿನೊಂದಿಗೆ ಅಥವಾ ಮಜ್ಜಿಗೆಯೊಂದಿಗೆ ಖಾಲಿ ಹೊಟ್ಟೆಯಲ್ಲಿ ಸೇವಿಸಬೇಕು. ಈ ಚಿಕಿತ್ಸೆ ಮುಂದು ವರಿಸಿದಂತೆಲ್ಲಾ ಕಾಮಾಲೆ ಇಳಿಮುಖವಾಗುತ್ತದೆ. ಇಷ್ಟಲ್ಲದೆ ಕಾಮಾಲೆಗೆ ಚಿಕಿತ್ಸೆಯಾಗಿ ಈಗ 'ನಿರುರಿ ಎಕ್ಸ್‌ಟ್ರಾಕ್ಟ್' ಎಂಬ ಔಷಧಿ ಕೂಡ ಸಿಗುತ್ತದೆ.

ಪೇಟೆಂಟಿನ ಹಿನ್ನೆಲೆ

ಜೀವ ವೈವಿಧ್ಯ (Life forms)ಗಳ ಮೇಲೆ ಪೇಟೆಂಟ್ ಪಡೆಯುವ ಪದ್ಧತಿ ಶುರುವಾದದ್ದು ೧೯೭೯ರಲ್ಲಿ. ಈ ಪದ್ಧತಿ ಶುರುವಾದದ್ದು ಕೂಡ ಅಮೆರಿಕದಲ್ಲಿಯೇ ಎಂಬುದು ಗಮನಾರ್ಹ. ಅಂದಿನ ದಿನಗಳಲ್ಲಿ ಅಮೆರಿಕದಲ್ಲಿದ್ದ ಭಾರತೀಯ ಮೂಲದ ಆನಂದ ಚಕ್ರವರ್ತಿಯವರು ಅನುವಂಶೀಯ ಗುಣಗಳನ್ನು ಪರಿವರ್ತಿಸಿದ ಜಿಡ್ಡನ್ನು ತಿಂದು ಹಾಕುವ ಬ್ಯಾಕ್ಟೀರಿಯಾದ ಮೇಲೆ ಪೇಟೆಂಟ್ ಹಕ್ಕನ್ನು ಪಡೆಯುವುದರ ಮೂಲಕ ಜೀವ ವೈವಿಧ್ಯಗಳ ಮೇಲಿನ ಪೇಟೆಂಟ್ ಹಕ್ಕನ್ನು ಪಡೆಯುವ ಪ್ರಕ್ರಿಯೆ ಆರಂಭವಾಯಿತು. ಮೊದಮೊದಲಿಗೆ ಅನುವಂಶೀಯವಾಗಿ ಮಾರ್ಪಡಿಸಿದ ಗಿಡ, ಸೂಕ್ಷ್ಮ ಜೀವಿ ಮುಂತಾದ ಸಂಗತಿ ಕುರಿತಾಗಿ ಮಾತ್ರ ಮೀಸಲಾಗಿದ್ದ ಈ ಪೇಟೆಂಟ್ ಪಡೆಯುವ ಪ್ರಕ್ರಿಯೆಯು ಇವತ್ತಿನ ದಿನಗಳಲ್ಲಿ ಎಷ್ಟೊಂದು ವ್ಯಾಪಿಸಿದೆಯೆಂದರೆ ಅನುವಂಶೀಯ ಗುಣ ಮಾರ್ಪಡಿಸಲ್ಪಟ್ಟ ಸೋಯಾಬೀನ್, ಹತ್ತಿ, ಮುಸುಕಿನ ಜೋಳ, ಬೀನ್ಸ್ ಮತ್ತು ಬತ್ತದ ತಳಿಗಳ ಮೇಲೆ ಈಗಾಗಲೇ ಪೇಟೆಂಟ್ ಪಡೆಯಲಾಗಿದೆ. ಅಷ್ಟೇ ಅಲ್ಲ, ಹತ್ತಾರು ತರಹದ ರೋಗ ರುಜಿನಗಳಿಗೀಡಾದರೂ ಬಚಾವಾಗಿಬಿಡುವ ಅಮೆಜಾನ್ ಕಾಡಿನ ಜನಾಂಗಗಳ ರೋಗ ನಿರೋಧಕ ಶಕ್ತಿಯ ಬಗ್ಗೆಯೇ ಪೇಟೆಂಟ್ ಪಡೆವ ಮಟ್ಟಕ್ಕೂ ಅಮೆರಿಕನ್ ಕಂಪನಿಗಳ ಜಾಲ ವಿಸ್ತರಿಸಿಕೊಂಡಿದೆ.

ಒಮ್ಮೆ ಪೇಟೆಂಟ್ ಹಕ್ಕು ಅಮೆರಿಕದ ಕಂಪನಿಗೆ ದಕ್ಕಿತೆಂದರೆ ಮುಂದೆ ಇಂತಹ ತಳಿಗಳ ಬಳಕೆ ಮತ್ತು ಸಂಶೋಧನೆ ನಿಷಿದ್ಧ. ಕಳೆದ ಹತ್ತು ವರ್ಷಗಳಿಂದೀಚೆಗೆ ಬೇವಿನ ಗಿಡವೊಂದರ



ನೆಲನೆಲ್ಲಿಯ ಗಿಡ

ಮೇಲೆಯೇ ವಿವಿಧ ಬಗೆಯ ೫೩ ಪೇಟೆಂಟ್ ಪಡೆಯಲಾಗಿದೆ. ದಿನಗಳೆದಂತೆಲ್ಲ ಪೇಟೆಂಟ್‌ಗೆ ಕಾದು ನಿಂತ ಜೀವ ವೈವಿಧ್ಯಗಳ ಪಟ್ಟಿ ಉದ್ದವಾಗುತ್ತಿದೆ.

ಭಾರತೀಯ ಮೂಲದ ಜ್ಞಾನವನ್ನೇ ಕದ್ದು ನೆಲನೆಲ್ಲಿಯಲ್ಲಿರುವ ಕಾಮಾಲೆ ನಿವಾರಕ ಗುಣವನ್ನು ತಾನು ಸಂಶೋಧಿಸಿದೆ ಎಂದು ಹೇಳುವ ಮೂಲಕ ಅಮೆರಿಕದ ಪೇಟೆಂಟ್ ಕಚೇರಿಯಲ್ಲಿ ಅಲ್ಲಿನ ಕಂಪನಿಯೊಂದು ಪೇಟೆಂಟ್‌ಗಾಗಿ ಅರ್ಜಿ ಹಾಕಿದೆ.

ಜಗತ್ತಿನ ಇತರ ಎಲ್ಲ ದೇಶಗಳ ಪೇಟೆಂಟ್ ನಿಯಮವು ವಸ್ತುಗಳ ಸಂಶೋಧನೆ ಮತ್ತು ಸಂಯೋಜನೆಗಳಿಗೆ ಮಾತ್ರ ಸೀಮಿತವಾಗಿದ್ದರೆ ಅಮೆರಿಕ ಮತ್ತು ಯೂರೋಪಿಯನ್ ದೇಶಗಳು 'ಜೀವ'ವನ್ನು ಕೂಡ ಪೇಟೆಂಟ್‌ನ ಮಿತಿಗೆ ಒಳಪಡಿಸಿರುವುದರಿಂದಲೇ ಈವತ್ತು ಇಡೀ ಪ್ರಪಂಚದ ಗಮನಸೆಳೆದಿವೆ.

ಲಾಭ-ನಷ್ಟದ ವಾದ-ವಿವಾದ

ಅಮೆರಿಕಕ್ಕೆ ನೆಲನೆಲ್ಲಿಯ ಪೇಟೆಂಟ್ ದೊರೆತರೆ, ಪೇಟೆಂಟ್ ಪಡೆದ ಕಂಪನಿಯು ತೃತೀಯ ರಾಷ್ಟ್ರಗ

ಅರಿಶಿನಕ್ಕೂ....

ಸಾವಿರಾರು ವರ್ಷಗಳಿಂದ ಅನೂಚಾನವಾಗಿ ಉಳಿದುಕೊಂಡು ಬಂದಿರುವ ಭಾರತೀಯರ ಮೂಲನಂಬಿಕೆಯನ್ನು ಬಳಸಿಕೊಳ್ಳುತ್ತಲೇ, ಅವರ ವೈದ್ಯಕೀಯ ಜ್ಞಾನವನ್ನೇ ಕದ್ದು, ನಮ್ಮ ಜನರ ಚಿಂತನೆಗಳನ್ನೇ ಮರೆಮಾಚಿ ಇದೆಲ್ಲವೂ ಕೇವಲ ಪ್ರಯೋಗಾಲಯದ ಸಂಶೋಧನೆ ಎಂದು ಚಿತ್ರಿಸುತ್ತ ಕಡೆಗೊಮ್ಮೆ ಪೇಟೆಂಟ್ ಹಕ್ಕು ಪಡೆಯಲು ಅಮೆರಿಕದ ಕಂಪನಿಗಳು ಎಂತೆಂತಹ ಸುಳ್ಳು ಹೇಳುತ್ತವೆಂಬುದಕ್ಕೆ ತೀರಾ ಇತ್ತೀಚೆಗೆ ನಡೆದ ಘಟನೆಯೊಂದನ್ನು ವಿವರಿಸಿದರೆ ಸ್ಪಷ್ಟವಾಗುತ್ತದೆ.

ಅಕಸ್ಮಾತ್ ಎಡವಿದಾಗ ರಕ್ತ ಸೋರುತ್ತಿದ್ದರೆ, ಅಥವಾ ಬ್ಲೇಡ್‌ನಿಂದ ಕೊಯ್ದು ಗಾಯ ಮಾಡಿಕೊಂಡರೆ ತಕ್ಷಣವೇ ಗಾಯವಾದ ಜಾಗಕ್ಕೆ ಅರಶಿಣವನ್ನು ಮೆತ್ತುವುದು ಭಾರತದ ಹಳ್ಳಿಗಳಲ್ಲಿ ಇಂದಿಗೂ ಪ್ರಥಮ ಚಿಕಿತ್ಸೆಯೆಂಬಂತೆ ಜಾರಿಯಲ್ಲಿರುವ ಪದ್ಧತಿ. ತಾತ-ಮುತ್ತಾತಂದಿರ ಕಾಲದಿಂದಲೇ ಭಾರತದಲ್ಲಿ ಅರಿಶಿನವನ್ನು ಗಾಯ ಗುಣ ಪಡಿಸುವ ಔಷಧವಾಗಿ ಬಳಸಲಾಗುತ್ತಿದೆ.

ಆದರೆ ಈ ಎಲ್ಲವನ್ನೂ ಮರೆಮಾಚಿ ಅರಿಶಿನವು ನೋವುನಿವಾರಕ ಔಷಧವೆಂದು ಈಚೀಚಿನ ಸಂಶೋಧನೆಯಿಂದ ತಾನು ಪತ್ತೆಹಚ್ಚಿದ್ದಾಗಿ ೧೯೯೬ರ ಜೂನ್ ೨೯ರಂದು ಹೇಳಿಕೊಂಡಿರುವ ಅಮೆರಿಕದ ಮಿಸಿಸಿಪ್ಪಿ ವಿಶ್ವವಿದ್ಯಾಲಯ ಅರಿಶಿಣದ ಮೇಲೆ ಪೇಟೆಂಟ್ ಪಡೆದುಕೊಂಡಿದೆ.

ಪರಿಣಾಮ?

ಭಾರತದ ವೈದ್ಯಕೀಯ ಚಿಂತನೆಯನ್ನೇ ಕದ್ದಿದ್ದರೂ ಆ ಚಿಂತನೆಯೆಲ್ಲವೂ ತನ್ನದೇ ಆದ ಸಂಶೋಧನೆ ಎಂದು ಹೇಳಿಕೊಂಡು, "ಯಾವುದೇ ಗಾಯವಾದ ತಕ್ಷಣ ಜಾಗಕ್ಕೆ ಅರಿಶಿಣ ಸವರಿಸಿದರೆ ಅಥವಾ ಅರಿಶಿಣವನ್ನು ಸೇವಿಸಿದರೆ ಗಾಯವು ಶೀಘ್ರವಾಗಿ ಗುಣವಾಗುತ್ತದೆ ಎಂದು ಹೇಳಿಕೊಂಡು ಅಮೆರಿಕದ ಈ ವಿಶ್ವವಿದ್ಯಾಲಯವು ಅರಿಶಿಣದ ಪೇಟೆಂಟ್ ಹಕ್ಕು ಪಡೆದಿರುವುದರಿಂದಾಗಿ ಅರಿಶಿಣವನ್ನು ಕ್ಯಾನ್ಸರ್ ನಿರೋಧಕವಾಗಿ ಹಾಗೂ ಬ್ಯಾಕ್ಟೀರಿಯಾ ನಿರೋಧಕವನ್ನಾಗಿ ಬಳಸುವ ಪ್ರಮುಖ ವಿಷಯದ ಕುರಿತು ಭಾರತೀಯ ವಿಜ್ಞಾನಿಗಳು ನಡೆಸುತ್ತಿರುವ ಸಂಶೋಧನೆಗಳನ್ನು ತಕ್ಷಣ ನಿಲ್ಲಿಸಬೇಕಾಗುತ್ತದೆ.

ಅಷ್ಟೇ ಅಲ್ಲ, ಮುಂಬರುವ ದಿನಗಳಲ್ಲಿ ಭಾರತದ ಜನ ಟನ್‌ಗಟ್ಟಲೆ ಅರಿಶಿಣ ಬೆಳೆದರೂ ಅದರ ಬಗ್ಗೆ ಯಾವುದೇ ರೀತಿಯ ಸಂಶೋಧನೆಯನ್ನೂ ಭಾರತದ ವಿಜ್ಞಾನಿಗಳು ಮಾಡುವಂತಿಲ್ಲ! ಅಮೆರಿಕನ್ ಕಂಪನಿಗಳು "ಕಂಡು ಹಿಡಿದೆವು" "ಸಂಶೋಧಿಸಿದೆವು" ಎಂದೆಲ್ಲಾ ಹಾಡುವ ರಾಗಕ್ಕೇ "ಹೌದಾ ಮಹಾಸ್ವಾಮಿ?" "ಸರಿ ಮಹಾಸ್ವಾಮಿ" ಎಂದು ಹೂಂಗುಡುತ್ತಾ ಅವರ ಮಾತಿಗೆ ಪ್ರತಿಮಾತು ಹೇಳದೆ ತಲೆಬಾಗಬೇಕಾಗುತ್ತದೆ.

ಳಿಂದ ನೆಲನೆಲ್ಲಿಯನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ನೆಲನೆಲ್ಲಿಯು ಉಷ್ಣ ವಲಯದ ದೇಶಗಳಲ್ಲಿ ಮಾತ್ರ ಬೆಳೆಯುವಂಥದು. ಹಾಗಾಗಿ ಇದನ್ನು ಅಮೆರಿಕವೇನಾದರೂ ಆಮದು ಮಾಡಿಕೊಂಡಲ್ಲಿ ಇದು ಜನರಿಗೆ ಹಣ ತರುತ್ತದೆ; ಬಹುಮಂದಿಯನ್ನು ಸಿರಿವಂತರನ್ನಾಗಿಸುತ್ತದೆ ಎಂಬುದು ಕೂಡ ಒಂದು ಗುಂಪಿನ ವಾದ.

ಆದರೆ ಮೂಲಭೂತ ಪ್ರಶ್ನೆಯಿರುವುದು ಇದೆಲ್ಲಕ್ಕೂ ಪೇಟೆಂಟ್ ಅಗತ್ಯವೇ? ಹುಟ್ಟು ಆಕಸ್ಮಿಕ, ಸಾವು ಸ್ವಾಭಾವಿಕ ಎಂದು ಭಾವಿಸಿರುವವರಿಗೂ ಈ ಪೇಟೆಂಟ್ ಕುರಿತಂತೆ ಅಷ್ಟೊಂದು ವ್ಯಾಮೋಹವೇಕೆ? ದುರಂತವೆಂದರೆ, ಪೇಟೆಂಟ್ ಪಡೆವ ಸಲುವಾಗಿ ಅಮೆರಿಕನ್ ಕಂಪನಿಗಳು ಶತಶತಮಾನಗಳಿಂದ ನೆಲನೆಲ್ಲಿಯನ್ನು ಕಾಮಾಲೆಗೆ ಸಿದ್ಧೌಷಧವನ್ನಾಗಿ ಬಳಸುತ್ತಿರುವ ಜನರ ಜ್ಞಾನವನ್ನೇ ಮರೆಮಾಚಿ ಇದೆಲ್ಲವೂ ಪ್ರಯೋಗಶಾಲೆಯ ಸಂಶೋಧನೆ ಎಂಬಂತೆ ಚಿತ್ರಿಸುತ್ತಿರುವುದು. ಪೇಟೆಂಟ್ ಹಕ್ಕು ಪಡೆದ ವಿಷಯವನ್ನೇ ಮೂಲವಾಗಿಸಿಕೊಂಡು ನಾಳೆ ನಾವಾರೂ ನೆಲನೆಲ್ಲಿಯನ್ನು ಬಳಸದಂತೆ ತಡೆವ ಸಾಧ್ಯತೆಗಳೂ ಇಲ್ಲದಿಲ್ಲ.

ಅಮೆರಿಕನ್ ಕಂಪನಿಗಳ ದಗಲ್‌ಬಾಜಿತನ ಅಷ್ಟಕ್ಕೇ ನಿಂತಿಲ್ಲ. ಗ್ಯಾಟ್‌ನ ಇತ್ತೀಚಿನ ರೂಪವಾದ WTO(World Trade Organisstion ವಿಶ್ವ ವ್ಯಾಪಾರ ಸಂಸ್ಥೆ)ಯ ಮೂಲಕ ಅಮೆರಿಕಾ ಪೇಟೆಂಟಿನ ನಿಯಮಗಳನ್ನು ವಿಶ್ವ ಪೇಟೆಂಟನ್ನಾಗಿ ಮಾರ್ಪಡಿಸುವ ಹುನ್ನಾರ ನಡೆಯುತ್ತಿದೆ.

ನೆಲನೆಲ್ಲಿಯ ಮೇಲಿನ ಪೇಟೆಂಟ್ ಪಡೆದ ಅಮೆರಿಕನ್ ಕಂಪನಿಯ ಹುನ್ನಾರವನ್ನು ವಿರೋಧಿಸಿ ಸುಪ್ರಸಿದ್ಧ ಪರಿಸರವಾದಿ ಡಾ. ವಂದನಾ ಶಿವರ ನೇತೃತ್ವದಲ್ಲಿ ಸಹಿ ಸಂಗ್ರಹ ಕಾರ್ಯ ನಡೆಯುತ್ತಿದೆ. ತಲೆಮಾರುಗಳಿಂದ ಭಾರತೀಯ ಸಂಸ್ಕೃತಿ, ಔಷಧಿಯ ಪದ್ಧತಿಯಲ್ಲಿ ಹಾಸು ಹೊಕ್ಕಾಗಿರುವ ನೆಲನೆಲ್ಲಿಯನ್ನು ನಮ್ಮ ಹಿತ್ತಲಗಳಲ್ಲಿಯೇ ಉಳಿಸಿಕೊಳ್ಳಲು ಪರಿಸರ ಪ್ರೇಮಿಗಳು ಸಜ್ಜಾಗಿ ನಿಂತಿದ್ದಾರೆ.

ಅಮೆರಿಕದ ಇದೇ ಪ್ರವೃತ್ತಿ ಮುಂದುವರೆದರೆ ಇವತ್ತು ನೆಲನೆಲ್ಲಿ ನಾಳೆ ನಾಗದಾಳಿ, ನುಗ್ಗೆ ಅಶ್ವಗಂಧಾ ಹೀಗೆ ನಮ್ಮ ಎಲ್ಲಾ ಹಿತ್ತಲಗಿಡಗಳೂ ಮುಂದೆ ಪೇಟೆಂಟ್‌ಗೆ ಒಳಪಡುವ ಸಾಧ್ಯತೆಗಳಿವೆ. ನಮ್ಮ ಹಿತ್ತಲಗಿಡಗಳು ಅಮೆರಿಕದ ಕಪಿಮುಷ್ಠಿಗೆ ಸಿಲುಕದೆ ನಮ್ಮೊಂದಿಗೆ ಉಳಿಯುವವೇ? ಪರಿಸರವಾದಿಗಳಿಗೆ ಯಶಸ್ಸು ಸಿಗುತ್ತದೆಯೇ ಇಲ್ಲವೋ ಎಂಬುದೇ ಈ ಪ್ರಶ್ನೆಯನ್ನು ಅವಲಂಬಿಸಿದೆ.

ಗೋರಿಯ ಮೇಲಿನ ಬರಹ

ಇತಿಹಾಸ ವಿಭಾಗದ ವಿದ್ಯಾರ್ಥಿಗಳಿಗೆ ತೈಮೂರಲಂಗನ ಹೆಸರು ಚಿರಪರಿಚಿತ. ತೈಮೂರನ ಗೋರಿಯ ಮೇಲೆ ಚೀನಾದಿಂದ ತಂದ ಹಸಿರು ಬಣ್ಣದ ಕಲ್ಲನ್ನು ಹೊದಿಸಲಾಗಿದೆ. "ಈ ಗೋರಿಯ ಕಲ್ಲನ್ನು ಯಾರಾದರೂ ತೆಗೆದರೆ ಅವನ ದೇಶದ ಮೇಲೆ ನನಗಿಂತಲೂ ಕ್ರೂರವಾದ ವ್ಯಕ್ತಿ ದಾಳಿ ಮಾಡುತ್ತಾನೆ" ಎಂದು ಆ ಕಲ್ಲಿನ ಮೇಲೆ ಬರೆಯಲಾಗಿದೆ. ಹಾಗಿದ್ದರೂ ರಶಿಯದ ಪ್ರಾಚ್ಯವಸ್ತು ಸಂಶೋಧಕರಾದ ಪ್ರೊಫೆಸರ್ ಜಿರಾಸಿವೋವ್‌ರವರು ೧೯೪೧ರಲ್ಲಿ ತೈಮೂರನ ಗೋರಿಯ ಮೇಲಿನ ಕಲ್ಲನ್ನು ತೆಗೆದು ಅವನ ಅಸ್ಥಿಪಂಜರದ ಪರಿಶೀಲನೆ ನಡೆಸಿದರು.

ತೈಮೂರ್ ಎತ್ತರದ ವ್ಯಕ್ತಿಯಾಗಿದ್ದನಲ್ಲದೆ ಅವನ ಒಂದು ಕಾಲು ಕುಂಟಾಗಿತ್ತು ಮತ್ತು ಅವನು ಕೆಂಗೂದಲಿನ ಸೊಂಪಾದ ಮೀಸೆಯುಳ್ಳವನಾಗಿದ್ದ ಎಂಬುದನ್ನು ಜಿರಾಸಿವೋವ್ ಕಂಡುಕೊಂಡರು. ಆದರೆ ಜೂನ್ ೧೯೪೧ರ ಒಂದು ದಿನ ಬೆಳಿಗ್ಗೆ ಜಿರಾಸಿವೋವ್ ತೈಮೂರನ ತಲೆಬುರುಡೆಯನ್ನು ಪರಿಶೀಲಿಸುತ್ತಿದ್ದಾಗ ಅವರ ಸಹಾಯಕರು ಓಡೋಡಿ ಬಂದು ದಿಗ್ಭ್ರಮೆಗೊಳಿಸುವ ಒಂದು ಸುದ್ದಿ ತಿಳಿಸಿದರು. "ಕೆಲವು ಗಂಟೆಗಳ ಮುಂಚೆ ರಶಿಯದ ಮೇಲೆ ಹಿಟ್ಲರನ ಪಡೆಗಳು ದಾಳಿ ನಡೆಸಿದವು!!"

ವಿಜಯ ಸಿ. ಪೂಜಾರಿ

ನೆನಪು ನೆರಳಿನಲ್ಲಿ

ಒಮ್ಮೆ ನಾನು ಕಚೇರಿಯ ಕೆಲಸಕ್ಕಾಗಿ ಬೆಳಗಾವಿಗೆ ಹೋದಾಗ ನಮ್ಮ ಇಲಾಖೆಯ ನೌಕರರ ಸಹಕಾರಿ ಸಂಘದಲ್ಲಿ ಒಂದು ಸಾವಿರದಷ್ಟು ಮೊತ್ತವನ್ನು ಅಲ್ಪಾವಧಿ ಸಾಲದ ರೂಪದಿಂದ ತಕ್ಷಣ ನೀಡುವುದು ತಿಳಿದುಬಂತು. ಆದರೆ ಆಗ ಹಣದ ಅಗತ್ಯ ಅಷ್ಟಾಗಿ ಇಲ್ಲದಿದ್ದರೂ ಸುಲಭವಾಗಿ ಸಿಗುವ ಸಾಲ ಎಂದು ಮೊದಲು ಸನಿಹದಲ್ಲೇ ಇದ್ದ ಸಹಕಾರಿ ಸಂಘದ ಕಚೇರಿಗೆ ಹೋಗಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿದೆ. ಅಲ್ಲಿರುವ ಗುಮಾಸ್ತರು ಅರ್ಧಗಂಟೆ ಬಿಟ್ಟು ಬಂದು ಚೆಕ್ ಒಯ್ಯಲು ಹೇಳಿದರು. ಆಗಲೆಂದು ನಾನು ಕಾರ್ಯನಿಮಿತ್ತ ಬಂದ ಕಚೇರಿಗೆ ಹೋಗಿ ಕೆಲಸದಲ್ಲಿ ಮಗ್ನನಾದೆ. ಬಹಳ ಹೊತ್ತಿನ ನಂತರ ಫಕ್ಕನೇ ಸಾಲದ ನೆನಪಾಯಿತು. ಕೂಡಲೇ ಬಿಡುವು ಮಾಡಿಕೊಂಡು ಸಹಕಾರಿ ಸಂಘದ ಕಚೇರಿಗೆ ಹೋದೆ. ಅಲ್ಲಿ ಗುಮಾಸ್ತರು ಚೆಕ್ಕನ್ನು ನನ್ನ ಕೈಗಿಡುತ್ತ ಇಂದು ಶನಿವಾರ! ಬ್ಯಾಂಕು ಚಲಾವಣೆಯನ್ನು ಬಂದು ಮಾಡಲು ಕೇವಲ ಐದು ನಿಮಿಷ ಬಾಕಿ ಇದೆ. ನೀವು ತಕ್ಷಣ ಹೋದರೆ ಹಣ ಸಿಗಬಹುದು," ಎಂದ. ಗಡಿಯಾರ ನೋಡಿದಾಗ ಸರಿಯಾಗಿ ೧೨-೨೫ ಗಂಟೆ. ನಾನು ಒಂದಿಷ್ಟು ಜೋರಿನಿಂದ ಆ ದೂರ ನಡೆದು ಬ್ಯಾಂಕ್ ತಲುಪಿದಾಗ ಹಣ ಪಡೆಯಲು ಕೇವಲ ಒಂದು ನಿಮಿಷ ಮಾತ್ರ ಇತ್ತು. ತಕ್ಷಣ ಚೆಕ್ ಸ್ವೀಕರಿಸುವ ಕೌಂಟರಿನೆದುರು ಹೋಗಿ ನಿಂತು, ಜೇಬಿನಿಂದ ಕನ್ನಡಕದ ಪಾಕೀಟು ತೆಗೆದು, ಕನ್ನಡಕ ಧರಿಸಿ, ಚೆಕ್ ತೆರೆಯಲು ಜೇಬಿಗೆ ಕೈ ಹಾಕಿದೆ. ಜೇಬಿನಲ್ಲಿ ಚೆಕ್ಕೇ ಇಲ್ಲ! ತಕ್ಷಣ ಎಲ್ಲ ಜೇಬುಗಳನ್ನು ತಡಕಾಡಿದೆ. ಊಹುಂ! ಚೆಕ್ಕಿನ ಸುಳಿವೇ ಇಲ್ಲ! ನಾನು ಗಾಬರಿಯಿಂದ ಅತ್ತಿತ್ತ ಬಗ್ಗಿ ನೋಡತೊಡಗಿದೆ. ನನ್ನ ಆತಂಕ ಹಾಗೂ ಗಾಬರಿಯನ್ನು ಗಮನಿಸಿ ಅಲ್ಲಿಯೇ ನಿಂತಿದ್ದ ಬ್ಯಾಂಕ್ ಜವಾನ, "ಏನು ಸಾರ್, ಏನೋ ಕಳೆದುಕೊಂಡ ಹಾಗಿದೆ!" ಎಂದಾಗ ಅವನಿಗೆ ವಿಷಯ ತಿಳಿಸಿದೆ. ಅವನೂ ನನ್ನ ಜತೆ ಹುಡುಕಿದ. ಬ್ಯಾಂಕಿನ ಪ್ರವೇಶ ದ್ವಾರದಿಂದ ಕೌಂಟರ್‌ವರೆಗೂ ಮತ್ತೆ ಮತ್ತೆ ಹುಡುಕಿದ್ದಾಯಿತು. ಕೊನೆಗೆ ಮ್ಯಾನೇಜರರನ್ನು ಕಂಡು ವಿಷಯ ತಿಳಿಸಿದೆ. ಅವರು ಚೆಕ್ ಕಳೆದುಹೋದ ಬಗ್ಗೆ ಹಾಗೂ ಬೇರೆಯವರಿಗೆ ಹಣ ನೀಡದಂತೆ ವಿನಂತಿಸುವ ಒಂದು ಪತ್ರವನ್ನು ನನ್ನಿಂದ ಪಡೆದರು. ಬ್ಯಾಂಕಿನಿಂದ ನೇರವಾಗಿ ದಾರಿಗುಂಟ ಹಣಕಿಕ್ಕುತ್ತ ಸಹಕಾರಿ ಸಂಘದ ಕಾರ್ಯಾಲಯಕ್ಕೆ ಬಂದೆ. ಅಲ್ಲಿಯ ಕಾರ್ಯದರ್ಶಿಗೂ ವಿಷಯ ತಿಳಿಸಿ, ಆ ಕುರಿತು ಒಂದು ಅರ್ಜಿ ನೀಡಿ, ಬೇರೆ ಚೆಕ್ ನೀಡಲು ವಿನಂತಿಸಿದೆ. ಬ್ಯಾಂಕಿನ ಜತೆ ಪತ್ರವ್ಯವಹಾರ

ಇಪ್ಪತ್ತೊಂದು ವರ್ಷಗಳ ಹಿಂದಿನ ನೆನಪು. ಮದುವೆಯಾದ ಹೊಸತು. ಜೋಡಿ ಹಕ್ಕಿಗಳಂತೆ ವಿಹರಿಸುತ್ತಿದ್ದೆವು. ಆಗ ನಾವು ಪುಣೆಯಲ್ಲಿದ್ದೆವು. ಅಲ್ಲಿ ಕನ್ನಡ ಸಿನಿಮಾ ಬರುವುದು ಅಪರೂಪಕ್ಕೊಮ್ಮೆ. ನಟರಾಜ್ ಥಿಯೇಟರ್‌ನಲ್ಲಿ ಬೆಳಗಿನ ಆಟಕ್ಕೆ "ಎಡಕಲ್ಲು ಗುಡ್ಡದ ಮೇಲೆ" ಸಿನಿಮಾ ಇತ್ತು. ನಮ್ಮ ಗೆಳೆಯರಾದ ಶೆಟಿಗಾರ ಸುವರ್ಣರು ಬಾಲ್ಕನಿ ಟಿಕೆಟುಗಳನ್ನು ಹಿಂದಿನ ದಿನವೇ ತೆಗೆಸಿಕೊಟ್ಟಿದ್ದರು.

ಎಷ್ಟು ಬೇಗ ಎಂದರೂ ಥಿಯೇಟರಿಗೆ ಹೋದಾಗ ಕನ್ನಡಿಗರ ಗುಂಪು ಸೇರಿತ್ತು. ದಾರಿ ಮಾಡಿಕೊಂಡು ಮಹಡಿ ಮೇಲೆ ಹೋದೆವು. ಇನ್ನು ೧೦-೧೨ ಮೆಟ್ಟಲು ಹತ್ತಬೇಕು, "ಟೈಟಲ್" ಆರಂಭವಾಗಿತ್ತು. "ಬೇಗ ಬಾರೆ" ಅನ್ನುತ್ತಾ ಕೈ ಹಿಡಿದು ಎಳೆದುಕೊಂಡು ನಾಲ್ಕು ಮೆಟ್ಟಲು ಏರಿರಬೇಕು, ಕೈ ಕೊಸರಿತು. "ಲೇಟಾಯಿತು, ಬೇಗ ಬಾ ರಾಣಿ" ಅನ್ನುತ್ತಾ ಕೈ ಗಟ್ಟಿ ಹಿಡಿದೆ. "ರೀ, ನಾನು ನಿಮ್ಮ ರಾಣಿ ಅಲ್ಲರೀ- ನಾನು ಬೇರೆ" ಎಂಬ ಮಂಜುಳ ಧ್ವನಿ ಕೇಳಿಸಿತು. ಶಾಕ್ ಬಡಿದವರ ತರಹ ಕೈಬಿಟ್ಟು ಕೆಳಗಿಳಿದೆ!! ನನ್ನ ರಾಣಿ ನನ್ನನ್ನು ಹುಡುಕುತ್ತಾ ಅತ್ತಿತ್ತ ನೋಡುತ್ತಿದ್ದಳು!!

- ಮೋಹನ ಆರ್. ಭಟ್

ಮಾಡಿದ ಹೊರತು ಬೇರೆ ಚೆಕ್ ನೀಡಲು ಬರುವಂತಿಲ್ಲ ಎಂದು ತಿಳಿಸುತ್ತ ಆ ಕಾರ್ಯದರ್ಶಿ ಸದ್ಯಕ್ಕಂತೂ ಚೆಕ್ ಸಿಗಲಾರದು ಎಂದ. ಅಂತೂ ಅವಶ್ಯವಿಲ್ಲದ ಸಾಲ ಪಡೆಯಲು ಹೋಗಿ ಅನಾವಶ್ಯಕವಾಗಿ ತಲೆ ಬಿಸಿ ಮಾಡಿಕೊಳ್ಳುವ ಪ್ರಸಂಗ ಬಂದುದ್ದಕ್ಕೆ ಮನಸ್ಸಿಗೆ ಬಹಳ ಬೇಸರವಾಯಿತು.

ಕಚೇರಿಯಲ್ಲಿಯ ನನ್ನ ಕೆಲಸ ಮುಗಿದ ತಕ್ಷಣ ಊರಿಗೆ ಹೊರಡಲು ಸಿದ್ಧನಾದೆ. ಚೆಕ್ ಕಳೆದ ಸುದ್ದಿ ಕಚೇರಿಯಲ್ಲೆಲ್ಲ ಹಬ್ಬಿದ್ದರಿಂದ ಎಲ್ಲರೂ ಆ ಕುರಿತು ಕೇಳುವವರೆ. ಅಂತೂ ಅವರಿಂದ ಬಿಡಿಸಿಕೊಂಡು ಬಸ್ ನಿಲ್ದಾಣಕ್ಕೆ ಬಂದು ನಾನು ಹೋಗಬೇಕಾದ ಬಸ್ ನಿಲ್ಲುವ ಪ್ಲಾಟ್‌ಫಾರಂನಲ್ಲಿ ಖಾಲಿ ಇದ್ದ ಖುರ್ಚಿಯೊಂದರಲ್ಲಿ ಕುಳಿತೆ. ಮನಸ್ಸಿಗಾದ ಬೇಜಾರಿನಿಂದಲೋ ಏನೋ ಸುಮ್ಮನೆ ಅತ್ತಿತ್ತ ನೋಡುತ್ತ ಕುಳಿತಾಗ ಝುಗ್ ಝುಗ್ ಎಂದು ಲೈಟು ಉರಿಸುತ್ತ ನಿಂತ ತೂಕದ ಯಂತ್ರ ನನ್ನ ಕಣ್ಸೆಳೆಯಿತು. ಬಸ್ಸು ಬರುವವರೆಗೆ ಸಮಯ ಕಳೆಯಬೇಕಾದ್ದರಿಂದ ತೂಕವನ್ನಾದರೂ ನೋಡೋಣ ಎಂದು ಅದರ ಮೇಲೆ ಹತ್ತಿ ನಿಂತು, ಒಂದು ರೂಪಾಯಿ ಹಾಕಿದೆ. ಪಟಕ್ಕನೇ ತೂಕದ ಕಾರ್ಡು ಉದುರಿತು. ಅದನ್ನೋದಲು ಕನ್ನಡಕ ಬೇಕಾದ್ದರಿಂದ ಕನ್ನಡಕದ ಪಾಕೀಟನ್ನು ಜೇಬಿನಿಂದ ಹೊರದೆಗೆದು ಕಾರ್ಡಿನಲ್ಲಿ ಮುದ್ರಿತವಾದ ತೂಕ ನೋಡಿದೆ. ಹಾಗೇ ಕಾರ್ಡನ್ನು ಹೊರಳಿಸಿ ನೋಡಿದಾಗ, 'ನಿಮ್ಮ ಸದ್ಯದ ನಿರಾಶೆ ದೂರವಾಗುವ ಕ್ಷಣ ಒದಗಿಬಂದಿದೆ' ಎಂಬ ಭವಿಷ್ಯದ ವಾಕ್ಯ ಓದಿ ಮುಗಿಸುವಷ್ಟರಲ್ಲಿಯೇ ಎಡಗೈ ಬೆರಳಿನಿಂದ ಬಾಯಿ ಅಗಲಿಸಿ ತಲೆ ಕೆಳಕಾಗಿ ಹಿಡಿದ ಪಾಕೀಟಿನಿಂದ ಮಡಿಸಿದ ಕಾಗದವೊಂದು ಕಾಲಮೇಲೆ ಬಿತ್ತು. ಬಗ್ಗಿ ತೆಗೆದುಕೊಂಡು ನೋಡಿದರೆ ಕಳೆದುಹೋದ ಚೆಕ್ಕು!

- ಚಿದಂಬರ ಇನಾಮದಾರ

೧೯೪೬-೪೭ರ ಸ್ವಾತಂತ್ರ್ಯ ಪೂರ್ವದಿನಗಳು. ನಾನಾಗ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿನಿ. ಈಗಿನಂತೆ ವಿದ್ಯಾರ್ಥಿಗಳು ಪುಸ್ತಕದ ಹುಳುಗಳಾಗಿರುತ್ತಿರಲಿಲ್ಲ. ವ್ಯಾಸಂಗದ ಜತೆ ಜತೆಗೇ ಸಾಮಾಜಿಕ ವ್ಯವಸ್ಥೆ, ದೇಶದ ಪರಿಸ್ಥಿತಿಯ ಬಗ್ಗೆ ವಿಚಾರ ಮಾಡುತ್ತಿದ್ದೆವು.

ನಮ್ಮ ಮನೆಯ ಔಟ್‌ಹೌಸ್‌ನಲ್ಲಿ ಆಗ ದಿ. ಗೊರೂರರ ತಮ್ಮ ಸರ್ಕಾರಿ ಕೆಲಸದಲ್ಲಿದ್ದು ವಾಸವಾಗಿದ್ದರು. ಅವರ ಮನೆಗೆ ಒಮ್ಮೆ ಶ್ರೀಮತಿ ರತ್ನಮ್ಮ ಕೃಷ್ಣಮೂರ್ತಿರಾಯರು ಶಿವಮೊಗ್ಗೆಯಿಂದ ಬಂದಿದ್ದರು. ಆಕೆ ಸ್ವಾತಂತ್ರ್ಯ ಹೋರಾಟಗಾರ್ತಿಯೆಂದೂ ಸಾಮಾಜಿಕ ಕಾರ್ಯಕರ್ತೆಯೆಂದೂ ಪ್ರಖ್ಯಾತಿ ಪಡೆದಿದ್ದರಲ್ಲದೆ ಇನಿದನಿಯ ಹಾಡುಗಾರ್ತಿಯೂ ಆಗಿದ್ದರು. ಆಗೆಲ್ಲ ವಾದ್ಯಗೋಷ್ಠಿಯ ಅಬ್ಬರವಿರಲಿಲ್ಲ, ಕ್ಯಾಸೆಟ್ ರಿಕಾರ್ಡರ್‌ಗಳ ಸದ್ದಂತೂ ಇಲ್ಲವೇ ಇಲ್ಲ. ನಮಗೆ ಅವರ ಹಾಡು ಕೇಳುವ ಆಸೆ. ಆದರೆ ಕೇಳಲಿಕ್ಕೆ ಸಂಕೋಚ. ಅವರು ನಮ್ಮ ಕುತೂಹಲವನ್ನು ಗಮನಿಸುತ್ತಲೆ ಇದ್ದರು. ನಮ್ಮ ತಾಯಿಯನ್ನು ತಾವೇ ಪರಿಚಯಿಸಿಕೊಂಡರು. ತಾಯಿಯೂ ಅವರನ್ನು ಮನೆಗೆ ಕರೆದರು. ರತ್ನಮ್ಮ ಬಂದರು. ಮನೆಯವರಂತೆಯೇ ನಮ್ಮೊಂದಿಗೆ ಬೆರೆತು ನಮ್ಮ ಸಂಕೋಚವನ್ನು ದೂರ ಮಾಡಿದರು. ನಾನು ಅಂಜುತ್ತಂಜುತ್ತ, "ನಮಗೆ ನಿಮ್ಮ ಹಾಡುಗಾರಿಕೆ ಕೇಳಬೇಕೆಂದು ಆಸೆ, ಹಾಡುವಿರಾ?" ಎಂದೆ. "ಯಾವ ಹಾಡು ಬೇಕು ಹೇಳು?" ಎಂದರು. ಆಗ ಕವಿ ನರಸಿಂಹಸ್ವಾಮಿಯವರ ಕವನಗಳು, ಪು.ತಿ.ನ. ಅವರ ಕವನಗಳು ಜನಪ್ರಿಯವಾಗುತ್ತಿದ್ದ ಕಾಲ. ಆಕೆ ತಮ್ಮ ಮಧುರ ಕಂಠದಿಂದ ರಾಯರು ಬಂದರು, ಬಳೆಗಾರ ಚೆನ್ನಯ್ಯ, ನಮ್ಮೂರು ನವಿಲೂರು, ವಿ.ಸಿ.ಯವರ ನಮ್ಮ ಮನೆಯಂಗಳದಿ ಭಾವಗೀತೆಗಳನ್ನು ಸುಶ್ರಾವ್ಯವಾಗಿ ಯಾವ ವಾದ್ಯಗಳ ನೆರವೂ ಇಲ್ಲದೆ ಹಾಡಿದರು. ನಮಗಂತೂ ಸಂತೋಷವೇ ಸಂತೋಷ. ಈಗಲೂ ಯಾರಾದರೂ ಮೈಸೂರು ಮಲ್ಲಿಗೆಯ ಕವನಗಳನ್ನು ಹಾಡಿದರೆ ನನ್ನ ನೆನಪಿಗೆ ಬರುವುದು ರತ್ನಮ್ಮ ಕೃಷ್ಣಮೂರ್ತಿಯರಾಯರ ಹಾಡುಗಳೇ. ಧ್ವನಿಸುರಳಿಗಳು ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು?!

• ಲಲಿತಾ ರಂಗರಾವ್

ಮಳೆ..

ಸಂಗ್ರಹ: ಲೀಲಾಧರ ಮಾ. ಭಂಡಾರಿ

ಅಂದು ರಾತ್ರಿ ಪ್ರಾರಂಭವಾದ ಮಳೆ ಅಖಂಡವಾಗಿ ಸುರಿಯುತ್ತಲೇ ಇತ್ತು. ಅದಕ್ಕೂ ಎರಡು ದಿನ ಮೊದಲು ಕಾಲುಚಾಚಿಕೊಂಡು ಮುಗಿಲಲ್ಲಿ ಮೋಡಗಳು ಮಲಗಿದ್ದವು. ಈಗಲೋ ಆಗಲೋ ಮಳೆಯಾಗಬಹುದೆಂಬ ನಿರೀಕ್ಷೆ ಇದ್ದೇ ಇತ್ತು. ಗುರುವಾರ ರಾತ್ರಿ ಗಾಳಿ ದೊಡ್ಡದಾಗಿ ಬೀಸಿದ್ದೆ ನೆವವಾಗಿ ಮಳೆ ಬಂದೇಬಿಟ್ಟಿತು. ಹೊರಗೆ ಅದು ನಡೆಸಿದ್ದ ತಾಂಡವ ಒಳಗೆ ಬೆಚ್ಚಗೆ ಮಲಗಿದವರಿಗೆ ಗೊತ್ತಾಗುವಂತಿರಲಿಲ್ಲ. ಮೊದಲೆ ಕಾಯ್ದ ನೆಲವನ್ನು ಇನ್ನಷ್ಟು ಕಾಯಿಸಿದೆನಲ್ಲ ಎಂಬ ಸಂಕಟ ಹೆಚ್ಚಾಗಿತ್ತೋ ಏನೋ, ರಾತ್ರಿಯ ಏಕಾಂತದಲ್ಲಿ ಮುಗಿಲು ನೆಲವನ್ನಪ್ಪಿಕೊಂಡು ಒಂದೇ ಸಮನೆ ಕಣ್ಣೀರು ಸುರಿಸುತ್ತಿತ್ತು. ವರ್ಷದುದ್ದದ ವಿರಹ ದುಃಖವೆಲ್ಲ ಕಣ್ಣೀರಾಗಿ ಹರಿಯಬೇಕಾಗಿತ್ತು. ಅಲ್ಲ, ಜನ್ಮಾವಧಿಯೂ ತಾವು ಅನುಭವಿಸಲೇಬೇಕಾಗಿರುವ ವಿರಹವ್ಯಥೆಯನ್ನು ತೋಡಿಕೊಳ್ಳಬೇಕಾಗಿತ್ತು. ಮುಗಿಲಿನ ಆವೇಗ ಕಡಿಮೆಯಾಗುವಂತೆಯೇ ಇರಲಿಲ್ಲ. ಇಂಥ ಉತ್ಕಟ ಭಾವಪಲ್ಲಟದಲ್ಲಿಯೂ ನೆಲ ನೀರವವಾಗಿಯೇ ಇತ್ತು. ಮೌನವಾಗಿಯೇ ಅದು ಮುಗಿಲಿನ ಕಣ್ಣೀರನ್ನು ನುಂಗಿತು. ಕ್ಷಿತಿಜದ ಹತ್ತಿರ ಗಾಢವಾದ ಅಪ್ಪುಗೆಯಲ್ಲಿ ಮೈಮರೆತಾಗ ನೆಲದ ಒಳಗಿನ ಜೀವಕ್ಕೂ ಕಪ್ಪು ಸೋಕಿತ್ತು. ಮುಗಿಲಿಗೂ ಹರ್ಷವಾಗಿರಬೇಕು, ಮಿಂಚಿತು, ಗುಡುಗಿತು, ವರ್ಷಧಾರೆಯ ವಿಪಲ ಬಾಹುಗಳನ್ನು ಚಾಚಿ ಒಂದೇ ತೆಕ್ಕೆಯಲ್ಲಿ ನೆಲವನ್ನು ಅಪ್ಪಿಕೊಳ್ಳಲು ಹವಣಿಸಿತು. ಆದರೆ ಈ ಹರ್ಷದಲ್ಲಿಯೂ ದುಃಖವನ್ನದು ಬಿಟ್ಟಿರಲಿಲ್ಲ. ನೆಲದ ಪಾಡನ್ನು ನೋಡಿ ಮುಗಿಲಿಗೆ ಕರುಳು ಹಿಚುಕಿದಂತಾಗಿರಬೇಕು. ಒಡಲ ದುಃಖ ಕಣ್ಣೀರಾಗಿ ಒಂದೇ ಸಮನೆ ಸುರಿದೇ ಸುರಿಯಿತು.

ನೆಲದ ಅಂತಃಕರಣದ ಪ್ರವಾಹ ಸೊಕ್ಕಿ ಹರಿದಂತೆ ಹೊಳೆಯುಬ್ಬಿತು. ಹೊಳೆನೀರಿಗೆ ಮಳೆನೀರಿನೊಡನೆಯ ಆಟ ಹಿತಕರವಾಗಿತ್ತು. ಎರಡೂ ದಡ ತುಂಬಿ ಹರಿಯಿತು. ಬರಬರುತ್ತ ಹೊಳೆಯ ಪಾತ್ರ ದೊಡ್ಡದಾಯಿತು. ಅದರ ಮೈಯುಬ್ಬಿತು. ತೆರೆಗಳು ದಂಡೆಗೆ ಬಂದು ಅಪ್ಪಳಿಸಿದವು. ದಂಡೆಯ ಮಣ್ಣು ಸಡಿಲಾಗಿ ಕರಗಹತ್ತಿತ್ತು. ಬಿಸಿಲ ಬೇಗೆಗೆ ನೊಂದು ಹುರುಪಳಿಸಿ ಪಾತಾಳಲೋಕವನ್ನು ಸೇರಲು ಪ್ರಯತ್ನಿಸುವ ಮಹಾ ಸರ್ಪವೊಂದರಂತೆ ಹೊಳೆ ನೆಲದೊಡಲನ್ನೇ ಸೀಳಹತ್ತಿತ್ತು.

('ಗ್ರಾಮಾಯಣ'ದಿಂದ)

ಇಂದಿಗೂ ಅದೇ ಸ್ಥಿತಿ....

ಕಾರಂತರ 'ಚಾಲುಕ್ಯ ವಾಸ್ತು ಮತ್ತು ಶಿಲ್ಪ' ಪ್ರಕಟವಾಗಿತ್ತು. ಪ್ರಕಾಶಕರಲ್ಲಿ ವಿಚಾರಿಸಿದಾಗ ಉತ್ತರ ಬರಲಿಲ್ಲ. ನಂತರ ಒಂದೆರಡು ವಿಶ್ವವಿದ್ಯಾಲಯಗಳಿಗೂ ಬರೆದಾಗ ಅಲ್ಲಿಂದಲೂ ವಿವರ ದೊರೆಯಲಿಲ್ಲ. ಸರಿ, ಕಾರಂತರಿಗೆ ಪತ್ರ ಬರೆದೆ. ಒಂದು ವಾರದೊಳಗೆ ವಿವರ (ಲಲಿತಕಲಾ ಅಕಾಡೆಮಿ ಬೆಂಗಳೂರು) ಸಹಿತ ಬರೆದ ಪತ್ರ ಬಂತು. ಪುಸ್ತಕ ಪ್ರಕಟವಾದರೂ ಸರಿಯಾದ ಪ್ರಚಾರವಿಲ್ಲದೆ ಪ್ರತಿಗಳು ಹಾಗೆಯೆ ಉಳಿದು ಸಾಹಿತ್ಯ ಸಮ್ಮೇಳನದಲ್ಲಿ ಹಲವು ವರ್ಷಗಳ ನಂತರ ರಿಯಾಯಿತಿ ಬೆಲೆಯಲ್ಲಿ ಅವು ಮಾರಾಟವಾಗುತ್ತಿದ್ದುದನ್ನು ತಿಳಿದು ಬೇಸರವೆನಿಸಿತು. ಸರ್ಕಾರದ ಪ್ರಕಟಣೆಗಳಿಗೆ ಸಂಬಂಧಿಸಿದಂತೆ ಇಂದಿಗೂ ಆ ಸ್ಥಿತಿ ಬದಲಾಗಿಲ್ಲ. ಕಾರಂತರು ಯಾವುದಕ್ಕೂ ಬೇಸರಿಸಲಿಲ್ಲ.

- ಜೆ. ರಾಜನ್



ಪ್ರೇತಾತ್ಮಗಳ ಸಾನ್ನಿಧ್ಯದಲ್ಲಿ

- ಡಿ.ಸಿ. ಹಾರ್ಟನ್

☆

ಪ್ರಸ್ತುತಪಡಿಸಿದವರು: ಶ್ರೀಕಾಂತ ಮಳಗಿ

ಕಲಕತ್ತದ ನಮ್ಮ ಮನೆ ಊರ ಹೊರಗೇ ಇತ್ತು. ಮನೆಯ ಹೊರಗೇ ಕಚ್ಚಾರಸ್ತೆ. ಪೂರ್ಣವಾಗಿ ಇನ್ನೂ ಟಾರು ಹಾಕಿರಲಿಲ್ಲ. ರಸ್ತೆಯ ಆಚೆಗೆ ಕಾಡು. ರಸ್ತೆಯ ಇನ್ನೊಂದು ದಿಕ್ಕಿನಲ್ಲಿ ಹಳೆಗಾಲದಲ್ಲಿ ಕಟ್ಟಿದ್ದ ಸಾಲುಮನೆಗಳು. ವಿಕ್ಟೋರಿಯಾ ರಾಣಿ ಸಾಮ್ರಾಜ್ಯವನ್ನಾಳುತ್ತಿದ್ದಾಗ ಕಟ್ಟಿದ್ದು ಎಂದು ಹಿರಿಯರು ಹೇಳುತ್ತಾರೆ. ಇದ್ದರೂ ಇದ್ದೀತು. ಆದರೆ ಆ ಮನೆಗಳಿಂದಾಗಿ ಹಳೆಗಾಲದ ನೆನಪಿನೊಡನೆ ಸುತ್ತಿಕೊಂಡು ಬರುವ ಗಾಂಭೀರ್ಯ ಮನಸ್ಸಿಗೆ ಏನೋ ಎಂದು ಬಗೆಯ ಆನಂದವನ್ನು ನೀಡುತ್ತಿತ್ತೆಂದು ಮಾತ್ರ ಹೇಳಬಲ್ಲೆ.

ಮನೆಗೊಂದು ದೊಡ್ಡ ವರಾಂಡ. ಆ ವರಾಂಡದಲ್ಲೆ ನಮ್ಮ ರೂಮು. ನನ್ನ ಅಣ್ಣನೂ ನಾನೂ ಅಲ್ಲಿಯೆ ಮಲಗುವುದು. ಒಂದು ರಾತ್ರಿ ಹೊರಗಿನ ಬೀದಿಯಲ್ಲಿ ಒಂದಾದ ಮೇಲೊಂದರಂತೆ ವಾಹನಗಳು ಚಲಿಸುವ ಶಬ್ದ ಕೇಳಿಬಂತು. ಇಂಥಾ ರಾತ್ರಿಯಲ್ಲಿ ಇಲ್ಲಿ ವಾಹನಗಳನ್ನು ಯಾರು ನಡೆಸಿಕೊಂಡು ಹೋಗುತ್ತಿದ್ದಾರಪ್ಪಾ ಅಂದುಕೊಳ್ಳುವಷ್ಟರಲ್ಲೆ ಒಂದೇ ಸಮನೆ ಗುಂಡುಹಾರಿಸಿದ ಶಬ್ದ. ಅದರೊಟ್ಟಿಗೇ 'ಅಪ್ಪಾ, ಅಮ್ಮಾ' ಎಂದು ಕರುಳು ಕಿತ್ತಿಕೊಂಡು ಹೋಗುವಹಾಗೆ ಗೋಳಿಡುವ ಆರ್ತನಾದ. ಕೂಡಲೇ ಅಣ್ಣನನ್ನು ಎಬ್ಬಿಸಿದೆ. "ಅರೆ! ಎಲ್ಲಿಯ ಗುಂಡು, ಎಲ್ಲಿಯ ವಾಹನಗಳು," ಅನ್ನುತ್ತಾ ಹೊರಗೆ ಹೋಗಿ ಬಂದು, "ವಾಹನಗಳೂ ಇಲ್ಲ, ಗುಂಡೂ ಇಲ್ಲ. ನಿನಗೆಲ್ಲೋ ಕೆಟ್ಟ ಕನಸು ಬಿದ್ದಿರಬೇಕು. ಇರಲಿ. ಸುಮ್ಮನೇ ಮಲಗು," ಅಂದ.

ಆದರೆ ಅದು ಕನಸಲ್ಲ; ಎಚ್ಚರವಾಗಿರುವಾಗಲೇ ಆ ಸದ್ದನ್ನು ಕೇಳಿದ್ದು ಎಂದು ಹೇಳಿದರೂ ಅಣ್ಣ ನಂಬುವಹಾಗಿರಲಿಲ್ಲ. ಮಗ್ಗಲು ಬದಲಿಸುತ್ತಾ ಹೇಗೋ ಆ ರಾತ್ರಿಯನ್ನು ಕಳೆದೆ. ಬೆಳಿಗ್ಗೆ ನಾವೆಲ್ಲ ಚಹ ಸೇವಿಸುವಾಗ ರಾತ್ರಿಯ ಅನುಭವವನ್ನು

(ಆಧಾರ: ಲಂಡನ್ನಿನ 'ಲಿಸ್ನರ್')

ಹೇಳಿ, "ನೀವಾರೂ ಆ ಸದ್ದನ್ನು ಕೇಳಲಿಲ್ಲವೆ?" ಎಂದೆ. ತಂದೆ-ತಾಯಿಗಳಿಬ್ಬರೂ ಪರಸ್ಪರ ಮುಖ ನೋಡಿಕೊಂಡರು "ಹೌದಪ್ಪಾ, ಸರಿಯಾದ ದಿನ ದಂದೇ ಅದನ್ನು ಕೇಳಿದ್ದೀ," ಎಂದಳು ತಾಯಿ ನಿಧಾನವಾಗಿ. "ಸರಿಯಾದ ದಿನ? ಹಾಗಂದ ರೇನು?" ಎಂದು ಕೇಳಿದೆ ಆಶ್ಚರ್ಯದಿಂದ.

ಹಿಂದಿನ ವರ್ಷ ಅದೇ ದಿನ, ಅದೇ ಸಮಯಕ್ಕೆ ಅಂಥದೇ ಸಪ್ಪಳವನ್ನು ನನ್ನ ತಂದೆತಾಯಿಗಳು ಕೇಳಿದ್ದರು. ಅದನ್ನವರು ಕಲಕತ್ತದ ಕೆಲವು ಹಳೆಯ ಮಿತ್ರರಿಗೆ ಹೇಳಿದಾಗ ಅವರಿಗೆ ಆ ಕುರಿತು ಆಸಕ್ತಿ ಕುದುರಿ ಬಹಳ ಕಾಲದಿಂದ ಅಲ್ಲಿ ವಾಸಿಸುತ್ತಿದ್ದ ಕೆಲವರನ್ನು ಕೇಳಿದಾಗ ಒಂದು ಸ್ವಾರಸ್ಯಕರವಾದ, ಹಾಗೆಯೆ ದುರಂತಮಯವಾದ ಘಟನೆ ನಡೆದದ್ದು ತಿಳಿದುಬಂತು.

ಅಂದಿಗೆ ಸರಿಯಾಗಿ ಮೂವತ್ತು ವರ್ಷಗಳ ಹಿಂದಿನ ಮಾತು. ಅಲ್ಲಿನ ಮನೆಯೊಂದರಲ್ಲಿ ಒಬ್ಬಾತ ಔತಣಕೂಟವೊಂದನ್ನು ಏರ್ಪಡಿಸಿದ್ದ. ಭೂರಿ ಭೋಜನ. ಭೋಜನದ ನಂತರ ಮದ್ಯದ ಹೊಳೆಯೂ ಹರಿದಿತ್ತು. ಎಲ್ಲೆಲ್ಲೂ ಸಂತಸದ ವಾತಾವರಣ. ಆಹ್ವಾನಿತರಲ್ಲಿ ಒಬ್ಬ ಸುಂದರ ಯುವತಿ, ಅವಳ ಕೈಹಿಡಿಯಲು ಮೊದಲಿನಿಂದಲೂ ಇಬ್ಬರಲ್ಲಿ ಸ್ಪರ್ಧೆ. ಅವರೂ ಔತಣಕೂಟಕ್ಕೆ ತಮ್ಮ ತಮ್ಮ ಗಾಡಿಗಳ ಸಮೇತ ಬಂದಿದ್ದರು. ಅವಳನ್ನು ಮನೆಮುಟ್ಟಿಸಲು ಕರೆದೊಯ್ಯಲು ಅವರಲ್ಲೆ ಪೈಪೋಟಿ.

ಆಕೆ ಒಬ್ಬಾತನ ಗಾಡಿಯನ್ನೇರಿದಳು. ಈರ್ಷ್ಯೆ ಯಿಂದ ಇನ್ನೊಬ್ಬ ಅವರ ಗಾಡಿಯನ್ನು ಹಿಂಬಾ ಲಿಸಿದ. ಕೈಯಲ್ಲಿ ಪಿಸ್ತೂಲು ಇತ್ತು. ಗಾಡಿ ಸ್ವಲ್ಪದೂರ ಇರುವಾಗಲೆ ಗುರಿಯಿಟ್ಟು ಹೊಡೆದ. ಗುರಿ ತಪ್ಪಿತು. ಗುಂಡು ಆತನಿಗೆ ಬದಲು ಯುವತಿಗೆ ತಗುಲಿ, "ಅಯ್ಯೋ, ಅಪ್ಪಾ" ಎನ್ನುತ್ತಾ ಕೆಳಗುರುಳಿದಳು. ಅಂದಿನಿಂದಲೂ ಮಧ್ಯರಾತ್ರಿಯ ವೇಳೆಗೆ ಆಗಾಗ ಆ ಆರ್ತನಾದ ಕೇಳುತ್ತಲೇ ಇದೆಯಂತೆ.

೧೯೨೧ರಲ್ಲಿ ನಾವು ಭಾರತ ಬಿಟ್ಟು ಇಂಗ್ಲೆಂಡಿಗೆ ಹೋಗಿ ವರ್ದಿಂಗ್‌ನಲ್ಲಿ ನೆಲೆಸಿದೆವು. ಸಾಧಾರಣ ದರ್ಜೆಯ ಮನೆ. ಎಲ್ಲವೂ ಸರಿಯಾಗಿ ನಡೆದಿತ್ತು. ಹೀಗಿರುವಾಗ ಒಂದು ದಿನ ಅಡುಗೆಯಾಕೆ ಓಡೋ ಡುತ್ತಾ ಬಂದು ಯಾವುದೋ ಮಾನವಾಕೃತಿ ಯೊಂದು ಅಟ್ಟಿಸಿಕೊಂಡು ಬಂದದ್ದನ್ನು ಹೇಳಿದಳು. "ಇಂಥಾ ವೇಳೆಯಲ್ಲಿ ಯಾರು ಬರು ತ್ತಾರೆ? ನಿನಗೇನೋ ಭ್ರಾಂತಿ," ಎಂದೆವು. "ಅದೆಂಥ ಭ್ರಾಂತಿ ರಾಯರೆ. ಅದು ನನ್ನನ್ನು ಅಟ್ಟಿಸಿಕೊಂಡು ಬಂದದ್ದಷ್ಟೇ ಅಲ್ಲ, ಗೋಡೆಯಿಂದ ತೂರಿಕೊಂಡೂ ಆಚೆಕಡೆ ಹೋಯಿತು," ಅಂದಳು ಆತಂಕದಿಂದ. ನಾವೆಲ್ಲ ಅವಳ ತಲೆ ಕೆಡುತ್ತಿದೆಯೆಂದೇ ಭಾವಿಸಿದೆವು.

ಇದಾಗಿ ಕೆಲವು ದಿನಗಳ ನಂತರ ರಾತ್ರಿ ನಾವೆಲ್ಲ ಮಲಗಿದಾಗ ಯಾರೋ ಏನನ್ನೋ ಎಳೆದ ಸದ್ದು. ಬೆಳಗಾಗೆದ್ದು ನೋಡಿದಾಗ ದಿನಾಲು ಗೋಡೆಗೆ ಆನಿಸಿ ಇಟ್ಟ ಕುರ್ಚಿ ಇದ್ದ ಜಾಗದಲ್ಲಿ ಇರದೆ ಕೋಣೆಯ ಮಧ್ಯದಲ್ಲಿತ್ತು. ಕುರ್ಚಿಯನ್ನು ಯಥಾ ಸ್ಥಾನದಲ್ಲಿರಿಸಿದೆವು. ಮರುದಿನ ಮತ್ತೆ ಇದರ ಪುನ ರಾವರ್ತನೆ. ಮೂರು ದಿನ ಹೀಗೆಯೆ ನಡೆಯಿತು. ಆಮೇಲೆ ಎಲ್ಲವೂ ಯಥಾಪ್ರಕಾರ. ನನ್ನ ತಂದೆಯ ಕುತೂಹಲ ಕೆರಳಿ ವರ್ದಿಂಗ್‌ನ ಹಳೆಗಾಲದ ದಾಖಲೆಗಳನ್ನು ತಿರುವಿಹಾಕಿದಾಗ ಸುಮಾರು ನೂರು ವರ್ಷಗಳ ಹಿಂದೆ ನಾವಿರುತ್ತಿದ್ದ ಜಾಗ ನಿರ್ಜನವಾಗಿತ್ತೆಂದೂ ನಮ್ಮ ಮನೆಯಿರುವಲ್ಲಿ ಒಂದು ಕಾಲುದಾರಿಯಿತ್ತೆಂದೂ ತಿಳಿದು ಬಂತು. ಬೇಸಿಗೆಯಲ್ಲೊಂದು ದಿನ ಬಡಿಗನೊಬ್ಬ ಕುರ್ಚಿ ಯೊಂದನ್ನು ಸರಿಪಡಿಸಿ ಹೊತ್ತುಕೊಂಡು ಹೋಗುತ್ತಿದ್ದಾಗ ಅವನ ಕೊಲೆಯಾಯಿತಂತೆ. ಅದಕ್ಕೂ ಈ ಘಟನೆಗೂ ಸಂಬಂಧವೇನಾದರೂ ಇದೆಯೋ ಹೇಗೆ? ಎನ್ನುವುದು ನನಗೆ ಗೊತ್ತಿಲ್ಲ. ಆದರೆ ಆ ಮೂರು ದಿನ ನಡೆದಂತಹ ಘಟನೆ ಮುಂದೆಂದೂ ನಡೆಯಲಿಲ್ಲ.

ಇದಾಗಿ ಕೆಲವು ವರ್ಷಗಳ ನಂತರ ಜಿಲ್ಲಾಧಿಕಾ ರಿಯಾಗಿ ನಾನು ಸೊಲೊಮನ್ ದ್ವೀಪಗಳಿಗೆ ವರ್ಗಾಯಿಸಲ್ಪಟ್ಟೆ. ಶಾಂತಸಾಗರದ ಆ ದ್ವೀಪಗಳಿ ಗಿನ್ನೂ ನಾಗರಿಕತೆ ಪ್ರವೇಶಿಸಿಲ್ಲ. ಹೀಗಾಗಿ ಅಲ್ಲಿ ನವರಿಗೆ ಪ್ರೇತಾತ್ಮಗಳ ಮೇಲೆ ಅಪಾರವಾದ ನಂಬಿಕೆ. ಇಲ್ಲಿ ಸಲ್ಲುವರೆಲ್ಲ ಅಲ್ಲಿಯೂ ಸಲ್ಲುವರು ಎಂಬ ಮಾತಿನ ಮೇಲೆ ಅಪಾರವಾದ ವಿಶ್ವಾಸ. ಅವರ ಪ್ರಕಾರ, ಸಜ್ಜನನೊಬ್ಬ ಸತ್ತರೆ ಅವನ ಆತ್ಮ ಸೀದಾ ಮೃತಾತ್ಮಗಳ ದ್ವೀಪವನ್ನು ತಲಪುತ್ತದಂತೆ. ಅಲ್ಲಿಯೂ ಆ ಆತ್ಮ ಸದಾಚಾರವನ್ನು ಕಾಯ್ದುಕೊಂ ಡರೆ ಪೃಥ್ವಿಗೆ ಹಿಂದಿರುಗಿ ತನ್ನವರ ಬಳಿ ನೆಲಸಲು ಅನುಮತಿ ದೊರೆಯುತ್ತದಂತೆ. ಇಂಥಾ ಮೃತಾತ್ಮ

ಗಳು ಸಮಾಜದಲ್ಲಿ ಸಜ್ಜನರೆಂದು ಪರಿಗಣಿಸಲ್ಪಟ್ಟವರಲ್ಲಿ ಹೊಕ್ಕು ಭವಿಷ್ಯವನ್ನು ಮುನ್ನುಡಿಯುವುದನ್ನೂ ವ್ಯಾಧಿಗ್ರಸ್ತರಿಗೆ ಔಷಧಿಯನ್ನು ಸೂಚಿಸುವುದನ್ನೂ ದುರ್ಜನರಿಗೆ ಉಪಟಳಕೊಟ್ಟು ಅವರನ್ನು ಸರಿದಾರಿಗೆ ತರಲು ಪ್ರಯತ್ನಿಸುವುದನ್ನೂ ನಾನಲ್ಲಿ ನೋಡಿದೆ.

ಎರಡನೆಯ ಮಹಾಯುದ್ಧ ಕೊನೆಗೊಳ್ಳುವವರೆಗೂ ನಾನು ಸೊಲೊಮನ್ ದ್ವೀಪಗಳಲ್ಲಿಯೆ ಇದ್ದೆ. ಯುದ್ಧ ಕೊನೆಗೊಂಡ ನಂತರ ಮಲಯಕ್ಕೆ ವರ್ಗಾಯಿಸಲ್ಪಟ್ಟೆ. ಅಲ್ಲಿ ಭಾರತೀಯರು, ಚೀನಿಯರು, ಮಲಯದವರು ಹಾಗೂ ಯುರೇಶಿಯನ್ನರು ಇರುವರಾದರೂ ಒಬ್ಬರನ್ನೊಬ್ಬರು ತುಳಿದು ಬದುಕುವ ಜನ ಅವರಲ್ಲ. ಅವರಲ್ಲಿಯೂ ಪ್ರೇತಾತ್ಮಗಳ ಬಗೆಗೆ ಗಾಢವಾದ ನಂಬಿಕೆಯಿದೆ. ಅಲ್ಲಿರುವಾಗ ಒಮ್ಮೆ ನಾನು ಕೌಲಾ ಸೆರಂಗಾರ್‌ಗೆ ವರ್ಗಾಯಿಸಲ್ಪಟ್ಟೆ. ಆ ಊರಿನ ಹೊರಗೆ ಒಂದು ಗುಡ್ಡ. ಅದರ ಮೇಲೊಂದು ಮನೆ. ಎರಡನೆ ಮಹಾಯುದ್ಧದ ಸಮಯದಲ್ಲಿ ಜಪಾನೀಯರು ಮಲಯವನ್ನು ಹಿಡಿದುಕೊಂಡಿದ್ದಾಗ ಜಪಾನೀ ಅಧಿಕಾರಿಯೊಬ್ಬ ಆ ಮನೆಯಲ್ಲಿ ಇರುತ್ತಿದ್ದನಂತೆ. ಈಗ ಪೊಲೀಸ್ ಅಧಿಕಾರಿಯೊಬ್ಬನಿಗೆ ಇರಲು ಆ ಬಂಗಲೆಯನ್ನು ಕೊಡಲಾಗಿತ್ತು. ಮನೆಯಲ್ಲಿ ಗಂಡ-ಹೆಂಡತಿ ಇಬ್ಬರೆ. ಗಂಡ ಆಫೀಸಿಗೆ ಹೋದರೆ ಹೆಂಡತಿಗೆ ಏಕಾಂತವಾಸವೇ ಗತಿ. ವೇಳೆಯನ್ನು ಕಳೆಯಲು ಆಕೆ ವರಾಂಡದಲ್ಲಿ ಕುರ್ಚಿ ಹಾಕಿಕೊಂಡು ಗುಡ್ಡದ ಕೆಳಗಿನ ದೃಶ್ಯವನ್ನು ವೀಕ್ಷಿಸುತ್ತಾ ಕುಳಿತುಕೊಳ್ಳುತ್ತಿದ್ದಳು. ಹೀಗೊಂದು ದಿನ ಆಕೆ

ಕುಳಿತಿದ್ದಾಗ ದೂರದಿಂದ ಯಾರೋ ಒಬ್ಬರು ಬರುತ್ತಿರುವ ಸದ್ದು ಕೇಳಿಸಿತು. ಯಾವುದೋ ಕೆಲಸಕ್ಕಾಗಿ ಗಂಡ ಪೊಲೀಸ್‌ನನ್ನು ಕಳಿಸಿರಬೇಕೆಂದುಕೊಂಡಳು ಆಕೆ. ಬೂಟಿನ ಸಪ್ಪಳ ಹತ್ತಿರವಾಗುತ್ತಾ ಬಂದರೂ ವ್ಯಕ್ತಿ ಮಾತ್ರ ಕಾಣುತ್ತಿರಲಿಲ್ಲ. ದಿಗಿಲುಗೊಂಡು ಮನೆಯನ್ನು ಪ್ರವೇಶಿಸಿದಳು. ಹೆಜ್ಜೆಯ ಸದ್ದೂ ಅವಳನ್ನು ಹಿಂಬಾಲಿಸಿತು. ಮನೆಯಲ್ಲಿ ಸುತ್ತಾಡಿ ಆಕೆ ಅಡಿಗೆಮನೆಯವರೆಗೂ ಬಂದಳು. ಸಪ್ಪಳವೂ ಹಿಂಬಾಲಿಸಿ ಬಂತು. ಆಕೆ ಅಡಿಗೆಮನೆಯ ಬಾಗಿಲ ಬಳಿ ನಿಂತಳು. ಆದರೆ ಶಬ್ದ ಮಾತ್ರ ಅಲ್ಲಿಯೆ ನಿಲ್ಲದೆ ಅಡಿಗೆ ಮನೆಯೊಳಕ್ಕೂ ಹೋಯಿತು. ಆದರೆ ಹೊರಗೆ ನಡೆದುಕೊಂಡು ಬಂದ ಶಬ್ದವನ್ನಾಕೆ ಎಂದೂ



ಕೇಳಲಿಲ್ಲ. ಸಂಜೆ ಮನೆಗೆ ಬಂದ ಆ ಪೊಲೀಸ್ ಅಧಿಕಾರಿಗೂ ಈ ವಿಚಿತ್ರ ಅನುಭವದ ತಳಬುಡ ಅರ್ಥವಾಗಲಿಲ್ಲ. ಹಿಂದೆ ಅಲ್ಲಿ ವಾಸಿಸುತ್ತಿದ್ದ ಆ ಜಪಾನಿ ಅಧಿಕಾರಿಗೆ ಅಲ್ಲಲ್ಲಿ ಓಡಾಡಿಕೊಂಡಿರುವ ಅಭ್ಯಾಸ ವಿಪರೀತವಾಗಿದ್ದಿರಬಹುದೆಂದೂ ಆತ ಸತ್ತಮೇಲೆ ಕೂಡ ಆ ಚಟವನ್ನು ಬಿಟ್ಟಿರಲಿಕ್ಕಿಲ್ಲ ವೆಂದೂ ತಾನು ವಾಸಿಸುತ್ತಿದ್ದ ಆ ಹಳೆಯ ಮನೆಯ ನೆನಪಾಗಿ ಆತನ ಆತ್ಮ ಅಂದು ಅಲ್ಲಿ ಸುತ್ತಾಡಿಕೊಂಡಿರಬೇಕೆಂದೂ ಪೊಲೀಸ್ ಅಧಿಕಾರಿ ಸಮಾಧಾನ ಹೇಳಿಕೊಂಡ.

ಪ್ರೇತಾತ್ಮಗಳೆಂದರೆ ಮನುಷ್ಯರದೇ ಆಗಿರಬೇಕೆಂದಿಲ್ಲ. ಪ್ರಾಣಿಗಳದೂ ಆಗಿರಬಹುದು ಎಂಬ ಭಾವನೆ ಮಲಯದ ಪೆರಾಕ್ ಜಿಲ್ಲೆಯಲ್ಲಿ ಸಾರ್ವತ್ರಿಕವಾಗಿದೆ. ಈ ಮೃತಾತ್ಮಗಳಿಗೆ ಅಲ್ಲಿನ ಭಾಷೆಯಲ್ಲಿ 'ಹುಂಟು' ಎಂದು ಹೆಸರು. ಆ ಭಾವನೆಯಲ್ಲಿ ತಥ್ಯವಿಲ್ಲದಿಲ್ಲ ಎನ್ನುವುದು ನಾನು ಅಲ್ಲಿ ಜಿಲ್ಲಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ ಅನುಭವಕ್ಕೆ ಬಂತು. ನಾನಾಗ ತೆಲೋಕ್ ಆನ್‌ಸನ್ ಎಂಬ ಊರಿನಲ್ಲಿರುತ್ತಿದ್ದೆ. ಆ ಊರಿನ ಹೊರಗೇ ಕಾಡು. ಕಾಡಿನಲ್ಲಿ ಆನೆಗಳು. ರೈಲ್ವೆ ಹಳಿಗಳನ್ನು ದಾಟುವಾಗಲೆ ಗಾಡಿ ಬಂದು ಆನೆಗಳು ಸಾಯುತ್ತಿದ್ದವು. ಮಾನವರ ಗುಂಪಿಗೆ ನಾಯಕನಿರುವ ಹಾಗೆ ಆನೆಗಳ ಗುಂಪಿಗೂ ಒಬ್ಬ ಗಜರಾಜನಿದ್ದ. ತನ್ನ ಬಂಧುಗಳ ಹತ್ಯೆಗೆ ಕಾರಣವಾಗುತ್ತಿದ್ದ ಎಂಜಿನ್ನನ್ನು ಮುಗಿಸಿಯೇಬಿಡಬೇಕೆಂದು ನಿರ್ಧರಿಸಿದ ಆತ. ಒಂದು ದಿನ ಸಮಯ ಸಾಧಿಸಿ

ರಭಸದಿಂದ ಧಾವಿಸುತ್ತಿದ್ದ ಎಂಜಿನ್ನಿಗೆ ಲಗ್ಗೆಯಿಟ್ಟು ಪ್ರಾಣ ಕಳೆದುಕೊಂಡ. ಆ ದಾಳಿಯಿಂದ ಗಾಡಿಗೆ ಏನೂ ಆಗಲಿಲ್ಲವಾದರೂ ಎಂಜಿನ್ನು ಮೊದಲಿನ ಸ್ಥಿತಿಯಲ್ಲಿ ಉಳಿಯಲಿಲ್ಲ. ಆ ಗಜರಾಜನ ಸಾಹಸಗಾಥೆಯನ್ನು ಬಿಂಬಿಸುವ ದೊಡ್ಡದೊಂದು ಫಲಕ ಆ ಸ್ಟೇಶನ್ನಿನ ಹೊರಗೆ ಇನ್ನೂ ಇದೆ. ಎಷ್ಟೋ ಸಲ ನಾನು ದುರ್ಘಟನೆ ನಡೆದ ಸ್ಥಳದಲ್ಲಿ ಆನೆ ಘೀಳಿಡುವ ಸದ್ದನ್ನು ಕೇಳಿದ್ದೇನೆ. ಅಲ್ಲಿನವರ ಪ್ರಕಾರ ಅದು ಆ ಗಜರಾಜನ ಮೃತಾತ್ಮದ ಕೂಗು.

ಲೋವರ್ ಪೆರಾಕ್ ಒಂದು ದೊಡ್ಡ ಜಿಲ್ಲೆ. ಜಿಲ್ಲೆಯ ಬಹುಭಾಗ ಅರಣ್ಯಾವೃತವಾಗಿಯೆ ಇದೆ. ಬಹು ನಿಬಿಡವಾದ ಅರಣ್ಯ. ಅನಾದಿಕಾಲದಿಂದಲೂ ಅಲ್ಲಿ ವಾಸಿಸುವ ಅನೇಕ ಮೂಲನಿವಾಸಿಗಳಿಗೆ ನಾಗರಿಕ ಜಗತ್ತಿನ ಸಂಪರ್ಕವೇ ಇಲ್ಲ. ಅರಣ್ಯ ಮಧ್ಯದಲ್ಲಿ ಪೆರಾಕ್ ನದಿ. ಯಾರಾದರೂ ಹೊರ ಜಗತ್ತಿನೊಡನೆ ಸಂಪರ್ಕ ಸ್ಥಾಪಿಸಬೇಕೆಂದರೆ ನದಿಯ ಮೂಲಕವೇ ಸ್ಥಾಪಿಸಬೇಕು. ನಾನು ಆ ಜನರನ್ನೊಮ್ಮೆ ಕಂಡು ಅವರ ಸಮಸ್ಯೆಗಳನ್ನು ತಿಳಿದುಕೊಳ್ಳಬೇಕೆಂದು ನಿರ್ಧರಿಸಿದೆ.

ಅತಿ ಹತ್ತಿರದ ಹಳ್ಳಿಯನ್ನು ತಲುಪಬೇಕೆಂದರೆ ಇಪ್ಪತ್ತು ಇಪ್ಪತ್ತೈದು ಮೈಲುಗಳಷ್ಟು ನಡೆದೇಹೋಗಬೇಕು. ಒಂದು ದಿನ ನಾನು ನುಸುಕಿನಲ್ಲಿಯೆ ಇಬ್ಬರು ಮಲಯಿಗಳೊಡನೆ ಹೊರಟೆ. ಅರಣ್ಯವನ್ನು ದಾಟಿಯೇ ಹಳ್ಳಿಯನ್ನು ತಲುಪಬೇಕು. ರಾತ್ರಿ ಮಳೆಯಾದುದರಿಂದ ನೆಲವೆಲ್ಲ ಒದ್ದೆಯಾಗಿತ್ತು. ಗಿಡಗಳಿಂದ ಹನಿಗಳು ತಟಕುತ್ತಿದ್ದವು. ಜವುಗಿನಲ್ಲಿ ನಡೆಯುವಾಗ ಜಿಗಣೆಗಳು ಮೆತ್ತಿಕೊಂಡು ರಕ್ತ ಹೀರಲು ಪ್ರಾರಂಭಿಸುತ್ತಿದ್ದವು. ಇಷ್ಟೆಲ್ಲ ತೊಂದರೆಗಳನ್ನು ಸಹಿಸಿಕೊಂಡು ಮೊದಲ ಹಳ್ಳಿಯನ್ನು ತಲುಪಿದಾಗ ಮಧ್ಯಾಹ್ನವಾಗಿತ್ತು. ಅಲ್ಲಿಯ ಮೂಲನಿವಾಸಿಗಳು ತುಂಬಾ ಒಳ್ಳೆಯವರು. ತಮ್ಮೆಲ್ಲ ತೊಂದರೆಗಳನ್ನು ಸಮಾಧಾನದಿಂದಲೇ ಹೇಳಿದರು. ಅಲ್ಲಿಂದ ಸ್ವಲ್ಪ ದೂರ ನಡೆದು ಪೆರಾಕ್ ನದಿಯ ಬಳಿಯಿರುವ ಕಾಂಪೋಂಗ್ ಗಾಜಾ ತಲುಪಬೇಕು. ಅಲ್ಲಿನವರ ತೊಂದರೆಗಳನ್ನು ಕೇಳಿಕೊಂಡಾದ ಮೇಲೆ ಪೆರಾಕ್ ನದಿಯ ತೀರದವರೆಗೆ ನಡೆಯುತ್ತಾ ಹೋಗಿ ಅಲ್ಲಿ ಮೊದಲೆ ಕಾಯುತ್ತಾ ನಿಂತ ನಾವೆಯ ಮೂಲಕ ತೆಲೋಕ್ ಆನ್‌ಸನ್ ತಲುಪಬೇಕು ಎಂಬುದು ನಮ್ಮ ವಿಚಾರವಾಗಿತ್ತು.

ಆ ಪ್ರಕಾರ ನಾವು ಕಾಂಪೋಂಗ್ ಗಾಜಾದತ್ತ ಹೊರಟೆವು. ಮಲಯಿ ಭಾಷೆಯಲ್ಲಿ ಕಾಂಪೋಂಗ್ ಗಾಜಾ ಎಂದರೆ ಆನೆಗಳ ಹಳ್ಳಿ ಎಂದರ್ಥ. ದಾರಿಯನ್ನು ಸವೆಸಿದ ಹಾಗೆಲ್ಲ ಅಡವಿ ದಟ್ಟವಾಗುತ್ತ ಹೋಯಿತು. ಇಲ್ಲಿಯೂ ಜವುಗು ನೆಲ. ಎಷ್ಟೋ ಸಲ ಕೆಸರು ಮೊಳಕಾಲವರೆಗೂ ಬರುತ್ತಿತ್ತು.

ಮೊದಲಿನ ಹುರುಪು ಅವರಲ್ಲೀಗ ಉಳಿದಿರಲಿಲ್ಲ. ವಿಷಣ್ಣವದನರಾಗಿ ನಡೆಯುತ್ತಿದ್ದರು. ಅವರ ವಾಚಾಳಿತನ ಯಾವಾಗಲೋ ಮಾಯವಾಗಿತ್ತು. ದಾರಿ ಸವೆಸುವುದೆ ಕಠಿಣವಾಗಿತ್ತು. ಹೀಗೆಯೆ ಕೆಸರಿನಲ್ಲಿ ಏದುಸಿರುಬಿಡುತ್ತಾ ಸಾಗಿದಾಗ ಕೆಸರು ತುಂಬಿದ ಚಿಕ್ಕ ನದಿ ಬಂತು. ನದಿಯಲ್ಲೊಂದು ಮಡುವು. ದಟ್ಟವಾದ ಕೆಸರು ನೀರು ವೃತ್ತಾಕಾರದಲ್ಲಿ

ತಿರುಗುತ್ತಾ ಪಾತಾಳ ಸೇರುತ್ತಿತ್ತು. ಕೆಳಗಿನಿಂದ ಗುಳ್ಳೆಗಳು ಮೇಲೇರುತ್ತಿದ್ದವು. ಕೆಸರು ಸ್ನಿಗ್ಧಮಯವಾಗಿತ್ತು.

"ಎಷ್ಟೋ ಆನೆಗಳು ಇಲ್ಲಿ ಜೀವ ಕಳೆದುಕೊಂಡಿವೆ ಸಾರ್," ಎಂದ ನನ್ನ ಮಲಯಿ ಮಾರ್ಗದರ್ಶಿಗಳಲ್ಲೊಬ್ಬನಾದ ಸುಲೇಮಾನ್.

"ಹೇಗೆ?" ಎಂದು ಕೇಳಿದೆ ನಾನು.

"ವಾತಾವರಣ ಬಿಸಿಯಾಗಿದ್ದಾಗ ಕೆಸರಿನಲ್ಲಿ ಬಿದ್ದು ಉರುಳಾಡಲು ಅವು ಇಲ್ಲಿಗೆ ಬರುತ್ತವೆ. ಆದರೆ ಮಡುವಿನಲ್ಲೊಮ್ಮೆ ಸಿಕ್ಕವೆಂದರೆ ಪಾರಾಗುವಂತೆಯೇ ಇಲ್ಲ. ಪಾತಾಳಕ್ಕಿಳಿದ ಆನೆಗಳು ಅಲ್ಲಿಯೆ ಕೊಳೆಯುತ್ತವೆ. ಅನಂತರ ಮುಂದೊಮ್ಮೆ ಅಸ್ಥಿಪಂಜರದಿಂದ ಬಿಡಿಬಿಡಿಯಾದ ಎಲವುಗಳು ಮೇಲಕ್ಕೆ ಬಂದು ಮಡುವಿನಲ್ಲಿ ತಿರುಗತೊಡಗುತ್ತವೆ. ನೋಡಿ ಬೇಕಾದರೆ," ಅಂದ ಸುಲೇಮಾನ್.

ಸುತ್ತುತ್ತಿದ್ದ ಕೆಸರನ್ನು ಇನ್ನೊಮ್ಮೆ ದಿಟ್ಟಿಸಿ ನೋಡಿದೆ. ಆತ ಹೇಳಿದ್ದು ಸರಿಯಾಗಿತ್ತು. ಕೆಸರಿನಲ್ಲಿನ ಅನೇಕ ಎಲವುಗಳು ಕೆಸರಿನೊಂದಿಗೇ ಪಾತಾಳಕ್ಕಿಳಿಯುತ್ತಿದ್ದವು.

"ಈ ಆನೆಗಳ ಉಪಟಳ ಸತ್ತಮೇಲೂ ನಿಲ್ಲುವುದಿಲ್ಲ. ಸಂಜೆಯ ಮುಂದೆ ಅವು ಘೀಳಿಡುತ್ತಾ ಬಂದಾಗಲೆಲ್ಲ ಹಳ್ಳಿಯ ಜನ ಭೀತಿಯಿಂದ ಅವಿತಿಟ್ಟುಕೊಳ್ಳುತ್ತಾರೆ" ಅಂದ ಇನ್ನೊಬ್ಬ ಮಾರ್ಗದರ್ಶಿಯಾಗಿದ್ದ ಹುಸೇನ್.

"ಸತ್ತ ಆನೆಗಳೇ ಘೀಳಿಡುತ್ತಾ ಬರುತ್ತವೆಯೆಂದು ಹೇಗೆ ಹೇಳುತ್ತೀ? ಜೀವಂತ ಆನೆಗಳು ಏಕಾಗಿರಬಾರದು ಅವು?" ಎಂದು ಕೇಳಿದೆ.

"ಅದನ್ನೂ ಹೇಳುತ್ತೇನೆ ಕೇಳಿ. ಒಮ್ಮೆ ಹಮೀದ ಹೀಗೆ ಘೀಳಿಡುತ್ತಾ ಬರುತ್ತಿರುವ ಆನೆಗಳಿಗೆ ಗುಂಡು ಹೊಡೆದ. ಆ ಗುಂಡುಗಳೆಲ್ಲ ಆನೆಗಳನ್ನು ತೂರಿಕೊಂಡು ಹೋದವೇ ವಿನಾ ಅವುಗಳಿಗೇನೂ ಆಗಲಿಲ್ಲ. ಇದಾಗಿ ಒಂದು ಕ್ಷಣದಲ್ಲ ಆನೆಗಳೆಲ್ಲ ಮಾಯ," ಹುಸೇನ್ ಹೇಳಿದ. ಆತ ಅತಿ ವಿಶ್ವಾಸದಿಂದ ಹೇಳಿದ್ದನಾದರೂ ಅದನ್ನು ನಂಬುವುದು ನನಗಾಗಲಿಲ್ಲ.

ನಾವು ಕಾಂಪೋಂಗ್ ಗಾಜಾಕ್ಕೆ ಬಂದಾಗ ಸಂಜೆಯಾಗಿತ್ತು. ಅಂಥಾ ವಿಷಮ ವಾತಾವರಣದಲ್ಲಿ ದಿನವಿಡಿ ಕೆಸರಿನಲ್ಲಿ ನಡೆದು ದಣಿವಾಗಿತ್ತು. ಹಳ್ಳಿಯ ಮುಖ್ಯಸ್ಥ ಕೊಟ್ಟ ಊಟವನ್ನು ಗಪಗಪ ತಿಂದೆ. ಅವನ ಮನೆಯಲ್ಲೆ ಮಲಗಲು ವ್ಯವಸ್ಥೆ ಮಾಡಲಾಗಿತ್ತು. ಹಾಸಿಗೆ ಕಂಡರೆ ಸಾಕು ಎಂಬಂತಾಗಿದ್ದ ನಾನು ಮಚ್ಛರದಾನಿಯೊಳಗೆ ನುಸುಳಿದೆ. ನದಿಯ ಮಂಜುಳ ನಿನಾದ ಜೋಗುಳ ಹಾಡಿದಂತೆ ಅನಿಸುತ್ತಿತ್ತು. ಇಡೀ ದಿನದ ಘಟನೆಗಳನ್ನು ನೆನೆಸಿಕೊಳ್ಳುತ್ತಾ ನಿದ್ದೆಹೋದೆ.



ರಾತ್ರಿ ಯಾರೋ ಮೈ ತಟ್ಟುತ್ತಿದ್ದುದನ್ನು ತಿಳಿದು ಗಡಬಡಿಸಿಕೊಂಡು ಎದ್ದವನೇ ಕೈಯಲ್ಲಿ ರೈಫಲ್ ತೆಗೆದುಕೊಂಡೆ. "ಏಳಿ ಸಾಹೇಬರೆ, ಬೇಗ. ಏಳಿ. ತಡಮಾಡಬೇಡಿ. ಆನೆಗಳ ಪ್ರೇತಾತ್ಮಗಳು ಬಂದಿವೆ. ತಡಮಾಡಿದರೆ ಹೊರಟುಹೋದಾವು," ಎಂದು ಹಮೀದ ಅವಸರಿಸುತ್ತಿದ್ದ.

ಹೊರಗೆ ಚಳಿ ವಿಪರೀತವಾಗಿತ್ತು. ಸೊಳ್ಳೆಗಳ ಕಾಟವೂ ಬಹಳವಾಗಿತ್ತು. ಆದರೂ ಆತ ಹೇಳಿದ್ದನ್ನು ಪರೀಕ್ಷಿಸಿಯೇಬಿಡಬೇಕೆಂದು ಅವನನ್ನು ಹಿಂಬಾಲಿಸಿದೆ. ನಾವು ವರಾಂಡವನ್ನು ದಾಟುವಷ್ಟರಲ್ಲೆ ಆನೆಗಳು ಮೂರು ಸಲ ಘೀಳಿಟ್ಟ ಸದ್ದು ಕೇಳಿಸಿತು.

"ನಾನು ಹೇಳಿದ್ದು ನಿಜವೋ ಸುಳ್ಳೋ ನೋಡಿ ರಾಯರೆ," ಅಂದ ಹಮೀದ್.

ಎಲೆಗಳ ಮಧ್ಯದಿಂದ ಬೆಳದಿಂಗಳು ತೂರಿಕೊಂಡು ಬರುತ್ತಿತ್ತು. ನೂರಾರು ಬೆಂಕಿ ಹುಳುಗಳು ಕತ್ತಲಲ್ಲಿ ಹಾರಾಡುತ್ತಿದ್ದವು. ಇವಿಷ್ಟನ್ನು ಹೊರತುಪಡಿಸಿದರೆ ಬೇರೇನೂ ನನಗೆ ಕಾಣಲಿಲ್ಲ. ಕತ್ತಲಿಗೆ ಕಣ್ಣು ಒಗ್ಗಿಕೊಂಡ ನಂತರ ದೂರದಲ್ಲಿ ಮೂರು ಆನೆಗಳ ಆಕೃತಿಗಳು ಗೋಚರಿಸಿದವಾದರೂ ಅವು ಸ್ವಲ್ಪವೂ ಸದ್ದನ್ನು ಮಾಡುತ್ತಿರಲಿಲ್ಲ. ಹಾಗಾದರೆ ನಿಜವಾಗಿಯೂ ಅವು ಆನೆಗಳೋ ಅಥವಾ ಗಿಡದ ಟೊಂಗೆಗಳು ಗಾಳಿಗೆ ಬಾಗುತ್ತಿದ್ದುದರಿಂದ ನಸುಗತ್ತಲೆಯಲ್ಲಿ ಉಂಟಾದ ಆಕೃತಿಗಳೋ ಎಂಬುದು ಸ್ಪಷ್ಟವಾಗಲಿಲ್ಲ.

ನಾನು ಈ ದ್ವಿಧಾಭಾವದಲ್ಲಿದ್ದಾಗಲೆ ಹಮೀದ್, "ಆನೆಗಳನ್ನು ನೋಡಿದಿರಾ ರಾಯರೆ?" ಎಂದು ಕೇಳಿದ.

"ಹೋದಪ್ಪಾ ನೋಡಿದೆ," ಎಂದು ಸೌಜನ್ಯಕ್ಕಾಗಿ ಹೇಳಿದೆನಾದರೂ ನಿಜವಾಗಿಯೂ ಅವು ಆನೆಗಳೆ? ಎಂಬ ಬಗ್ಗೆ ನನಗೆ ಸಂಶಯವಿದ್ದೇ ಇತ್ತು. ಅಷ್ಟರಲ್ಲಿ ಮೋಡಗಳು ಚಂದ್ರನನ್ನು ಮರೆಮಾಡಿದ್ದರಿಂದ ಎಲ್ಲ ಕಡೆ ಕತ್ತಲಾವರಿಸಿತು. ಅವನೊಡನೆ ಮುಖ್ಯಸ್ಥನ ಮನೆಗೆ ಮರಳಿದೆ.

ಮರುದಿನ ಬೆಳಿಗ್ಗೆ, "ನಿನ್ನೆ ದೆವ್ವದ ಆನೆಗಳನ್ನು ನೋಡಿದಿರಾ ಸಾಹೇಬರೆ?" ಎಂದು ಕೇಳಿದ ಹಳ್ಳಿಯ ಮುಖ್ಯಸ್ಥ.

"ಆನೆಯ ಆಕೃತಿಗಳನ್ನೇನೋ ಕಂಡೆ. ಆದರೆ ಅವು ಆನೆಗಳವೆಂದು ಹೇಗೆ ಹೇಳುವುದು? ಗಾಳಿಯಲ್ಲಿ ತೂರಾಡುವ ಟೊಂಗೆಗಳು ಆನೆಗಳ ಆಕೃತಿಗಳನ್ನು ಸೃಷ್ಟಿಸಿರಬಾರದೇಕೆ?" ಎಂದೆ.

ಮುಖ್ಯಸ್ಥ ನನ್ನನ್ನು ಒಮ್ಮೆ ವಿಚಿತ್ರವಾಗಿ ನೋಡಿ, ರಾತ್ರಿ ನಾವು ನೋಡಿದ್ದೆಡೆಗೆ ಕರೆದುಕೊಂಡು ಹೋದ. ಅಲ್ಲಿ ಕೆಸರಿನಲ್ಲಿ ಹೆಜ್ಜೆಯ ಗುರುತುಗಳು ಇನ್ನೂ ಸ್ಪಷ್ಟವಾಗಿಯೆ ಇದ್ದವು.

✪



ಜೀವರತ್ನ ಉಂಗುರ ಕೈ ಬದಲಿಸಿದಾಗ

ಸ್ವರ್ಣಪುರಿಗೆ ಹೋಗಿದ್ದ ನಿಷಧ ರಾಜನ ರಾಯಭಾರಿಗಳು ತಂದ ಸಂತಸದ ವಾರ್ತೆಯು ಅರಸನನ್ನು ಮುಟ್ಟಿದ್ದೇ ತಡ; ಮದುವೆಗೆಂದು ಹೊರಡುವ ಸಿದ್ಧತೆಗಳು ಭರದಿಂದ ನಡೆದು ಶುಭ ಮಹೂರ್ತದಲ್ಲಿ ಅವನು ತನ್ನ ಸಕಲ ಪರಿವಾರ ಸಮೇತ ಹೊರಟನು.

ಸ್ವರ್ಣಪುರಿಯ ಅರಸನಾದ ಸ್ವರ್ಣೇಶ್ವರನು ವರ ಪಕ್ಷದವರನ್ನೆಲ್ಲ ಯೋಗ್ಯ ಗೌರವಾದರಗಳಿಂದ ಬರ ಮಾಡಿಕೊಂಡು ಸತ್ಕರಿಸಿದನು. ನಂತರ ಸುಮಹೂರ್ತದಲ್ಲಿ ಶಾಸ್ತ್ರಬದ್ಧವಾದ ರೀತಿಯಲ್ಲಿ ತನ್ನ ಕುಮಾರಿಯನ್ನು ನಿಷಧರಾಜನಿಗೆ ಧಾರೆಯೆರೆದು ಕೊಟ್ಟನು. ಹದಿನಾರು ದಿನಗಳವರೆಗೆ ಊರಿಗೆ ಊರೇ ಅರಮನೆಯ ಆತಿಥ್ಯವನ್ನುಂಡು ನಲಿಯಿತು. ಸ್ವರ್ಣಪುರಿಯ ಅರಸನು ತನ್ನ ಅಳಿಯನಿಗೆ ವರದಕ್ಷಿಣೆಯೆಂದು ಅಪಾರ ಸಂಪತ್ತನ್ನಲ್ಲದೆ ಚದುರಂಗಬಲವನ್ನೂ ಕೊಟ್ಟನು. ಅಳಿಯ ಹಾಗೂ ಮಗಳನ್ನು ಬೀಳ್ಕೊಡುವಾಗ ಅವನ ಕಣ್ಣುಗಳು ಹನಿಗೂಡಿದವು.

ಪರಿವಾರವೆಲ್ಲ ನಿಷಧಪುರಿಗೆ ಮರಳಿದ ನಂತರ ಅಲ್ಲಿಯ ಜನವೆಲ್ಲ ತಮ್ಮ ಅರಸನ ಮದುವೆಯ ಸಂಭ್ರಮವನ್ನು ಅರಮನೆಯಲ್ಲಿ ಮತ್ತೆ ಹಲವಾರು ದಿನ ಸವಿಯಿತು.

ನಿಷಧರಾಜ ಹಾಗೂ ಸ್ವರ್ಣಕುಮಾರಿಯರು ಆನಂದ ಸಾಗರದಲ್ಲಿಯೇ ತೇಲುತ್ತಾ ಅನೇಕ ದಿನಗಳನ್ನು ಕಳೆದ ನಂತರ ಒಂದು ದಿನ ರಾಣಿಯು ತನ್ನ ಪತಿಯನ್ನು ಕುರಿತು "ಮಹಾರಾಜ, ನಿತ್ಯವೂ ಸೂರ್ಯೋದಯಕ್ಕೆ ಮುಂಚೆಯೆ ಸ್ನಾನಮಾಡಿ ಅತ್ತೆಯವರ ಪಾದಗಳಿಗೆ ಪೂಜೆ ಸಲ್ಲಿಸುತ್ತಿರುವೆನೆಂಬುದು ನಿಮಗೆ ತಿಳಿದೇ ಇದೆ. ಆದರೆ ಬೆಳಗಾಗುವ ಮುನ್ನವೆ ವನದಲ್ಲಿಯ ಸರೋವರಕ್ಕೆ ಒಬ್ಬಳೇ ಹೋಗುವುದು ತುಸು ಅಪಾಯಕಾರಕವೇ ಎನಿಸುತ್ತದೆ. ನಮ್ಮ ಶಯ್ಯಾಗೃಹದಿಂದ ಸರೋವರದವರೆಗೆ ನೆಲದಲ್ಲೇ ಗುಪ್ತಮಾರ್ಗವೊಂದನ್ನು ನಿರ್ಮಿಸಿಕೊಟ್ಟುದಾದಲ್ಲಿ ತುಂಬ ಅನುಕೂಲವಾಗುವುದು. ಯಾರಿಗೂ ತಿಳಿಯದಂತೆ ನಾನು ಸ್ನಾನ ಮುಗಿಸಿಕೊಂಡು ಬರಬಹುದಾಗಿದೆ" ಎಂದು ಪ್ರಾರ್ಥಿಸಿದಳು.

ತನ್ನ ಪ್ರಿಯತಮೆಯ ಕೇಳಿಕೆ ಯೋಗ್ಯವೆಂದು ನಿಷಧರಾಜನಿಗೆ ಅನಿಸುವುದೊಂದೇ ತಡ ವಾಸುಕಿಯಿಂದ ತನಗೆ ಬಹುಮಾನವಾಗಿ ದೊರೆತ ಜೀವರತ್ನ ಉಂಗುರವನ್ನು ಕೈಗೆತ್ತಿಕೊಂಡು ಅವನು "ನನ್ನ ರಾಣಿಯ ಇಚ್ಛೆಯಂತೆ ಭೂಗತ ಮಾರ್ಗದ ರಚನೆಯಾಗಲಿ!" ಎಂದು ಪ್ರಾರ್ಥಿಸಿದನು. ಕ್ಷಣಾರ್ಧದಲ್ಲಿಯೇ ಅಂತಹ ಮಾರ್ಗವೊಂದು ಸಿದ್ಧವಾಯಿತು. ಸ್ವರ್ಣಕುಮಾರಿಯು ಅಂದಿನಿಂದಲೇ ಅದನ್ನು ಉಪಯೋಗಿಸಲಾರಂಭಿಸಿದಳು. ಪ್ರತಿನಿತ್ಯವೂ ಆಕೆ ನಸುಕಿಗೆ ಮೊದಲೇ ಸರೋವರದಲ್ಲಿ ಸ್ನಾನಮುಗಿಸಿ ತನ್ನ ಅತ್ತೆಯ ಹಾಗೂ ಪತಿಯ ಪಾದಗಳನ್ನು ಪೂಜಿಸಿದ ನಂತರವೇ ಬೇರೆ ಕೆಲಸಗಳಿಗೆ ತೊಡಗುತ್ತಿದ್ದಳು. ನಸುಕಿನಲ್ಲಿ ತನ್ನ ಪ್ರಥಮ ಕರ್ತವ್ಯ ಪೂರೈಸುವ ಮೊದಲು ಬೇರಾರನ್ನೂ ಅವಳು ನೋಡುತ್ತಿರಲಿಲ್ಲ.

ಒಂದು ದಿನ ಬೇಟೆಯಾಡುವುದಕ್ಕೆಂದು ಹೊರಟಿದ್ದ ಕೋಚೀನ ದೇಶದ ಅರಸನು ಸ್ವರ್ಣಕುಮಾ

ರಿಯು ನಿತ್ಯವೂ ಸ್ನಾನಕ್ಕೆಂದು ಬರುತ್ತಿದ್ದ ಸರೋವರದ ಹತ್ತಿರ ಹಾಯ್ದಾಗ ಅವನ ಹೆಬ್ಬೆರಳಿಗೆ ಉದ್ದವಾದ ತಲೆಗೂದಲೊಂದು ಸಿಕ್ಕಿಕೊಂಡಿತು. ಅದನ್ನು ತೆಗೆಯಲು ಅವನು ಯತ್ನಿಸಿದಾಗ ಅದರ ಮೃದುತ್ವ ಕಂಡು ಅವನು ಬೆರಗಾದನು. ಕೈಗೆತ್ತಿಕೊಂಡು ನೋಡಿದಾಗ ಅದರ ಸೊಬಗು ಅವನನ್ನು ಸಂಪೂರ್ಣ ಮರುಳುಗೊಳಿಸಿತು. ಹಲವಾರು ಶಾಸ್ತ್ರ ಹಾಗೂ ಕಲೆಗಳನ್ನು ಬಲ್ಲ ಅವನಿಗೆ ಅದು ಸುರಸುಂದರಿಯೊಬ್ಬಳ ಕೇಶವೆಂದು ಗುರುತಿಸಲು ವೇಳೆ ಹಿಡಿಯಲಿಲ್ಲ. ನಿಜವಾಗಿಯೂ ಸ್ವರ್ಣಕುಮಾರಿಯು ತಲೆ ಬಾಚಿಕೊಂಡಾಗ ಬಿಟ್ಟುಕೊಂಡು ಬಂದಿದ್ದ ಅವಳ ತಲೆಗೂದಲದು.

ಆ ಕೂದಲನ್ನು ಪರೀಕ್ಷಿಸಿದಷ್ಟೂ ಅದರ ಒಡತಿಯಾಗಿದ್ದವಳಲ್ಲಿ ಅವನಿಗೆ ಕುತೂಹಲ ಹೆಚ್ಚಿತು. ಅಂಥ ಸುಂದರಿಯನ್ನು ತನ್ನವಳನ್ನಾಗಿಸಿಕೊಳ್ಳದಿದ್ದಲ್ಲಿ ತನ್ನ ಜೀವನವದೆಂತು ಸಾರ್ಥಕವಾಗಬಲ್ಲದೆಂದು ಅವನು ಚಿಂತಿಸಿದನು.

ಆಗ, ಆಕ್ಷಣವೇ ಬೇಟೆಯನ್ನು ತೊರೆದು ಅವನು ತನ್ನ ರಾಜಧಾನಿಗೆ ಮರಳಿದನು. ಹೋಗುವಾಗ ಆ ಕೂದಲನ್ನು ಮಾತ್ರ ಜತನದಿಂದ ತನ್ನೊಂದಿಗೆ ಒಯ್ಯಲು ಅವನು ಮರೆಯಲಿಲ್ಲ. ಅರಮನೆಯನ್ನು ಸೇರುವ ಸಮಯಕ್ಕಾಗಲೇ ಅವನ ವಿರಹ ಮೇರೆದಪ್ಪಿತ್ತು. ಎಂತಾದರೂ ಆ ಕೇಶ ಸುಂದರಿಯನ್ನು ಪಡೆಯಬೇಕೆಂದು ಅವನು ತನ್ನ ರಾಜ್ಯದಲ್ಲೆಲ್ಲ ಆ ಕೂದಲಿನ ಒಡತಿಯನ್ನು ತನಗೆ ತಂದೊಪ್ಪಿಸಿದವರಿಗೆ ಅರ್ಧ ರಾಜ್ಯವನ್ನೇ ಕೊಡುವುದಾಗಿ ಡಂಗುರ ಸಾರಿಸಿದನು.

ಅರ್ಧ ರಾಜ್ಯವೇ ಸಿಗುವುದೆಂಬ ಆಸೆಯಿಂದ ಅನೇಕರು ಪ್ರಯತ್ನಕ್ಕೆ ಮುಂದಾದರೂ ತಮ್ಮ ಅರಸನ ಅಭೀಷ್ಟವನ್ನು ಈಡೇರಿಸುವುದು ಯಾರಿಗೂ ಸಾಧ್ಯವಾಗಲಿಲ್ಲ. ಅಂತರಂಗದಲ್ಲಿ ಅರಸ ಅನುದಿನವೂ ಕೊರಗಲಾರಂಭಿಸಿದ.

ಬಹುದಿನಗಳ ನಂತರ ಕೊನೆಗೊಮ್ಮೆ ಮುದುಕಿಯೊಬ್ಬಳು ಅರಸನಲ್ಲಿಗೆ ಬಂದು ಅವನಿಗೆ ಕೂದಲು ದೊರೆತ ಸ್ಥಳದ ವಿವರವನ್ನೆಲ್ಲಾ ಕೇಳಿಕೊಂಡಳು. ಅನಂತರ ಆ ಯುವತಿಯನ್ನು ತರುವ ವಚನವಿತ್ತು ನಿಷಧಪುರಿಗೆ ತೆರಳಿದಳು.

ಅರಸನು ಅವಳಿಗಿತ್ತ ಹಣದಿಂದಾಗಿ ಆ ವೃದ್ಧೆಯು ನಿಷಧಪುರಿಯನ್ನು ತಲುಪುವುದು ಸುಲಭವಾಯಿತು. ಅನಂತರ ಆಕೆ ಬಹು ಪ್ರಯಾಸದಿಂದ ತನ್ನ ಅರಸನಿಗೆ ಅಪರಿಚಿತ ಸ್ತ್ರೀಯ ಕೇಶ ದೊರೆತ ಸ್ಥಳವನ್ನೂ ಶೋಧಿಸಿದಳು. ಆ ಮೇಲೆ ಸುತ್ತಲೂ ಅಡ್ಡಾಡಿ ಕಾಡಿನಿಂದ ಕಟ್ಟಿಗೆಯನ್ನು ಶೋಧಿಸಿ ಚಿತೆಯನ್ನು ಹೊತ್ತಿಸಿದಳು. ಮರುದಿನ ನಸುಕಿನವರೆಗೂ ಅದನ್ನುಳಿಸಿಕೊಂಡು ಬಂದಳು.

ಸೂರ್ಯೋದಯಕ್ಕೆ ತುಸು ಮೊದಲು ಎಂದಿನಂತೆ ಸ್ವರ್ಣಕುಮಾರಿ ಭೂಗತಮಾರ್ಗದ ಮೂಲಕ ಸರೋವರಕ್ಕೆ ಸ್ನಾನಕ್ಕೆಂದು ಬಂದಳು. ಅದನ್ನು ಕಂಡ ಮುದುಕಿಯು ಒಮ್ಮೆಲೆ ಆರ್ತಧ್ವನಿಯಿಂದ ರೋಧಿಸಲಾರಂಭಿಸಿದಳು. ಅವಳ ಅಳುವನ್ನು ಕೇಳಿದವರಿಗೆ ಬಹುಶಃ ಅವಳ ಸಂಬಂಧಿಕರಾರೋ ಮೃತಪಟ್ಟಿರಬಹುದು ಎನಿಸುವಂತಿತ್ತು. ಅದರಿಂದ ಮನಕರಗಿದವಳಾದ ಮಹಾರಾಣಿಯು ಅವಳ ಹತ್ತಿರಕ್ಕೆ ನಡೆದುಹೋಗಿ ದುಃಖದ ಕಾರಣವನ್ನು ವಿಚಾರಿಸಿದಳು.

ಆಗ ಮುದುಕಿಯು ಒಮ್ಮೆಲೆ ಎದ್ದು ಸ್ವರ್ಣಕುಮಾರಿಯನ್ನು ಬಿಗಿದಪ್ಪಿ "ಓ ನನ್ನ ಕಂದಾ! ಹೀಗೇಕೆ ಮಾತಾಡುತ್ತಿರುವಿ? ನನ್ನ ಪರಿಚಯ ನಿನಗೆ ಹತ್ತಲೊಲ್ಲದೆ? ನಿನ್ನೆ ಸಂಜೆಗೆ ತೀರಿ ಹೋದ ನೀನು ಇಂದು ಆಗಲೆ ಜೀವಂತಳಾಗಿ ಬಂದಿರುವೆಯಲ್ಲ! ನನ್ನನ್ನಿಷ್ಟು ಬೇಗ ಅದೆಂತು ಮರೆತೆ?" ಎಂದು ಕಣ್ಣೀರಿಡಹತ್ತಿದಳು.

'ಇವಳ ಸತ್ತುಹೋದ ಮಗಳು ನನ್ನಂತೆಯೇ ಇದ್ದಿರಬಹುದು. ಪಾಪ! ಅವಳನ್ನು ಮರೆಯುವುದು ಸಾಧ್ಯವಾಗಿರಲಿಕ್ಕಿಲ್ಲ ಇವಳಿಗೆ!' ಎಂದುಕೊಂಡು ರಾಣಿಯು, "ತಾಯಿ! ಇಬ್ಬರು ಒಂದೇ ತೆರನಾಗಿರುವುದು ಸಾಧ್ಯವಿದೆ. ನಾನು ಈ ದೇಶದ ರಾಣಿಯಾಗಿದ್ದರೂ ನಿನ್ನ ಮಟ್ಟಿಗೆ ನಿನ್ನ ಮಗಳಾಗುವೆ. ನೀನು ನಿನ್ನ ದುಃಖದ ಕಾರಣವನ್ನೆಲ್ಲ ನನಗೆ ಹೇಳಬಹುದು. ಯಾವ ರೀತಿಯಿಂದಲೂ ಸಂಕೋಚಪಟ್ಟುಕೊಳ್ಳಬೇಡ. ನಿನಗೆ ಸಾಧ್ಯವಿದ್ದಷ್ಟೂ ಸಹಾಯವನ್ನು ನೀಡುವೆ," ಎಂದು ಆಶ್ವಾಸನೆಯಿತ್ತಳು.

ಆಗ ವೃದ್ಧೆಯು ತಾನು ತನ್ನ ಮಗಳೊಂದಿಗೆ ತೀರ್ಥಯಾತ್ರೆ ಹೊರಟಿದ್ದಾಗಿಯೂ ಆಕೆಯು ಅಕಸ್ಮಾತ್ತಾಗಿ ಅದೇ ಸ್ಥಳದಲ್ಲಿ ಮರಣಹೊಂದಲು ಅವಳನ್ನು ಅಗ್ನಿಗರ್ಪಿಸಿದ್ದಾಗಿಯೂ ಹೇಳಿದ್ದಳು.

ಅವಳ ಕಥೆಯನ್ನು ನಂಬಿದ ರಾಣಿ ಸ್ವರ್ಣಕು

ಮಾರಿಯು ಅವಳನ್ನು ತನ್ನೊಂದಿಗೆ ಅರಮನೆಗೆ ಕರೆದೊಯ್ದಳು. ನಂತರ ಅತ್ತೆಯ ಹಾಗೂ ಪತಿಯ ಒಪ್ಪಿಗೆ ಪಡೆದು ಅರಮನೆಯಲ್ಲೇ ವಾಸವಾಗಿರಲು ಅವಳಿಗೆ ಸ್ಥಾನ ಕಲ್ಪಿಸಿಕೊಟ್ಟಳು.

ಅರಮನೆಯಲ್ಲಿ ರಾಜಯೋಗ್ಯವಾದ ಸೌಕರ್ಯಗಳೆಲ್ಲವೂ ಮುದುಕಿಗೆ ದೊರೆತವು. ಆದರೂ ಬಹುದಿನ ಸುಖದಿಂದಿರುವುದು ಅವಳಿಗೆ ಸಾಧ್ಯವಾಗಲಿಲ್ಲ. ತಾನಲ್ಲಿಗೆ ಬಂದುದರ ಉದ್ದೇಶವೇನೆಂಬು



ದನ್ನು ಅವಳಿನ್ನೂ ಮರೆತಿರಲಿಲ್ಲ. ಅರ್ಧ ರಾಜ್ಯ ದೊರಕಿಸುವ ಆಮಿಷ ಅವಳನ್ನು ಪದೇ ಪದೇ ಕೆಣಕುತ್ತಿತ್ತು.

ಹೆಂಡತಿಯಿಂದ ಅವಳ ಕರುಣ ಕತೆಯನ್ನು ಕೇಳಿದ ನಿಷಧರಾಜನು ಮುದುಕಿಯನ್ನು ಬಹು ಸಲುಗೆಯಿಂದ ಕಾಣುತ್ತಿದ್ದನು. ಅಂತೆಯೇ ಅವಳನ್ನು 'ಅತ್ತೆ' ಎಂದೇ ಸಂಬೋಧಿಸತೊಡಗಿದನು.

ಹೀಗೆಯೇ ಒಂದು ದಿನ ರಾಜನು ಮುದುಕಿ ಯೆಡೆಗೆ ಬಂದು "ಅತ್ತೆ, ನಿನಗೆಂಥ ಹಣ್ಣು ಬೇಕೋ ಕೇಳು. ಈ ಋತುವಿನಲ್ಲಿ ಬೆಳೆಯದಿರುವ ಹಣ್ಣುಗಳನ್ನು ಕೇಳಿದರೂ ನಾನು ಕೊಡಬಲ್ಲೆ!" ಎಂದು ಚೇಷ್ಟೆಯಿಂದ ನುಡಿದನು.

ಆ ಋತುವಿನಲ್ಲಿ ಮಾವಿನ ಹಣ್ಣು ಸಿಗುವುದು ಸಾಧ್ಯವೇ ಇರಲಿಲ್ಲವಾದ್ದರಿಂದ ವೃದ್ಧೆಯು ಅದನ್ನೇ ಬೇಡಿದಳು.

ನಿರ್ಮಲ ಮನಸ್ಸಿನ ಅರಸನು ಜೀವರತ್ನ ಉಂಗುರವನ್ನು ಹೊರದೆಗೆದು ಶಿವನನ್ನು ಪ್ರಾರ್ಥಿಸಿ "ನನ್ನ ಅತ್ತೆಗೆ ಶ್ರೇಷ್ಠ ಮಾವಿನ ಹಣ್ಣುಗಳು ಬೇಕಿದೆ!" ಎಂದು ನುಡಿಯುವುದೊಂದೇ ತಡ ಅವು ತಟ್ಟೆ ಯೊಂದರಲ್ಲಿ ಎಲ್ಲಿಂದಲೋ ಬಂದವು. ಅರಸನು ಅವುಗಳನ್ನು 'ಹೆಚ್ಚಿ' ತನ್ನ 'ಅತ್ತೆ'ಗೆ ಕೊಟ್ಟನು.

ವೃದ್ಧೆಯ ಆಶ್ಚರ್ಯಕ್ಕೆ ಮೇರೆಯೇ ಇರಲಿಲ್ಲ. ಆ ಕ್ಷಣಕ್ಕೆಯೇ ಅವಳು ತನ್ನ ಮನದಲ್ಲಿ ಯೋಜನೆ ಯೊಂದನ್ನು ರೂಪಿಸಿಕೊಂಡಳು. ಅವಳ ಲಕ್ಷ್ಯವೆಲ್ಲ ಜೀವರತ್ನ ಉಂಗುರದ ಮೇಲೆಯೇ ಕೇಂದ್ರೀಕೃತವಾ ಯಿತು.

ಕೆಲದಿನಗಳ ನಂತರ ಮುದುಕಿ ವಿಪರೀತ ತಲೆನೋವೆಂದು ಮಲಗಿಬಿಟ್ಟಳು. ಯಾವ ಔಷ ಧಕ್ಕೂ ಅದು ನಿಲ್ಲಲಿಲ್ಲ. ರಾಣಿ ಸ್ವರ್ಣಕುಮಾರಿಯು ಬಂದು ಮಾತನಾಡಿಸಿದಾಗ "ಮಗಳೇ ಈ ಬೇನೆ ಯಲ್ಲಿಯೇ ನನ್ನ ಕೊನೆಯಿದೆಯೆಂದು ತೋರುತ್ತದೆ! ನನ್ನ ಸ್ವಂತ ಮಗಳಿಗಿಂತಲೂ ಹೆಚ್ಚಾಗಿ ನನ್ನನ್ನು ನೀನು ನೋಡಿಕೊಂಡಿರುವೆ. ನಿನ್ನ ಉಪಕಾರವನ್ನು ಈ ಜನುಮದಲ್ಲಂತೂ ನಾನು ಹೇಗೆ ತೀರಿಸಬಲ್ಲೆನೋ ಕಾಣೆ.. ಅಯ್ಯೋ ನೋವೆ...! ಇದರಿಂದ ನನಗೆ ಮುಕ್ತಿ ಇಲ್ಲವೆ?... ಹಾಂ... ಹಾಂ... ಬಹುಶಃ ನಿನ್ನ ಗಂಡನ ಹತ್ತಿರವಿರುವ ಜೀವರತ್ನ ಉಂಗುರವೊಂ ದಕ್ಕೆ ಮಾತ್ರ ಇದನ್ನು ಶಮನ ಮಾಡುವ ಶಕ್ತಿಯಿ ದೆಯೇನೋ. ಅದನ್ನು ನೀನು ತರುವೆಯಾದರೆ ಒಂದರೆಕ್ಷಣ ಮಾತ್ರ ಅದನ್ನು ನನ್ನ ಬೆರಳಿಗಿರಿಸಿ ಕೊಂಡು ಮರಳಿ ಕೊಡುವೆ ಅಯ್ಯಾ..." ಎಂದುಸು ರಿದಳು.

ಸ್ವರ್ಣ ಕುಮಾರಿಗೆ ಏನೂ ತೋಚದಂತಾ ಯಿತು. ಅತ್ತ ದರಿ ಇತ್ತ ಹುಲಿ. ಅವಳು ಒಮ್ಮೆಲೆ ಉತ್ತರಿಸದ್ದನ್ನು ಕಂಡು "ಬಹುಶಃ ನನಗೆ ಸಹಾಯ ಮಾಡುವ ಮನಸ್ಸು ನಿನಗಿರಲಿಕ್ಕಿಲ್ಲ!" ಎಂದು ಕೊಂಕು ನುಡಿದಳು. ಅದನ್ನು ಸಹಿಸಲಾಗದೆ ರಾಣಿಯು ತನಗೆ ಮಾರ್ಗ ಸೂಚಿಸೆಂದಳು.

ಆಗ ಮುದುಕಿಯು ಜಗತ್ತಿನಲ್ಲಿ ಪುರುಷನು ತನ್ನ ಪ್ರಿಯತಮೆಗೆ ಕೊಡಲೊಪ್ಪದಂತಹ ವಸ್ತು ವಾವುದೂ ಇಲ್ಲವೆಂದು ನುಡಿದು ಅರಸನಿಂದ ಜೀವರತ್ನ ಉಂಗುರ ಪಡೆಯುವ ಹಂಚಿಕೆಯನ್ನು ಹೇಳಿಕೊಟ್ಟಳು.

ಅವಳ ಕುತ್ಸಿತ ಮನಸ್ಸನ್ನು ತುಸುವೂ ಅರಿಯದ ರಾಣಿಯು ಅವಳ ಯೋಚನೆಯನ್ನು ಅನುಸರಿಸಿ ತನ್ನ ಪತಿಯಿಂದ ಆ ಉಂಗುರವನ್ನು ಪಡೆಯುವಲ್ಲಿ ಯಶಸ್ವಿಯಾದಳು.

ಜೀವರತ್ನ ಉಂಗುರ ದೊರೆತಾಕ್ಷಣ ವೃದ್ಧೆಯು ವೇಳೆಯನ್ನು ಹಾಳುಮಾಡಲಿಚ್ಛಿಸಲಿಲ್ಲ. ರಾಣಿಯು ಮರೆಯಾದೊಡನೆಯೆ ಶಿವನನ್ನು ಪ್ರಾರ್ಥಿಸಿ ತಕ್ಷಣ ಕೋಚೀನಿಗೆ ಹೋಗಬೇಕು ಎಂದು ಇಚ್ಛಿಸಿದಳು. ಮರು ನಿಮಿಷವೇ ಆಕೆ ಅಲ್ಲಿದ್ದಳು.

ಅತ್ಯಾತುರದಿಂದ ಅವಳ ದಾರಿಯನ್ನೇ ಕಾಯು ತ್ತಿದ್ದ ಕೋಚೀನದ ಅರಸನು ಅವಳನ್ನು ಆದರದಿಂದ ಬರಮಾಡಿಕೊಂಡನು. ಅವಳು ಜೀವರತ್ನ ಉಂಗು ರವನ್ನು ಅವನಿಗಿತ್ತು ಏನು ಮಾಡಬೇಕೆಂಬುದನ್ನು ವಿವರಿಸಿದಳು.

ಕೋಚೀನದ ಅರಸನು ತುಂಬ ಬುದ್ಧಿವಂತನಾ ಗಿದ್ದ. ಅವನು ಕೂಡಲೇ ಶಿವನನ್ನು ಪ್ರಾರ್ಥಿಸಿ "ನಿಷಧಪುರಿಯ ರಾಣಿಯು ಈ ಕ್ಷಣಕ್ಕೆ ನನ್ನೆದುರು ಬಂದು ನಿಲ್ಲಲಿ. ಅವಳ ಪತಿ ಹುಚ್ಚನಾಗಲಿ. ಆ ನಗರವೆಲ್ಲ ಸುಟ್ಟು ಬೂದಿಯಾಗಲಿ" ಎಂದು ಬೇಡಿ ಕೊಂಡನು.

(ಮುಂದಿನ ಸಂಚಿಕೆ ನೋಡಿ)

ಸ್ವಾಸ್ಥ್ಯ

ಕುಡುಕರ ಬಗ್ಗೆ ಒಂದಿಷ್ಟು



ಮದ್ಯಾರ್ಕ ನಿಜಕ್ಕೂ ಉತ್ತೇಜನಕರವೆ?

- 'ಎಂ. ದೀಪಾ'

ಕುಡುಕರು ಬಡವರಲ್ಲೂ ಇದ್ದಾರೆ, ಶ್ರೀಮಂತರಲ್ಲೂ ಇದ್ದಾರೆ. ಈಗಿನ ದಿನಗಳಲ್ಲಂತೂ ಕುಡಿಯುವವರದೇ ಸಾಮ್ರಾಜ್ಯ. ಕೆಲವರು ಹೆಚ್ಚು ಕುಡಿಯುವುದರಲ್ಲೆ ಹೆಚ್ಚಿನ ಖುಷಿಯನ್ನು ಕಂಡರೆ ಇನ್ನು ಕೆಲವರು ತಾವು ಹೆಚ್ಚು ಕುಡಿಯದಿದ್ದರೂ ಹೆಚ್ಚು ಕುಡಿಯುತ್ತೇವೆಂದು ಬಡಾಯಿಕೊಚ್ಚಿಕೊಳ್ಳುವುದರಲ್ಲೆ ಇನ್ನಷ್ಟು ಹೆಚ್ಚಿನ ಖುಷಿಯನ್ನು ಕಾಣುತ್ತಾರೆ. ಇತ್ತೀಚೆಗೆ ಒಬ್ಬ ಲಕ್ಷಾಧೀಶನಂತೂ ತಾನು ಎರಡು ಬಾಟಲುಗಳಷ್ಟು ಕುಡಿಯದ ದಿನವೇ ಇಲ್ಲವೆಂದು ಅದೊಂದು ದೊಡ್ಡ ಸಾಧನೆಯೆಂಬಂತೆ ಎದೆಯುಬ್ಬಿಸಿ ಹೇಳಿಕೊಂಡ.

ಒಂದು ವೇಳೆ ಅವನು ಹೇಳುವುದು ನಿಜವಿದ್ದರೆ ಅದೊಂದು ಸಾಧನೆಯೇ ಸರಿ - ಎರಡು ಬಾಟಲಿಗಳನ್ನು ಕುಡಿಯುವುದಲ್ಲ, ಅಷ್ಟು ಕುಡಿದೂ ಜೀವಂತವಾಗಿ ಉಳಿದದ್ದು. ನಿಜಹೇಳಬೇಕೆಂದರೆ ಎಂಥಾ ಮದಿರೆಯ ಭಕ್ತನೂ ಒಂದೇ ಹೊಡೆತಕ್ಕೆ ಎರಡು ಬಾಟಲಿಗಳನ್ನು ಕುಡಿದು ತಾನು ಹಾಗೆ ಮಾಡಿದ ಬಗ್ಗೆ ಬಡಾಯಿಕೊಚ್ಚಿಕೊಂಡದ್ದಿಲ್ಲ-ಒಂದು ಬಾಟಲಿಯಷ್ಟು ಕುಡಿಯುವಷ್ಟರಲ್ಲೆ ಮದ್ಯಾರ್ಕ ವಿಷಪ್ರಾಶನ (alcohol poisoning)ದಿಂದಾಗಿ ಜೀವ ಹೋಗಿರುತ್ತದೆ ಎಂದು ಡಾಕ್ಟರರು ಹೇಳುತ್ತಾರೆ.

ಅನೇಕ ಜನ ಹೆಚ್ಚು ಕುಡಿದಷ್ಟೂ ಹೆಚ್ಚು ನಿಶೆ ಬರುತ್ತದೆಂದು ಭಾವಿಸಿದ್ದಾರೆ. ವಸ್ತುಸ್ಥಿತಿ ಬೇರೆಯೇ ಇದೆ. ನಿಶೆಯು ಮದ್ಯದಲ್ಲಿರುವ ಮದ್ಯಾರ್ಕದ ಸಾಂದ್ರತೆಯನ್ನೂ ಮದ್ಯಾಸಕ್ತನು ಅದನ್ನು ಎಷ್ಟು ಬೇಗ 'ಒಳಗೆ' ಇಳಿಸಿಕೊಳ್ಳುತ್ತಾನೆಂಬುದನ್ನೂ ಅವಲಂಬಿಸಿದೆ.

ಆದ್ದರಿಂದಲೇ ಒಂದಾದ ಮೇಲೊಂದರಂತೆ ಆರು ಬಾಟಲು ಸ್ಕಾಚ್ ಕುಡಿದಾತ ಬೇಗನೆ ನಿಶೆಯೇರಿ ತೂರಾಡತೊಡಗಬಹುದು. ಆದರೆ ನೀರು ಕೂಡಿಸಿ ಸಾವಕಾಶವಾಗಿ ನಾಲ್ಕು ಗಂಟೆಗಳವರೆಗೆ ಒಂದು ಡಜನ್ ಸ್ಕಾಚ್ ಗುಟುಕರಿಸಿದರೂ ನಿಶೆಯೇರುವುದಿಲ್ಲ.

ಹಾಗಾದರೆ ಸಾವಕಾಶವಾಗಿಯಾದರೂ ಮದ್ಯ ಸೇವಿಸುವುದು ಸರಿಯೇ? ಅನೇಕರು ಭಾವಿಸಿದ ಹಾಗೆ ಅದು ನಿಜಕ್ಕೂ ಹೆಚ್ಚು ಕೆಲಸ ಮಾಡಲು ಉತ್ತೇಜನ ಒದಗಿಸುತ್ತದೆಯೆ?

ನಿಜ ಹೇಳಬೇಕೆಂದರೆ ಉತ್ತೇಜನದ ಮಾತಂತೂ ದೂರ ಉಳಿಯಿತು, ಇದ್ದ ಹುರುಪನ್ನೂ ಅದು ಕಿತ್ತುಕೊಳ್ಳುತ್ತದೆ. ಮದ್ಯಾರ್ಕವೆಂಬುದು ವಿಷಣ್ಣಕಾರಕ (depressant). ಅದು ಶಾಮಕವಾಗಿಯೂ ವರ್ತಿಸುವುದರಿಂದ ಮಿದುಳಿನ ಕೇಂದ್ರಗಳ ಕಾರ್ಯಕ್ಷಮತೆಯನ್ನು ತಗ್ಗಿಸುವುದು. ಹೆಚ್ಚು ಹೆಚ್ಚು ಕುಡಿದಂತೆಲ್ಲ ಮಿದುಳಿನ ಹೆಚ್ಚಿನ ಕ್ಷೇತ್ರವೂ ಅದರ ಅಳವಿನಲ್ಲಿ ಬರುವುದರಿಂದ

ಎಚ್ಚರದಪ್ಪುವುದು. ಹೀಗೆ ಒಂದು ರೀತಿಯಲ್ಲಿ ಸ್ವಲ್ಪ ಕುಡಿಯುವುದಕ್ಕಿಂತ ಬಹಳ ಕುಡಿಯುವುದು ಅವನ ಮನೆಯವರಿಗೆಲ್ಲ ಒಳ್ಳೆಯದೇ ಎನ್ನಿ; ಆದರೆ ಕುಡಿಯುವವನಿಗೆ ಮಾತ್ರ ಖಂಡಿತವಾಗಿಯೂ ಒಳ್ಳೆಯದಲ್ಲ.

ಹಾಗೆ ನೋಡಿದರೆ ಮದ್ಯಾರ್ಕವೆನ್ನುವುದೇ ಒಂದು ವಿಚಿತ್ರ ವಸ್ತು. ವಿಪರೀತ ಮದ್ಯದ ಚಟ ಇರುವಾತ ಅದಿಲ್ಲದೆ ಚಡಪಡಿಸುತ್ತಿದ್ದಾನೆನ್ನಿ. ಅವನಿಗೆ ಒಂದಿಷ್ಟು ಮದ್ಯ ದೊರೆಯಿತೋ ಸ್ವರ್ಗಕ್ಕೆ ಮೂರೇ ಗೇಣು ಉಳಿದಂತಾಗುತ್ತದೆ. ಆತನಿಗೆ ನಿಶೆಯೇರಲೂ ತಡವಾಗುವುದಿಲ್ಲ. ಆದರೆ ಅಷ್ಟಾಗಿ ಮದ್ಯದ ಚಟ ಇಲ್ಲದವನಿಗೆ ಅದೇ ಪ್ರಮಾಣದಲ್ಲಿ ಮದ್ಯಕೊಟ್ಟರೂ ನಿಶೆಯೇರುವುದೇ ಇಲ್ಲ. ಇನ್ನು ಕೆಲವು ಘಟಾನಾನುಘಟಿಗಳಿದ್ದಾರೆ. ಅವರು ಆಲ್ಕೋಹಾಲಿಕ್ ಅಲ್ಲ ನಿಜ; ಆದರೆ 'ಲಹರಿ ಬಂತೆಂದರೆ' ಸಾಕಷ್ಟು ಕುಡಿಯಬಲ್ಲರು. ಅಂಥವರು ಮೂರು ನಾಲ್ಕು ಗ್ಲಾಸುಗಳಷ್ಟು ಕುಡಿದರೂ ಸುತ್ತಲಿದ್ದವರಿಗೆ ಅದರ ಪ್ರಭಾವ ಕೊಂಚವೂ ಕಾಣುವುದಿಲ್ಲ.

ತಾವು ಆಹಾರವಿಲ್ಲದೇ ಇದ್ದೇವು, ಆದರೆ ಮದ್ಯವಿಲ್ಲದೆ ಇರಲಾರೆವು ಎನ್ನುವ ಕುಡುಕರೂ ಇದ್ದಾರೆ. ಅವರು ಹೇಳುವುದೂ ವಸ್ತುತಃ ನಿಜವೇ. ಆಹಾರದ ಬದಲು ಮದ್ಯವನ್ನೇ ಸೇವಿಸುತ್ತಾ ಎಷ್ಟೋ ದಿನ ಅವರು ಬದುಕಬಲ್ಲರು. ಆದರೆ ಹಾಗೆ ಮಾಡುವುದು ಜೀವಿತಾವಧಿಯನ್ನು ಕುಗ್ಗಿಸುತ್ತದೆ ಎನ್ನುವುದನ್ನು ಮರೆಯಕೂಡದು. ಸ್ಥೂಲಕಾಯನಂತೂ ಮದ್ಯಪಾನದಿಂದ ದೂರವಿರುವುದೇ ಒಳ್ಳೆಯದು. ಮದ್ಯಾರ್ಕ ದೇಹದ ತೂಕವನ್ನು ಹೆಚ್ಚಿಸುತ್ತದೆ.

ಶರೀರದ ಗಾತ್ರಕ್ಕೂ ಮದ್ಯ ಸೇವನೆಗೂ ಸಂಬಂಧವಿದೆಯೇ? ಖಂಡಿತವಾಗಿ. ಚಿಕ್ಕ ಗಾತ್ರದ ಶರೀರಕ್ಕಿಂತಲೂ ದೊಡ್ಡ ಗಾತ್ರದ ಶರೀರದಲ್ಲಿ ಪಸರಿಸಲು ಮದ್ಯಾರ್ಕಕ್ಕೆ ಹೆಚ್ಚು ಸಮಯಬೇಕು. ಅಲ್ಲದೆ ತುಲನಾತ್ಮಕವಾಗಿ ದೊಡ್ಡ ಗಾತ್ರದ ಶರೀರದಲ್ಲಿ ನೀರಿನ ಪ್ರಮಾಣ ಹೆಚ್ಚು. ಹೀಗಾಗಿ ಅಲ್ಲಿ ಮದ್ಯಾರ್ಕದ ಸಾಂದ್ರತೆಯ ಪ್ರಮಾಣ ಕಡಿಮೆ. ಆದ್ದರಿಂದ ಕುಬ್ಜರಿಗಿಂತ ಎತ್ತರವಾದವರು, ತೆಳ್ಳನೆಯವರಿಗಿಂತ ದಪ್ಪವಾಗಿರುವವರು ಹೆಚ್ಚು ಪ್ರಮಾಣದಲ್ಲಿ ಮದ್ಯವನ್ನು ತಾಳಿಕೊಳ್ಳಬಲ್ಲರು.

ಮದ್ಯಾರ್ಕ ರಕ್ತ ಪ್ರವಾಹದಲ್ಲಿ ಸೇರಿಕೊಳ್ಳುವುದನ್ನು ಆಹಾರ ಸೇವನೆಯು ನಿಧಾನಿಸುವುದರಿಂದ ಆಹಾರ ಸೇವನೆಯ ನಂತರ ಮದ್ಯವನ್ನು ಸೇವಿಸಿದರೆ ಬೇಗ ನಿಶೆಯೇರುವುದಿಲ್ಲ. ಬೆಣ್ಣೆಯನ್ನು ಸೇವಿಸಿದರೂ ಇದೇ ಪರಿಣಾಮ. ಆದರೆ ಅದರಲ್ಲಿ ಕೊಬ್ಬಿನ ಅಂಶ ಹೆಚ್ಚಾಗಿರುವುದರಿಂದ ಪಶ್ಚಿಮದ ದೇಶಗಳಲ್ಲಿ ಸಂಜೆ ಪಾರ್ಟಿಗಳಲ್ಲಿ ಭಾಗವಹಿಸುವವರು ಇದೇ ಪರಿಣಾಮ ಕೊಡುವ ಆಲಿವ್ ಎಣ್ಣೆಯನ್ನು ಕುಡಿದ ನಂತರವೇ ಪಾರ್ಟಿಗೆ ಹೊರಡುವುದು ಹೆಚ್ಚು. ಅವರ ಪಾಲಿಗೆ ಆ ಎಣ್ಣೆ ನಿಶೆಯ ವಿರುದ್ಧ ಇನ್‌ಶೂರೆನ್ಸ್ ಇದ್ದ ಹಾಗೆ. ಇನ್ನು ಕೆಲವರು ಇದೇ ಪರಿಣಾಮಕ್ಕಾಗಿ ಒಂದೆರಡು ಆಸ್ಪಿರಿನ್ನನ್ನೂ ಸಾಕಷ್ಟು ನೀರನ್ನೂ ಕುಡಿದು ಪಾರ್ಟಿಗೆ ಹೋಗುವುದುಂಟು.

ಇದೆಲ್ಲ ಕುಡುಕರ ಬಗೆಗಾಯಿತು. ಮದ್ಯಪಾನಾಸಕ್ತರಲ್ಲಿ ಇನ್ನೂ ಒಂದು ತರದ ಜನರಿದ್ದಾರೆ. ಅವರು ಕುಡುಕರಲ್ಲ ನಿಜ, ಆದರೆ ಒಮ್ಮೊಂದೊಮ್ಮೆಲೆ ಕುಡಿತದ ಚಪಲ ಹೆಚ್ಚುತ್ತದೆ. ಅದಿಲ್ಲದೆ ಇರಲು ಸಾಧ್ಯವೇ ಇಲ್ಲ ಎನ್ನುವಂತಾಗುತ್ತದೆ. ಆಗ ಅವರು ಚಪಲವನ್ನು ತಾಳಿಕೊಳ್ಳಲಾರದೆ ಸ್ವಲ್ಪ ಸಮಯದಲ್ಲೇ ಬಹಳಷ್ಟು ಕುಡಿಯುತ್ತಾರೆ. ಅನಂತರ ಎಷ್ಟೋ ತಿಂಗಳವರೆಗೆ ಮದ್ಯದ ಸನಿಹಕ್ಕೆ ಸಹ ಹೋಗುವುದಿಲ್ಲ. ಇಂಥವರಿಗೂ ಕೆಡುಕೆನ್ನುವುದು ಕಟ್ಟಿಟ್ಟದ್ದೆ. ಆ 'ಎರಡು ಬಾಟಲಿಯ ಮನುಷ್ಯ'ನಿಗಿರುವಷ್ಟು ಅದು ತೀವ್ರತರವಾಗಿರುವುದಿಲ್ಲ. ಆದರೆ ಅವರ ಪಾಲಿಗೆ ಭವಿಷ್ಯವೆನ್ನುವುದೇ ಹೆಚ್ಚು ಉಳಿದಿರುವುದಿಲ್ಲವಾದ್ದರಿಂದ ಅವರು ಭವಿಷ್ಯತ್ತಿನತ್ತ ಆಶಾದಾಯಕವಾಗಿ ನೋಡುವಂತೆಯೇ ಇಲ್ಲ. ಕಾಲಾಂತರದಲ್ಲಿ ಯಕೃತ್ತಿನ ಅಂಗಾಂಶವೆಲ್ಲ ಕೆಟ್ಟುಹೋಗಿ ಸಿರ್ರೋಸಿಸ್ ಉಂಟಾಗುತ್ತದೆ. ಅದರಿಂದ ಪಾರಾದವರು ಇಲ್ಲಿಯವರೆಗೆ ಒಬ್ಬರೂ ಇಲ್ಲ.

(ಆಧಾರ: 'ಸಂಡೆ ಡಿಸ್‌ಪ್ಯಾಚ್'ನಲ್ಲಿ ರೋನಾಲ್ಡ್ ಮ್ಯಾಕ್ಸ್‌ವೆಲ್ಲರ ಲೇಖನ)



ಒಂದು ಮೂಲೆಯಲ್ಲಿ
ಒಬ್ಬ ಮನುಷ್ಯನ ಅಸ್ಥಿ ಪಂಜರದ
ಭಾಗಗಳು ಕಳಚಿ ಬಿದ್ದಿದ್ದವು
ಪಕ್ಕದಲ್ಲೊಂದು ಕಠಾರಿಯಿತ್ತು!

- ತೋಷಿನಕೆರೆ ಸೀತಾರಾಮಜೋಯ್ಸ

ಇಂದಿಗೆ ಅಂದರೆ ಕ್ರಿಸ್ತಶಕ ೧೯೯೬ನೇ ವರ್ಷಕ್ಕೆ ಎಪ್ಪತ್ತಾರು ವರ್ಷಗಳ ಹಿಂದೆ ನಾವು ವಿದ್ಯಾಭ್ಯಾಸ ಮಾಡಿದ್ದ ಸ್ಕೂಲಿನ ನೆನಪು ಇನ್ನೂ ನಮ್ಮ ಮನಸ್ಸಿನಲ್ಲಿ ಹಸುರಾಗಿ ಉಳಿದಿದೆ. ಆಗ ಒಡನಾಡಿಗಳಾಗಿದ್ದ ಗೆಳೆಯರು ಒಬ್ಬರನ್ನೊಬ್ಬರು ಸಂಧಿಸಿದಾಗ ನಮ್ಮ ವಿದ್ಯಾರ್ಥಿ ಜೀವನದಲ್ಲಿ ನಡೆದು ಹೋದ ಹಳೆಯ ಘಟನೆಗಳ ಮಾತುಗಳು ಬಂದೇ ಬರುತ್ತವೆ. ನಮ್ಮ ಸ್ಕೂಲು ನಮಗೆ ಸರಸ್ವತಿಯ ದೇವಾಲಯವಾಗಿತ್ತು. ಬಹಳ ವಿಶಾಲ ವಾದ ಸ್ವಚ್ಛ ಬಯಲಿನ ಮಧ್ಯೆ ಈಗಲೂ ನಿಂತಿರುವ ಸ್ಕೂಲು ಮನೆಯನ್ನು ಕಂಡಾಗ ಹಿರಿಯರಾದ ಅಜ್ಜ-ಅಜ್ಜಿಯರ ಮುಂದೆ ತಲೆಬಾಗಿ ವಂದಿಸದೆ ಯಾರೂ ಇರಲಾರೆವು. ಸ್ಕೂಲಿಗೆ ಕಾಣಿಸುವಷ್ಟು ದೂರದಲ್ಲಿ ಅಲ್ಲೊಂದು ಇಲ್ಲೊಂದು ಮಾತ್ರ ಮನೆಗಳಿದ್ದವು. ಸ್ಕೂಲಿಗೆ ಪಕ್ಕದಲ್ಲಿ ಒಂದು ವಿದ್ಯಾರ್ಥಿನಿಲಯ (ಹಾಸ್ಟೆಲ್) ಇದೆ. ಈ ನಿಲಯದಲ್ಲಿ ದೂರ ದೂರದಿಂದ ಬಂದಿದ್ದ ವಿದ್ಯಾರ್ಥಿಗಳಿಗೆ ಒಳ್ಳೆಯ ಆಶ್ರಮವೇ ಅದಾಗಿತ್ತು.

ಆಗ ನಮ್ಮ ಜಿಲ್ಲೆಗೆಲ್ಲ ಇದ್ದುದು ಒಂದೇ ಒಂದು ಹೈಸ್ಕೂಲು. ಈಗಿನಂತೆ ನೀರಿನ ನಲ್ಲಿಗಳಾಗಲೀ

ವಿದ್ಯುದ್ದೀಪಗಳಾಗಲೀ ಇರಲಿಲ್ಲ. ಜೀವನವು ಶಾಂತವಾಗಿ ಹರಿಯುತ್ತಿತ್ತು. ಸ್ಕೂಲಿನ ನೆನಪಾದಾಗ ಪೂರ್ವದ ಗುರುಕುಲದ ನೆನಪಾಗುತ್ತದೆ. ನಮ್ಮ ಹೆಡ್ಮಾಸ್ಟರು ಹೆಸರಾಂತ ವಿದ್ವಾಂಸರು; ಋಷಿಗಳ ಗುಂಪಿಗೆ ಸೇರಿದವರು. ಅವರು ವಾಸವಾಗಿದ್ದ ಸ್ಥಳ ಒಂದು ತೋಪಿನ ಮಧ್ಯೆ ಇತ್ತು. ಹೆಡ್ಮಾಸ್ಟರ ಮನೆ ಎಂದರೆ 'ಭೋಜರಾಜನ ಆಸ್ಥಾನ' ಎಂದು ಹಿರಿಯರು ಅನ್ನುತ್ತಿದ್ದರೆ, ಹುಡುಗರು ಅವರಿದ್ದ ಮನೆಯನ್ನು 'ಕೋಟಿ ತೋಪಿನ ಮನೆ' ಎಂದು ಹೆಸರಿಸಿದ್ದರು. ಮೇಷ್ಟ್ರುಗಳೂ ಹಾಗೆ,- ಒಬ್ಬರು ಸಾಹಿತ್ಯದಲ್ಲಿ, ಇನ್ನೊಬ್ಬರು ಕಲೆಯಲ್ಲಿ, ಮತ್ತೊಬ್ಬರು ಆಟದಲ್ಲಿ ಮಗದೊಬ್ಬರು ಪಾಠಪ್ರವಚನದಲ್ಲಿ ನಿಸ್ಸೀಮರಾಗಿದ್ದರು. ಆದುದರಿಂದ ದೇಶದವರಿಗೆಲ್ಲ ನಮ್ಮ ಶಾಲೆಯ ಮೇಲೆ ಒಂದು ಕಣ್ಣಿತ್ತು. ಹೆಡ್ಮಾಸ್ಟರಿಗೆ ಅವರ ವೀಣೆಯೇ ಅವರ ಗೆಳತಿಯಾಗಿತ್ತು.

ಗಣೇಶನ ಹಬ್ಬವನ್ನು ಸ್ಕೂಲಿನಲ್ಲಿ ಆಚರಿಸುತ್ತಿದ್ದೆವು. ಗಣೇಶನ ಪ್ರತಿಮೆಯನ್ನು ಕಲಾವಂತರಾದ ಅಧ್ಯಾಪಕರೊಬ್ಬರು ತಯಾರಿಸುತ್ತಿದ್ದರು. ಹಬ್ಬದಾಚರಣೆ ಒಂದು ವಾರವಿಡಿ ನಡೆಯುತ್ತಿತ್ತು. ಪ್ರತಿಭಾಶಾಲಿಗಳಾದ ವಿದ್ಯಾರ್ಥಿಗಳು ಅಲ್ಲಿ ಸಂಗೀತ, ಪಿಟೀಲು ವಾದ್ಯ; ಮೃದಂಗ ಮತ್ತು ಕೊಳಲು ಅಭ್ಯಾಸಿಗಳಾಗಿದ್ದವರು ತಮ್ಮ ತಮ್ಮ ವಿದ್ಯೆಯನ್ನು ಪ್ರದರ್ಶಿಸುತ್ತಿದ್ದರು; ಜೊತೆಗೆ ಆಟ-ಪಾಠ, ನಾಟಕ, ಹಾಸ್ಯ ಕುಸ್ತಿ ಯೋಗಾಸನ ಮತ್ತು ಅಡುಗೆ ಇತ್ಯಾದಿ ಮನರಂಜನೆಯ ಕಾರ್ಯಕ್ರಮಗಳನ್ನೂ ಸೇರಿಸುತ್ತಿದ್ದರು. ಪಟ್ಟಣದವರಾದ ರಸಿಕ ಸ್ತ್ರೀ-ಪುರುಷರು ಮತ್ತು ಹಳೆಯ ವಿದ್ಯಾರ್ಥಿಗಳು ಸಹಕರಿಸುತ್ತಿದ್ದರು.

ಸ್ಕೂಲಿನದೇ ಆದ ಒಂದು ಇಂಗ್ಲಿಷ್-ಕನ್ನಡ ಮಾಸಪತ್ರಿಕೆಯನ್ನು ಅಧ್ಯಾಪಕರರೂ, ವಿದ್ಯಾರ್ಥಿಗಳೂ ಸೇರಿ ನಡೆಸಿಕೊಂಡು ಬರುವ ಏರ್ಪಾಡಿತ್ತು. ಅದಕ್ಕೆ ಅಧ್ಯಾಪಕರೂ, ವಿದ್ಯಾರ್ಥಿಗಳೂ ಲೇಖನಗಳನ್ನು ಬರೆಯುತ್ತಿದ್ದರು. ಎಲ್ಲ ವಿದ್ಯಾರ್ಥಿಗಳೂ ಇತರರೂ ಪತ್ರಿಕೆಯು ಸಕಾಲದಲ್ಲಿ ಹೊರಬರಲು ಸಹಕರಿಸುತ್ತಿದ್ದರು.

ಅಲ್ಲಿನ ಸ್ಕೌಟುಗಳು ಹೆಸರುವಾಸಿಯಾಗಿದ್ದರು. ಪ್ರತಿವರ್ಷ ಜನವರಿ ತಿಂಗಳಿನಲ್ಲಿ ವನವಿಹಾರಕ್ಕಾಗಿ ಹೋಗುವ ವಾಡಿಕೆ ನಡೆದು ಬಂದಿತ್ತು. ಅವರು ಅಪರೂಪದ ವಸ್ತುಗಳನ್ನು ಸಂಗ್ರಹಿಸಿ ಸ್ಕೂಲಿನಲ್ಲಿ ಒಂದು 'ಮ್ಯೂಜಿಯಮ್'ತೆರೆದಿದ್ದರು. ಮಾಮೂಲಿನಂತೆ ಸ್ಕೌಟು ಮಾಸ್ಟರು ಆ ವರ್ಷವೂ ದುರ್ಗಕ್ಕೆ ಹೋಗಿ ಬರಲು ಹೆಡ್ಮಾಸ್ಟರ ಅನುಮತಿಯನ್ನು ಪಡೆದರು. ಉತ್ಸಾಹಿ ತರುಣರ ದೊಡ್ಡ ಪಟಾಲಂ ಸೇರಿ ಚರ್ಚಿಸಿದರು. ಅದಕ್ಕಾಗಿ ದಿನವನ್ನೂ ಗೊತ್ತುಪಡಿಸಲಾಯಿತು.

ಶನಿವಾರ ರಾತ್ರಿಯೇ ಬಸ್ಸು ಸಿದ್ಧವಾಗಿ ನಿಂತಿತ್ತು. ಶಂಕರ, ನರಸಪ್ಪ ರಾಮಯ್ಯ ರಂಗನಾಥ ಮೊದಲಾದ ಪ್ರಮುಖ ಸ್ಕೌಟುಗಳು ಬಂದು ಸೇರಿದರು. ಶಂಕರ ಗದುಗಿನ ಮಹಾಭಾರತವನ್ನೂ ನರಸಪ್ಪ ಮಚ್ಚು ಕೊಡಲಿ, ಹಾರೆ ಇತ್ಯಾದಿ ಆಯುಧಗಳನ್ನೂ ಜೊತೆಗೆ ರಂಗನಾಥ ತನ್ನ ಕೋವಿಯನ್ನೂ ತಂದಿದ್ದ. ಗುಂಡಣ್ಣ ತನ್ನ ನಾಯಿಯನ್ನೂ ಕರೆದುಕೊಂಡು ಬಂದಿದ್ದ. ಬಸ್ಸು ಹೊರಡುವುದಕ್ಕೆ ಮೊದಲು ಸ್ಕೌಟ್ ಮಾಸ್ಟರು ಎಲ್ಲರ ಗಂಟುಗಳನ್ನೂ ಬಿಚ್ಚಿಸಿ ಪರೀಕ್ಷಿಸಿದರು. ಆಯುಧಗಳನ್ನು ತಂದಿದ್ದವರನ್ನು ಆಕ್ಷೇಪಿಸಿದರು; ಅವರಾರೂ ಬೇಟೆಯ ಆಟವನ್ನು ಆಡಬಾರದೆಂದು ಎಚ್ಚರಿಸಿದರು; ಆದರೂ ಹುಡುಗರೆಲ್ಲ ಸೇರಿ ಏನೋ ಪಿತೂರಿ ನಡೆಸಬಹುದೆಂದು ಶಂಕಿಸಿದರು. ಬಸ್ಸು ಸೂರ್ಯೋದಯಕ್ಕೆ ಸರಿಯಾಗಿ ದುರ್ಗದ ದಾರಿ ಹಿಡಿದಿತ್ತು. "ಆಯುಧಗಳನ್ನು ತಂದಿರುವುದೇಕೆ?"ಎಂದು ಮಾಸ್ಟರು ಪದೇ ಪದೇ ಪ್ರಶ್ನಿಸುತ್ತಿದ್ದರು. ಆದರೆ ಎಲ್ಲರೂ ಮೌನವಾಗಿದ್ದರು. ಅವರ ಅಭಿಪ್ರಾಯದಲ್ಲಿ ದಂಡ ಮತ್ತು ಹಗ್ಗಗಳೇ ಸಾಕಾಗಿದ್ದವು. ಬಸ್ಸಿನ ಮೇಲೆ ಮೈಸೂರಿನ ಗಂಡಭೇರುಂಡದ ಧ್ವಜ ಹಾರಾಡುತ್ತಿತ್ತು. ಬಸ್ಸು ಹೊರಟಾಗ, "ಭಾರತ ಮಾತಾ ಕಿ ಜೈ", "ಕರ್ನಾಟಕ ಮಾತಾಕಿ ಜೈ" ಎಂದು ಒಕ್ಕೊರಲಿನಿಂದ ಘೋಷಿಸಿದರು.

ದಾರಿಯುದ್ದಕ್ಕೂ ಮಾಸ್ಟರು ಯೂರೋಪಿನಲ್ಲಿ ನಡೆದ ಮಹಾ ಯುದ್ಧದ ಕತೆಗಳನ್ನು ಹೇಳಿದರು. ಅವರೂ ಯುದ್ಧದಲ್ಲಿ ಭಾಗಿಗಳಾಗಿದ್ದರೆಂಬುದು ಎಲ್ಲರಿಗೂ ಗೊತ್ತಿತ್ತು. ಆ ಮೇಲೆ ದಕ್ಷಿಣ ಆಫ್ರಿಕದಲ್ಲಿ ಮಹಾತ್ಮಾಗಾಂಧಿಯವರು ನಡೆಸಿದ ಅಹಿಂಸಾ ಸಮರವನ್ನು ವಿವರಿಸಿದರು. ಗಾಂಧೀಜಿ ಅವರ ಬಗ್ಗೆ ಸತ್ಯಾಗ್ರಹದ ತತ್ವಗಳನ್ನು ವಿವರಿಸುತ್ತಿದ್ದಾಗ ಗುಂಡಣ್ಣನಿಗೆ ಅದು ಸರಿ ಎನಿಸಲಿಲ್ಲ. ಅವನು ೧೮೫೭ರಲ್ಲಿ

ನಡೆದ ಸಂಗ್ರಾಮ (ನಾನಾರಾಯರ ದಂಗೆ) ವೊಂದೇ ಮಾರ್ಗವೆಂದು ವಾದಿಸಿದ. ಅಂದಿನಿಂದ ಅವನಿಗೆ "ತರ್ಕದಗುಂಡ" ಎಂಬ ಬಿರುದು ಸ್ಕೂಲಿನಲ್ಲಿ ಹಬ್ಬಿತು. ಅವನು "ಬೇಟೆಯಾಡುವುದು, ಸ್ಕೌಟುಗಳ ಆಟವಲ್ಲವೆ?" ಎಂದು ಪ್ರಶ್ನಿಸಿದ.

"ಅಹಿಂಸೆಯೇ ಸ್ಕೌಟುಗಳಿಗೆ ಧರ್ಮ, ಹಿಂಸೆಯಿಂದ ಹಿಂಸೆಯೇ ಪ್ರಾಪ್ತವಾಗುವುದರಿಂದ ಅದರಿಂದ ಪರೋಪಕಾರ ಸಾಧ್ಯವಾಗಲಾರದು. ಸಭ್ಯತೆಯ ವರ್ತನೆಯಿಂದ ಹಿಂಸಾವಾದಿಗಳನ್ನು ಗೆಲ್ಲಬಹುದು. ಇದೇ ಗಾಂಧೀವಾದ. ಸಭ್ಯತೆಯಲ್ಲಿ ಸತ್ಯವಿದೆ, ಸತ್ಯದಲ್ಲಿ ಸಭ್ಯತೆಯಿದೆ" ಎಂದರು ಮಾಸ್ಟರು.

"ಹಾಗಾದರೆ ಗಾಂಧೀಜಿ ಒಳ್ಳೆಯ ಸ್ಕೌಟಾ?" ನರಸಪ್ಪ ಪ್ರಶ್ನಿಸಿದ.

"ಹೌದು" ಎಂದರು ಮಾಸ್ಟರು.

"ಬಿ.ಪಿ. ಅವರು (ಬೇಡ್ ಪಾವಲ್) ಒಳ್ಳೇ ಸ್ಕೌಟು ಅಲ್ಲವೆ"?

"ಹೌದು," ಎಂದರು ಮಾಸ್ಟರು.

ಎಲ್ಲರೂ ಗೊಳ್ಳೆಂದು ನಕ್ಕರು. ಗುಂಡನಿಗೆ ಈ ಮಾತು ಹಿಡಿಸಲೇ ಇಲ್ಲ.

"ಸ್ಕೌಟುಗಳು ಮೂಕ ಪ್ರಾಣಿಗಳ ಸ್ನೇಹಿತರಲ್ಲವೆ?" ಗುಂಡ ಕೇಳಿದ.

"ಹೌದು."

"ಹಾಗಾದರೆ ಸೌಮ್ಯಪ್ರಾಣಿಗಳನ್ನೇ ತಿಂದು ಜೀವಿಸುವ ಹುಲಿಯನ್ನು ಬೇಟೆಯಾಡುವುದು ಪ್ರಾಣದಯೆಯಲ್ಲವೆ?" ಎಂಬ ತರ್ಕ ಮುಂದಿಟ್ಟ ಗುಂಡ.

"ಹೆಡ್ಮಾಸ್ಟರನ್ನು ಕೇಳಬೇಕು," ಅಂದರು.


ನಕ್ಕು ನಕ್ಕು ಎಲ್ಲರಿಗೂ ಹೊಟ್ಟೆ ಹುಣ್ಣಾಯಿತು. ಗುಂಡ ಮತ್ತೆ ಪ್ರಶ್ನಿಸಿದ.

"ಕುಸ್ತಿ, ಮಾರಾಮಾರಿ, ಪೈಲ್‌ವಾನ್‌ಗಿರಿ ಇಲ್ಲದಿದ್ದರೆ ಅವನೆಂಥ ಸ್ಕೌಟು!"

"ಅದೂ ಧರ್ಮವೆ!"

"ಸ್ಕೌಟುಗಳು ಧೀರರಾಗಬೇಕು, ಹಿಂದಿನ ಕಾಲದ ರಜಪೂತರಂಥ ಧೀರರಾಗಬೇಕು."

ಮಾಸ್ಟರು ಮುಂದೆ ಮಾತನಾಡಲಿಲ್ಲ. ನಗುವು



ಅವರ ದೇಹವನ್ನೆಲ್ಲ ಆವರಿಸಿತ್ತು. ಅನಂತರ ನಾನಾ ರಾಯನ ದಂಗೆ, ಗುಡಾರದ ದಂಗೆ ಇತ್ಯಾದಿ ಚರಿತ್ರೆಯ ಕಡೆಗೆ ಮಾತು ಹೊರಳಿತು. ಅಷ್ಟುಹೊತ್ತಿಗೆ ದುರ್ಗದ ಹಾಳು ಬಿದ್ದ ಕೋಟೆಯ ಗೋಡೆಗಳು ಎದೆಯೊಡೆಯುವಂಥ ದೃಶ್ಯಗಳು ದೂರದಲ್ಲಿ ಕಾಣಿಸಿದವು. ಅರಣ್ಯವೆಲ್ಲ ನಿಶ್ಶಬ್ದವಾಗಿತ್ತು. ಬೆಟ್ಟದ ತಪ್ಪಲಿನಲ್ಲಿ ಬಸ್ಸು ನಿಂತಿತು. ಮಾಸ್ಟರು ತುತ್ತೂರಿ ಊದಿದರು. ಅದು ಶಿಸ್ತನ್ನು ಕೇಳುವ ಸುಗ್ರೀವಾಜ್ಞೆ! ಎಲ್ಲರೂ ಅವರವರ ಮೂಟೆಗಳನ್ನು ಹೊತ್ತುಕೊಂಡು ಹೊರಟರು. ಗುಂಡನ ನಾಯಿ ಸ್ಕೌಟ್ ಸೇನೆಯ ಮುಂದಾಳತ್ವವನ್ನು ವಹಿಸಿಕೊಂಡಿತ್ತು.

ಅಡುಗೆಯವರು, ಅವರ ಆಳುಗಳು ಕಲ್ಲು ಮಂಟಪಗಳನ್ನು ಚೊಕ್ಕಟಗೊಳಿಸಿ ಅವರವರ ಕರ್ತವ್ಯಗಳಲ್ಲಿ ತೊಡಗಿದ್ದರು. ಅವರೆಲ್ಲ ಹಿಂದಿನ ದಿನವೇ ದುರ್ಗವನ್ನು ತಲುಪಿದ್ದರು. ಮಾಸ್ಟರು ಪಾಳೆಯಗಾರರ ಚರಿತ್ರೆಯನ್ನು ವಿವರಿಸಿದರು. ದುರ್ಗದ ದೇವಸ್ಥಾನದಲ್ಲಿ ಎಲ್ಲಕ್ಕೂ ಮೊದಲು ದೇವರ ದರ್ಶನ ಮಾಡಿ ಪ್ರಾರ್ಥನೆ ಸಲ್ಲಿಸಿದರು. ಒಂದು ಕಾಲದಲ್ಲಿ ದುರ್ಗವು ಒಬ್ಬ ದರೋಡೆಕೋರನ ಕೈ ಸೇರಿತ್ತು. ಮೈಸೂರು ರಾಜರು ಅದನ್ನು ಬಿಡುಗಡೆ ಮಾಡಿದರು. ಆ ದರೋಡೆಕೋರ ಆನೆಯ ಮೇಲೆ ಕುಳಿತು ದುರ್ಗದ ತುದಿಯಿಂದ ಬಂಡೆಯ ಮೇಲಿನಿಂದ ಇಳಿಯುವಾಗ ಆನೆ ಜಾರಿ ಬಿದ್ದಾಗ ಆ ದರೋಡೆ ಕೋರ ಮೃತನಾದನಂತೆ. ಈಗಲೂ ಆ ಬಂಡೆಯನ್ನು "ಆನೆ ಜಾರಿದ ಬಂಡೆ" ಎನ್ನುವರು. ಎದುರಿನ ಗುಡ್ಡವನ್ನು ಪಿರಂಗಿ ಗುಡ್ಡ ಎನ್ನುವರು. ಈ ಗುಡ್ಡದಿಂದ ಮೈಸೂರು ಸೈನ್ಯ ದಾಳಿಮಾಡಿತಂತೆ. ಈ ಕತೆಯನ್ನು ಎಲ್ಲರೂ ಬಾಯಿಬಿಟ್ಟುಕೊಂಡು ಕೇಳಿದರು. ಆನಂತರ ಕೋಟೆ ಕೊತ್ತಲವನ್ನು ನೋಡಲು ಹೊರಟರು. ಸ್ಕೌಟ್ ಮೇಷ್ಟು ದುರ್ಗ ನಿರ್ಮಾಣವಾಗಿರುವ ವಿನ್ಯಾಸವನ್ನು ತೋರಿಸುತ್ತ ಸುತ್ತಿಸುತ್ತಿ ಬಂದರು. ಕೆಲವರಿಗೆ ಶಾಲೆಯ ವಸ್ತುಪ್ರದರ್ಶನ ಭಾಗಕ್ಕೆ ಹಳೆಯಕಾಲದ ನಾಣ್ಯಗಳೋ ಆಯುಧಗಳೋ ಸಿಕ್ಕಬಹುದೆಂಬ ಆಸೆಯಿಂದ ಸಂದುಗೊಂದಿನ ಗುಹೆಗಳನ್ನೆಲ್ಲ ಶೋಧಿಸುತ್ತಿದ್ದರು. ಅಷ್ಟರಲ್ಲಿ ತುತ್ತೂರಿ ಶಬ್ದದ ಸುಗ್ರೀವಾಜ್ಞೆ ಕೇಳಿಸಿತು. ಒಬ್ಬೊಬ್ಬರಾಗಿ ಎಲ್ಲರೂ ಗುಡಾರದ ಬಳಿ ಸೇರಿದರು. ಈ ವಿಚಾರದಲ್ಲಿ ಹೆಡ್ಮಾಸ್ಟರಿಗೆ ವರದಿ ಮಾಡಬೇಕಾಗಿದ್ದುದರಿಂದ ಮೇಷ್ಟು ಎಲ್ಲರೂ ಸೇರಿದರೆನ್ನುವುದನ್ನು ಖಾತ್ರಿ ಮಾಡಿಕೊಳ್ಳುವುದಕ್ಕಾಗಿ ತಲೆಗಳನ್ನು ಎಣಿಸಿದರು.

ಊಟವಾದ ಮೇಲೆ ಎಲ್ಲರೂ ಗುಡಾರದ ನೆರಳಿನಲ್ಲಿ ಕುಳಿತು ವಿಶ್ರಮಿಸಿಕೊಳ್ಳುತ್ತಿದ್ದರು. ಶಂಕರ ಮಹಾಭಾರತದಲ್ಲಿ ಬರುವ ರಾಜಕುಮಾರರ ಶಸ್ತ್ರಾಭ್ಯಾಸದ ಭಾಗವನ್ನು ಓದುತ್ತಿದ್ದ. ಎಲ್ಲರೂ ಕುತೂಹಲದಿಂದ ಕೇಳುತ್ತಿದ್ದರು. ಅವನ ಕಂಠ ವೀರನಾದವಾಗಿತ್ತು. ಗುಂಡ "ಕರ್ಣಾರ್ಜುನರು ಒಳ್ಳೆಯ ಸ್ಕೌಟುಗಳು" ಎಂದು ವ್ಯಾಖ್ಯಾನ ಮಾಡಿದ ಮತ್ತು ಅವರಿಬ್ಬರನ್ನು ಸೋಹ್ರಾಬ್-ರುಸ್ತುಂರಿಗೆ ಹೋಲಿಸಿದ. ಮಾಸ್ಟರೇ ಎರಡು ಪುರಂದರದಾಸರ ಕೀರ್ತನೆಗಳನ್ನು ಹಾಡಿದರು. ಎಲ್ಲರೂ ಅವರವರ ದಾರಿಯಲ್ಲಿ ಆಲೋಚಿಸುತ್ತಿದ್ದರು. ಗುಂಡ ತಲೆದೂಗುತ್ತ ಇದ್ದವನು "ಪುರಂದರ ದಾಸರು ಒಳ್ಳೆಯ ಸ್ಕೌಟು" ಅಂದ.


"ಅವರೂ ರುಸ್ತಮನಂತೆ ಇದ್ದರು" ಅಂದ ನರಸಪ್ಪ ಮೇಷ್ಟರಿಗೆ ಇವರ ಸಹವಾಸ ಸಾಕೆನ್ನಿಸಿತು! ಮತ್ತೆ ತುತ್ತೂರಿ ನಾದ ಮೊಳಗಿತು.

ಪಾಳೆಯಗಾರರ ಗತ ವೈಭವವನ್ನು ನೋಡಲು ಎಲ್ಲರೂ ಎದ್ದು ನಿಂತರು. ಅವರ ಗಮನವೆಲ್ಲ ಮೇಲಿನ ಬೆಟ್ಟದ ಕಡೆಗೇ ಇತ್ತು. ಎಲ್ಲಕ್ಕೂ ಉತ್ಸಾಹದಿಂದ ಬೆಟ್ಟವನ್ನೇರಿದರು. ಅರಣ್ಯವು ಭೀಕರವಾಗಿ ಕಾಣಿಸಿತು. ಕೆಲವರು ಇಲ್ಲಿ ಕಾಡು ಮೃಗಗಳನ್ನು ನೋಡುವ ಕನಸು ಕಾಣುತ್ತಿದ್ದರು.

ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ ಕೋಟೆಯ ಮಹಾದ್ವಾರ ಸಿಕ್ಕಿತು. ಅವರು ಕೋಟೆಯ ಮುರುಕು ಗೋಡೆಗಳ ಮೇಲೆ ದುರ್ಗಕ್ಕೆ ಲಗ್ಗೆ ಹತ್ತಿದರು. ದೇವಸ್ಥಾನದ ಬಾಗಿಲು ಮುಚ್ಚಿದ್ದರಿಂದ ಅದರ ಪ್ರದಕ್ಷಿಣೆ ಹಾಕಿ ಮುಂದೆ ನಡೆದರು. ಬೆಟ್ಟದ ನೆತ್ತಿಯ ಮೇಲಿಂದ ಸುತ್ತಮುತ್ತಣ ಪರಿಸರವನ್ನು ನೋಡಿದರು. ಅಲ್ಲಿ ಅರಮನೆ, ಉಗ್ರಾಣ, ಖಜಾನೆ, ಮದ್ದಿನ ಮನೆಗಳಿದ್ದ ಸ್ಥಳಗಳನ್ನು ಒಳಹೊಕ್ಕು ಹುಡುಕಿದರು. ಗುಂಡ ದುರ್ಬೀನನ್ನು ಖಜಾನೆಯಿದ್ದ ಕಡೆಗೆ ತಿರುಗಿಸಿದ. ಮೇಷ್ಟು ಗುಪ್ತ ಮಾರ್ಗಗಳನ್ನು ತೋರಿಸಿದರು. ಅಲ್ಲಿಂದ ತಲೆಮರೆಸಿಕೊಂಡು ಹೋಗಲು ಮಾಡಿದ್ದ ಕಿರಿದಾದ ಮೆಟ್ಟಿಲುಗಳನ್ನು ಕಂಡರು. ಶಂಕರ ಫೋಟೋ

ತೆಗೆಯುತ್ತಿದ್ದ. ಅಷ್ಟರಲ್ಲಿ ಯಾರೋ ಕೋಟೆಯ ಗೋಡೆಯ ಮೇಲೆ ಬಾವುಟ ಹಾರಿಸಿದ್ದರು. ಆಯುಧಗಳನ್ನು ಹೊತ್ತು ನರಸಪ್ಪ ತಾನೊಬ್ಬನೇ ಗಿಡಗಳ ಪೊದೆಯನ್ನು ಕತ್ತರಿಸಿ ಏನನ್ನೋ ಹುಡುಕುತ್ತಿದ್ದ. ಬಂಡೆಯ ತುದಿಯಲ್ಲಿ ನಿಂದು ಕೆಳಕ್ಕೆ ನೋಡಿದರೆ ಎದೆ 'ಢಡ್ ಢಡ್' ಎಂದು ಹೊಡೆದುಕೊಳ್ಳುವಂತಿತ್ತು. ಶಂಕರ "ಇಲ್ಲಿ ತಾಮ್ರವನ್ನು ಬಂಗಾರವನ್ನಾಗಿ ಪರಿವರ್ತಿಸುವ ಮೂಲಿಕೆಗಳಿವೆಯಂತೆ" ಎಂದು ಹೇಳಿದ. ಬಿದಿರು ಮೆಳೆಗಳಿರುವ ಕಡೆ ಬಿರುಗಾಳಿ ಬೀಸಿದಾಗ ಒಂದು ಮಧುರ ನಾದವೇ ಕೇಳಿಸುತ್ತಿತ್ತು. ರಂಗನಾಥ-ಶಂಕರರಿಬ್ಬರೂ ಅತ್ಯಂತ ಎತ್ತರದಲ್ಲಿದ್ದ ಬಂಡೆಯನ್ನು ಸಾಹಸದಿಂದ ಅಡರಿ, ತಿಳಿನೀರಿನ ಝರಿಯನ್ನು ಅದರ ಸುತ್ತಲೂ ಹಬ್ಬದ ಬಿಕ್ಕಟ್ಟಾದ ವನದ ಸೊಬಗನ್ನೂ ನೋಡಿದರು. ನರಸಪ್ಪ ಹುಡುಕುತ್ತಿದ್ದ ನೆಲಮನೆಯ ಗುರುತು ಸಿಕ್ಕಿತು. ಅದು ಬಿದ್ದುಹೋದ ಹಳೆಯ ಕಟ್ಟಡದ ಅಡಿಪಾಯದ ಕಲ್ಲು ಗೋಡೆಯಂತೆ ಕಂಡಿತು. ಆದರೆ ಸೂಕ್ಷ್ಮವಾಗಿ ನೋಡಿದಾಗ ಅದು ಒಂದು ನೆಲಮನೆಯ ಮಾಳಿಗೆ ಎಂದು ಗೊತ್ತಾಯಿತು. ಅದುವರೆಗೆ ಯಾರೂ ಅದನ್ನು ನೋಡಿರಲಿಲ್ಲ. ನರಸಪ್ಪ ಭೂಗತ ನಿಧಿಯನ್ನು ಕಂಡಂತೆ ಕಿರುಚಿಕೊಂಡ. ರಂಗನಾಥ ಅಲ್ಲಿ ಏನೋ ಅಪಾಯವಿರಬಹುದೆಂದು ಭಾವಿಸಿ ಗಗನಕ್ಕೆ ಕೋವಿಯಿಂದ ಗುಂಡು ಹಾರಿಸಿದ. ಆದರೆ ಕೋವಿಯಿಂದ ಆಗ ಬೇಕಾದ ಪ್ರಯೋಜನವೇನೂ ಇರಲಿಲ್ಲ!

ಆ ನೆಲಮನೆಯ ಮಾಳಿಗೆ ಕುಸಿದು ಹೋಗಿ ಅಲ್ಲೆಲ್ಲ ದಟ್ಟವಾದ ಪೊದೆಗಳಿಂದ ಮುಚ್ಚಲ್ಪಟ್ಟಿತ್ತು. ನರಸಪ್ಪ ಶಿಥಿಲವಾಗಿದ್ದ ಕಲ್ಲು ಗೋಡೆಯನ್ನು ಕೆಡವಿ ಕಿಟಕಿಯೊಂದನ್ನು ಮಾಡಿದ. ಪೊದೆಗಳ ಮಧ್ಯ ಗವಾಕ್ಷಿಗಳಂತಿದ್ದ ತೂತುಗಳಿಂದ ಸಾಕಷ್ಟು ಗಾಳಿ-ಬೆಳಕು ಒಳಬರಲು ಅವಕಾಶವಾಗಿತ್ತು. ಒಳಗೆ ಕತ್ತಲೆ-ಬೆಳಕು ಮಿಶ್ರವಾಗಿದ್ದುದರಿಂದ ಅಲ್ಲಿ ಏನು ಇದೆ ಎನ್ನುವುದನ್ನು ನಿರ್ಧರಿಸಲಾಗದೆ ಟಾರ್ಚ್ ದೀಪದ ಬೆಳಕಿನಲ್ಲಿ ಪರಿಶೀಲಿಸಿ ಅದು ದವಸಧಾನ್ಯಗಳ ಉಗ್ರಾಣವೆಂದು ಊಹಿಸಿದರು. ಆದರೆ ಒಳಗೆ ಎರಡು ಕಲ್ಲಿನ ಕಂಬಗಳಿರುವಂತೆ ಕಂಡುದರಿಂದ ಎಲ್ಲರೂ ಸೇರಿ ನಿರ್ಧರಿಸಲು ಶಿಳ್ಳು ಊದಿದರೂ ಯಾರೊಬ್ಬರ ಸುಳಿವೂ ಸಿಕ್ಕಲಿಲ್ಲ.



ಪತಿಯೆ ಪ್ರತ್ಯಕ್ಷ 'ದೆವ್ವ!'

ಅವರೆಲ್ಲರೂ ಕಳ್ಳದಾರಿಯಿಂದ ಎತ್ತಲೋ ಹೋಗಿದ್ದರು. ಆದುದರಿಂದ ಬಂಡೆಯ ತುದಿಯಲ್ಲಿ ನಿಂತಿದ್ದ ನಾಲ್ಕುಕಾಲಿನ ಮಂಟಪದ ಕಡೆಗೆ ಹೋಗಿ ನೋಡಿದರು. ಮಂಟಪದ ಕಂಬಕ್ಕೆ ಒಂದು ಸರಪಳಿ ಬಿಗಿದಿತ್ತು. ಆ ಸರಪಳಿ ಬಂಡೆಯ ತುದಿಯಲ್ಲಿದ್ದ ಉದ್ದನೆಯ ಶಲಾಕೆಗೆ ನೇತು ಹಾಕಿದ್ದ ಘಂಟೆ ಕಾಣಿಸಿತು. ಸರಪಳಿಯನ್ನು ಬಲವಾಗಿ ಎಳೆದಾಗ ಗಂಟೆ ಬಾರಿಸಿತು. ಗಾಳಿಯು ಜೋರಾಗಿದ್ದುದರಿಂದ ಒಂದು ಕೈಲಿ ಬಲವಾಗಿ ಕಲ್ಲು ಕಂಬವನ್ನು ತಬ್ಬಿಕೊಂಡೇ ಇದ್ದರು. ಇಲ್ಲದಿದ್ದಲ್ಲಿ ಗಾಳಿಜೋರಾದಾಗ ಗಾಳಿಯೊಡನೆ ಕೊಚ್ಚಿ ಪಾತಾಳಕ್ಕೆ ಬೀಳುವ ಅಪಾಯವಿತ್ತು. ಇದು ಬಹುಶಃ ಪಾಳೆಯಗಾರನು ಅಪಾಯ ಒದಗಿದಾಗ ದುರ್ಗದ ಸೈನಿಕರನ್ನು ಎಚ್ಚರಿಸಲು ಮಾಡಿಕೊಂಡಿದ್ದ ಉಪಾಯವೆಂದು ತೋರುತ್ತದೆ.

ದೂರದಲ್ಲಿದ್ದ ಸ್ಕೌಟುಗಳಿಗೆ ಗಂಟೆಯ ನಾದವು ಕೇಳಿಸಿತು. ರಂಗನಾಥ ಒಂದೇ ಸಮನೆ ಗಂಟೆಯನ್ನು ಬಾರಿಸುತ್ತಲೇ ಇದ್ದದ್ದರಿಂದ ಅವರಿಗೆ ಬಹಳ ಆಶ್ಚರ್ಯವೂ ದಿಗಿಲೂ ಆಯಿತು. ಕೋವಿಯಿಂದ ಗುಂಡು ಹಾರಿಸಿದರು. ಅದಕ್ಕೆ ಉತ್ತರವಾಗಿ ಮಾಸ್ಟರ್ ತುತ್ತೂರಿ ಊದುತ್ತಿದ್ದರು. ದೂರಸಾಗಿದ್ದ ಸ್ಕೌಟುಗಳು ಆತುರಾತುರವಾಗಿ ಧಾವಿಸಿದರು.

ಸ್ನೇಹಿತರು ಕಂಡುಹಿಡಿದಿದ್ದ ನೆಲಮನೆಯನ್ನು

ಎಲ್ಲರೂ ಸುತ್ತುವರೆದು ಪರೀಕ್ಷಿಸಿದರು. ಅಷ್ಟೊತ್ತಿಗೆ ಮಾಸ್ತರು ದುರ್ಗದ ದಾರಿಗಳನ್ನು ಕೋಟೆಯ ವ್ಯೂಹ ರಚನೆಯನ್ನೂ ಪರಿಶೀಲಿಸಿ ಕಟ್ಟಡಗಳಿರುವ ಸ್ಥಳ, ದೇವಾಲಯಗಳನ್ನು ತೋರಿಸುವ ಅಂದಾಜು ನಕ್ಷೆಯನ್ನು ತಯಾರಿಸಿದ್ದರು. ಅನಂತರ ನೆಲಮನೆಯೊಳಗೆ ಇಳಿದು ನೋಡುವ ಸಾಹಸದ ಸನ್ನಾಹ ನಡೆಯಿತು. ಸುತ್ತಮುತ್ತಲಿನ ಪೊದೆಗಳಿಂದಾಗಿ ಅಲ್ಲಿ ಸುಳಿದಾಡುವುದೇ ಕಷ್ಟವಾಗಿತ್ತು. ನರಸಪ್ಪನ ಕೊಡಲಿ ಮೊಚ್ಚುಗಳು ಪ್ರಯೋಜನಕ್ಕೆ ಬಂದವು. ರಾವುತರು ಶತ್ರುಗಳನ್ನು ಕತ್ತರಿಸುವಂತೆ ಅರೆ ಕ್ಷಣದಲ್ಲಿ ಪೊದೆಗಳನ್ನು ಕತ್ತರಿಸಿ ಬಯಲು ಮಾಡಿದರು. ನರಸಪ್ಪ ಕೊಡಲಿಯನ್ನು ಎಸೆದು ಹಾರೆಯನ್ನು ತೆಗೆದುಕೊಂಡು ಗವಾಕ್ಷಗಳನ್ನು ದೊಡ್ಡದಾಗಿ ಮಾಡಿ, ಗಾಳಿ ಬೆಳಕು ಧಾರಾಳವಾಗಿ ಸಂಚರಿಸುವಂತೆ ಮಾಡಿದ. ಗವಾಕ್ಷದ ಪಕ್ಕದಲ್ಲಿಯೇ ಒಂದು ಕಲ್ಲುಕಂಬವಿತ್ತು. ಆದುದರಿಂದ ಅದು ಒಂದು ಕಟ್ಟಡವೆಂಬುದು ಖಾತ್ರಿಯಾಯಿತು.

ಧೀರರಾದ ನರಸಪ್ಪ, ರಂಗನಾಥ, ಶಂಕರ ಮೂವರೂ ಟಾರ್ಚುಗಳೊಂದಿಗೆ ನೆಲಮನೆಯೊಳಕ್ಕೆ ಇಳಿದರು. ನೆಲವೆಲ್ಲ ತೇವವಾಗಿ ಒಂದು ಕಡೆ ಕೊಚ್ಚೆಯೂ ಅದರಲ್ಲಿ ನಾನಾ ಜಾತಿಯ ಹುಳುಹುಪ್ಪಟೆಗಳೂ ತುಂಬಿದ್ದವು. ಒಂದು ಮೂಲೆಯಲ್ಲಿ ಒಬ್ಬ ಮನುಷ್ಯನ ಅಸ್ಥಿಪಂಜರದ ಭಾಗಗಳು ಕಳಚಿ ಅಲ್ಲಲ್ಲಿ ಬಿದ್ದುಕೊಂಡಿದ್ದವು. ಅದರ ಪಕ್ಕದಲ್ಲಿ ಕೆಸರಿನಲ್ಲಿ ಹೂತುಹೋಗಿದ್ದ ಒಂದು ಕಠಾರಿ ಇತ್ತು. ಇಷ್ಟನ್ನು ಬಿಟ್ಟು ಮತ್ತೇನೂ ಕಾಣಲಿಲ್ಲವಾದ್ದರಿಂದ ಅದೊಂದು ಸೆರೆಮನೆಯೆಂದೂ ಆ ಅಸ್ಥಿಪಂಜರವು ಶತ್ರು ಪಕ್ಷದವನದೆಂದೂ ಊಹಿಸಿದರು. ಸ್ಕೌಟ್ ಮಾಸ್ತರಿಗೆ ದಿಗಿಲಾಯಿತು. ಧೀರರಿಗೆ ನೆರವಾಗಿ ಒಳಗೆ ಇದ್ದವರಿಗೆ ಹಗ್ಗಗಳನ್ನು ಕೊಟ್ಟರು. ಅಸ್ಥಿಪಂಜರದಲ್ಲಿ ಇರಬೇಕಾದ ಭಾಗಗಳೆಲ್ಲ ಇರುವುದನ್ನು ಖಾತ್ರಿಮಾಡಿಕೊಂಡು ಅವುಗಳನ್ನೆಲ್ಲ ಜೋಪಾನವಾಗಿ ಗಂಟು ಕಟ್ಟಿ ಹಗ್ಗಗಳ ಸಹಾಯದಿಂದ ಹೊರಗಿದ್ದವರು ಎಳೆದುಕೊಂಡರು. ನರಸಪ್ಪ ಒಳಗಿನಿಂದ ಕತ್ತಿ ಒಂದು ಕಠಾರಿಯನ್ನೂ ತಂದಿದ್ದ. ವಾಸ್ತವವಾಗಿ ಅವರು ದುರ್ಗದಲ್ಲಿ ಹುಡುಕಿ ತಂದಿದ್ದು ಹಳೆಗಾಲದ ನಾಣ್ಯಗಳಲ್ಲ. ಒಬ್ಬ ದುರ್ದೈವೀ ಬಡಪಾಯಿ ಮನುಷ್ಯನದಾಗಿತ್ತು. ಹೆಡ್ಮಾಸ್ತರ ಅಪ್ಪಣೆಯಂತೆ ವಸ್ತುಪ್ರದರ್ಶನದ ಕೊಠಡಿಯಲ್ಲಿ ಅದನ್ನು ಸೇರಿಸಲಾಯಿತು.



ಬೆಳಕಿನ ವೇಗವನ್ನು ಮೀರಬಹುದೇ?

- ಕೈವಾರ ಗೋಪಿನಾಥ್

ಬೆಳಕಿನ ಕಣಗಳು ಬೆಳಕಿನ ವೇಗಕ್ಕಿಂತ ವೇಗವಾಗಿ ಸಂಚರಿಸಲು ಸಾಧ್ಯವೆ? ಅಂತಹ ಅಭೂತಪೂರ್ವ ಪ್ರಯೋಗವೊಂದು ಇತ್ತೀಚಿನ ವರ್ಷದಲ್ಲಿ ಅಂದರೆ ೧೯೯೫ರ ಮೊದಲ ಭಾಗದಲ್ಲಿ ನಡೆಯಿತು. ಕುತೂಹಲ ಕೆರಳಿಸುವ ಇಂತಹ ಪ್ರಯೋಗವನ್ನು ಬರ್ಕ್ಲಿಯಲ್ಲಿರುವ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ರೇಮಂಡ್ ಚಿಯಾವೋ ಮತ್ತು ಅವರ ತಂಡದವರು ಯಶಸ್ವಿಯಾಗಿ ನಡೆಸಿ, ವಿಜ್ಞಾನಾಸಕ್ತರ ಗಮನಸೆಳೆದರು. ಭೌತವಿಜ್ಞಾನದ ಸಾಮಾನ್ಯ ನಿಯಮಗಳ ವ್ಯಾಪ್ತಿಗೆ ಸಿಕ್ಕದೆ ಇಪ್ಪತ್ತನೆಯ ಶತಮಾನದ ಬುದ್ಧಿಜೀವಿಗಳಿಗೆ ಸವಾಲಾಗಿ ವರ್ತಿಸುತ್ತಿರುವ ಕ್ವಾಂಟಮ್ ಯಂತ್ರವಿಜ್ಞಾನ ಮತ್ತು ಸಾಪೇಕ್ಷ ಸಿದ್ಧಾಂತಗಳ ಮಿಲನವೇ ರೇಮುಂಡರ ಪ್ರಯೋಗಕ್ಕೆ ಸ್ಫೂರ್ತಿಯಾಗಿದೆ. ಬೆಳಕಿನ ಕಣಗಳು ಅಂದರೆ ಫೋಟಾನ್‌ಗಳು ಬೆಳಕಿನ ವೇಗಕ್ಕಿಂತ ೧.೭ರಷ್ಟು ಪಟ್ಟು ಹೆಚ್ಚು ವೇಗದಿಂದ ಸಂಚರಿಸಿ ಸಾಪೇಕ್ಷ ಸಿದ್ಧಾಂತಕ್ಕೆ ಸವಾಲು ಹಾಕಿರುವುದು ಮಾತ್ರವಲ್ಲ , ಇಟ್ಟಿಗೆಯಷ್ಟು ಅಗಲದ ಗೋಡೆಯ ಆಚೆಯಿಂದ ಈಚೆಗೆ ಸುರಂಗ ಕೊರೆದುಕೊಂಡು ಬಂದಂತೆ ತೂರಿಕೊಂಡು ಬಂದಿವೆ. ಈ ಕ್ರಿಯೆಗೆ 'ಕ್ವಾಂಟಂ ಸುರಂಗಕ್ರಿಯೆ' ಎನ್ನುತ್ತಾರೆ.

ಆದರೆ ಈ ಪ್ರಕ್ರಿಯೆ ದಿಢೀರನೆ ಸಂಭವಿಸಿದ ಘಟನೆಯೇನಲ್ಲ. ಹಾಗೆ ನೋಡಿದರೆ ಕ್ವಾಂಟಮ್ ತಂತ್ರಜ್ಞಾನ ತನ್ನ ೬೦ ವರ್ಷಗಳ ಇತಿಹಾಸದಲ್ಲಿ ಅನೇಕ ವೈವಿಧ್ಯಮಯ ಕುತೂಹಲಕಾರಿ ಅಂಶಗಳನ್ನು ಪ್ರಯೋಗಗಳ ಮೂಲಕ ನೀಡುತ್ತಾ ಬಂದಿದೆ. ೧೯೩೨ರಲ್ಲಿ ಬೆಲ್ ಪ್ರಯೋಗಾಲಯದ ಎಲ್. ಮಾಕ್ಕೊಲ್ ಹೀಗೆ ಹೇಳಿದ್ದ: "ಯಾವುದಾದರೂ ಕಣ ತನ್ನ ಮುಂದಿರುವ ಅಡ್ಡಗೋಡೆಯಲ್ಲಿ ಸುರಂಗ ಕೊರೆದುಕೊಂಡು ಸಂಚರಿಸಿದಾಗ, ಯಾವುದೇ ರೀತಿಯ ವಿಳಂಬವಿಲ್ಲದೆ ಅತ್ಯಂತ ವೇಗವಾಗಿ ಸಂಚರಿಸುತ್ತದೆ".

ಅಷ್ಟೇ ಅಲ್ಲ, ೧೯೪೦ರಲ್ಲಿಯೇ ಜಾರ್ಜ್ ಗ್ಯಾಮೋವ್ ಎಂಬ ಕ್ವಾಂಟಮ್ ವಿಜ್ಞಾನಿ ಅತ್ಯಂತ ಕುತೂಹಲಕಾರಿ ಕಲ್ಪನೆಯೊಂದನ್ನು ಪ್ರಚುರಪಡಿಸಿದ್ದ. ಆ ಪ್ರಕಾರ ಕ್ವಾಂಟಮ್ ಕಣಗಳನ್ನು ಒಂದು ಮೋಟಾರುಕಾರು ಎಂದು ಊಹಿಸೋಣ. ಆ ಕಾರನ್ನು ಗ್ಯಾರೇಜಿನಲ್ಲಿ ಇಟ್ಟು ಬೀಗ ಹಾಕಲಾಗಿರುತ್ತದೆ. ಆದರೆ ಆ ಕಾರು ಗೋಡೆಯಲ್ಲಿ ಸುರಂಗ ಕೊರೆದುಕೊಂಡು, ಅತಿಥಿಗಳು ಕುಳಿತಿರುವ ಕೋಣೆಯೊಳಗೆ ಬಂದರೆ ಅದಕ್ಕಿಂತ ಆಶ್ಚರ್ಯಕರ ಘಟನೆ ಯಾವುದಿದ್ದೀತು? ಆದರೆ ಇಂತಹ ಸೋಜಿಗದ ಸನ್ನಿವೇಶ ಸಂಭವಿಸುವುದು ಸಾಧ್ಯವೆ? ಎಂಬುದರ

ಬಗೆಗೂ ವಿಚಾರಿಸಬೇಕಾದ್ದು ಅವಶ್ಯ. ಏಕೆಂದರೆ ಐನ್‌ಸ್ಟಾಯಿನರ ಸಾಪೇಕ್ಷ ಸಿದ್ಧಾಂತದ ಪ್ರಕಾರ ಯಾವುದೇ ಒಂದು ನಿರ್ದಿಷ್ಟ ತೂಕದ ಕಣದ ವೇಗವನ್ನು ವರ್ಧಿಸಿದಾಗ, ಆ ಕಣದ ತೂಕ ಅತ್ಯಂತ ತೀವ್ರಗತಿಯಲ್ಲಿ ಹೆಚ್ಚುತ್ತದೆ. ಅದರಲ್ಲೂ ಆ ಕಣದ ವೇಗ ಬೆಳಕಿನ ವೇಗಕ್ಕೆ ಸನ್ನಿಹಿತವಾದಂತೆ ತನಗೆ ಒದಗುತ್ತಿರುವ ಶಕ್ತಿಯನ್ನು ಪರಿವರ್ತಿಸುತ್ತಾ ತೂಕವನ್ನು ಹೆಚ್ಚಿಸಿಕೊಳ್ಳುತ್ತದೆ. ಹೀಗಾಗಿ ಆ ಕಣ ಬೆಳಕಿನ ವೇಗವನ್ನು ತಲುಪಲು ಅನಿರ್ದಿಷ್ಟ ಪ್ರಮಾಣದ ಶಕ್ತಿಯನ್ನು ಅದಕ್ಕೆ ಒದಗಿಸಬೇಕಾಗುತ್ತದೆ. ಹಾಗೆ ಶಕ್ತಿಯನ್ನು ಒದಗಿಸುವ ಕಾರ್ಯ ಅಸಾಧ್ಯವಾದದ್ದರಿಂದ ಯಾವುದೂ ಬೆಳಕಿನ ವೇಗವನ್ನು ಮೀರಲು ಸಾಧ್ಯವಿಲ್ಲ, ಎಂದು ಸಾಪೇಕ್ಷ ಸಿದ್ಧಾಂತ ಹೇಳುತ್ತದೆ.

ಅತ್ಯಂತ ಜಟಿಲವಾಗಿರುವ ಈ ಬೆಳಕಿನ ವೇಗದ ಸಮಸ್ಯೆಗೆ ಉತ್ತರವಾಗಿ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಯೂಜಿನ್ ವಿಗ್ನರ್ ಮತ್ತು ಅವರ ವಿದ್ಯಾರ್ಥಿ ಎಲ್. ಐಸೆನ್‌ಬಡ್ ತಮ್ಮದೇ ಆದ ಸಿದ್ಧಾಂತವನ್ನು ೧೯೪೫ರಲ್ಲಿ ಪ್ರಚುರಪಡಿಸಿದರು. ಅದರ ಪ್ರಕಾರ ಕೆಲವು ಸಂದರ್ಭಗಳಲ್ಲಿ 'ಸುರಂಗಕ್ರಿಯೆ' ನಡೆಸುವ ಕಣಗಳು ಬೆಳಕಿನ ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ಸಂಚರಿಸುತ್ತವೆ. ಈ ಪ್ರತಿಪಾದನೆ ಐನ್‌ಸ್ಟಾಯಿನರ 'ವಿಶೇಷ ಸಾಪೇಕ್ಷ ಸಿದ್ಧಾಂತ'ಕ್ಕೆ ವಿರುದ್ಧವಾಗಿದೆ. ಏಕೆಂದರೆ ಆ ಸಿದ್ಧಾಂತದ ಪ್ರಕಾರ ಯಾವುದೇ ವಸ್ತುವಿನ ವೇಗ ಬೆಳಕಿನ ವೇಗಕ್ಕಿಂತ ಹೆಚ್ಚಾದಾಗ ಆ ವಸ್ತು ಕಾಲಕ್ಕೆ ಸಂಬಂಧಪಟ್ಟಂತೆ ಹಿಂದಕ್ಕೆ ಸರಿಯುತ್ತದೆ. ಸಂಪರ್ಕ ತಂತ್ರಜ್ಞಾನದಲ್ಲಿ ಸಂದೇಶ ಕಳುಹಿಸಬೇಕಾದರೆ-ಅದರಲ್ಲೂ ಬಾಹ್ಯಾಕಾಶದಲ್ಲಿ ಅನತಿ ದೂರದಲ್ಲಿರುವ ವ್ಯೋಮನೌಕೆಗೆ ಸಂದೇಶ ಕಳುಹಿಸಬೇಕಾದರೆ-ಬೆಳಕಿನ ಕಿರಣಗಳ (ಉದಾಹರಣೆಗೆ ರಕ್ತಾತೀತ ಕಿರಣಗಳ) ವೇಗವನ್ನು ವರ್ಧಿಸುವ ಸಾಧ್ಯತೆಯನ್ನು ಪರಿಶೀಲಿಸಬೇಕಾಗುತ್ತದೆ. ಆಗ ಸಂದೇಶ ಸಂಕೇತಗಳು ಹಿಂದಕ್ಕೆ ಸರಿಯುವ ಸಾಧ್ಯತೆ ಇದೆಯೇ?

ಯಾವುದೇ ಕಣವು 'ಸುರಂಗಕ್ರಿಯೆ' ನಡೆಸಬೇಕಾದರೆ ಅದಕ್ಕೆ ಶಕ್ತಿಯನ್ನು ಒದಗಿಸಬೇಕಾಗುತ್ತದೆ. ಆದ್ದರಿಂದಲೇ ಕೇವಲ ಕೆಲವು ಪರಮಾಣು ಪದರಗಳ ಅಗಲದ ಅಡ್ಡಗೋಡೆಯ ಮೂಲಕ ಫೋಟಾನ್ ಕಣಗಳ ಸುರಂಗಕ್ರಿಯೆಯನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಾಗಿದೆ. ಈ ಸಂಶೋಧನೆ ಅನೇಕ ಸೂಕ್ಷ್ಮ ಸಂಕೀರ್ಣ ಉಪಕರಣಗಳ ಕಾರ್ಯಕ್ಷಮತೆಯನ್ನು ಎಷ್ಟೋ ಪಟ್ಟು ಹೆಚ್ಚಿಸಲು ಸಹಕಾರಿಯಾಗಿದೆ. ಸುರಂಗಕ್ರಿಯೆ ಡಯೋಡ್, ಸುರಂಗಕ್ರಿಯೆ ಯುಕ್ತ ವಿದ್ಯುನ್ಮಾನ ಸೂಕ್ಷ್ಮದರ್ಶಕ ಮುಂತಾದ ಉಪಕರಣಗಳನ್ನು ಈ ಕ್ರಿಯೆಯ ಕಾರ್ಯಾಚರಣೆಯನ್ನು ಅನುಸರಿಸಿ ರಚಿಸಲಾಗಿದೆ.

೧೯೯೧ರಲ್ಲಿ ಅನೇದಿಯೋ ರನ್‌ಫಾಗ್ನಿ ಎಂಬ ವಿಜ್ಞಾನಿ ಮತ್ತು ಆತನ ತಂಡದವರು ಇಟಲಿ ದೇಶದ ಫ್ಲಾರೆನ್ಸಿನ ರಾಷ್ಟ್ರೀಯ ಪ್ರಯೋಗಾಲಯದಲ್ಲಿ ವಿದ್ಯುದಯಸ್ಕಾಂತ ತರಂಗಗಳ ಬಗ್ಗೆ ಪ್ರಯೋಗ ನಡೆಸುತ್ತಿದ್ದಾಗ 'ಕ್ವಾಂಟಮ್ ಸುರಂಗ ಕ್ರಿಯೆ'ಗೆ ಹತ್ತಿರವಾದ ವಿಷಯವೊಂದರ ಬಗ್ಗೆ ಪ್ರಯೋಗ ನಡೆಸುವ ಆಲೋಚನೆ ಅವರಿಗೆ ಹೊಳೆಯಿತು. ಸೂಕ್ಷ್ಮತರಂಗ (ಮೈಕ್ರೋವೇವ್)ಗಳನ್ನು ಉಪಯೋಗಿಸಿಕೊಂಡು ನಡೆಸಿದ ಆ ಪ್ರಯೋಗದಲ್ಲಿ ಆ ತರಂಗಗಳು ಹೆಚ್ಚು ಕಡಿಮೆ ಬೆಳಕಿನ ವೇಗಕ್ಕೆ ಸಮನಾಗಿ ಸಂಚರಿಸುವುದನ್ನು ರನ್‌ಫಾಗ್ನಿ ಕಂಡುಹಿಡಿದರು. ಆದರೆ ೧೯೯೨ರಲ್ಲಿ ಅದೇ ಪ್ರಯೋಗವನ್ನು ಇನ್ನಷ್ಟು ನಿಖರತೆಯಿಂದ ಮಾಡಿದ ಕೊಲೋನ್ ವಿಶ್ವವಿದ್ಯಾಲಯದ ಗುಂಟರ್ ನಿಮ್‌ಟ್ಸ್ ಮತ್ತು ಅವರ ತಂಡದವರು ಸೂಕ್ಷ್ಮತರಂಗಗಳು ಬೆಳಕಿಗಿಂತ ಹೆಚ್ಚಿನ ವೇಗದಲ್ಲಿ ಸಂಚರಿಸಿದುದನ್ನು ಕಂಡುಹಿಡಿದರು.

ನಂತರ ೧೯೯೩ರಲ್ಲಿ ಅಮೆರಿಕದ ಬರ್ಕ್ಲಿಯಲ್ಲಿರುವ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿನ ರೇಮಂಡ್ ಚಿಯಾವೋ ಮತ್ತು ಅವರ ತಂಡದ ಏಫ್ರೇಮ್ ಸ್ಟಾಯಿನ್‌ಬರ್ಗ್ ಹಾಗೂ ಪೌಲ್ ಕ್ವೇತ್ ಎಂಬ ವಿಜ್ಞಾನಿಗಳು ಫೋಟಾನ್ ಕಣಗಳು ನಡೆಸಿದ ಸುರಂಗಕ್ರಿಯೆಯ ಮಧ್ಯಂತರವನ್ನು ಅಳೆದದ್ದು ಸಾಮಾನ್ಯ ಸಾಧನೆಯೇನೂ ಅಲ್ಲ. ಏಕೆಂದರೆ ಈ ಸುರಂಗಕ್ರಿಯೆ ಸಂಭವಿಸುವ ಕಾಲಾವಧಿ ಕೇವಲ ಕೆಲವು ಫೆಮ್ಟೋಸೆಕೆಂಡುಗಳು (ಅಂದರೆ ೧೪-೧೦ ಸೆಕೆಂಡುಗಳು) ಮಾತ್ರ! ಪರಮಾಣು ಗಡಿಯಾರಗಳ ಪೃಥಃಕ್ಕರಣ ಸಾಮರ್ಥ್ಯಕ್ಕಿಂತ ಕಡಿಮೆ ಕಾಲಾವಧಿ ಇದಾಗಿದೆ!

ಈ ಸಾಧನೆಗೆ ಸಂಕೀರ್ಣವಾದ ಉಪಕರಣಗಳ

ಅವಶ್ಯಕತೆ ಎಷ್ಟೆಂದು ವಿವರಿಸಬೇಕಾಗಿಲ್ಲ. ನ್ಯೂಯಾರ್ಕಿನ ರೋಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ಲಿಯೊ ನಾರ್ಡ್ ಮಂಡೆಲ್ ಕಂಡುಹಿಡಿದಿದ್ದ ಹಾಂಗ್-ಓ-ಮಂಡೆಲ್ ವ್ಯತಿಕರಣ ಮಾಪಕವನ್ನು ಈ ಪ್ರಯೋಗಕ್ಕೆ ಉಪಯೋಗಿಸಲಾಯಿತು. ಒಂದು ಸೆಕೆಂಡಿನ ಶತಕೋಟಿಯ ಒಂದು ಭಾಗದಷ್ಟು ನಿಖರವಾದ ಫಲಿತಾಂಶಗಳನ್ನು ಈ ಉಪಕರಣ ನೀಡುತ್ತದೆ. ಮೇಲಿನ ಪ್ರಯೋಗದ ಫಲಿತಾಂಶದ ಪರಿಣಾಮವನ್ನು ಲೆಕ್ಕಹಾಕಿದ ನಂತರ ಬೆಳಕಿನ ಕಣಗಳು ಬೆಳಕಿನ ವೇಗಕ್ಕಿಂತ ೧.೭ ಪಟ್ಟು ಹೆಚ್ಚಿನ ವೇಗದಿಂದ ಸಂಚರಿಸಿದವು ಎಂಬುದಾಗಿ ಪ್ರಚುರ ಪಡಿಸಲಾಯಿತು.

೧೯೯೪ರ ಅಕ್ಟೋಬರ್ ತಿಂಗಳಲ್ಲಿ ವಿಯೆನ್ನಾದ ಫೆರೆನ್ ಕ್ರೌಸ್ ಮತ್ತು ಅವರ ತಂಡದವರು ಲೇಸರ್ ಬೆಳಕಿನ ಕಿರಣಗಳನ್ನು ಉಪಯೋಗಿಸಿ ಕೇವಲ ೮ ಫೆಮ್ಟೋ ಸೆಕೆಂಡುಗಳ ಕಾಲಾವಧಿಯ ಸುರಂಗ ಕ್ರಿಯೆಯನ್ನು ದಾಖಲಿಸಿದ್ದಾರೆ. ಇದುವರೆಗೂ ದಾಖಲಾಗಿರುವ ಸುರಂಗ ಕ್ರಿಯೆಗಳಲ್ಲಿ ಅತ್ಯಂತ ಕಡಿಮೆ ಕಾಲಾವಧಿಯದೂ ಹಾಗೂ ಅತ್ಯಂತ ವೇಗದ್ದೂ ಇದಾಗಿದೆ. ೧೯೯೫ರ ಮಾರ್ಚ್ ತಿಂಗಳಲ್ಲಿ ಉಟಾಹ್ ವಿಶ್ವವಿದ್ಯಾಲಯದಲ್ಲಿ ನಡೆದ ಸಮಾವೇಶವೊಂದರಲ್ಲಿ ಇಟಲಿಯ ಗುಂಟರ್ ನಿಮ್‌ಟ್ಸ್ ಅಲ್ಲಿ ನೆರೆದಿದ್ದ ವಿಜ್ಞಾನಿಗಳೆಲ್ಲರೂ ಬೆರಗಾಗುವಂತಹ ವಿಷಯವನ್ನು ಪ್ರಚುರಪಡಿಸಿದರು. ಕೋಲೋನ್ ವಿಶ್ವವಿದ್ಯಾಲಯದಲ್ಲಿ ತಾವು ನಡೆಸಿದ ಪ್ರಯೋಗವೊಂದರಲ್ಲಿ ಸೂಕ್ಷ್ಮತರಂಗಗಳ ಸುರಂಗಕ್ರಿಯೆಯ ಮಧ್ಯಂತರವನ್ನು ಅಳೆದುದೇ ಅಲ್ಲದೆ, ಅದರ ಸಂಕೇತಗಳು ಬೆಳಕಿನ ವೇಗಕ್ಕಿಂತ ೪.೭ ಪಟ್ಟು ಹೆಚ್ಚಿನ ವೇಗದಿಂದ ಸಂಚರಿಸುವುದನ್ನು ಮಾಡಿರುವುದಾಗಿ ಅವರು ತಿಳಿಸಿದರು. ಅಷ್ಟೇ ಅಲ್ಲ, ಸುರಂಗಕ್ರಿಯೆ ಕೂಡ ೧೧ ಸೆಂ.ಮೀ. ದಪ್ಪದ ಅಡ್ಡಗೋಡೆಯ ಮೂಲಕ ನಡೆದಿರುವುದಾಗಿ ನಿಮ್‌ಟ್ಸ್ ಹೇಳಿದರು.

ಇಷ್ಟಾದರೂ ಐನ್‌ಸ್ಟಾಯಿನರ ಸಾಪೇಕ್ಷ ಸಿದ್ಧಾಂತಕ್ಕೆ ಈ ಸವಾಲು ಎಸೆದಿರುವ ಪ್ರಯೋಗಗಳನ್ನು ಪ್ರಪಂಚದ ಎಲ್ಲ ವಿಜ್ಞಾನಿಗಳೂ ಒಪ್ಪಿಕೊಂಡಿಲ್ಲ. ವೇಗವನ್ನೂ ಮೀರಿ ಸಂಚರಿಸುವ ಬೆಳಕಿನ ಕಣಗಳು ಅಥವಾ ಫೋಟಾನ್‌ಗಳು ತಮ್ಮದೇ ಆದ ಶಕ್ತಿಯ ಆಕರಗಳನ್ನು ಹೊಂದಿರುತ್ತವೆ ಎಂಬ ಬಗ್ಗೆಯೇ ವಾದವಿವಾದಗಳಿವೆ. ಇಂದಿನ ಬುದ್ಧಿಜೀವಿಗಳ ಬೌದ್ಧಿಕ ಮಟ್ಟ ಮೀರಿದ ಅಂಶಗಳು ಈ ಪ್ರಯೋಗಗಳಲ್ಲಿ ಅಡಗಿವೆ ಎಂಬ ಅಭಿಪ್ರಾಯಗಳೂ ಇಲ್ಲದಿಲ್ಲ. ಹಾಗಾಗಿ ಈ ಪ್ರಯೋಗಗಳ ಸತ್ಯಾಸತ್ಯತೆಯನ್ನು ಕಾಲವೇ ನಿರ್ಧರಿಸಬೇಕಾಗುತ್ತದೆ.

ದೊಡ್ಡದು, ಚಿಕ್ಕದು...

ಲಿಪ್ಟನ್ ಕಂಪೆನಿಯ ಹೆಸರನ್ನು ಯಾರು ತಾನೆ ಕೇಳಿಲ್ಲ? ಸರ್ ಥಾಮಸ್ ಲಿಪ್ಟನ್ ಅದರ ಸಂಸ್ಥಾಪಕರು. ಅವರು ಬಾಲಕರಾಗಿದ್ದಾಗ ನಡೆದ ಘಟನೆಯಿದು.

ಅವರ ಹಿರಿಯರು ಹಳ್ಳಿಯಲ್ಲಿ ದಿನಸಿ ಅಂಗಡಿಯನ್ನು ಇಟ್ಟಿದ್ದರು. ಆದರೆ ಬೇರೆ ಅಂಗಡಿಗಳಲ್ಲಿ ಮಾರಾಟವಾಗುವಷ್ಟು ಮೊಟ್ಟೆಗಳು ಆ ಅಂಗಡಿಯಲ್ಲಿ ಆಗುತ್ತಿರಲಿಲ್ಲ. ಇದನ್ನು ಗಮನಿಸಿದ ಥಾಮಸ್ ಲಿಪ್ಟನ್ ತನ್ನ ತಂದೆಯ ಬಳಿ ಬಂದು "ಅಪ್ಪಾ, ಯಾರಾದರೂ ಮೊಟ್ಟೆ ಕೊಳ್ಳಲು ಬಂದರೆ ನೀವು ಕೊಡಬೇಡಿ. ಬದಲು ಅಮ್ಮ ಕೊಡಲಿ" ಅಂದ.

ತಂದೆ ಸಮ್ಮತಿಸಿದರು. ಒಂದೇ ವಾರದಲ್ಲಿ ಮೊಟ್ಟೆಗಳ ವ್ಯಾಪಾರ ಬೆಳೆಯಿತು. ತಂದೆಗೆ ಆಶ್ಚರ್ಯ. ಅವರು "ನಿನಗೆ ಈ ಯೋಚನೆ ಹೇಗೆ ಬಂತು?" ಎಂದು ಕೇಳಿದರು.

"ಅಪ್ಪಾ, ನೀವು ತೆಗೆದುಕೊಟ್ಟರೆ ಮೊಟ್ಟೆ ನಿಮ್ಮ ದೊಡ್ಡ ಕೈಯಲ್ಲಿ ಚಿಕ್ಕದಾಗಿ ಕಾಣುತ್ತದೆ. ಆದರೆ ಅಮ್ಮ ತೆಗೆದುಕೊಟ್ಟರೆ ಅವರ ಕೈ ಚಿಕ್ಕದಾಗಿರುವುದರಿಂದ ಮೊಟ್ಟೆ ದೊಡ್ಡದಾಗಿ ಕಾಣುವುದು" ಎಂದ ಬಾಲಕ ಲಿಪ್ಟನ್.

- ಬಾರಾಶಂ



ಹಸುವಿನ ಹಾಲು ಅಮೃತವೆ?

- ವನಮಾಲಾ ರಂಗನಾಥರಾವ್

ಹಸುವಿನ ಹಾಲು ಅಮೃತ ಸಮಾನ; ಅದನ್ನು ಕುಡಿಯುವುದರಿಂದ ಪುಷ್ಟಿ, ತುಷ್ಟಿ ಎಂದು ಪ್ರಾಚೀನಕಾಲದಿಂದಲೂ ನಮ್ಮ ಹಿರಿಯರು ಹಸುವಿನ ಹಾಲಿನ ಮಹತ್ವವನ್ನು ಗುರುತಿಸಿದ್ದಾರೆ. ಗೋವು ಹಿಂದೂ ಸಂಸ್ಕೃತಿಯ ಅಂಗ, ಹಸುಳೆಗಳಿಂದ ವೃದ್ಧರವರೆಗೆ ಎಲ್ಲರಿಗೂ ಹಾಲಿನ ಅಗತ್ಯ ಇದೆ. ಬಸುರಿ, ಬಾಣಂತಿಯರಿಗೆ ಶಕ್ತಿವರ್ಧನೆಗಾಗಿ 'ಹಸುವಿನ ಹಾಲು ಕುಡಿಯಿರಿ' ಎಂದು ವೈದ್ಯರೂ ಹಿರಿಯರೂ ಸಲಹೆ ಮಾಡುತ್ತಾರೆ. ತಾಯಿಯ ಹಾಲಿನಿಂದ ವಂಚಿತರಾದ ಕಂದಮ್ಮಗಳಿಗೆ ಹಸುವಿನ ಹಾಲೇ ಮುಖ್ಯ ಆಹಾರವೆಂದೂ ಹೇಳುತ್ತೇವೆ.

ವಸ್ತುಸ್ಥಿತಿ ಹೀಗಿರುವಾಗ, ಹಸುವಿನ ಹಾಲು ನಿಜಕ್ಕೂ ಅಮೃತವೆ? ಎಂದು ನಾನು ಪ್ರಶ್ನಿಸಿದರೆ ಓದುಗರು ಹುಬ್ಬೇರಿಸಿಯಾರು. ಆದರೆ ಈ ಬಗ್ಗೆ ವಿಜ್ಞಾನಿಗಳು ಏನು ಹೇಳುವರೆಂಬುದನ್ನು ಗಮನಿಸೋಣ.

> ಇದೊಂದು ಚರ್ಚಾಸ್ಪದವಾದ ವಿಷಯವನ್ನೊಳಗೊಂಡ ಲೇಖನ. ತಜ್ಞರು ಇದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯವನ್ನು ಕಳುಹಿಸಿದಲ್ಲಿ 'ಕಸ್ತೂರಿ'ಯು ಅದನ್ನೂ ಪ್ರಕಟಿಸುವುದು. ಲೇಖನದ ಮಿತಿ 'ಕಸ್ತೂರಿ'ಯ ೨-೩ ಪುಟಗಳನ್ನು ಮೀರದಿರಲಿ. - ಸಂ.

ವೈಜ್ಞಾನಿಕ ವಲಯದಲ್ಲಿ, ಹಸುವಿನ ಹಾಲು ಮಕ್ಕಳ ಡಯಾಬಿಟಿಸ್‌ಗೆ (ಜೂವನೈಲ್ ಡಯಾಬಿಟಿಸ್) ಕಾರಣ ಇರಬಹುದು ಎಂಬ ಅನುಮಾನ ಬಹಳ ಕಾಲದಿಂದಲೂ ಇತ್ತು. 'ನ್ಯೂ ಇಂಗ್ಲೆಂಡ್

ಜರ್ನಲ್ ಆಫ್ ಮೆಡಿಸಿನ್'ನಲ್ಲಿ ಇತ್ತೀಚೆಗೆ ಬಂದ ವರದಿಯಿಂದ ಈ ವಿಷಯ ದೃಢಪಟ್ಟಿದೆ. ಬೇರೆ ಬೇರೆ ದೇಶಗಳಲ್ಲಿ ನಡೆಸಿದ ಸಂಶೋಧನೆಯಿಂದಾಗಿ 'ಇನ್ಸುಲಿನ್ ಅವಲಂಬಿತ ಡಯಾಬಿಟೀಸ್' ಮಕ್ಕಳಲ್ಲಿ ಬರಲು ಅವರು ಹಸುವಿನ ಹಾಲು ಕುಡಿಯುತ್ತಿರುವುದೇ ಕಾರಣ ಎಂಬುದಾಗಿ ತಿಳಿದುಬಂದಿದೆ. ಚಿಕ್ಕ ವಯಸ್ಸಿನಲ್ಲಿ ಹಸುವಿನ ಹಾಲು ಕುಡಿಯದಿರುವ ಮಕ್ಕಳಲ್ಲಿ 'ಡಯಾಬಿಟೀಸ್' ಕಂಡುಬಂದಿಲ್ಲ.

ಕೆನಡಾ ಮತ್ತು ಫಿನ್‌ಲೆಂಡ್‌ಗಳಲ್ಲಿ ಸಂಶೋಧಕರು ಹಸುವಿನ ಹಾಲು ಕುಡಿದ, ಕುಡಿಯುತ್ತಿರುವ ನೂರನಲವತ್ತೆರಡು ಮಕ್ಕಳನ್ನು ಅಭ್ಯಸಿಸಿದರು. ಹಾಲಿನಲ್ಲಿ ಇರುವ 'ಬೋವೈನ್ ಸೇರಮ್ ಆಲ್ಬುಮಿನ್' ಎಂಬ ಪ್ರೋಟೀನು ಮಾನವ ದೇಹದಲ್ಲಿರುವ ಪ್ರೋಟೀನಿನೊಂದಿಗೆ ಪ್ರತಿಕ್ರಿಯಿಸಿ ಆಂಟಿಬಾಡಿ (ಪ್ರತಿವಿಷವಸ್ತು)ಗಳನ್ನು ಉತ್ಪಾದಿಸುತ್ತದೆ. ಈ ಆಂಟಿಬಾಡಿಗಳೇ ಮುಂದೆ 'ಇನ್ಸುಲಿನ್'ಅನ್ನು ತಯಾರಿಸುವ 'ಬೀಟಾ' ಕಣಗಳ ಮೇಲೆ ದಾಳಿಮಾಡಿ ಅವುಗಳನ್ನು ನಾಶಮಾಡುತ್ತವೆ. ಈ ಕಾರಣದಿಂದಾಗಿ 'ಡಯಾಬಿಟೀಸ್' ಉಂಟಾಗುತ್ತದೆ ಎಂಬ ಅಂಶ ಬೆಳಕಿಗೆ ಬಂತು. ಅವರು ಪರೀಕ್ಷಿಸಿದ ೧೪೨ ಮಕ್ಕಳಲ್ಲಿ ಪ್ರತಿಯೊಬ್ಬರಲ್ಲಿಯೂ ಹಸುವಿನ ಹಾಲಿಗೆ ಸಂಬಂಧಿಸಿದಂತೆ 'ಆಂಟಿಬಾಡಿ'ಗಳಿರುವುದು ಕಂಡುಬಂದಿತು. ಡಯಾಬಿಟೀಸ್ ಇಲ್ಲದಿರುವ ಮಕ್ಕಳಲ್ಲಿಯೂ 'ಆಂಟಿಬಾಡಿ'ಗಳಿರುವುದು ಕಂಡುಬಂದಿತಾದರೂ ಅವು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇರುವುದನ್ನು ಸಂಶೋಧಕರು ಗಮನಿಸಿದರು.

ವಂಶಪಾರಂಪರ್ಯವಾಗಿ 'ಡಯಾಬಿಟೀಸ್' ಬರುವಂತಹ ಮಕ್ಕಳು ಅಲ್ಪಪ್ರಮಾಣದಲ್ಲಿ ಹಸುವಿನ ಹಾಲು ಕುಡಿದರೂ ಕಾಯಿಲೆಗೆ ತುತ್ತಾಗುವ ಸಂಭವ ಇದೆ. ಶೇಕಡಾ ೮೦ ರಿಂದ ೯೦ರಷ್ಟು 'ಬೀಟಾ' ಕಣಗಳು (ಇನ್ಸುಲಿನ್ ಉತ್ಪಾದಿಸುವ ಸಾಮರ್ಥ್ಯ ಇರುವಂತಹವು) ನಾಶವಾದಾಗ ಮಾತ್ರ 'ಡಯಾಬಿಟೀಸ್' ಇರುವುದು ಗೊತ್ತಾಗುತ್ತದೆ. ಆದರೆ ಇದು ಮಕ್ಕಳು ಕಿಶೋರಾವಸ್ಥೆಗೆ ಬರುವವರೆಗೂ ತಿಳಿಯುವುದೇ ಇಲ್ಲ. ಕಾರಣ, ಯಾವುದಾದರೂ ಸೋಂಕು ತಗುಲಿ, ಆಂಟಿಬಾಡಿಗಳು ರೋಗಾಣುಗಳೊಂದಿಗೆ ಬೀಟಾಕಣಗಳನ್ನೂ ನಾಶಮಾಡುವವರೆಗೆ ಏನೂ ಗೊತ್ತಾಗುವುದಿಲ್ಲ. 'ಡಯಾಬಿಟೀಸ್'ವಂಶವಾಹಿಯಾಗಿ ಬರುವ ಮಕ್ಕಳಲ್ಲಿಯೂ ಯಾವ ಮಕ್ಕಳು ಅದಕ್ಕೆ ಪಕ್ಕಾಗಿವೆ ಎಂಬುದನ್ನು ತಿಳಿಯುವುದೂ ಕಷ್ಟ. ಒಂದೇ ರೀತಿ ಇರುವ ಅವಳಿ (Identical Twins)ಗಳಲ್ಲಿ ಒಂದಕ್ಕೆ ಡಯಾಬಿಟೀಸ್ ಇದ್ದು ಇನ್ನೊಂದಕ್ಕೆ ಇಲ್ಲದಿರುವ ಸಾಧ್ಯತೆ ಉಂಟು. ಆ ಮಕ್ಕಳು ಪ್ರತಿಹಂತದಲ್ಲಿಯೂ ಹಾಲನ್ನು ಹೇಗೆ ಜೀರ್ಣಿಸಿಕೊಳ್ಳುತ್ತವೆ ಎನ್ನುವುದು ಸೋಂಕು ತಗುಲಿದಾಗ ಮೇದೋಜೀರಕ ಗ್ರಂಥಿಯು (ಪ್ಯಾನ್‌ಕ್ರಿಯಾಸ್) ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದನ್ನು ಅವಲಂಬಿಸಿದೆ.

ಅಮೇರಿಕದಲ್ಲಿ 'ಮಕ್ಕಳ ತಜ್ಞರ ಸಂಘ'ವು ಮಕ್ಕಳಿಗೆ ಹಾಲು ಕೊಡಬಾರದೆಂದು ಸಲಹೆ ಮಾಡಿದೆ. ಡಯಾಬಿಟೀಸ್ ಬರುವದೆಂಬ ಕಾರಣಕ್ಕಾಗಿ ಅಲ್ಲ; ಹಾಲು, ಹಾಲಿನ ಉತ್ಪನ್ನಗಳನ್ನು ಹೆಚ್ಚಾಗಿ ಸೇವಿಸುವುದರಿಂದ ಉಂಟಾಗುವ ರಕ್ತಹೀನತೆಗಾಗಿ (ಅನೀಮಿಯಾ). ದೇಹಕ್ಕೆ ಅಗತ್ಯವಾದ ಕಬ್ಬಿಣದ ಅಂಶವು ಹಾಲಿನಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ಎಂಟು ಔನ್ಸ್ ಹಾಲಿನಲ್ಲಿ ಒಂದು ಮಿಲಿಗ್ರಾಂನ ಹತ್ತನೇ ಒಂದು ಅಂಶದಷ್ಟು ಮಾತ್ರ ಅದರಲ್ಲಿದೆ. ಅಮೇರಿಕದ RDA (Recommended Daily Allowance) ಪ್ರಕಾರ ಹಸುಗೂಸುಗಳಿಗೆ ೧೫ ಮಿ.ಗ್ರಾಂ. ಕಬ್ಬಿಣದ ಅಂಶ ದೇಹಕ್ಕೆ ಸೇರಬೇಕು. ಹಾಗಾದಲ್ಲಿ ಆ ಮಕ್ಕಳು ದಿನಕ್ಕೆ ೩೧ ಕಪ್ ಹಾಲು ಕುಡಿಯಬೇಕು. ದೇಹಕ್ಕೆ ಅಗತ್ಯವಾದಷ್ಟು ಕಬ್ಬಿಣದ ಅಂಶವನ್ನು ಹಾಲು ಪೂರೈಸುವುದಿಲ್ಲ ಎನ್ನುವುದಕ್ಕಿಂತ ಮಗುವು ಸೇವಿಸಿದ ಬೇರೆ ಆಹಾರದಲ್ಲಿನ ಕಬ್ಬಿಣದ ಅಂಶವನ್ನೂ ಹಾಲು ಹೊರದೂಡುವುದು ಎಂಬುದು ಕಾರಣ.


ಹಾಲನ್ನು ಸೇವಿಸುವುದರಿಂದ ಕರುಳಿನಲ್ಲಿ ರಕ್ತಸಂಚಾರ ಗಣನೀಯವಾಗಿ ಕಡಿಮೆ ಆಗುತ್ತದೆ. ಹೇಗೆಂದು ಇನ್ನೂ ಕಂಡುಹಿಡಿಯಲು ಸಾಧ್ಯವಾಗಿಲ್ಲ. ಹಾಲಿನಲ್ಲಿರುವ 'ಬೋವೈನ್ ಅಲ್ಬುಮಿನ್' ರಕ್ತಹೀನತೆಗೆ ಕಾರಣ ಇರಬಹುದೆಂದು ಸಂಶೋಧಕರ ಅಭಿಮತ. ಹಾಲನ್ನು ಪಾಶ್ಚುರೈಸ್ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅಯೋವಾ ವಿಶ್ವವಿದ್ಯಾಲಯದ 'ಜರ್ನಲ್ ಆಫ್

ಪೀಡಿಯಾಟ್ರಿಕ್ಸ್'ನಲ್ಲಿ ಬಂದ ಲೇಖನದಲ್ಲಿ ಹಸುಗೂಸುಗಳಿಗೆ ಹಸುವಿನ ಹಾಲನ್ನು ಕುಡಿಸುವುದರಿಂದ ರಕ್ತದಲ್ಲಿ ಹೀಮೋಗ್ಲೋಬಿನ್ ಅಂಶ ಕಡಿಮೆ ಆಗುತ್ತದೆ; ಕೆಲಮಕ್ಕಳಿಗಂತೂ ಹಸುವಿನ ಹಾಲು ಹೆಚ್ಚಿನ ಪ್ರಮಾಣದಲ್ಲಿ ರಕ್ತಹೀನತೆ ಉಂಟುಮಾಡುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಾಲಿನಲ್ಲಿ ಕ್ಯಾಲ್ಸಿಯಂ ಇದೆಯಾದರೂ ಅದೇನೂ ಹೇಳಿಕೊಳ್ಳುವಂತಹ ಅಂಶವಲ್ಲ. ಕೋಸು, ಬ್ರಾಕಲ (ಹಸಿರುಬಣ್ಣದ ಹೂಕೋಸಿನಂತೆ ಇರುವ ತರಕಾರಿ) ಮತ್ತು ಹಸಿರು ಸೊಪ್ಪುಗಳಲ್ಲಿನ ಕ್ಯಾಲ್ಸಿಯಂ ಸುಲಭವಾಗಿ ಜೀರ್ಣವಾಗುತ್ತದೆ.

ಅಮೇರಿಕದ 'ಜರ್ನಲ್ ಆಫ್ ಕ್ಲಿನಿಕಲ್ ನ್ಯೂಟ್ರಿಷನ್' ವರದಿ ಪ್ರಕಾರ, ಹಾಲಿಗಿಂತ ಹೆಚ್ಚಾಗಿ ಹಸಿರುಸೊಪ್ಪು, ಕಾಳುಗಳು, ಕೋಸು ಮುಂತಾದುವುಗಳಲ್ಲಿ ಕ್ಯಾಲ್ಸಿಯಂ ಇದೆ. ಶುದ್ಧ ಹಾಲು ಕುಡಿದ ಮಕ್ಕಳ ಸ್ಥಿತಿಯೇ ಹೀಗಾದರೆ ನಮ್ಮ ಗೌಳಿಗರು ಪೂರೈಸುವ ಹಾಲನ್ನು ಕುಡಿದರೆ? ನೆನೆದರೇ ಎದೆ ನಡುಗುತ್ತದೆ.

ಆಧಾರ: ೪೦೩ @ Detroit Freenet. org. (Mark Graffis) Newsgroups, Misc, health, diabetes milk and type ೧)



ಎಷ್ಟಂತ ಕೊಡುವುದು ?

೧೯೨೩ರ ಮಾರ್ಚ್‌ನಲ್ಲಿ ರಶಿಯದ ರಾಷ್ಟ್ರಾಧ್ಯಕ್ಷನಾಗಿದ್ದ ಲೆನಿನ್ ತೀವ್ರ ಹೃದಯಾಘಾತಕ್ಕೆ ಒಳಗಾದ. ಅನಂತರ ಅವನ ಆರೋಗ್ಯ ಮೊದಲಿನಂತೆ ಉಳಿಯದ್ದರಿಂದ ಅವನ ಅಂತ್ಯ ಸಮೀಪಿಸಿದೆಯೆನ್ನುವುದು ಖಚಿತವಾಗಿತ್ತು. ಲೆನಿನ್ ಮರಣಿಸಿದರೆ ರಶಿಯದಲ್ಲಿ ಅದನ್ನು ಪ್ರಕಟಿಸಿದ ವಿನಾ ಆ ಸುದ್ದಿಯನ್ನು ಹೊರದೇಶಗಳಿಗೆ ರಶಿಯನ್ ಅಧಿಕಾರಿಗಳು ಬಿಡುತ್ತಿರಲಿಲ್ಲ ಮತ್ತು ಸೂಕ್ತ ಭದ್ರತಾ ಕ್ರಮಗಳನ್ನು ಕೈಗೊಂಡ ಹೊರತು ರಶಿಯದಲ್ಲಿ ಅವನ ಮರಣದ ಸುದ್ದಿಯನ್ನು ಪ್ರಕಟಿಸುವ ಸಂಭವವಿರಲಿಲ್ಲ. ಹೀಗಾಗಿ ಲೆನಿನ್ ತೀರಿಹೋದರೆ ಈ ಸುದ್ದಿಯನ್ನು ಆದಷ್ಟು ಬೇಗ ವರದಿ ಮಾಡುವುದು ಹೇಗೆ? ಎನ್ನುವುದು ಆಗ ರಶಿಯದಲ್ಲಿದ್ದ ವಿದೇಶಿ ವರದಿಗಾರರಿಗೆ ಒಂದು ಸಮಸ್ಯೆಯಾಗಿತ್ತು.

ಆ ಸಮಯದಲ್ಲಿ ಹರ್ಸ್ಟ್ ಸುದ್ದಿ ಸಂಸ್ಥೆಯ ವರದಿಗಾರನಾಗಿದ್ದ ಐಜಾಕ್ ಲೆವಿನ್ ಲಂಡನ್ನಿನಲ್ಲಿರುವ ತಮ್ಮ ಆಫೀಸಿಗೆ ಹೋದಾಗ "ಲೆನಿನ್ ಸತ್ತರೆ ೧೫೦ ಪೌಂಡ್ ಮುಂಗಡ ಕಳಿಸುವಂತೆ ತಂತಿ ನೀಡುತ್ತೇವೆ. ಕೂಡಲೆ ನೀವು ಅವನ ಮರಣದ ಸುದ್ದಿಯನ್ನು ಪ್ರಕಟಿಸುವುದು" ಎಂದು ಸೂಚಿಸಿದ.

ಲೆನಿನ್ ತೀರಿಕೊಂಡಾಗ ರಶಿಯನ್ ಸರ್ಕಾರ ಕೂಡಲೆ ಅದನ್ನು ಪ್ರಕಟಿಸಲಿಲ್ಲ. ಹೊರದೇಶಗಳಿಗೆ ಸುದ್ದಿ ಕಳಿಸುವುದನ್ನು ತಡೆಯಿತು. ಆಗ ಐಜಾಕ್ ಲೆವಿನ್ ೧೫೦ ಪೌಂಡ್ ಕಳಿಸುವಂತೆ ಲಂಡನ್ ಆಫೀಸಿಗೆ ಕೇಬಲ್ ಕಳಿಸಿದ. ಆದರೆ ಲಂಡನ್ ಆಫೀಸಿನವರು ಅವನು ಹೇಳಿದ್ದನ್ನು ಮರೆತುಬಿಟ್ಟಿದ್ದರಿಂದ "ಈಗಾಗಲೆ ಮುಂಗಡ ಕೊಟ್ಟಿದ್ದೇ ಹೆಚ್ಚಾಗಿದೆ. ಎಷ್ಟಂತ ಮುಂಗಡ ಕೊಡುವುದು?" ಎಂದು ಮರುತಂತಿ ಕಳಿಸಿದರು. ಹೀಗೆ ಜಗತ್ತಿಗೇ ಲೆನಿನ್ ಮರಣದ ಸಮಾಚಾರವನ್ನು ಮುಂಚಿತವಾಗಿ ತಿಳಿಸುವ ಅವಕಾಶವನ್ನು ಅವರು ಕಳೆದುಕೊಂಡರು.

- ಮಾಲಿನಿ ಹೆಗಡೆ

ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮೀಜಿ

• *ಸನತ್‌ಕುಮಾರ ಬೆಳಗಲಿ*

ಕೇರಳದಲ್ಲಿ ಜನಿಸಿ ಕರ್ನಾಟಕದಲ್ಲಿ ಬೆಳೆದ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿಗಳು ಉಳಿದ ಮಠಾಧೀಶರಂಥಲ್ಲ. ಜಾತಿ-ಮತಗಳ ಆಚೆಗೆ ನಿಂತು ಸಮಗ್ರ ಮಾನವಕೋಟಿಯ ಕಲ್ಯಾಣಕ್ಕಾಗಿ ಚಿಂತಿಸಿದವರು ಮಾತ್ರವಲ್ಲ ಆದಕ್ಕಾಗಿ ತಮ್ಮ ಬದುಕನ್ನೇ ಸಮರ್ಪಿಸಿದವರು. ೧೦೬ ವರ್ಷಕಾಲ ಬದುಕಿದ ಸ್ವಾಮಿಗಳು ಮಲ್ಲಾಡಿಹಳ್ಳಿಯಂಥ ಸದಾ ಬರಪೀಡಿತವಾಗಿದ್ದ ಪ್ರದೇಶವನ್ನು ನಂದನವನವನ್ನಾಗಿ ಮಾಡಿಹೋದರು.

ಜಾತಿ-ಮತಗಳನ್ನು ದೂರವಿಟ್ಟು ಸಮಾಜ ಸೇವೆ ಮಾಡಿದ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿಗಳು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದರು. ಸಾವಿರಾರು ಅನಾಥರಿಗೆ ಆಶ್ರಯ ನೀಡಿದರು. ೧೦೬ ವರ್ಷ ಬದುಕಿ ಇತ್ತೀಚೆಗೆ ನಮ್ಮನ್ನಗಲಿದ 'ತಿರುಕ' ನಮ್ಮ ನಾಡು ಕಂಡ ಅಪರೂಪದ ಚೇತನ.

'ತಿರುಕ' ಎಂದು ತಮ್ಮನ್ನು ತಾವು ಕರೆದುಕೊಂಡು ಅದೇ ಹೆಸರಿನಲ್ಲಿ ಕಥೆ, ಕವನ, ಲೇಖನಗಳನ್ನು ಬರೆದ ರಾಘವೇಂದ್ರ ಸ್ವಾಮಿಗಳು ಊರೂರನ್ನು ಸುತ್ತಿ ಯೋಗ ವಿದ್ಯೆ ಪ್ರದರ್ಶಿಸಿ, ಜೋಳಿಗೆ ಹಿಡಿದು ಹಣ ಸಂಗ್ರಹಿಸಿ, ಅದೇ ದುಡ್ಡಿನಿಂದ ಮಲ್ಲಾಡಿಹಳ್ಳಿಯಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದರು. ಅಲ್ಲಿ ಅನಾಥ ಸೇವಾಶ್ರಮ ಸ್ಥಾಪಿಸಿ ಸಾವಿರಾರು ಅವಕಾಶ ವಂಚಿತರಿಗೆ ಬದುಕಿನಲ್ಲಿ ಸೋತವರಿಗೆ ಆಶ್ರಯ ನೀಡಿದರು.

ಅವರು ಮಾಡಿದ ಅಪೂರ್ವವಾದ ಸಮಾಜ



ಸೇವೆಗಾಗಿ ಪದ್ಮಶ್ರೀ, ಪದ್ಮಭೂಷಣ ಸೇರಿದಂತೆ ಹಲವಾರು ಪ್ರಶಸ್ತಿಗಳು ಹುಡುಕಿಕೊಂಡು ಬಂದರೂ ರಾಘವೇಂದ್ರ ಸ್ವಾಮಿ ಅವುಗಳನ್ನು ನಯವಾಗಿ ತಿರಸ್ಕರಿಸಿದರು. ತಮ್ಮ ಶಿಕ್ಷಣ ಸಂಸ್ಥೆಗಳಿಗಾಗಿ ಸಿರಿವಂತರು ಹಾಗೂ ಪಟ್ಟಭದ್ರ ಹಿತಾಸಕ್ತಿಗಳೆದುರು ಎಂದೂ ಕೈಚಾಚದ ಸ್ವಾಮೀಜಿ ಜನಸಾಮಾನ್ಯರಿಂದ ಕಾಸನ್ನು ಸಂಗ್ರಹಿಸಿ ಮಲ್ಲಾಡಿಹಳ್ಳಿಯಲ್ಲಿ ಪವಾಡವನ್ನೇ ಮಾಡಿ ತೋರಿಸಿದರು.

ಕೇರಳದ ಜ್ಯೋತಿಷ್ಯಶಾಸ್ತ್ರ ಪಂಡಿತ ಅನಂತಪದ್ಮನಾಭ ನಂಬೂದರಿ ಹಾಗೂ ಪದ್ಮಂಬಾಳ್

ದಂಪತಿಗಳಿಗೆ ಜನಿಸಿದ ರಾಘವೇಂದ್ರ ಸ್ವಾಮೀಜಿ ಬಾಲ್ಯದಲ್ಲಿ ಕಾಯಿಲೆಪೀಡಿತ ಮಗುವಾಗಿದ್ದರು. ೧೫ ವರ್ಷದವರೆಗೆ ಅವರಿಗೆ ಪ್ರಜ್ಞೆಯೇ ಇರಲಿಲ್ಲ. ಮಗನ ಕೊರಗನ್ನೇ ಹಚ್ಚಿಕೊಂಡು ತಾಯಿ ಪದ್ಮಾಬಾಳ್ ಕಣ್ಣುಮುಚ್ಚಿದ್ದರು. ಆಗ ದಕ್ಷಿಣ ಕನ್ನಡದ ಬಾರಕೂರಿನಲ್ಲಿದ್ದ ತಂದೆ ಅನಂತ ಪದ್ಮನಾಭ ನಂಬೂದರಿ ಕಾಯಿಲೆಪೀಡಿತ ಮಗುವನ್ನು ಅಲ್ಲಿನ ನರಸಿಂಹಯ್ಯ ಹಾಗೂ ಪುತಳಿಬಾಯಿ ದಂಪತಿಗಳಿಗೆ ದತ್ತು ನೀಡಿ ದೇಶಾಂತರ ಹೊರಟರು.

ಹೀಗೆ ಕನ್ನಡನಾಡಿನಲ್ಲಿ ಬೆಳೆದ ರಾಘವೇಂದ್ರ ಸ್ವಾಮೀಜಿ ಬಾರಕೂರು ಹಾಗೂ ಕುಂದಾಪುರಗಳಲ್ಲಿ ಪ್ರಾಥಮಿಕ ಹಾಗೂ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಪೂರೈಸಿದರು. ಬಾಲ್ಯದಲ್ಲೇ ದೇವರನ್ನು ನೋಡಬೇಕೆಂಬ ಅದಮ್ಯ ಹಂಬಲದಿಂದ ಸಾಕಿದ ತಾಯಿ, ತಂದೆಗೆ ಹೇಳದೇ ಊರನ್ನು ಬಿಟ್ಟು ಸ್ವಾಮೀಜಿ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿಗಳ ಬಳಿ ಬಂದು ದೇವರನ್ನು ತೋರಿಸಲು ಅವರ ಪಾದಕ್ಕೆ ಬಿದ್ದರು.

ಈ ಹುಡುಗನ ಸಾಮರ್ಥ್ಯವನ್ನು ಕಣ್ಣಲ್ಲೇ ಅಳೆದ ಶ್ರೀ ಸಿದ್ಧಾರೂಢರು "ನಾನು ನಿನ್ನ ಗುರುವಲ್ಲ ಹೋಗಲೇ" ಎಂದು ತಮ್ಮದೇ ಆದ ಭಾಷೆಯಲ್ಲಿ ಹೇಳಿದರು. ನಂತರ ಕೆಲದಿನ ನಾಟಕ ಕಂಪನಿ ಮ್ಯಾನೇಜರ್, ನಟನಾಗಿ ಸೇವೆ ಸಲ್ಲಿಸಿದ ರಾಘವೇಂದ್ರ ಸ್ವಾಮೀಜಿ ಅವರಿಗೆ ದೇವರನ್ನು ಕಾಣುವ ಹುಚ್ಚು ಹೋಗಲೇ ಇಲ್ಲ.

ಇದೇ ಹುಚ್ಚಿನಲ್ಲಿ ಪುಣೆಗೆ ಹೋಗಿ ಶ್ರೀ ಶಿವಾನಂದ ಸ್ವಾಮೀಜಿ ಎಂಬುವರನ್ನು ಭೇಟಿ ಮಾಡಿದರು. ಅವರಿಗೂ ಇದೇ ಪ್ರಶ್ನೆ ಕೇಳಿದರು. "ದೇವರನ್ನು ತೋರಿಸಿ" ಎಂದು ಬಿಕ್ಕಿ-ಬಿಕ್ಕಿ ಅತ್ತರು. ಆಗ ಸ್ವಾಮೀಜಿ "ಭಾರತಾಂಬೆಯ ಕೋಟ್ಯಂತರ ಮಕ್ಕಳು ಹಸಿವು, ಬಡತನದಿಂದ ನರಳುತ್ತಿದ್ದಾರೆ. ಅವರಿಗೆ ಉಡಲು ಬಟ್ಟೆ, ತಿನ್ನಲು ಆಹಾರವಿಲ್ಲ. ಇವರೆಲ್ಲ ಭಗವಂತನ ಪ್ರತಿಸ್ವರೂಪ. ಇವರಲ್ಲಿ ನೀನು ದೇವರನ್ನು ಕಂಡು ಅವರ ಕಣ್ಣೀರನ್ನು ಒರೆಸುವ ಕಾರ್ಯದಲ್ಲಿ ತೊಡಗು" ಎಂದರು.

ಅಂದಿನಿಂದ ರಾಘವೇಂದ್ರ ಸ್ವಾಮೀಜಿಗಳು ಸಮಾಜಸೇವಾ ಕಾರ್ಯದ ದೀಕ್ಷೆ ತೊಟ್ಟರು. ಲಾಹೋರ್‌ಗೆ ಹೋಗಿ ಆಯುರ್ವೇದ ವೈದ್ಯ


ಈ ಸ್ವಾಮೀಜಿ...

ತಮ್ಮ ಹನ್ನೆರಡನೆಯ ವಯಸ್ಸಿನಲ್ಲೇ "ದೇವರನ್ನು ಕಾಣಲು" ಊರೂರು ಅಲೆಯ ತೊಡಗಿದ ರಾಘವೇಂದ್ರರು ತುಮಕೂರಿಗೆ ಬಂದರು. ಅಲ್ಲಿ ಆಗ ಮೊಕ್ಕಾಂ ಹೂಡಿದ್ದ ಅಂಬಾ ಪ್ರಸಾದ ನಾಟಕ ಕಂಪನಿಯಲ್ಲಿ ಕೆಲಸಕ್ಕೆ ನಿಂತರು. ಪರದೆ ಎಳೆಯುವ, ಟಿಕೆಟ್ ಹರಿದು ಪ್ರೇಕ್ಷಕರನ್ನು ಒಳಗೆ ಬಿಡುವ ಕೆಲಸದಿಂದ ಆರಂಭಿಸಿ ಕ್ರಮೇಣ ಅಭಿನಯದಲ್ಲೂ ಆಸಕ್ತಿ ತೋರಿದರು.

ಅವರು ೩೦ಕ್ಕೂ ಹೆಚ್ಚು ಕಥೆ-ಕಾದಂಬರಿ-ಲೇಖನ ಸಂಗ್ರಹಗಳನ್ನು ಬರೆದು ಪ್ರಕಟಿಸಿದ್ದಾರೆ. ಅವರ ಕಾದಂಬರಿಗಳೆಲ್ಲ ನವೋದಯ ಸಾಹಿತ್ಯದಿಂದ ಪ್ರೇರಣೆ ಪಡೆದಂಥವು. ಸಮಾಜದಲ್ಲಿನ ಅನಿಷ್ಟಗಳಾದ ಜಾತಿವಾದ, ಅಸ್ಪೃಶ್ಯತೆ, ಮೂಢನಂಬಿಕೆ, ವರದಕ್ಷಿಣೆ ಮುಂತಾದವುಗಳನ್ನೇ ವಸ್ತುವಾಗಿರಿಸಿಕೊಂಡು ಜನಜಾಗೃತಿ ಮೂಡಿಸಲು ಕಥೆ-ಕಾದಂಬರಿ ಬರೆದ ಅವರು ಅನೇಕ ನಾಟಕಗಳನ್ನೂ ನಿರ್ದೇಶಿಸಿ, ಅಭಿನಯಿಸಿದ್ದುಂಟು.

ರಾಘವೇಂದ್ರ ಸ್ವಾಮಿಗಳು ಸ್ವಾತಂತ್ರ್ಯಾಂದೋಲನದಲ್ಲೂ ಪ್ರಮುಖ ಪಾತ್ರ ವಹಿಸಿದರು. ಆಗ ಸೊರಬ, ಶಿಕಾರಿಪುರ, ಹೊನ್ನಾಳಿ, ಕುಂಸಿ, ಶಿರಾಳಕೊಪ್ಪಗಳಲ್ಲಿ ನಡೆದ ಸತ್ಯಾಗ್ರಹಗಳಲ್ಲಿ ಅವರು ಮುಂಚೂಣಿಯಲ್ಲಿದ್ದರು. ಕೆಲ ತಿಂಗಳು ಭೂಗತ ಚಟುವಟಿಕೆ ನಡೆಸಿದ ರಾಘವೇಂದ್ರರು ಮನೆಮನೆಗೆ ಹೋಗಿ ಖಾದಿ ಮಾರಾಟ ಮಾಡಿದರು.

ಬರೋಡಾದಲ್ಲಿ ಬಾಲಬ್ರಹ್ಮಚಾರಿ ರಾಜರತ್ನ ಮಾಣಿಕರಾವ್ ಬಳಿ ಯೋಗವಿದ್ಯೆ, ಲಾಠಿ ತಿರುಗಿಸುವಿಕೆ, ಕುದುರೆ ಸವಾರಿ ಹಾಗೂ ಕುಸ್ತಿಗಳಲ್ಲಿ ಪಾರಂಗತರಾದ ರಾಘ



ಶಾಸ್ತ್ರದ ಬಗ್ಗೆ ಅಭ್ಯಾಸ ಮಾಡಿಬಂದರು. ಬರೋಡಾಕ್ಕೆ ಹೋಗಿ ಯೋಗ ವಿದ್ಯೆ ಕಲಿತರು. ಸಕಲ ವಿದ್ಯೆಗಳಲ್ಲಿ ಪಾರಂಗತರಾದರು.

೧೯೪೨ರ ನಂತರ ವಾಪಸ್ ಕರ್ನಾಟಕಕ್ಕೆ ಬಂದ ರಾಘವೇಂದ್ರ ಸ್ವಾಮಿಗಳು ರಾಜ್ಯವನ್ನೆಲ್ಲ ಸುತ್ತಾಡಿ ಯೋಗ ವಿದ್ಯೆ ಪ್ರದರ್ಶಿಸುತ್ತಾ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಮಲ್ಲಾಡಿಹಳ್ಳಿಗೆ ಬಂದು ನೆಲಸಿದರು. ಅಲ್ಲಿ ಅನಾಥ ಸೇವಾಶ್ರಮ ಸ್ಥಾಪಿಸಿದರು. ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲು ಆರಂಭಿಸಿದರು.

ಮಲ್ಲಾಡಿಹಳ್ಳಿಯನ್ನು ಶಿಕ್ಷಣ ಕೇಂದ್ರವನ್ನಾಗಿ ಬೆಳೆಸಲು ರಾಘವೇಂದ್ರ ಸ್ವಾಮಿಗಳು ತಮ್ಮ ಬದುಕನ್ನೇ ಧಾರೆ ಎರೆದರು. ಅಲ್ಲಿ ಪ್ರಾಥಮಿಕ ಶಾಲೆ, ಪದವಿಪೂರ್ವ ಕಾಲೇಜ್, ದೈಹಿಕ ಶಿಕ್ಷಣ ಕಾಲೇಜ್, ಶಿಕ್ಷಕರ ತರಬೇತಿ ಕೇಂದ್ರ, ಪ್ರೌಢಶಾಲೆ, ವೃದ್ಧಾಶ್ರಮ, ಧನ್ವಂತರಿ ವೈದ್ಯಕೀಯ ಸಂಕೀರ್ಣ, ಧನ್ವಂತರಿ ಪ್ರಯೋಗಶಾಲೆ ಹೀಗೆ ನೂರೆಂಟು ಸಂಸ್ಥೆಗಳನ್ನು ಕಟ್ಟಿದರು.

ಯಾರಾದರೂ ಕಾಲಿಗೆ ಬಿದ್ದರೆ ಕೆಂಡಾಮಂಡ

ವೇಂದ್ರ ಸ್ವಾಮೀಜಿ ಲಾಹೋರಿಗೆ ಹೋಗಿ ಬಾಬಾ ಲಕ್ಷ್ಮಣದಾಸರ ಬಳಿ ಆಯುರ್ವೇದದ ಬಗ್ಗೆ ಜ್ಞಾನ ಸಂಪಾದಿಸಿದರು.

ಯಾವುದೇ ಬಾಹ್ಯ ಸಂಪರ್ಕವಿಲ್ಲದ ಕೊಂಪೆಯಂತಿದ್ದ ಮಲ್ಲಾಡಿಹಳ್ಳಿಯನ್ನು ತಮ್ಮ ಸೇವಾಕ್ಷೇತ್ರವನ್ನಾಗಿ ಆರಿಸಿಕೊಂಡ ರಾಘವೇಂದ್ರ ಸ್ವಾಮೀಜಿ ಅಲ್ಲಿಗೆ ಆರು ದಶಕಗಳ ಹಿಂದೆ ಬಂದಾಗ ದೇವಾಂಗ ಸಮಾಜದವರು ಅವರಿಗೆ ಅನಾಥಾಶ್ರಮ ನಿರ್ಮಿಸಲು ಭೂಮಿಯನ್ನು ದೇಣಿಗೆಯಾಗಿ ನೀಡಿದರು.


ಆದರೆ ಅನಾಥಾಶ್ರಮ ಹಾಗೂ ಶಾಲೆಗಳನ್ನು ನಿರ್ಮಿಸಲು ರಾಘವೇಂದ್ರ ಸ್ವಾಮಿಗಳ ಬಳಿ ಹಣವಿರಲಿಲ್ಲ. ಅದಕ್ಕಾಗಿ ಅವರು ಜೋಳಿಗೆ ಹಿಡಿದರು. 'ತಿರುಕ'ರಾದರು. ಅದರಿಂದ ಹೆಚ್ಚು ಹಣ ಸಂಗ್ರಹವಾಗಲಿಲ್ಲ. ನಂತರ ದೇಶಾದ್ಯಂತ 'ಯೋಗ' ಹಾಗೂ 'ಏಕಪಾತ್ರಾಭಿನಯ' ಪ್ರದರ್ಶನಗಳನ್ನು ನೀಡಿ ಹಣ ಸಂಗ್ರಹಿಸಿದರು.

೧೯೫೦ರಲ್ಲಿ ಮಲ್ಲಾಡಿಹಳ್ಳಿಯಲ್ಲಿ ಮೊಟ್ಟ ಮೊದಲು ಶಾಲೆ ಆರಂಭಿಸಿದ ಸ್ವಾಮಿಗಳು ನಂತರ ದೈಹಿಕ ಶಿಕ್ಷಣ ಕೇಂದ್ರ, ಯೋಗ ಕೇಂದ್ರ ಹೀಗೆ ಒಂದೊಂದನ್ನೇ ಸ್ಥಾಪಿಸತೊಡಗಿದರು. ಈಗ ಅಲ್ಲಿರುವ ವಸತಿ ಶಾಲೆ ಹಾಗೂ ಇತರ ಶಿಕ್ಷಣ ಸಂಸ್ಥೆಗಳಲ್ಲಿ ೨೦೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಶಿಕ್ಷಣವನ್ನೆಂದೂ ಮಾರಾಟದ ವಸ್ತುವನ್ನಾಗಿ ಪರಿಗಣಿಸದ ರಾಘವೇಂದ್ರ ಸ್ವಾಮೀಜಿ ಬಡವರಿಗಾಗಿ, ನಿರಾಶ್ರಿತರಿಗಾಗಿ, ನೊಂದವರಿಗಾಗಿ ತಮ್ಮ ಸಂಸ್ಥೆಗಳ ದ್ವಾರಗಳನ್ನು 'ಮುಕ್ತ'ವಾಗಿಟ್ಟರು. ಅಷ್ಟೇ ಅಲ್ಲ ಜಾತಿ, ಮತ, ಭಾಷೆಗಳೆಂಬ ಮೇಲು-ಕೀಳು ಭಾವ [illegible] ಅಲ್ಲಿರುವ ಸಂಸ್ಥೆಗಳನ್ನೆಲ್ಲಾ ಸ್ವಾಮೀಜಿ 'ಆಶ್ರಮ'ಗಳೆಂದೇ ಕರೆದರು.

ಲವಾಗುತ್ತಿದ್ದ ಸ್ವಾಮಿಗಳು, "ನನಗೇಕೆ ಕಾಲಿಗೆ ಬೀಳುತ್ತೀರಿ ನಾನೂ ನಿಮ್ಮಂತೆ ಸಾಮಾನ್ಯ ವ್ಯಕ್ತಿ" ಎಂದು ಹೇಳುತ್ತಿದ್ದರು. ಮೂಢನಂಬಿಕೆ, ಕಂದಾಚಾರಗಳನ್ನು ಕಟುವಾಗಿ ವಿರೋಧಿಸುತ್ತಿದ್ದ ಸ್ವಾಮಿಗಳು ಜನಸೇವೆಯಲ್ಲೇ ನೆಮ್ಮದಿ ಪಡೆದರು.

ಮಹಾತ್ಮಾಗಾಂಧೀಜಿ ಆದರ್ಶಗಳಿಂದ ತುಂಬಾ ಪ್ರಭಾವಿತರಾಗಿದ್ದ ರಾಘವೇಂದ್ರ ಸ್ವಾಮೀಜಿ ಜಾತಿ



ವಾದ, ಕೋಮುವಾದಗಳೆಂದರೆ ಸಿಡಿದೇಳುತ್ತಿದ್ದರು. ರಾಮಜನ್ಮಭೂಮಿ ಚಳವಳಿಯಲ್ಲಿ ಅವರನ್ನು ಎಳೆಯಲು ಮತಾಂಧ ಶಕ್ತಿಗಳು ಯತ್ನಿಸಿದಾಗ ಅವರು ಛೀಮಾರಿ ಹಾಕಿದರು. "ರಾಮಶಿಲೆ ಸ್ಥಾಪನೆ, ಬಾಬರಿ ಮಸೀದಿ ಕಾದಾಟ ಈಗ ಅಪ್ರಸ್ತುತ" ಎಂದು ಬಹಿರಂಗವಾಗಿ ಹೇಳಿದರು.

ರಾಘವೇಂದ್ರ, ಸ್ವಾಮೀಜಿ ಧರ್ಮ ಇಲ್ಲವೇ ಜಾತಿಗೆ ಎಂದೂ ಪ್ರಾಮುಖ್ಯ ನೀಡಲಿಲ್ಲ. ಮಾನವತೆಗೆ ಆದ್ಯತೆ ನೀಡಿದರು. ಮಲ್ಲಾಡಿಹಳ್ಳಿಯಲ್ಲಿ ಬನಶಂಕರಿ ದೇವಸ್ಥಾನ ಕಟ್ಟಿಸಿದಂತೆ, ಮುಸಲ್ಮಾನ ಬಾಂಧವರಿಗಾಗಿ ಮಸೀದಿಯನ್ನೂ ನಿರ್ಮಿಸಿದರು. ಮಸೀದಿ ಕಟ್ಟಿಸುವಾಗ ಅವರಿಗೆ ಕೋಮುವಾದಿಗಳಿಂದ ಬೇನಾಮಿ ಬೆದರಿಕೆ ಪತ್ರಗಳು ಬಂದವು. ಅದರಲ್ಲಿ "ನೀವು ಮಸೀದಿಯನ್ನು ಕಟ್ಟಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಅದನ್ನು ಕೂಡಲೇ ನಿಲ್ಲಿಸದಿದ್ದರೆ ನಿಮ್ಮ ಕೊಲೆಯನ್ನು ಮಾಡುತ್ತೇವೆ" ಎಂದು ಎಚ್ಚರಿಸಲಾಗಿತ್ತು.

ಆಗ ಕೋಮುವಾದಿಗಳ ಪೊಳ್ಳು ಬೆದರಿಕೆಗೆ ಸೊಪ್ಪು ಹಾಕದ ರಾಘವೇಂದ್ರ ಸ್ವಾಮೀಜಿ "ನಾನು ಬರುವಾಗಲೇ ತಿರುಗಿಹೋಗಲು ಟಿಕೆಟ್ ಪಡೆದುಕೊಂಡು ಬಂದಿರುವೆ" ಎಂದು ಈ ಬೆದರಿಕೆ ಪತ್ರವನ್ನು ತಿಪ್ಪೆಗೆಸೆದು ಮಸೀದಿ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿದರು. ಇದು ಕೋಮುಭ್ರಾತೃತ್ವದ ಬಗ್ಗೆ ಅವರಿಗಿದ್ದ ಕಾಳಜಿಗೆ ಸಾಕ್ಷಿಯಾಗಿದೆ.

ಅದ್ವಾನಿ ರಥಯಾತ್ರೆ ಹೊರಟಾಗ ಹಾಗೂ ಬಾಬರಿ ಮಸೀದಿ ನೆಲಸಮಗೊಂಡಾಗ ದಾವಣಗೆರೆ ಹಾಗೂ ಸುತ್ತಮುತ್ತಲ ಪ್ರದೇಶ ಕೋಮು ವೈಷಮ್ಯದ ಬೆಂಕಿಯಿಂದ ಬೆಂದು ಹೋದರೆ ಮಲ್ಲಾಡಿಹಳ್ಳಿ ಮಾತ್ರ ಸುರಕ್ಷಿತವಾಗಿತ್ತು. ಸುತ್ತಲಿನ ಹಳ್ಳಿಗಳಲ್ಲಿ ಹಿಂಸಾಚಾರ ನಡೆದರೂ ಈ ಊರಿನಲ್ಲಿ ಮಾತ್ರ ಹಿಂದೂ, ಮುಸಲ್ಮಾನರು ಸೋದರರಂತೆ ಇದ್ದರು.

ಮಲ್ಲಾಡಿಹಳ್ಳಿಯಲ್ಲಿ ಹಿಂದೂಗಳ ದೇವರ ಉತ್ಸವ ಹೊರಟರೆ, ಮುಸಲ್ಮಾನರು ಊದುಬತ್ತಿ ಹಚ್ಚಿ, ಸಕ್ಕರೆ ಹಿಡಿದು ನಿಲ್ಲುತ್ತಾರೆ. ಮೊಹರಂ, ಬಕ್ರೀದ್‌ಗಳಲ್ಲಿ ಹಿಂದೂಗಳು ಭಾಗವಹಿಸುತ್ತಾರೆ. ಮಲ್ಲಾಡಿಹಳ್ಳಿ ಆಶ್ರಮದಲ್ಲಿ ಅನೇಕ ಮುಸ್ಲಿಂ ವಿವಾಹಗಳನ್ನು ಸ್ವಾಮೀಜಿ ನೆರವೇರಿಸಿದ್ದಾರೆ. ಇದು ಇಡೀ ರಾಷ್ಟ್ರಕ್ಕೇ ಮಾದರಿಯಾಗಿದೆ.

ಹೀಗೆ ಜಾತಿ, ಮತ, ಮೇಲು-ಕೀಳು ಎನ್ನದೇ ಇಡೀ ಸಮಾಜಕ್ಕಾಗಿ ಅಹರ್ನಿಶಿ ದುಡಿದ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿಗಳು ಈಗ ನಮ್ಮ ನಡುವೆ ಇಲ್ಲ. ಅವರು ಬಿಟ್ಟುಹೋದ ಆದರ್ಶ ನಮಗೆಲ್ಲ ಕೈದೀವಿಗೆಯಾಗಿದೆ. ✪

ಮಲ್ಲಾಡಿಹಳ್ಳಿಯ "ಮಹಾತ್ಮ"

- ಮಂಜುಳಾ

ಮಹಾತ್ಮಾ ಗಾಂಧೀಜಿಯ ಬಗ್ಗೆ ಪುಸ್ತಕಗಳಲ್ಲಿ ಓದಿ ತಿಳಿದಿದ್ದ ನನಗೆ ಅವರ ಎಲ್ಲ ಆದರ್ಶಗಳನ್ನೂ ತಮ್ಮ ಜೀವನದಲ್ಲಿ ಪಾಲಿಸುತ್ತಿದ್ದ ಇನ್ನೊಬ್ಬ ಮಹಾತ್ಮರ ದರ್ಶನ ೧೯೮೧ನೆಯ ಅಕ್ಟೋಬರ್ ೧೯ರಂದು ಮಲ್ಲಾಡಿಹಳ್ಳಿಯಲ್ಲಿ ಆಯಿತು.

ಚಿತ್ರದುರ್ಗ ಜಿಲ್ಲೆಯಲ್ಲಿರುವ ಮಲ್ಲಾಡಿಹಳ್ಳಿ ಯೋಗಾಸನದ ತವರೂರು. ಅಲ್ಲಿ ಎಲ್ಲಾ ಕಾಯಿಲೆಗಳಿಗೂ ಸ್ವಾಮೀಜಿಯೆ ಔಷಧ ಕೊಡುತ್ತಾರೆಂದು ಗೊತ್ತಾದಾಗ ನಾನು ನನ್ನ ತಂಗಿಯ ಜೊತೆಯಲ್ಲಿ ಆಸ್ತಮಾ ಚಿಕಿತ್ಸೆಗಾಗಿ ಮಲ್ಲಾಡಿಹಳ್ಳಿಗೆ ಹಾಸನದಿಂದ ಹೋದೆ. ನಾವು ಅಲ್ಲಿಗೆ ಹೋದಾಗ ರಾತ್ರಿ ೯-೩೦. ಆಗ ಯೋಗಾಸನ ಶಿಬಿರದ ಕಾಲ. ಶಿಬಿರಾರ್ಥಿಗಳು ಔಷಧಕ್ಕಾಗಿ ಬಂದವರೂ ಆಶ್ರಮದ ವಿದ್ಯಾರ್ಥಿಗಳೂ ಊಟ ಮುಗಿಸಿ ನಿದ್ರೆಮಾಡುವವರು, ಓದುವವರು, ಓಡಾಡುತ್ತಿರುವವರು ಕಾಣುತ್ತಿದ್ದರೇ ವಿನಾ ನಮಗೆ 'ಸ್ವಾಮೀಜಿ'ಕಾಣಸಲಿಲ್ಲ. ನನ್ನ ತಂಗಿ ಅಲ್ಲಿಯೇ ಹೋಗುತ್ತಿದ್ದವರೊಬ್ಬರನ್ನು, "ಸ್ವಾಮೀಜಿ ಯಾವಾಗ ಬರುತ್ತಾರೆ? ನಾನು ನನ್ನ ಅಕ್ಕನೊಂದಿಗೆ ಔಷಧಕ್ಕೆ ಬಂದಿದ್ದೇನೆ ಹಾಸನದಿಂದ," ಎಂದಾಗ ಅವರು, "ಸ್ವಾಮೀಜಿ ಬರುತ್ತಾರೆ," ಎಂದು ಹೇಳಿ ಹೋಗಿ ಐದು ನಿಮಿಷದಲ್ಲಿ ಆಶ್ರಮದ ಹೆಣ್ಣುಮಗಳೊಬ್ಬಳು ಬಂದು, "ಈಗ ಹಾಸನದಿಂದ ಬಂದವರಾರು?" ಎಂದು ವಿಚಾರಿಸಿ ನಮ್ಮನ್ನು 'ಅನ್ನಪೂರ್ಣ' ಊಟದ ಹಾಲಿಗೆ ಕರೆದೊಯ್ದು ಪ್ರೀತಿಯಿಂದ ಹೊಟ್ಟೆತುಂಬಾ ಉಣಬಡಿಸಿದರು. ಅಷ್ಟರಲ್ಲಿ ಸಣ್ಣ ಸ್ವಾಮೀಜಿ (ಸೂರದಾಸಜಿ) ಬಂದು, "ಊಟ ಆಯಿತೇನಮ್ಮಾ?" ಎಂದು ಪುನಃ ವಿಚಾರಿಸಿದರು. ಎಲ್ಲರ ಊಟ ಮುಗಿದಿದ್ದರೂ ಬೇಸರಿಸದೆ ಆದರದಿಂದ ಅವರು ನಮಗೆ ಉಣಬಡಿಸಿದ ನೆನಪು ಸದಾ ಆಗುತ್ತಿರುತ್ತದೆ.

ಮಾರನೇದಿನ ಔಷಧಕ್ಕಾಗಿ ನಾವೆಲ್ಲ ಕಾದು ಕುಳಿತಿರುವಾಗ ಖಾದಿ ಬಿಳಿ ಅಂಗಿ, ಬಿಳಿ ಚಡ್ಡಿ ಧರಿಸಿದವರೊಬ್ಬರು ನನ್ನ ತಂಗಿಯ ಬಳಿ ಬಂದು, "ಸ್ವಾಮೀಜಿ ಸಿಕ್ಕಿದರೇನಮ್ಮಾ?" ಎಂದು ನಗುತ್ತಾ ಕೇಳಿದರು. ಅವರೇ ರಾಘವೇಂದ್ರ ಸ್ವಾಮೀಜಿ ಎಂದು ಗೊತ್ತಾದಾಗ ನನ್ನ ತಂಗಿ ಎಂಥ ತಪ್ಪು ಮಾಡಿದೆ ಎಂದು ಹಣೆ-ಹಣೆ ತಟ್ಟಿಕೊಂಡಳು! ನಂತರ ಗೊತ್ತಾಯಿತು ನಮ್ಮಂತೆ ಬೇಸ್ತು ಬಿದ್ದ ಜನಗಳು ತುಂಬಾ ಇದ್ದಾರೆ ಎಂದು!

೧೯೮೪ರ ಮಾರ್ಚ್ ೧೨ರವರೆಗೂ ೨೦ ದಿನಗಳಿಗೊಮ್ಮೆಯಂತೆ ಔಷಧಕ್ಕಾಗಿ ಮಲ್ಲಾಡಿಹಳ್ಳಿಗೆ ಹೋಗುತ್ತಿದ್ದೆ. ಒಂದು ಸಲ ಔಷಧಕ್ಕಾಗಿ ಒಬ್ಬಳೇ ಹೋಗಿದ್ದೆ. ನನ್ನ ಔಷಧಿ ಚೀಟಿ ನಂಬರು ಕೆಳಗಿದ್ದುದರಿಂದ ನನ್ನ ಸರದಿ ಬರಲು ತಡವಾಗುತ್ತಿತ್ತು. ಮಧ್ಯಾಹ್ನವಾದರೆ ಹಾಸನಕ್ಕೆ ಹೋಗಲು ಬಸ್ಸು, ಟ್ರೇನು ತಪ್ಪುವದೆಂದು ಯಾರೋ ಹೇಳಿದ್ದರಿಂದ ಸ್ವಾಮೀಜಿ ವಾಸಿಸುತ್ತಿದ್ದ ಮನೆಯ ಹತ್ತಿರ ಹೋಗಿ ನನ್ನ ಪರಿಸ್ಥಿತಿ ಹೇಳಿ, "ನಾನು ಒಬ್ಬಳೇ ಬಂದಿದ್ದೇನೆ," ಎಂದೆ. ಆಗ ಸ್ವಾಮೀಜಿ, "ಇಲ್ಲ, ನೀನು ಸುಳ್ಳು ಹೇಳುತ್ತಿದ್ದೀಯಾ" ಅಂದರು. ನಾನು "ಇಲ್ಲ" ಎಂದಾಗ ಪುನಃ ಅವರು, "ಶುದ್ಧ ಸುಳ್ಳು ಹೇಳುತ್ತಿರುವಿ" ಎಂದರು. ನನಗೋ ಕಣ್ಣಲ್ಲಿ ನೀರು ಬರುವದೊಂದೇ ಬಾಕಿ! ಆಗ, "ನಿನ್ನ ಜೊತೆ ದೇವರಿದ್ದಾನೆ. ನಿನಗೆ ಮುಂಚೆ ಔಷಧ ಕೊಟ್ಟರೆ ಉಳಿದವರು ಸುಮ್ಮನೇ ಬಿಡುತ್ತಾರೆಯೇ...?" ಎಂದರು ಸ್ವಾಮೀಜಿ. ನಾನು ನಿರಾಶಳಾಗಿ ಮಾರನೇ ದಿನ ಔಷಧಕ್ಕಾಗಿ ಹೊರಗೆ ದೂರದಲ್ಲಿ ಕುಳಿತಿದ್ದೆ. ಸ್ವಾಮೀಜಿ ಬರುತ್ತಿದ್ದಂತೆಯೇ ದೂರದಿಂದಲೆ ನನ್ನನ್ನು ನೋಡಿ ಸನ್ನೆ ಮಾಡಿ ಕರೆದರು. ಮೊದಲೇ ಔಷಧ ಕೊಟ್ಟು ಮೊದಲೇ ಕಳುಹಿಸಿಕೊಟ್ಟರು. ನನಗೆ ಆಗ ಅವರ ವಾತ್ಸಲ್ಯದ ಅರಿವಾಯಿತು.

ಅನಂತರ ಅಲ್ಲಿಗೆ ಅನೇಕ ಸಲ ಹೋದೆ. ಪ್ರತಿಸಲವೂ ಬರುವಾಗ ತವರುಮನೆಯಿಂದ ಗಂಡನ ಮನೆಗೆ ಹೊರಡುವ ಹೆಣ್ಣುಮಗಳ ಮನಃ

ಸ್ಥಿತಿ ನನ್ನದಾಗಿರುತ್ತಿತ್ತು.

ಮಧ್ಯಾಹ್ನ ನಾವು ಅಲ್ಲಿಗೆ ಹೋಗುತ್ತಿದ್ದ ಸಮಯದಲ್ಲಿ ಸ್ವಾಮೀಜಿ ಪ್ರಾಣಾಯಾಮ ಕ್ಲಾಸು ತೆಗೆದುಕೊಳ್ಳುತ್ತಿದ್ದರು. ವಿವರವಾಗಿ ಎಲ್ಲವನ್ನೂ ಸರಳವಾಗಿ ತಿಳಿಸುತ್ತಾ ಪ್ರಾಣಾಯಾಮ ಮಾಡಿ ತೋರಿಸುತ್ತಿದ್ದರು. ಆಸ್ತಮಾದವರಿಗೆ ಅನುಲೋಮ, ವಿಲೋಮ, ನಾಡಿ ಶುದ್ಧಿಗಳನ್ನು ಮಾಡಲು ಹೇಳುತ್ತಾ, ಇವುಗಳಲ್ಲಿ ಪರಿಪಕ್ವತೆ ಪಡೆದ ನಂತರ 'ಉಜ್ಜಾಯ' ಪ್ರಾಣಾಯಾಮ ಮಾಡಿದರೆ ಪಾರ್ವತಿಯ ಸಾಕ್ಷಾತ್ಕಾರವಾಗುತ್ತದೆ, ಯಾರ ಅದೃಷ್ಟ ಹೇಗಿದೆಯೋ ಎಂದು ಅದನ್ನು ಮಾಡಿ ತೋರಿಸಿದರು! ಇಂದು ಹಣ ಕೊಟ್ಟರೆ ಮಾತ್ರ ಯೋಗಾಸನ ಕಲಿಸುವವರಿದ್ದಾರೆ. ಆದರೆ ಲೋಕಕಲ್ಯಾಣಕ್ಕಾಗಿ ಯೋಗಾಸನ ಕಲಿಸುವ ಇವರು ಮಹಾಪುರುಷರೇ ಸೈ ಅನ್ನಿಸಿತು.

ಆಶ್ರಮಕ್ಕೆ ಒಂದಷ್ಟು ಅಳಿಲು ಕಾಣಿಕೆ ಕೊಡೋಣ ಅನ್ನಿಸಿತು. ಒಂದುನೂರು ರೂಪಾಯಿಗಳನ್ನು ಸ್ವಾಮೀಜಿ ಮನೆಯಲ್ಲಿದ್ದಾಗ ಕೊಡಲು ಹೋದೆ. ಅಗ ಅವರು ಒಳಗೆ ಹೋಗಿ ಐದು ರೂಪಾಯಿ ತಂದು ನನ್ನ ಹಣದ ಜೊತೆ ಕೂಡಿಸಿ ದೇವರ ಮುಂದಿರುವ ಕಾಣಿಕೆ ಬಟ್ಟಲಿಗೆ ಹಾಕಲು ತಿಳಿಸಿದರು.

ಬಹುಶಃ ನನ್ನ ಪುಣ್ಯ (೧೦೦) ಒಂದರ ಮುಂದಿನ ಸೊನ್ನೆಯಾಗಬಾರದೆಂದು ಅವರಿಗೆ ಅನಿಸಿರಬಹುದೇನೊ. ಅಲ್ಪರ ಬಗೆಗೂ ಮಹಾತ್ಮರಿಗೆ ಎಂತಹ ಕಳಕಳಿ ಇರುತ್ತದೆ ಎಂಬ ಅರಿವಾಯಿತು.

ಅಶಿಸ್ತು, ಬೇಜವಾಬ್ದಾರಿ, ಅಸ್ವಚ್ಛತೆಗಳನ್ನು ಕಂಡರೆ ಅವರಿಗಾಗುತ್ತಿರಲಿಲ್ಲ, ಗಲಾಟೆ ಮಾಡಿದರೆ ಕೊಳೆ ಮಾಡಿದರೆ, ಆಶ್ರಮದ ಆವರಣದಲ್ಲಿ ಧೂಮಪಾನ ಮಾಡುತ್ತಿದ್ದರೆ, ಸ್ವಾಮೀಜಿ ತುಂಬ ರೇಗಾಡುತ್ತಿದ್ದರು.

ಸಂಜೆ ಏಳುಗಂಟೆಗೆ ಆಶ್ರಮದಲ್ಲಿ ನಡೆಯುವ ಭಜನೆಗೆ ಸ್ನಾನಮಾಡಿ ಶ್ವೇತವಸ್ತ್ರಧರಿಸಿ ಬರುತ್ತಿದ್ದ ಅವರನ್ನು ಕಂಡರೆ ಭಕ್ತಿಹುಟ್ಟುತ್ತಿತ್ತು. ಹಾರ್ಮೋನಿಯಂ ಬಾರಿಸುತ್ತಾ ಸ್ವಾಮೀಜಿ ಹಾಡುತ್ತಿದ್ದ.

"ಅನವರತವೂ ನಿನ್ನ ಸೇವೆಯದು ದೊರೆಯಲಿ,
ನಿನಗಾಗಿ ಈ ಎನ್ನ ದೇಹವಿದು ಸವೆಯಲಿ,
ಕಾಣದಿರು ಕಡೆಗಣ್ಣಿನಿಂದ ದೀನನಾಥಾ
ಪರಮೇಶ್ವರ ದಾಸನ ಕಾಯೋ ಮೋಕ್ಷದಾತಾ॥"

ಎಂಬ ಭಜನೆ ಭಕ್ತಿರಸದಿಂದ ಮೈಮನಗಳನ್ನು ರೋಮಾಂಚನ ಗೊಳಿಸುತ್ತಿತ್ತು.

ಇನ್ನೊಮ್ಮೆ ನಾನಲ್ಲಿಗೆ ಹೋದಾಗ ಸ್ವಾಮೀಜಿಯ ಮೈಮೇಲೆ ಕಡಿತ, ಉರಿತರುವ ಗಂದೆಗಳಾಗಿದ್ದು ಮೈಗೆ ಔಷಧಿ ಲೇಪಿಸಿಕೊಂಡಿದ್ದರು. ನನಗೆ ಅವರನ್ನು ಆ ಸ್ಥಿತಿಯಲ್ಲಿ ಕಂಡಾಗ ತುಂಬಾ ದುಃಖವಾಯಿತು. ಏನಾಯಿತೆಂದು ವಿಚಾರಿಸಿದೆ. "ಏನು ಮಾಡುವುದಮ್ಮಾ ಕೈಮೈ ಕೊಳೆತು ನಾರುತ್ತಿದ್ದರೂ ಬೇಡವೆಂದರೂ ಔಷಧಕ್ಕೆ ಬಂದ ರೋಗಿಗಳು ಗಟ್ಟಿಯಾಗಿ ಕಾಲುಹಿಡಿದುಕೊಳ್ಳುತ್ತಾರೆ, ನಮಸ್ಕಾರ ಮಾಡುವ ಸಲುವಾಗಿ," ಎಂದರು. ಆಗ ನನಗೆ ಭಕ್ತರಿಗಾಗಿ ಕಷ್ಟವನ್ನು ಸ್ವತಃ ಪಡೆದುಕೊಂಡ ಭಗವಂತನಾಗಿ ಸ್ವಾಮೀಜಿ ಕಂಡರು.

ಸ್ವಾಮೀಜಿ ಹಾಸ್ಯಪ್ರಜ್ಞೆಯುವರು ಕೂಡ. ನನ್ನ ಹೆಸರನ್ನು ಕೆ.ಪಿ. ಮಂಜುಳಾ ಎನ್ನುತ್ತಿದ್ದರು. ನಾನು ಅಲ್ಲವೆಂದರೆ "ಹೌದು, ಕಡ್ಡಿ ಪೈಲ್ವಾನ (K.P.)" ಅಂದರು. ಇನ್ನೊಮ್ಮೆ ನಮ್ಮವರು ಚೌಕಳಿ ಲುಂಗಿ ತೊಟ್ಟಾಗ ತಮ್ಮ ಹೆಸರು ಭಟ್ ಎಂದು ಹೇಳಿದಾಗ ಅಲ್ಲ, ಖಾನ್ ಎಂದರು. ಯಾಕೆ ಹೀಗನ್ನುತ್ತಾರೆಂದು ಯೋಚಿಸುತ್ತಿದ್ದರೆ ಅವರ ಲುಂಗಿಕಡೆ ಬೆರಳುಮಾಡಿ ತೋರಿಸಿದರು.

ಹೀಗೆ ಅಲ್ಲಿಯ ಅನುಭವಗಳು ಇನ್ನೂ ಎಷ್ಟೋ ಇದ್ದು ಸದಾ ಹಸುರಾಗಿರುತ್ತವೆ. ಈಗ ಸ್ವಾಮೀಜಿ ಕೇವಲ ನೆನಪು.

ನಮಗರಿವಿಲ್ಲದಂತೆಯೆ [illegible]ದಲ್ಲಿ ನಾವೆಷ್ಟು ಬಾರಿ ಕಣ್ಣು ಮಿಟುಕಿಸಿರುತ್ತೇವೆ ಗೊತ್ತೆ?
ಅಂದಾಜು ನಲವತ್ತೆರಡು ಲಕ್ಷ ಬಾರಿ!

- ಶೀನಪ್ಪಯ್ಯ



ನಾಟ್ಯಯಾತ್ರೆ: ಸುಖ-ದುಃಖದ ಕಥೆ

ಮೂಲ: ಗೀತಾಂಜಲಿ ಪ್ರಸಾದ್   ಅನುವಾದ: ರಾಧಿಕಾ



ಕವಿ ಜಯದೇವನ 'ಗೀತಗೋವಿಂದ' ಕಾವ್ಯವನ್ನು ಓದುವುದೇ ಒಂದು ಮುದ; ಯಾರಾದರೂ ಹಾಡುವುದನ್ನು ಕೇಳಿದರಂತೂ ಎಲ್ಲಿಲ್ಲದ ಆಮೋದ. ಇನ್ನು ಖ್ಯಾತ ಗಾಯಕ ರಘುನಾಥ ಪಾಣಿಗ್ರಾಹಿಯ ಆ ಗಡಸುಕಂಠದಲ್ಲಿ ಈ ಹಾಡು ಕೇಳುತ್ತ, ಜತೆಗೆ ವಿಖ್ಯಾತ ಒಡಿಸ್ಸಿ ನೃತ್ಯ ಕಲಾವಿದೆ ಸಂಯುಕ್ತಾರ ಹೆಜ್ಜೆಗಳನ್ನು ಗಮನಿಸುತ್ತಿದ್ದರಂತೂ ಪ್ರೇಕ್ಷಕ ಮೈಮರೆಯುವುದು ಖಂಡಿತ.

ಸಂಯುಕ್ತಾ ಪಾಣಿಗ್ರಾಹಿ ಇಂದು ಜಾಗತಿಕ ನೃತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಕಣ್ಣುಮುಚ್ಚಿ ತೆಗೆಯುವುದರೊಳಗಾಗಿ ಇಷ್ಟೆಲ್ಲ ಸಾಧಿಸಲಿಲ್ಲ ಆಕೆ. ಅಪಾರ ಪರಿಶ್ರಮದ ಜತೆ, ವೈಯಕ್ತಿಕ ಸುಖವನ್ನು ಬದಿಗೊತ್ತಿ ಒಡಿಸ್ಸಿ ನೃತ್ಯ ಶೈಲಿಯ ಪುನರುಜ್ಜೀವನಕ್ಕೆ ಸಂಯುಕ್ತಾ ಹಗಲಿರುಳು ಒಂದು ಮಾಡಿ ದುಡಿದಿದ್ದಾರೆ.

ಅವರ ಬದುಕು ಹಲವಾರು ಅಗ್ನಿ ಪರೀಕ್ಷೆಗಳನ್ನು ಎದುರಿಸಿ ಯಶಸ್ವಿಯಾಗಿ ರೂಪುಗೊಂಡಂಥದು. ಹೆಜ್ಜೆ ಹೆಜ್ಜೆಗೆ ಅವಮಾನ-ಭರ್ತ್ಸನೆಗಳನ್ನು ಅನುಭವಿಸುತ್ತಲೇ ನೃತ್ಯದ ಕಾರಣದಿಂದಾಗಿ ಅವನ್ನೆಲ್ಲ ಮರೆತರು ಸಂಯುಕ್ತಾ. "ಒಡಿಸ್ಸಿ ನೃತ್ಯವೇ ನನ್ನ ಉಸಿರು. 'ನರ್ತಿಸಬೇಡ' ಎಂದು ಯಾರಾದರೂ ಹೇಳಿದರೆ 'ಉಸಿರಾಡದೆ ಬದುಕು' ಎಂದು ಹೇಳಿದ ಹಾಗೆಯೆ" ಎಂಬ ಅವರ ಮಾತು ಗಮನಾರ್ಹ.

ಗೀತಾಂಜಲಿ ಪ್ರಸಾದ್ ಅವರು ಸಂಯುಕ್ತಾ ಅವರನ್ನು ಸಂದರ್ಶಿಸಿ 'ಸ್ವಾವಿ' ಆಂಗ್ಲ ಮಾಸಿಕದಲ್ಲಿ ಪ್ರಕಟಿಸಿದರು. ಆ ಸಂದರ್ಶನ ಹಾಗೂ ಛಾಯಾಚಿತ್ರಗಳನ್ನು ಆ ಪತ್ರಿಕೆಯಿಂದ ಸಾಭಾರ ಎತ್ತಿಕೊಂಡು ಇಲ್ಲಿ ಪ್ರಕಟಿಸಲಾಗಿದೆ.

"ಸಂಯುಕ್ತಾ ಪಾಣಿಗ್ರಾಹಿಗೆ 'ದೇವದಾಸಿ'ಯಾಗುವಾಸೆ..."

ಪತ್ರಿಕೆಗಳಲ್ಲಿ ಈ ಶೀರ್ಷಿಕೆಯನ್ನೋದಿದ ಮಡಿವಂತರು "ಈ ನರ್ತಕಿಯರ ಹಣೆಬರಹ ಇಷ್ಟೆ" ಎಂದು ಮೂಗು ಮುರಿದು ಸುಮ್ಮನಾದರು.

ಆದರೆ ಆಕೆಯ ಅಭಿಮಾನಿಗಳು? ಅವರಿಗೆಲ್ಲ ದಿಗ್ಭ್ರಾಂತಿ. "ಯಾಕಿಂಥ ನಿರ್ಧಾರ?" ಎಂದು ಚಿಂತಿತರಾದರು.

ಸಂಯುಕ್ತಾಳ ಆತ್ಮೀಯರು ಮಾತ್ರ ನಿಜಕ್ಕೂ ಆತಂಕಗೊಂಡರು. ತಮ್ಮ ನೆಚ್ಚಿನ ನೃತ್ಯ ವಿಶಾರದೆಯೊಂದಿಗೆ ಈ ಕುರಿತು ಸ್ವತಃ ಮಾತನಾಡಿ ತಿಳಿದ ಹೊರತು ಅವರಿಗೆ ಸಮಾಧಾನವಿಲ್ಲ.

ಇದು ಸುದ್ದಿ ಓದಿದವರ ಸ್ಥಿತಿಯಾದರೆ ಅತ್ತ ಆ ಸುದ್ದಿಗೆ ವಸ್ತುವಾಗಿದ್ದ ಸಂಯುಕ್ತಾಳದೆಂಥ ಪಾಡು? ಯೋಚಿಸಲೂ ಅವಕಾಶ ನೀಡದ ಹಾಗೆ ದಿನ ವಿಡೀ ಫೋನು ಕರೆಗಳು.

"ಯಾಕೆ ಮೇಡಂ? ಮನೆಯವರೊಂದಿಗೆ ಅಷ್ಟೊಂದು ಗಂಭೀರ ಜಗಳವಾಯಿತೆ? ಕುಟುಂಬದಲ್ಲೇನಾದರೂ ಕಲಹವೆ? ನಿಮಗಿರುವ ತೊಂದರೆಯಾದರೂ ಏನು? ಎಲ್ಲವನ್ನೂ ತ್ಯಜಿಸಿ ಜಗನ್ನಾಥನ ಮಂದಿರ

ಸೇರುವ ನಿರ್ಧಾರವನ್ನೇಕೆ ತೆಗೆದುಕೊಂಡಿರಿ?'

ಏನೆಂದು ಉತ್ತರಿಸಬೇಕು? ಹೇಗೆ ಅವರಿಗೆಲ್ಲ ಸಮಾಧಾನ ಹೇಳಬೇಕು? ಹೇಳಿದರೂ ಅವರು ಕೇಳಬೇಕಲ್ಲ! ಪತ್ರಿಕೆಗಳಲ್ಲಿ ಬರುವುದೆಲ್ಲ ಅಪ್ಪಟ ಸತ್ಯ ಎಂದು ನಂಬಿದ ಈ ಜನಕ್ಕೆ "ವಸ್ತುಸ್ಥಿತಿ ಅದಲ್ಲ" ಎಂದು ತಿಳಿ ಹೇಳುವುದಾದರೂ ಹೇಗೆ?

ಸಂಯುಕ್ತಾ ನಿಜಕ್ಕೂ ರೋಸಿ ಹೋದರು.

ಒಂದಲ್ಲ, ಬಹುತೇಕ ಎಲ್ಲಾ ಪತ್ರಿಕೆಗಳಲ್ಲೂ ಇಂಥದೇ ಅರ್ಥ ಬರುವ ಸುದ್ದಿ! 'ಏಶಿಯನ್ ಏಜ್' ಅಂತೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸಂಪಾದಕೀಯವನ್ನೇ ಬರೆದಿತ್ತು. ಅದರಲ್ಲಿ 'ಈ ಮೂಲಕ ಸಂಯುಕ್ತಾ ಪುಕ್ಕಟೆ ಪ್ರಚಾರ ಗಿಟ್ಟಿಸಿಕೊಳ್ಳುವ ತಂತ್ರ ಹೂಡಿದ್ದಾಳೆ'ದು ಆಪಾದಿಸಿತ್ತು. ಕಂಡು ಮಾತನಾಡದೆಯೂ ಕಂಡಕಂಡಂತೆ 'ಸಂದರ್ಶನ'ವನ್ನು ಪ್ರಕಟಿಸಿತ್ತು. ಅದರ ಸಂಪಾದಕ ಎಂ.ಜೆ. ಅಕ್ಬರರೊಂದಿಗೆ ಈ ಸ್ವಕಪೋಲಕಲ್ಪಿತ ಸಂದರ್ಶನವನ್ನು ಕುರಿತಂತೆ ಫೋನಿನಲ್ಲಿ ಮಾತಾಡಿ, "ಅದೆಲ್ಲ ಅವಾಸ್ತವ; ನನ್ನೊಂದಿಗೆ ಮಾತಾಡದೆ ಬರೆಯುವುದೆಂದರೇನು?" ಎಂದು ಕೇಳಿದರೆ ಆತ ಅದು ತನ್ನ ಗಮನಕ್ಕೆ ಬಂದೇ ಇಲ್ಲ; ಏನೇ ಆದರೂ ಒಂದು ಸ್ಪಷ್ಟೀಕರಣವನ್ನು ಬರೆದು ಕಳಿಸಿಬಿಡಿ, ಪ್ರಕಟಿಸುತ್ತೇವೆ ಎಂದು ಸಮಜಾಯಿಷಿ ಹೇಳಿದರಂತೆ.


ನಿಜವಾಗಿ ನಡೆದದ್ದು ಇಷ್ಟು:

ಕಳೆದ ವರ್ಷ ಐವರು ತರುಣಿಯರು ಪುರಿಯ ಜಗನ್ನಾಥ ಮಂದಿರದ 'ದೇವದಾಸಿ'ಯರಾಗಲು ಸಿದ್ಧರಾಗಿದ್ದಾರೆ ಎಂಬೊಂದು ವರದಿ ಪತ್ರಿಕೆಗಳಲ್ಲಿ ಕಾಣಿಸಿಕೊಂಡಿತು. ಮರುದಿನವೇ ಝೀ ಟೀವಿ ಹಾಗೂ ಒಂದೆರಡು ಪತ್ರಿಕೆಗಳ ವರದಿಗಾರರು ಸಂಯುಕ್ತಾಳೊಂದಿಗೆ ಮಾತಾಡುತ್ತಿದ್ದಾಗ ಆನುಷಂಗಿಕವಾಗಿ "ನೀವು ಜಗನ್ನಾಥ ಮಂದಿರದಲ್ಲಿ ನರ್ತಿಸಲು ಇಚ್ಛಿಸುತ್ತೀರಾ?" ಎಂದು ಕೇಳಿದರು.

"ಒಂದು ವೇಳೆ ಅಂಥ ಸದವಕಾಶ ಪ್ರಾಪ್ತವಾಗುವುದಾದರೆ ನನ್ನಷ್ಟು ಪುಣ್ಯವಂತೆ ಬೇರಾರೂ ಇಲ್ಲ ಎಂದು ಭಾವಿಸುತ್ತೇನೆ. ನಾನು ಇಂದು ತಲಪಿರುವ ಸ್ಥಾನ-ಮಾನಗಳೆಲ್ಲ ಆ ಜಗನ್ನಾಥನ ಆಶೀರ್ವಾದದಿಂದಲೇ ಲಭ್ಯವಾದಂಥವು. ಒಡಿಸ್ಸಿ ನೃತ್ಯ ಪರಂಪರೆ ಆ ದಯಾಘನನ ಕೊಡುಗೆಯೆ. ಎಲ್ಲೇ ನರ್ತಿಸಿದರೂ ವೇದಿಕೆಯ ಮೇಲೆ ಆ ಸ್ವಾಮಿಯ ಪ್ರತಿಮೆಯನ್ನಿರಿಸಿರುತ್ತೇನೆ. ಹದಿನೈದು ವರ್ಷಗಳ ಹಿಂದೊಮ್ಮೆ ಜಗನ್ನಾಥನ ಸನ್ನಿಧಿಯಲ್ಲಿ ನರ್ತಿಸಲು ಅವಕಾಶ ಕೋರಿ ಅಲ್ಲಿಯ ಕಲೆಕ್ಟರರಿಗೆ ಬರೆದುಕೊಂಡಿದ್ದೆ. ಆದರೆ ಪೂಜಾರಿಗಳು ಅಡ್ಡ ಬಂದರು.



ಕುಣಿಯಿತು ಹೆಜ್ಜೆ ನಲಿಯಿತು ಗೆಜ್ಜೆ..



ಸಂಯುಕ್ತಾ: ಸುಖ-ದುಃಖದ ಕಥೆ

'ಹೊರಗಿನವಳು' ಎಂಬ ಕಾರಣವನ್ನು ಅವರು ಮುಂದೊಡ್ಡಿದ್ದರು," ಸಂಯುಕ್ತಾ ಸಹಜವಾಗೇ ಉತ್ತರ ನೀಡಿದ್ದರು.

"ಪ್ರತಿದಿನವೂ ಸ್ವಾಮಿಯೆದುರು ನೃತ್ಯ ಸೇವೆ ಸಲ್ಲಿಸಬಯಸುತ್ತೀರಾ?" ಎಂಬುದು ಇನ್ನೊಬ್ಬನ ಪ್ರಶ್ನೆಯಾಗಿತ್ತು.

ವೃತ್ತಿ ಕಾರಣದಿಂದಲೂ ಕೌಟುಂಬಿಕ ಕಾರಣಗಳಿಂದಲೂ ಅದು ಅಸಾಧ್ಯ ಎಂದಾಕೆ ವಿನಯವಾಗೇ ತಿಳಿಸಿದ್ದರು. "ಆದರೆ ಒಟ್ಟಿಗೇ ಒಂದು ವಾರದವರೆಗೆ ನೃತ್ಯ ಕಾರ್ಯಕ್ರಮವನ್ನು ಅಲ್ಲಿ ನೀಡುವ ಅವಕಾಶ ಸಿಗುವುದಾದರೆ ಸಂತೋಷ" ಎಂದೂ ವ್ಯಕ್ತಪಡಿಸಿದರು.

" 'ದೇವದಾಸಿ'ಯಾಗುವ ಇಚ್ಛೆಯೇನಾದರೂ ಇದೆಯೆ?" ಎಂಬುದು ಮತ್ತೊಬ್ಬನ ತುಂಟ ಪ್ರಶ್ನೆಯಾಗಿತ್ತು.

"ಅದು ಹೇಗೆ ಸಾಧ್ಯ? ಆ ರೀತಿ-ರಿವಾಜುಗಳನ್ನೆಲ್ಲ ಪರಿಪಾಲಿಸಲು ಈಗ ಸಾಧ್ಯವಾಗುವುದಿಲ್ಲ. ಆದರೆ ಸ್ವಾಮಿಯ ಪದತಲದಲ್ಲಿ ನರ್ತಿಸುವಾಗ ಆ ದೇವನ ದಾಸಾನುದಾಸಿಯೆಂದೇ ನನ್ನನ್ನು ನಾನು ತಿಳಿದುಕೊಳ್ಳಬೇಕಾಗುತ್ತದೆ. ಆಗ ಜನ ನನ್ನನ್ನು 'ದೇವದಾಸಿ' ಎಂದರೂ ದುಃಖವಾಗುವುದಿಲ್ಲ..." ನಗುತ್ತಲೆ ಉತ್ತರಿಸಿದ್ದರು ಸಂಯುಕ್ತಾ.

ತಿರಿಚುವವರಿಗೇನು? ಹೇಳಿಕೆಯನ್ನೇ ತಿರುಚಿ ಸುದ್ದಿ ಬರೆದುಬಿಟ್ಟರು.

ಅದರ ಬೆನ್ನ ಹಿಂದೆಯೆ ಮತ್ತೊಂದು ವಿವಾದ.

'ಕಿಂಗ್ ಮೇಕರ್' ಎಂದೇ ತನ್ನನ್ನು ತಾನು ಗುರುತಿಸಿಕೊಳ್ಳುವ ಲಾಲೂ ಪ್ರಸಾದ ಯಾದವ ಸೃಷ್ಟಿಸಿದ್ದು. ಆ ಮೊದಲೆಂದೂ ಇಂಥ ವಿವಾದದಲ್ಲಿ ಸಿಲುಕಿಕೊಂಡಿರಲಿಲ್ಲ ಸಂಯುಕ್ತಾ.

ಬಿಹಾರ ಸರಕಾರದ ಪ್ರವಾಸೋದ್ಯಮ ಇಲಾಖೆ ರಾಜಗಿರ್ ನೃತ್ಯೋತ್ಸವಕ್ಕೆ ಸಂಯುಕ್ತಾರನ್ನು ಆಮಂತ್ರಿಸಿತ್ತು. ರಾಜಕಾರಣಿಗಳೇ ಹೆಚ್ಚಾಗಿ ತುಂಬಿದ್ದ ನೃತ್ಯೋತ್ಸವದ ಉದ್ಘಾಟನೆಯ ಸಮಾರಂಭ. ಉದ್ದುದ್ದ ಭಾಷಣಗಳಿಂದಾಗಿ ಕಲಾವಿದರೆಲ್ಲ ಬೇಸರಗೊಂಡಿದ್ದರು. ಇದ್ದ ಅವಕಾಶವೇ ಕಡಿಮೆ. ಬಂದವರೆಲ್ಲರ ಪ್ರದರ್ಶನ ನಡೆಯಲೇಬೇಕು. ಅವಸರವಸರವಾಗಿ ಮಾಡಿ ಮುಗಿಸಬೇಕು. ಸಂಯುಕ್ತಾರ ಕಾರ್ಯಕ್ರಮ ಇನ್ನೇನು ಶುರುವಾಗಬೇಕು. ಸಾಥಿಗಳೆಲ್ಲ ವೇದಿಕೆಗೆ ಒಂದು ವಾದ್ಯಗಳನ್ನಿಟ್ಟುಕೊಂಡು ಸೂರು ಹಚ್ಚ ತೊಡಗಿದರು.

ಎದುರಿಗೆ ಕೂತಿದ್ದರು 'ಕಿಂಗ್ ಮೇಕರ್.'

"ಹೂಂ, ಕೂಡಲೇ ಸೂರು ಹಚ್ಚಿಕೊಳ್ರಯ್ಯಾ. ಏನದು 'ಯ್' ಅಂತ ನಿಮ್ಮದು?" ಲಾಲೂ ಅಬ್ಬರಕ್ಕೆ ಅವಮಾನಿತರಾದರು ಸಂಗೀತಗಾರರು. ಪ್ರೇಕ್ಷಕರಲ್ಲಿ ಯಾರೋ ಎಲ್ಲಿಂದಲೊ ಕೂಗಿದ್ದರೆ ಅಷ್ಟಾಗಿ ಲಕ್ಷಿಸುತ್ತಿರಲಿಲ್ಲ. ಆದರೆ ಹಾಗೆ ಕೂಗಿಕೊಂಡವರು ಸ್ವತಃ ಮುಖ್ಯಮಂತ್ರಿಗಳು!

ನುಂಗಿಕೊಂಡು ಮುಂದುವರಿಸಬೇಕೆಂಬಷ್ಟರಲ್ಲಿ ಲಾಲೂ ಬಾಯಿಂದ ಮತ್ತೊಂದು ಅಪಲಾಪ. ಜನರಂತೂ ಲಾಲೂ ಹತ್ತಿರ ಬರುವುದು, ನಗುವುದು, ಚಪ್ಪಾಳೆ ತಟ್ಟಿ ಕೇಕೆ ಹಾಕುವುದು, ಜೋರಾಗಿ ಮಾತಾಡಿಕೊಳ್ಳುತ್ತ ಹೋಗುವುದು ನಿರಂತರ ನಡೆದೇ ಇತ್ತು. ಅವರಾರಿಗೂ

ಎದುರಿಗೆ ನೃತ್ಯ ನಡೆಯುತ್ತಿದೆ, ಭಾರತದ ಸುಪ್ರಸಿದ್ಧ ನೃತ್ಯಾಂಗನೆ ಅಲ್ಲಿ ನರ್ತಿಸುತ್ತಿದ್ದಾಳೆ ಎಂಬ ಪರಿವೆಯೇ ಇರಲಿಲ್ಲ. ಸಂಯುಕ್ತಾ ಬಗ್ಗೆ ಅವರಾರಿಗೂ ಗೊತ್ತೂ ಇರಲಿಲ್ಲ. ಆ ಗೌಜನಿಂದಾಗಿ ಸಂಯುಕ್ತಾರ ಏಕಾಗ್ರತೆಗೆ ಭಂಗ ಉಂಟಾಗುತ್ತಲೇ ಇದ್ದಿತು. ನಾಲ್ಕನೆಯ ಐಟಮ್ಮಿಗೆ ಮುನ್ನ ಸಣ್ಣದೊಂದು ವಿವರಣೆ ಕೊಡಲೆಂದು ಸಂಯುಕ್ತಾ ಧ್ವನಿವರ್ಧಕದೆದುರು ನಿಂತರು.

"ನೀವೇ ಕುಣೀತಾ ಇರ್ತೀರೋ ಅಥವಾ ಬೇರೆಯವರಿಗೂ ಅವಕಾಶ ಕೊಡ್ತೀರೊ? ಹೂಂ... ಹೂಂ... ಈಗ ಸಾಕು, ಆ ಮೇಲೆ ಬೇಕಾದ್ರೆ ಕುಣೀರಂತೆ..."

ಲಾಲೂ ಅಪ್ಪಣೆಗೆ ಏನಂತ ಹೇಳಬೇಕು? ಒಂದು ಕ್ಷಣ ಸಿಟ್ಟು ಅವಮಾನಗಳಿಂದ ಮೂಕಳಾಗಿ ಬಿಟ್ಟ ಸಂಯುಕ್ತಾ, ಆಮೇಲೆ ವಿನಯಪೂರ್ವಕವಾಗಿ, "ಇನ್ನು ಐದೇ ನಿಮಿಷ ಸಾಹೇಬ್ರೇ..." ಎಂದು ವಿನಂತಿಸಿಕೊಂಡರು.

ನೆರೆದ ಪ್ರೇಕ್ಷಕರಲ್ಲಿ ಗಣ್ಯರಿದ್ದರು, ಖ್ಯಾತ ಕಲಾವಿದರಿದ್ದರು, ಪತ್ರಿಕಾ ವರದಿಗಾರರೂ ಕೂತಿದ್ದರು. ಅವರಿಗೆಲ್ಲ ಸಂಯುಕ್ತಾಳ ಸತ್ವ ಗೊತ್ತು. ಮುಖ್ಯಮಂತ್ರಿ ಹಾಗೆ ಆಡಿದರೆಂದು ತಾನೂ ಹಾಗೆ ಆಡಲಿಕ್ಕಾಗುತ್ತದೆಯೆ? ಸಂಯುಕ್ತಾ ಸಮಾಧಾನ ತಾಳಿದರು.

ಆದರೆ ಕಾರ್ಯಕ್ರಮ ಮುಗಿದ ಮೇಲೆ ವಿಂಗಿನಲ್ಲಿದ್ದ ನೃತ್ಯೋತ್ಸವದ ವ್ಯವಸ್ಥಾಪಕರ ಮೇಲೆ ಹರಿಹಾಯ್ದು ಸಂಯುಕ್ತಾ ಕೂಡಲೇ ಅಲ್ಲಿಂದ ಹೊರಟುಬಿಟ್ಟರು.



ಅಜ್ಜ ಹಾಗೂ ಸೋದರ-ಸೋದರಿಯರೊಂದಿಗೆ



ಸುದ್ದಿ ಪತ್ರಿಕೆಗಳ ಮೂಲಕ ಸೂರಾಯಿತು.

ಕಲಾವಿದೆಗೆ ಆದ ಅವಮಾನವನ್ನು ಬೇರೆ ಬೇರೆ ರೀತಿಯಲ್ಲಿ ಬಳಸಿಕೊಳ್ಳಲು ರಾಜಕೀಯ ಪಕ್ಷಗಳವರು ತುದಿಗಾಲ ಮೇಲೆ ನಿಂತರು. ಮಹಿಳಾ ಕಾಂಗ್ರೆಸ್ಸಿನವರು ಈ ಸಂಬಂಧದಲ್ಲಿ ಮುಖ್ಯಮಂತ್ರಿ ನಿವಾಸದೆದುರು ಧರಣಿ ಹೂಡುವ ಇಚ್ಛೆಯನ್ನು ವ್ಯಕ್ತಪಡಿಸಿ ಸಂಯುಕ್ತಾರ ಅಭಿಪ್ರಾಯ ಕೇಳಿದರು.

ಆದರೆ ಸುಮ್ಮಸುಮ್ಮನೆ ತನ್ನನ್ನು ರಾಜಕೀಯ ವಿವಾದದಲ್ಲಿ ಸಿಲುಕಿಸಬೇಡಿ ಎಂದು ಕೈ ಮುಗಿದು ಕೇಳಿಕೊಂಡರು ಸಂಯುಕ್ತಾ.

ಒಂದೆರಡು ದಿನಗಳಲ್ಲೇ 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಲಾಲೂ ಯಾದವ್ ಒಂದು ಹೇಳಿಕೆಯಿತ್ತು ನಡೆದುಹೋದ ಪ್ರಮಾದಕ್ಕಾಗಿ ಕ್ಷಮೆ ಯಾಚಿಸಿದರು. ಸ್ವತಃ ಸಂಯುಕ್ತಾರೊಂದಿಗೂ, ಒರಿಸ್ಸಾದ ಆಗಿನ ಮುಖ್ಯಮಂತ್ರಿ ಬಿಜು ಪಟ್ನಾಯಕರೊಂದಿಗೂ ದೂರವಾಣಿಯಲ್ಲಿ ಮಾತನಾಡಿ ಕ್ಷಮಾಪಣೆ ಕೇಳಿದರು.

** *** **

ಸಂಯುಕ್ತಾ ಪಾಣಿಗ್ರಾಹಿ ನರ್ತನ ಕಲೆಯನ್ನು ಪ್ರೀತಿಸತೊಡಗಿದ್ದು ತುಂಬ ಹಿಂದಿನಿಂದಲೇ. ನಾಲ್ಕರ ಬಾಲೆಯಾಗಿದ್ದಾಗಲೇ ಆ ಅಭಿರುಚಿಯನ್ನು ಹುಟ್ಟಿಸಿಕೊಂಡವರು ಆಕೆ. ನೃತ್ಯ ಕಲೆಗಾಗಿ ಎಂಥ ಕಷ್ಟವನ್ನಾದರೂ ಸಹಿಸಲು ಸಿದ್ಧ ಎಂಬ ಅವರ ಮಾತು ಕೇವಲ ವೇದಿಕೆಯ ಉದ್ಘೋಷವಲ್ಲ. ಸ್ವತಃ ಅನೇಕ ಅಡ್ಡಿ ಆತಂಕಗಳನ್ನು ಎದುರಿಸಿಯೂ ಗೆದ್ದ ಧೀರೆ ಸಂಯುಕ್ತಾ. ಇಂದು ಸಾಧನೆಯ ಗೌರೀಶಂಕರವನ್ನೇರಿ ನಿಂತಿರುವ ಆಕೆ ಆ ಕಲ್ಲು-ಮುಳ್ಳುಗಳ ಹಾದಿಯನ್ನು ಮರೆತಿಲ್ಲ.

ಇನ್ನು ಮುಂದೆಲ್ಲ ಸಂಯುಕ್ತಾ ತನ್ನ ಬಾಳಿನ ಕಥೆಯನ್ನು ಹೇಳುತ್ತಲೇ ಹೋಗುತ್ತಾರೆ. ಕೇಳಿಕೊಳ್ಳಿ....

** *** **

ನಾನು ಹುಟ್ಟಿದ್ದು ೧೯೪೪ರಲ್ಲಿ, ಒಡಿಸ್ಸಾದ ಬೆಹ್ರಾಮಪೂರ್‌ನಲ್ಲಿ. ಎಂಜಿನಿಯರ್ ಆಗಿದ್ದ ನನ್ನ ತಂದೆ ಅಭಿರಾಮ ಮಿಶ್ರಾ ಅಲ್ಲಿಗೆ ವರ್ಗವಾಗಿ ಹೋದ ಸಂದರ್ಭ ಅದು. ಅತಿ ಚಿಕ್ಕಂದಿನ ನೆನಪುಗಳು ಮಾಸಿವೆ. ನಾಲ್ಕನೆ ವರ್ಷದಿಂದೀಚೆಗಿನ ಪ್ರತಿಯೊಂದೂ ಘಟನೆ ನನ್ನ ಮಸ್ತಿಷ್ಕದಲ್ಲಿ ಅಚ್ಚೊತ್ತಿದೆ.

ನಾಲ್ಕನೇ ವರ್ಷದಿಂದಲೇ ನಾನು ನರ್ತಿಸಲಾರಂಭಿಸಿದೆ. ಕುಲೀನ ಮನೆತನದ ಹುಡುಗಿಯರು ನೃತ್ಯ-ಸಂಗೀತ-ವಾದ್ಯವಾದನ ಮುಂತಾದವುಗಳನ್ನು ಕಲಿಯುವುದು ಹೋಗಲಿ, ಅವುಗಳಲ್ಲಿ ಆಸಕ್ತಿ ತೋರುವುದೂ ಸಲ್ಲದ ನಡತೆ ಎನಿಸುತ್ತಿತ್ತು.

'ನಾಚಕೆಯ ಮರೆತಾತ ಹಾಡುತಾನೆ. ಇನ್ನು ನಿರ್ಲಜ್ಜನಂತೂ ನಾಚುತಾನೆ' (ನಾಚ್= ನೃತ್ಯ) ಎಂಬ ದೋಹೆ(=ದ್ವಿಪದಿ) ಆಗ ಜನಪ್ರಿಯವಾಗಿತ್ತು.

ಎರಡು ವರ್ಷದವಳಿದ್ದಾಗಲೇ ರೇಡಿಯೋದಲ್ಲಿ ಒಳ್ಳೆಯ, ತಲೆದೂಗುವಂಥ ಲಯಬದ್ಧ ಸಂಗೀತ ಕೇಳಿಬಂದರೆ ನಾನು ಕೂತಲ್ಲೇ ಕಾಲು ಕುಣಿಸುತ್ತಿದ್ದೆನಂತೆ. ನಮ್ಮ

ತಾಯಿ ಹೇಳುತ್ತಿದ್ದರು. ಗ್ರಾಮಾಫೋನ್ ರೆಕಾರ್ಡ್ ಹಾಕಿದಾಗಲೂ ಅಷ್ಟೆ. ಅದಕ್ಕೆ ತಕ್ಕಂತೆ ಕೈಯ ಮೂಲಕ ಹಾವಭಾವ ವ್ಯಕ್ತಪಡಿಸುತ್ತಿದ್ದನಂತೆ. ನಮ್ಮಮ್ಮ, ಶಕುಂತಲಾ ಮಿಶ್ರಾ, ಹವ್ಯಾಸಿ ಗಾಯಕಿ. ಸಂಗೀತ ಕ್ಷೇತ್ರದಲ್ಲೇ ಮುಂದುವರಿಯಲು ನನ್ನನ್ನು ಪ್ರೋತ್ಸಾಹಿಸಿದಳು. ಆಕೆ ಚಾಹೂ ನೃತ್ಯದ ತವರೂರಾದ ಮಯೂರ್ ಭಂಜ್‌ನಲ್ಲಿ ಹುಟ್ಟಿದವಳು. ಅವಳ ತಂದೆ (ನನ್ನಜ್ಜ) ಕೈಲಾಶ್ ಪಂಡಾ ಅವರು ಚಾಹೂ ನೃತ್ಯ ಶೈಲಿಯ ಪೋಷಕರಾಗಿದ್ದರು. ರಾಜಮನೆತನದೊಂದಿಗೆ ಸಂಪರ್ಕವಿದ್ದವರಂತೆ ಅವರು. ಕಲೆಯ ಬಗ್ಗೆ ಅವರ ಮನೆಯಲ್ಲಿ ಅಭಿಮಾನ-ಪ್ರಶಂಸೆಗಳು ಸಂದಾದೀಪದಂತಿದ್ದವು.

ಅಮ್ಮ ನನಗೆ ಸಂಗೀತ-ನೃತ್ಯಗಳಲ್ಲಿ ಶಿಕ್ಷಣ ಕೊಡಿಸಲು ಮುಂದಾದಾಗ. ಅಪ್ಪನ ಕಡೆಯವರೆಲ್ಲ ವಿರೋಧಿಸಿದ್ದರು. 'ಹುಡುಗಿಯ ಬಾಳನ್ನೇ ಹಾಳು ಮಾಡುತ್ತಿದ್ದೀ' ಎಂದು



ಬಾಲಕಿ, ಬಂದ ಪಾರಿತೋಷಕಗಳು!



ಸಂಜುಕ್ತಾ: ಸುಖ-ದುಃಖದ ಕಥೆ

ಜರಿದರು. 'ಇವಳನ್ನು ಯಾರೂ ಮದುವೆಯಾಗುವುದಿಲ್ಲ ನೋಡು', 'ಸಮಾಜ ಇವಳನ್ನು ದೂರವಿಡುವುದು ಖಂಡಿತ' ಎಂದೆಲ್ಲ ಹೆದರಿಸಿದರಂತೆ. ನನ್ನಮ್ಮ ಇದಾವುದಕ್ಕೂ ಸೊಪ್ಪು ಹಾಕಲಿಲ್ಲ.

ಹಾಗೆ ನೋಡಿದರೆ ಅಪ್ಪ ಇದಕ್ಕೇನೂ ವಿರೋಧಿಯಾಗಿರಲಿಲ್ಲ. ಆದರೆ ಜಂಟಿ ಕುಟುಂಬವಾದ್ದರಿಂದ ಈ ಕುರಿತ ಗೇಲಿಗಳು ಸಹಜವಾಗಿದ್ದವು. ನನ್ನ ಹಾಡು-ಕುಣಿತಗಳ ಕುರಿತೇ ಜಗಳವೆಂಬಷ್ಟು ತೀವ್ರವಾದ ವಾಗ್ವಾದಗಳೂ ಆಗುತ್ತಿದ್ದುವು. ಆಗೆಲ್ಲ ಅಪ್ಪ "ಯಾಕೆ ಇವರೆಲ್ಲರ ಮನಸ್ಸಿಗೆ ವಿರುದ್ಧವಾಗಿ ವರ್ತಿಸುತ್ತಿ? ಬಿಟ್ಟುಬಿಡು" ಎಂದು ಅಮ್ಮನಿಗೆ ಹೇಳುತ್ತಿದ್ದ.

ಅಪ್ಪನಿಗೆ ನೃತ್ಯ ಕಾರ್ಯಕ್ರಮಗಳೆಂದರೆ ಬಲು ಇಷ್ಟ. ಅಮ್ಮನೊಂದಿಗೆ ಹಲವಾರು ಸಹ ಆತ ನನ್ನನ್ನೂ ಥೇಟರಿಗೆ ಕರೆದೊಯ್ಯುತ್ತಿದ್ದ. ಕೇಲುಚರಣ ಮಹಾಪಾತ್ರ ಹಾಗೂ ಅವರ ಹೆಂಡತಿಯ (ಇವರಿಬ್ಬರು ನನ್ನ ಗುರು ಹಾಗೂ ಗುರುಪತ್ನಿ) ನೃತ್ಯವಿದ್ದರಂತೂ ಮುಗಿದೇ ಹೋಯಿತು. ಮನೆಗೆ ಬಂದ ಮೇಲೆ ನಾನು ಅವರನ್ನು ಅನುಕರಿಸುತ್ತಿದ್ದೆ. ಅಮ್ಮ ಮೆಚ್ಚಿಕೆ ಸೂಚಿಸಿದರೆ ಉಳಿದವರಿಂದ ಮೂದಲಿಕೆಗಳು ಕಟ್ಟಿಟ್ಟ ಗಂಟಾಗಿರುತ್ತಿದ್ದವು. ಓಣಿಯವರೂ ನನ್ನ ಹವ್ಯಾಸವನ್ನು ಮೆಚ್ಚುತ್ತಿರಲಿಲ್ಲವೆನ್ನಿ.

ಒಮ್ಮೆ ಗುರು ಕೇಲುಚರಣ ಮಹಾಪಾತ್ರರನ್ನು ತಮ್ಮ ಕಾರಿನಲ್ಲಿ ಕರೆದೊಯ್ಯುತ್ತಿದ್ದಾಗ ನೆರೆಮನೆಯ ಒಬ್ಬಾತ ಕೈ ಮಾಡಿ ನಿಲ್ಲಿಸಿ, "ಯಾರೀ ವ್ಯಕ್ತಿ?" ಎಂದು ಕೇಳುವ ಧೈರ್ಯ ತೋರಿದನಂತೆ. ಅಪ್ಪ ಉತ್ತರಿಸಿದಾಗ, "ಅಯ್ಯೋ, ನೀವು ಎಂಥಾ ನೀಚವೃತ್ತಿಯವರೊಂದಿಗೆ ತಿರುಗಾಡುತ್ತೀರಿ.." ಎಂದು ಅಲ್ಲಿಂದ ಭರಭರನೆ ನಡೆದುಬಿಟ್ಟನಂತೆ.

ರಸ್ತೆ ಮೇಲೆ ನರ್ತಿಸಿದ್ದು....

ಆರು ವರ್ಷದ ಹುಡುಗಿ ನಾನಾಗ. ಒಮ್ಮೆ 'ನಿಮ್ಮ ಹುಡುಗಿ ದಿನಾಲೂ ಶಾಲೆಗೆ ತಡವಾಗಿ ಬರುತ್ತಾಳೆ' ಎಂದು ಶಾಲೆಯಿಂದ ಮನೆಗೊಂದು ದೂರು. 'ಮನೆಗೂ ಲೇಟಾಗಿಯೆ ಬರುತ್ತಾಳೆ' ಎಂಬುದು ಹಿರಿಯರ ದೂರಾಗಿತ್ತು. ಕಾರಣ ಹೀಗಿತ್ತು. ರಸ್ತೆಯಲ್ಲಿ ಸಿಕ್ಕುವ ನೆರೆಹೊರೆಯವರು, ಪರಿಚಿತರು- "ಸಂಜು, ನಮಗಾಗಿ ಒಂದು ಸಣ್ಣ ಡ್ಯಾನ್ಸ್ ಮಾಡುತ್ತೀಯಾ?" ಎಂದು ಕೇಳುತ್ತಿದ್ದರು. ನಾನು ರಸ್ತೆ ಬದಿಗೆ ಪುಸ್ತಕ ಚೀಲವನ್ನಿಟ್ಟವಳೇ ನನಗರಿವಿಲ್ಲದಂತೆ ಅದೆಷ್ಟು ಹೊತ್ತು ಕುಣಿಯುತ್ತಿರುತ್ತಿದ್ದೆನೋ. ಅಪ್ಪನಿಗೆ ಇದು ಗೊತ್ತಾದಾಗ ತರಾಟೆಗೆ ತೆಗೆದುಕೊಂಡರು. "ಸಾಕು ನೀನಿನ್ನು ಡ್ಯಾನ್ಸು ಕಲಿಯೋದು. ಸುಮ್ಮನೆ ಶಾಲೆಗೆ ಹೋಗು, ಬಾ. ಅಷ್ಟೆ!" ಎಂದು ಕಟ್ಟಪ್ಪಣೆ ಮಾಡಿಬಿಟ್ಟರು. ಹದಿನೈದು ದಿನ ನೃತ್ಯವರ್ಗ ಅಂತ ಬಾಯಿಂದಲೂ ಅನ್ನಲಿಲ್ಲ. ನಾನಂತೂ ಊಟ ಬಿಟ್ಟು ಕಣ್ಣೀರ ಕೊಳನ್ನೇ ಉಂಡೆ. ಆದರೆ ಅಪ್ಪನಿಗೆ ನನ್ನ ಮೇಲೆ ಎಂಥ ಪ್ರೀತಿಯಿತ್ತು ಎನ್ನುವುದು ಗೊತ್ತಾದದ್ದು ಅವರು ಮತ್ತೆ ಗುರುವನ್ನು ಮನೆಗೆ ಕರೆಸಿದಾಗಲೆ. ಆ ಮೇಲೆ, "ಸಂಜು, ನಿನ್ನ ಅಭ್ಯಾಸ ಮೊದಲು. ಉಳಿದದ್ದೆಲ್ಲ ನಂತರ ಮಗೂ" ಎಂದು ಪ್ರೀತಿಯಿಂದ ಮೈದಡವಿದರು. ಅಭ್ಯಾಸದೆಡೆ ಪೂರ್ಣ ಗಮನಹರಿಸತೊಡಗಿದೆ.

ಐವತ್ತರ ದಶಕದಲ್ಲಿ ಶಾಲೆ-ಕಾಲೇಜುಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಹೆಚ್ಚಿದ್ದುವು. ಚಾಚಾ ನೆಹರೂರ ಜನ್ಮೋತ್ಸವದಂದು 'ಶಿಶುದಿವಸ'ದ ಆಚರಣೆ. ಬಾಲ ನರ್ತಕಿ ಎಂದು ಅಂದು ನಾನು ಎಷ್ಟೆಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗುತ್ತಿತ್ತು! ಅಂತೂ ನನಗೇ ಮೊದಲ ಬಹುಮಾನ ಕಟ್ಟಿಟ್ಟ ಬುತ್ತಿಯಾಗಿರುತ್ತಿದ್ದುದರಿಂದ ಶಾಲೆಯ ಪ್ರತಿನಿಧಿ ಅಂತ ಹೆಡ್‌ಮಾಸ್ಟರರು ನನ್ನ ಹೆಸರನ್ನೇ ಸೂಚಿಸುತ್ತಿದ್ದರು. ಅಮ್ಮ ಎಲ್ಲ ಕಾರ್ಯಕ್ರಮಗಳಿಗೂ ನನ್ನೊಂದಿಗೆ ಹೊರಡುತ್ತಿದ್ದುದರಿಂದ ನನ್ನ ಉಳಿದ ಸೋದರ-ಸೋದರಿಯರಿಗೆ ಸಿಟ್ಟು. ಬಹುಮಾನಗಳು ಬರತೊಡಗಿದ ಮೇಲೆ ನನ್ನ ಅಜ್ಜಿಯಂತೂ ತನ್ನ ಸೊಸೆ (ನನ್ನ ಅಮ್ಮ)ಯನ್ನು ಕಾರ್ಯಕ್ರಮಗಳಿಗೆ ಹೋಗಗೊಟ್ಟು ತಾನೇ ಎಲ್ಲ ಮನೆಗೆಲಸವನ್ನು ನೋಡಿಕೊಳ್ಳತೊಡಗಿದಳು.

ಮೊತ್ತ ಮೊದಲ ಬಾರಿಗೆ ನಾನು ಸಾರ್ವಜನಿಕರೆದುರು ನೃತ್ಯ ಪ್ರದರ್ಶನ ನೀಡಿದ್ದು ಐದನೆಯ ವಯಸ್ಸಿನಲ್ಲಿ.

ಮಯೂರ್‌ಭಂಜ್‌ನಲ್ಲಿ, ಕಾಂಗ್ರೆಸ್ ಮುಂದಾಳು ಪಟ್ಟಾಭಿ ಸೀತಾರಾಮಯ್ಯ ಆ ಕಾರ್ಯಕ್ರಮಕ್ಕೆ ಹಾಜರಾಗಿದ್ದರು. ಹಾಗೇ ಕುಣಿಯುತ್ತಲೇ ಇದ್ದೆ. "ಹೂಂ... ಸಾಕು, ಮುಗಿಸು, ಒಳಗೆ ಬಾ" ಎಂದು ನನ್ನ ಗುರು ಮತ್ತು ಅಮ್ಮ ಇಬ್ಬರೂ ಒತ್ತಾಯಿಸುತ್ತಲೇ ಇದ್ದರೂ ನಾನು ಕುಣಿತ ಮುಂದುವರಿಸಿದ್ದೆ. ೧೯೫೨ರಲ್ಲಿ ಕಲಕತ್ತಾದಲ್ಲಿ ನಡೆದ ಅಂತಾರಾಷ್ಟ್ರೀಯ ಮಕ್ಕಳ ಉತ್ಸವಕ್ಕೆ ಕರೆತರಲು ವ್ಯವಸ್ಥಾಪಕರು ನನ್ನ ತಂದೆಗೆ ಆಗ್ರಹಪಡಿಸಿದ್ದರು. ಅಲ್ಲಿ ಹೋದರೆ "ಈ ಹುಡುಗಿಯೇನು ಕುಣಿಯುತ್ತಾಳೆ?" ಎಂದು ಹೀಯಾಳಿಸಿ ಅವಕಾಶವನ್ನೇ ನಿರಾಕರಿಸಬೇಕೆ? ಅದಕ್ಕೆ ಕಾರಣವೆಂದರೆ ಅವರಿಗೆ ನಾನೊಬ್ಬಳೇ-ಗುಂಪಿಲ್ಲದೆ-ನರ್ತಿಸುವುದು ಎಂಥ ನೃತ್ಯ ಎಂಬುದೆ ಜಿಜ್ಞಾಸೆ. ಉಳಿದವರೆಲ್ಲ ಗುಂಪುಕಟ್ಟಿಕೊಂಡು ಬಂದಿದ್ದರು. ಅಲ್ಲದೆ

ಮಕ್ಕಳು ಮತ್ತು ಪತಿಯೊಂದಿಗೆ





ಸಂಯುಕ್ತಾ: ಸುಖ-ದುಃಖದ ಕಥೆ

ಒಡಿಸ್ಸಿ ನೃತ್ಯವೆಂದರೆ ಏನೆಂದೇ ಆ ಮಂದಿಗೆ ತಿಳಿದಿರಲಿಲ್ಲ. ನನ್ನ ಅಪ್ಪ ಪೂರ್ತಿ ವಿವರಿಸಿ ದುಂಬಾಲು ಬಿದ್ದರು. ವ್ಯವಸ್ಥಾಪಕರು ರಿಹರ್ಸಲ್ ನೋಡಿದ ಮೇಲೆ "ಹದಿನೈದು ನಿಮಿಷ ನರ್ತಿಸಲು ಅಡ್ಡಿಯಿಲ್ಲ" ಎಂದರು. ಮರುದಿನ ಎಲ್ಲ ಪತ್ರಿಕೆಗಳಲ್ಲೂ ನನ್ನ ಫೋಟೊ, ನನ್ನ ನೃತ್ಯದ ಪ್ರಶಂಸೆ.

ಹದಿನಾಲ್ಕರಲ್ಲೇ ಮದುವೆ ಪ್ರಸ್ತಾಪ...

'ಬೇಬಿ ಸಂಯುಕ್ತಾ' ಎಂದೇ ಒಡಿಸ್ಸಾದಾದ್ಯಂತ ಪ್ರಸಿದ್ಧಳಾದೆ. ಆದರೆ ಒಂದು ದಿನವೂ ಬಿಡುವಿರದಷ್ಟು ಕಾರ್ಯಕ್ರಮಗಳಿಂದ ಬೇಸತ್ತೆ. ಒಮ್ಮೊಮ್ಮೆಯಂತೂ ದಿನಕ್ಕೆರಡು ಕಾರ್ಯಕ್ರಮಗಳು. ಒಡಿಸ್ಸಿ ನೃತ್ಯ ಆಗಿನ್ನೂ ತನ್ನ ನಾಡಿನಲ್ಲೇ ಶಾಸ್ತ್ರೀಯ ನೃತ್ಯಶೈಲಿಯೆಂದು ಜನಕ್ಕೆ ಗೊತ್ತಿರಲಿಲ್ಲ. ಅದರಲ್ಲಿ ಸುಧಾರಣೆಗಳೂ ಆಗಿರಲಿಲ್ಲ. ಇಂದು? ಇಂದು ಅದಕ್ಕೆ ಜಗತ್ಪ್ರಸಿದ್ಧಿ!

ಸ್ನೇಹಿತರ ಒತ್ತಾಯದಂತೆ ಅಪ್ಪ ನನ್ನನ್ನು ಮದ್ರಾಸಿಗೆ-ಶ್ರೀಮತಿ ರುಕ್ಮಿಣಿ ಅರುಂಡೇಲರ 'ಕಲಾಕ್ಷೇತ್ರ'ಕ್ಕೆ-ಕಳಿಸಲು ತಯಾರಾದರು. ಅಮ್ಮನಿಗೂ ಇದು ಪ್ರಿಯ ವಿಷಯವೆ. 'ಕಲಾಕ್ಷೇತ್ರ'ದಲ್ಲಿ ಸಾಮಾನ್ಯ ಅರ್ಥದ ಅಭ್ಯಾಸದ ಜತೆಗೆ ನೃತ್ಯವನ್ನೂ ಕಲಿಯಬಹುದಾದ ಅವಕಾಶ. ಆರು ಮಕ್ಕಳ ತಂದೆಯಾದ್ದರಿಂದ ನನ್ನಷ್ಟು ಶಿಕ್ಷಣದ ಖರ್ಚನ್ನು ನಿಭಾಯಿಸಲಾರದವರಾಗಿದ್ದರು. ಆದ್ದರಿಂದ ಸರಕಾರಿ ವಿದ್ಯಾರ್ಥಿವೇತನ ಸಿಗುವ ಏರ್ಪಾಡು ಮಾಡಿದರು. ಹೀಗೆ ಸರಕಾರಿ ವಿದ್ಯಾರ್ಥಿ ವೇತನ ಪಡೆದ ಮೊದಲ ಮಗು ನಾನೆ.

ಮದ್ರಾಸಿನಲ್ಲಿ 'ಕಲಾಕ್ಷೇತ್ರ'ಕ್ಕೆ ಹೋದರೆ ರುಕ್ಮಿಣೀಜಿ ನನ್ನನ್ನು ಶಿಷ್ಯೆಯೆಂದು ಸ್ವೀಕರಿಸಲು ಒಪ್ಪಲೇಯಿಲ್ಲ. "ಇನ್ನೂ ಎಳೆಯ ಬಾಲೆ. ಭಾಷೆಯೂ ಗೊತ್ತಿಲ್ಲ. (ನನಗೆ ಸ್ವಲ್ಪ ಹಿಂದಿ ಹಾಗೂ ಇಂಗ್ಲಿಷ್ ಮಾತ್ರ ಆಗ ಗೊತ್ತಿತ್ತು.) ಮಾಂಸಾಹಾರಿ ಬೇರೆ. ಆಕೆಗೆ ಹದಿಮೂರು-ಹದಿನಾಲ್ಕು ತುಂಬಿದಾಗ ಕರೆದುಕೊಂಡು ಬನ್ನಿ" ಎಂದು ಸ್ಪಷ್ಟವಾಗಿ ಹೇಳಿಬಿಟ್ಟರು. ನಮ್ಮ ತಂದೆಗೂ ನನ್ನನ್ನು ಬಿಟ್ಟಿರಲು ಮನಸ್ಸಿರಲಿಲ್ಲ. ಆದರೆ ಅಮ್ಮನಿಗೆ ಹೇಗಾದರೂ ನನ್ನನ್ನು 'ಕಲಾಕ್ಷೇತ್ರ'ದಲ್ಲಿ ಸೇರಿಸಿಯೇ ತೀರುವ ಹಟ. ರುಕ್ಮಿಣಿದೇವಿಯವರೊಂದಿಗೆ ವಾದಕ್ಕಿಳಿದಳು: "ನಾವು ಅಷ್ಟು ದೂರದಿಂದ ಬಂದಿದ್ದೇವೆ. ಅವಳನ್ನು ವಾಪಸ್ಸು ಕರೆದೊಯ್ಯಲು ಹೇಳಬೇಡಿ. ಐದು ನಿಮಿಷ ಆಕೆಯ ನೃತ್ಯವನ್ನು ನೋಡಿ. ಆ ಮೇಲೆಯೂ ಸೇರಿಸಿಕೊಳ್ಳುವ ಇಷ್ಟ ಇಲ್ಲದಿದ್ದಲ್ಲಿ ಹಾಗೇ ಹೇಳಿ" ಎಂದು.

"ಹೂಂ... ಮೂರು ತಿಂಗಳು ನಿರೀಕ್ಷಿಸುತ್ತೇನೆ. ಈ ವಾತಾವರಣಕ್ಕೆ ಒಗ್ಗಿಕೊಂಡು ಉಳಿದವರೊಂದಿಗೆ ಬೆರೆತುಕೊಳ್ಳದಿದ್ದರೆ, ಮನೆಯ ನೆನಪಲ್ಲೇ ಅಳುತ್ತಿದ್ದರೆ, ವಾಪಸ್ಸು ಕಳಿಸುವೆ' ಎಂದರು ರುಕ್ಮಿಣಿದೇವಿ.

ಆಗಿನ್ನೂ ಒಂಬತ್ತು ವರ್ಷ ನನಗೆ. ತಮಿಳು ಕಲಿಯುವುದೇನೂ ಕಷ್ಟವಾಗಲಿಲ್ಲ. ಮನೆಯ ನೆನಪು ಸಹಜವೆ. ರಾತ್ರಿ ಒಬ್ಬಳೇ ಮುಖಮುಚ್ಚಿಕೊಂಡು ಅಳುತ್ತಿದ್ದೆ. ರುಕ್ಮಿಣೀಜಿಗೆ ಗೊತ್ತಾಗಿಬಿಟ್ಟರೆ? ಎಂಬ ಭಯ.

ಆರು ವರ್ಷಗಳವರೆಗೆ ಕಲಾಕ್ಷೇತ್ರದಲ್ಲಿ, ಅಪ್ಪ-ಅಮ್ಮನಿಂದ ದೂರವಾಗಿ ಇದ್ದೆ.

ಈ ಆರು ವರ್ಷಗಳಲ್ಲೇ ನಾನು ಅಂತರ್ದೃಷ್ಟಿಯನ್ನು ಬೆಳೆಸಿಕೊಂಡದ್ದು. ಸ್ವಯಂಶಿಸ್ತಿಗೆ ಒಳಪಡಿಸಿಕೊಂಡೆ. ಸ್ವಾವಲಂಬಿಯಾದೆ. ಏಕಾಗ್ರತೆಯನ್ನು ಮೈಗೂಡಿಸಿಕೊಂಡೆ. ಕಲಾವಿದೆಯೊಬ್ಬಳಿಗೆ ಅಗತ್ಯವಾದ 'ಸಾಧನೆ'ಯನ್ನು ಅಲ್ಲಿಯೆ ಮಾಡತೊಡಗಿದ್ದೆ. ರುಕ್ಮಿಣಿದೇವಿ ನಮಗೆ ಬಟ್ಟೆ ಒಗೆಯುವ, ಹೊಲಿಯುವ, 'ಕೊಲಂ' ಕಸೂತಿ ಹಾಕುವುದೇ ಮೊದಲಾದವನ್ನೆಲ್ಲ ಕಲಿಸಿಕೊಟ್ಟರು.


ನನ್ನ ಬಗ್ಗೆ ಗೊತ್ತಿದ್ದ ಅನೇಕರು ಮದ್ರಾಸಿಗೆ ಬಂದಾಗಲೆಲ್ಲ 'ಕಲಾಕ್ಷೇತ್ರ'ಕ್ಕೆ ಬಂದು ಕಾಣುತ್ತಿದ್ದರು. ಹತ್ತರಳವೆಯ ಹುಡುಗಿ ಅಪ್ಪ-ಅಮ್ಮಂದಿರಿಂದ ದೂರವಾಗಿ ಒಬ್ಬಳೇ ಅಷ್ಟು ದೂರದ ಊರಲ್ಲಿದ್ದಾಳಲ್ಲ ಎಂಬುದೇ ಅವರಿಗೆ ಅಚ್ಚರಿಯು ಹಾಗೂ ಅಭಿಮಾನದ ಸಂಗತಿ. ಹೀಗೆ ಬಂದವರಲ್ಲಿ ಒಬ್ಬರು ನೀಲಮಣಿ ಪಾಣಿಗ್ರಾಹಿ. ಸಂಗೀತ ಶಾಸ್ತ್ರಜ್ಞ (ಒಡಿಸ್ಸಾದ) ಜೈಪುರ ಮಹಾರಾಜರು ದತ್ತು ಪಡೆದಿದ್ದ ಬ್ರಾಹ್ಮಣರ ಹುಡುಗ ಅವರು. ನಾನು ಹದಿನಾಲ್ಕನೆಯ ವಯಸ್ಸಿನವಳಾಗಿದ್ದಾಗ ಅವರು ಬಂದದ್ದು. ನೋಡಿದಾಕ್ಷಣವೆ ತಮ್ಮ ಮಗ ರಘುನಾಥ ಪಾಣಿಗ್ರಾಹಿಗೆ ನಾನು ತಕ್ಕ ಹುಡುಗಿ ಎಂದು ನಿರ್ಧರಿಸಿಬಿಟ್ಟರಂತೆ. ರಘುನಾಥ ಆಗ ಕೆಲವು ದಕ್ಷಿಣ ಭಾರತದ ಚಲನಚಿತ್ರಗಳಿಗೆ ಹಿನ್ನೆಲೆಗಾಯಕರಾಗಿದ್ದರು. ಮದ್ರಾಸಿನಲ್ಲೇ ಅವರ ವಾಸ. ಒಡಿಸ್ಸಾಗೆ ಹೋಗಿದ್ದಾಗ ನೀಲಮಣಿ ಪಾಣಿಗ್ರಾಹಿ ನಮ್ಮ ತಾಯಿಯನ್ನು ಭೇಟಿಯಾದರಂತೆ. "ನೋಡಿ, ನನ್ನ ಮಗ ಸಂಗೀತಗಾರ, ನಿಮ್ಮ ಮಗಳು ನೃತ್ಯ ಕಲಾವಿದೆ. ಜೋಡಿ ಚೆನ್ನಾಗಿರುತ್ತದೆ," ಎಂದರಂತೆ.

ಮುಂದೊಮ್ಮೆ 'ಕಲಾಕ್ಷೇತ್ರ'ದಲ್ಲಿ 'ಗೀತಗೋವಿಂದ' ಹಾಡಲು ರಘುನಾಥ ಪಾಣಿಗ್ರಾಹಿ ಆಹ್ವಾನಿಸಲ್ಪಟ್ಟಾಗ ನಾನು ಅವರನ್ನು ಮೊದಲ ಬಾರಿ ನೋಡಿದೆ. ಆದರೆ ನೀಲಮಣಿಯವರ ನಿರ್ಧಾರದ ಕುರಿತು ನನಗೇನೂ ಗೊತ್ತಿರಲಿಲ್ಲವಾದ ಕಾರಣ ರಘುನಾಥರ ಕುರಿತು ಅಂಥಾ ಆಸ್ಥೆಯೇನೂ ಮೂಡಿರಲಿಲ್ಲ. ನಾಚಿಕೆ ಮುಂತಾದ್ದೂ ಆಗಿರಲಿಲ್ಲ. ಆದರೆ ರಘುನಾಥ್‌ಗೆ 'ನಾನೇ ಅಪ್ಪ ನೋಡಿದ ಹುಡುಗಿ' ಎಂಬುದು ಗೊತ್ತಿತ್ತಂತೆ. ಅಂದು ಒಮ್ಮೆ ನನ್ನ ಬಳಿ ಬಂದು "ಮದುವೆಯಾಗುವುದಾದರೆ ತುಂಬ ಸಂತೋಷ" ಎಂದರು.

ನಾನು 'ಕಲಾಕ್ಷೇತ್ರ'ದಿಂದ ಊರಿಗೆ ಮರಳಿದ ಮೇಲೆ ಮನೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿದರು. ಅಮ್ಮನಿಗೆ ಈ ಕುರಿತು



"ಸಮಿಪೆ ಜಗನ್ನಾಥ...."



ಒಲವಿತ್ತು. ಅಪ್ಪ ತದ್ವಿರುದ್ಧ. "ನೀನು ಅವಳಿಗೆ ನೃತ್ಯ ಕಲಿಸಬೇಕೆಂದಾಗ ನಾನು 'ಹೂಂ' ಎಂದೆ. ಆದರೆ ಮದುವೆಯ ವಿಷಯದಲ್ಲಿ ಹಾಗೆಲ್ಲ ಯೋಚಿಸದೆ ಇರಲಿಕ್ಕಾಗುವುದಿಲ್ಲ. ಇಬ್ಬರೂ ಕಲಾವಿದರೆ. ಅವರ ಬದುಕು ನಿರಂತರ ಹೋರಾಟದ್ದಾಗುವುದು ಖಂಡಿತ. ಮಗಳು ಉಪವಾಸ-ವನವಾಸ ಅನುಭವಿಸುವುದನ್ನು ನನ್ನಿಂದ ನೋಡಲಾಗುವುದಿಲ್ಲ" ಎಂದು ಅಪ್ಪ; 'ಊಹುಂ, ಆಕೆ ನೃತ್ಯವನ್ನು ಪ್ರೀತಿಸುತ್ತಾಳೆ. ಬೇರಾರನ್ನೋ ಮದುವೆಯಾದರೆ ಅವಳ ನೃತ್ಯಾಭ್ಯಾಸಕ್ಕೆ ಭಂಗ ಬರುತ್ತದೆ. ಬದುಕು ಅಸಹನೀಯವೆನಿಸುತ್ತದೆ. ಅವಳನ್ನು ಮಾನಸಿಕ ತೊಳಲಾಟಕ್ಕೆ ಗುರಿಪಡಿಸಬೇಕೆಂದಿದ್ದರೆ ಬೇರೆ ಕಡೆ ಗಂಡು ನೋಡಿ," ಎಂದು ಅಮ್ಮ ಒಂದು ವರ್ಷದವರೆಗೆ ರಸಕಸಿ ನಡೆದೇ ಇತ್ತು. ಆಗೀಗ ರಘುನಾಥ ಕಟಕ್‌ಗೆ ಬಂದು ನಮ್ಮ ತಾಯಿಯನ್ನು ಭೇಟಿಯಾಗುತ್ತಿದ್ದರು. ಬರಬರುತ್ತ ಹುಡುಗ ಅವಳಿಗೆ ಹಿಡಿಸಿಬಿಟ್ಟ. "ನನ್ನ ಮಗಳಿಗೆ ಇವನಿಗಿಂತ ಅನುರೂಪನಾದವ ಬೇರೆಲ್ಲಿ ಸಿಗುತ್ತಾನೆ?" ಎಂಬುದು ಆಕೆಯ ಪ್ರಶಂಸೆ. ಆತನ ಹಾಡುಗಾರಿಕೆ, ಆತನ ವರ್ತನೆ ಎಲ್ಲವೂ ಅವಳಿಗೆ ಇಷ್ಟವಾದವು. ನನಗಂತೂ ರಘು ಗಾಯನ ಹುಚ್ಚು ಹಿಡಿಸಿತ್ತು. ನಿಜ ಹೇಳಬೇಕೆಂದರೆ ನಾನು ಮನಸೋತದ್ದು ಆ ಗಾನಮಾಧುರ್ಯಕ್ಕೇ. ಕ್ರಮೇಣ ಇಬ್ಬರ ಭೇಟಿಗಳು ನಡೆದು ಮದುವೆಯಾಗಲು ನಿರ್ಧರಿಸಿಬಿಟ್ಟೆವು.

ಆದರೆ ರಘುವನ್ನು ನಾನು ಮರೆಯುವಂತೆ ಮಾಡಲು ಅಪ್ಪ ನನಗಾಗಿ ಇನ್ನೊಂದು ವಿದ್ಯಾರ್ಥಿ ವೇತನದ ವ್ಯವಸ್ಥೆ ಮಾಡಿದರು. ಮುಂಬಯಿಯ ಭಾರತೀಯ ವಿದ್ಯಾಭವನದಲ್ಲಿ ಕಥಕ್ ನೃತ್ಯ ಕಲಿಯಬೇಕು. ಅದಕ್ಕಾಗಿ ಈ ವಿದ್ಯಾರ್ಥಿ ವೇತನ. ಊರಿನಿಂದ ದೂರವುಳಿದು ಕಥಕ್ ಅಭ್ಯಾಸಕ್ಕೆ ತೊಡಗಿದರೆ ತಂತಾನೇ ರಘುವನ್ನು ಮರೆಯುತ್ತಾಳೆ ಹುಡುಗಿ ಎಂದುಕೊಂಡಿರಬೇಕು ಅಪ್ಪ.

ರಘುನಾಥ್ ಮುಂಬಯಿಗೇ ಬಂದುಬಿಟ್ಟರು. ಇದು ಗೊತ್ತಾಗಿ ಅಪ್ಪ ಇನ್ನು ವಿರೋಧಿಸುವುದರಲ್ಲಿ ಅರ್ಥವಿಲ್ಲೆಂದು ಸುಮ್ಮನುಳಿದರು. ನನ್ನ ಗುರೂಜಿ ಅಪ್ಪನ ಮನವೊಲಿಸಿ ನಮ್ಮಿಬ್ಬರ ಮದುವೆಗೆ ಒಪ್ಪಿಸಿದರು. ನನ್ನ ರಘುವಿನೊಂದಿಗೆ ಮದುವೆ ನಡೆದು ಹೋಯಿತು.

ಅಪ್ಪ ಸರಿಯಾಗೇ ಊಹಿಸಿದ್ದರು...

ಹೌದು. ಅಪ್ಪ ಸರಿಯಾಗೇ ಊಹಿಸಿದ್ದರು. ನಾನು ಸಾಕಷ್ಟು ತೊಂದರೆಗಳನ್ನು ಎದುರಿಸಬೇಕಾಯಿತು. ಇಬ್ಬರೂ ಮುಂಬಯಿಯಲ್ಲಿಯೇ ವಾಸಿಸಲು ನಿರ್ಧರಿಸಿದೆವು. ರಘು-ನಾನು ಕಲಾವಿದರಾದ್ದರಿಂದ ಸಾಕಷ್ಟು ಒಳ್ಳೆಯ ಅವಕಾಶಗಳು ದೊರೆತಾವೆಂಬ ನಿರೀಕ್ಷೆ ನಮ್ಮದು. ಆದರೆ ಅದು ಅಂದುಕೊಂಡಷ್ಟು ಸುಲಭವಾಗಿರಲಿಲ್ಲ. ಒಬ್ಬರ ಒಂದೇ ಹೊತ್ತಿನ ಊಟವನ್ನು ಇಬ್ಬರು ಹಂಚಿಕೊಂಡು ಕಳೆದ ದಿನಗಳೆಷ್ಟೋ. ಟ್ಯಾಕ್ಸಿ ಹೋಗಲಿ, ಬಸ್ಸಿಗೂ ದುಡ್ಡಿಲ್ಲದ್ದರಿಂದ ನಾಲ್ಕಾರು ಮೈಲುಗಳಷ್ಟು ಅಂತರವನ್ನು ನಡೆದೇ ಹೋಗುತ್ತಿದ್ದೆವು. ರಘುನಾಥ್‌ಗೆ ಆಕಾಶವಾಣಿ ಕಾರ್ಯಕ್ರಮಗಳು ಬರುತ್ತಿದ್ದುದರಿಂದ ಆ ಆದಾಯವೇ ನಮಗೆ ಆಧಾರ. ನನ್ನನ್ನು ನರ್ತಕಿಯೆಂದು

ಜನರಿನ್ನೂ ಗುರುತಿಸಬೇಕಿತ್ತು. ಆದರೆ ನನಗೆ ಎದುರಾಗುತ್ತಿದ್ದುದು ಬರಿ ನೋವಿನ ಪ್ರಸಂಗಗಳೆ.

ಒಂದು ಪ್ರಸಂಗ ನೆನಪಿನಲ್ಲಿ ಗಟ್ಟಿಯಾಗುಳಿದಿದೆ. 'ಟೈಂಸ್ ಆಫ್ ಇಂಡಿಯಾ'ದವರು ನವ ಪ್ರತಿಭೆಗಳನ್ನು ಪರಿಚಯಿಸಲು ಒಂದು ಹೊಸ ಅಂಕಣ ಶುರು ಮಾಡಿದ್ದರು. ಆ ಕಚೇರಿಗೆ ಹೋದೆವು. ನಮ್ಮೆಲ್ಲ ಪ್ರಮಾಣಪತ್ರಗಳನ್ನು, ಪ್ರಶಂಸಾಪತ್ರಗಳನ್ನು ಅಲ್ಲಿ ಸಂಬಂಧಪಟ್ಟವರಿಗೆ ತೋರಿಸಿ ಪರಿಚಯಿಸಲು ವಿನಂತಿಸಿಕೊಂಡೆವು. ಅಲ್ಲಿದ್ದಾತ "ಏನ್ರಿ, ಬೀದೀಲಿ ಹೋಗೋರೆಲ್ಲಾ ಇಂಥವನ್ನು ಹಿಡಿದುಕೊಂಡು ಬಂದು ತೋರಿಸಿ ಪ್ರಚಾರ ಕೊಡಿ ಅಂತ ಕೇಳೋದಕ್ಕಾಗತ್ತಾ?" ಹಾಗೆ ಕೇಳಿದ್ರೂಂತ ನಾವು ಕೊಡೋದುಕ್ಕಾಗುತ್ತಾ?' ಎಂದೆಲ್ಲ ಅಬ್ಬರಿಸಿ ಅಲ್ಲಿಂದ ಹೊರಗಟ್ಟಿದ.

ಅಂತೂ ಇಂತೂ ಏಗುತ್ತಲೇ ದಿನಗಳು ಸಾಗುತ್ತಿದ್ದವು. ಈ ಸಮಯದಲ್ಲಿ ಅಪ್ಪ ನಮಗೆ ನೆರವು ನೀಡಲು ಸಿದ್ಧರಿದ್ದರೂ ನನ್ನ ಆತ್ಮಪ್ರತಿಷ್ಠೆ ಅದನ್ನು ಪಡೆಯಲು ಒಪ್ಪಲಿಲ್ಲ. ಸಂಬಂಧಿಕರು, ಗೆಳೆಯರು "ಹ್ಯಾಗಿದ್ದೀರಿ?" ಎಂದು ಕೇಳಿದರೆ ನನಗೆ ಕೋಪವುಕ್ಕೇರುತ್ತಿತ್ತು. ನಮ್ಮ ಸ್ಥಿತಿ ಕಂಡೂ ಅವರು ಹಾಗೆ ಕೇಳುತ್ತಾರಲ್ಲಾ... ತೊಂದರೆ ಇದೆ ಎಂದರೆ ನೆರವಿಗೆ ಮುಂದಾಗುವ, ಮುಂದೆ "ನಾವೇ ಇವರನ್ನು ಕಾಪಾಡಿದೆವು" ಎಂದು ಹೇಳಿಕೊಳ್ಳುವ ಜನ ಅವರು. ನಾನೋ ಮಹಾ ಸ್ವಾಭಿಮಾನಿ. ಯಾರಿಂದಲೂ ಚಿಕ್ಕಾಸಿನ ನೆರವನ್ನೂ ಬಯಸದಂಥವಳು.

ಕಾರ್ಯಕ್ರಮಗಳು ಸರಿಯತೊಡಗಿದವು. ಸಂಗೀತ ನಿರ್ದೇಶಕ ವಸಂತ ದೇಸಾಯಿ ಆಗ ಸಿನಿಮಾ ಪ್ರಪಂಚದಲ್ಲಿ ದೊಡ್ಡ ಹೆಸರು. ರಘುನಾಥರ ಪರಿಚಯವೂ ಅವರಿಗಿತ್ತು. ಎರಡು-ಮೂರು ಅವಕಾಶಗಳನ್ನು ಅವರು ನೀಡಿದರು. ಒಳ್ಳೆಯ ಕಂಠವಿದ್ದರೂ ಗುಂಪುಗಾರಿಕೆಯ ದೆಸೆಯಿಂದಾಗಿ ರಘುನಾಥ ಮೂಲೆಗೊತ್ತಲ್ಪಟ್ಟಿದ್ದರು. ಹೌದು ಜಾತೀಯತೆ-ಗುಂಪುಗಾರಿಕೆಗಳು ರಾರಾಜಿಸುವಲ್ಲಿ ಸರಳ ಸ್ವಭಾವದ ಸಹಜ ಪ್ರತಿಭೆಗೆಲ್ಲಿಯ ಸ್ಥಾನ? ಅದರಲ್ಲೂ ಪೂರ್ವ ಭಾರತದಿಂದ ಬಂದವನೆಂಬ ಕಾರಣ, ಮುಂಬಯಿಗನಲ್ಲವೆಂಬ ಕಾರಣಗಳೇ ಪ್ರಮುಖವಾಗಿ ಬಿಡುತ್ತಿದ್ದವು. ಯಶಸ್ಸು ಸುಮ್ಮನೇ ಬರುವುದಿಲ್ಲ. ಅದಕ್ಕೂ ಸಾಧನೆ ಅಗತ್ಯ. ಕಷ್ಟಪಡಬೇಕು. ಕರಾರುವಾಕ್ಕಾಗಿರಬೇಕು. ನಾವು ಸಾಧನೆಗೆ ತೊಡಗಿದೆವು. ಮುಂಬಯಿ ಅದಕ್ಕೆ ತಕ್ಕ ಜಾಗವಲ್ಲವೆಂದುಕೊಂಡು ಮದ್ರಾಸಿಗೆ ಹೋಗಿ ಅದೃಷ್ಟವನ್ನು ಅರಸತೊಡಗಿದೆವು. ಆದರೆ ನಮ್ಮ ಮೊದಲ ಮಗ ಪಾರ್ಥಸಾರಥಿಯ ಆಗಮನ (೧೯೬೧)ದಿಂದ ಕಷ್ಟಗಳು ಇನ್ನಷ್ಟು ಹೆಚ್ಚಿದವು.

"ಮದ್ರಾಸಿನಲ್ಲಿ ರಘುನಾಥ ಚಿತ್ರರಂಗದ ಪಾಲಿಗೆ ಆಗಲೇ ಮರೆತು ಹೋದ ಹೆಸರಾಗಿದ್ದರು. ಎರಡೇ ವರ್ಷಗಳಲ್ಲಿ ಈ ಗಾಯಕ ಅಲ್ಲಿಯ ಸಂಗೀತ ನಿರ್ದೇಶಕರ ಸ್ಮರಣೆಯಿಂದ ಜಾರುವುದೆ? ಪ್ರೀತಿಗಾಗಿ ಎಂಥ ಬೆಲೆ ತೆರಬೇಕಾಯಿತಲ್ಲ ಅವರು! ಕಷ್ಟಗಳು ಇಲ್ಲಿಯೂ ಸಾಲುಗಟ್ಟಿ ಬಂದವು. ೧೯೬೩ರಲ್ಲಿ ನಮ್ಮ ಎರಡನೆಯ ಮಗ ಸವ್ಯಸಾಚಿ ಜನಿಸಿದ. ನೃತ್ಯ ಕ್ಷೇತ್ರದಲ್ಲಿ ನಾನೇನೂ ಮಾಡಲಾರದವಳಾದೆ. ಮದ್ರಾಸಿನಲ್ಲಿ ಕಲಿತಿದ್ದ ಭರತನಾಟ್ಯಂ ಅಭ್ಯಾಸವೂ ಅಸಾಧ್ಯವಾಯಿತು. ಇಲ್ಲಿ ಸುಮ್ಮನೇ ಕಾಲ ನೂಕುತ್ತಿದ್ದೇನೆ ಎಂದೆನಿಸಿ ಒಡಿಸ್ಸಿ ನೃತ್ಯದೆಡೆಗೇ ಹೆಚ್ಚು ಒಲವು ಮೂಡತೊಡಗಿತು. ಊರಿಗೆ ಹೋಗಿ ಅಮ್ಮನ ಮಾರ್ಗದರ್ಶನ ಬಯಸಿದೆ. ಒಡಿಸ್ಸಿಯಲ್ಲೆ ನನಗೆ ಹೆಸರು ಬರುತ್ತದೆಂಬುದು ಅಮ್ಮನ ಅಭಿಪ್ರಾಯ.

ಸತ್ವಪರೀಕ್ಷೆಯ ಕಾಲ....

೧೯೬೦-೬೪ರ ನಡುವಿನ ಅವಧಿ ನಮ್ಮ ಸತ್ವಪರೀಕ್ಷೆಯ ಕಾಲ. ನಾನಿನ್ನೂ ಆಗ ಇಪ್ಪತ್ತರ



ಹುಡುಗಿ. ಅಷ್ಟರಲ್ಲೇ ಆದರ ಮೂರು ಪಟ್ಟು ವಯಸ್ಸಿನವರು ಎದುರಿಸಬಹುದಾದ ಮಾನಸಿಕ ಹಿಂಸೆ ಅನುಭವಿಸಿದ್ದೆ. ಅಪ್ಪ ಹೇಳಿದ್ದ ಮಾತು ಪದೇ ಪದೇ ನೆನಪಿಗೆ ಬರುತ್ತಿತ್ತು.'ಇವರು ಉಪವಾಸ-ವನವಾಸ ಅನುಭವಿಸುತ್ತಾರೆ. ಅವರಿಂದ ಏನನ್ನೂ ಸಾಧಿಸುವುದು ಸಾಧ್ಯವಾಗುವುದಿಲ್ಲ....' ಎಂದಿದ್ದರಲ್ಲ ಅಪ್ಪ, ನಮ್ಮ ಮದುವೆಗೆ ಮೊದಲು. 'ಅದು ಅವರು ಪರಿಶ್ರಮ ಪಡುವುದರ ಮೇಲೆ ಅವಲಂಬಿಸುತ್ತದೆ' ಎಂದಿದ್ದಳು ಅಮ್ಮ ಇಬ್ಬರ ಮಾತೂ ನಿಜವಾಗಿತ್ತು. ನಾವು ಪರಿಶ್ರಮಪಟ್ಟರೂ ಕಷ್ಟ ಪಡುವುದು ತಪ್ಪಲಿಲ್ಲ. ಹೇಗೇ ಆದರೂ ಈ ಎಲ್ಲ ತೊಂದರೆಗಳನ್ನು ಎದುರಿಸಿ ಗೆಲ್ಲಬೇಕೆಂಬ ಹಟ ನನ್ನದಾಯಿತು.

ಭುವನೇಶ್ವರವೇ ನಮಗೆ ಸೂಕ್ತ ಸ್ಥಳ ಎಂಬುದೇ ನನ್ನ ಅಭಿಪ್ರಾಯ. ಅಲ್ಲಿ ಆದೇ ತಾನೆ ಸರಕಾರಿ ಸಂಗೀತ ಮಹಾವಿದ್ಯಾಲಯವೊಂದು ಪ್ರಾರಂಭವಾಗಿತ್ತು. ನನಗೆ ನೃತ್ಯ ಉಪನ್ಯಾಸಕಿಯ ಹುದ್ದೆ ದೊರೆತು ಎರಡು ವರ್ಷ ಕೆಲಸ ಮಾಡಿದೆ. ಕ್ರಮೇಣ ನೃತ್ಯ ಪ್ರದರ್ಶನ ನೀಡಲು ಆಹ್ವಾನಗಳು ಬರತೊಡಗಿದವು.


ಆದರೆ ಕಷ್ಟಗಳೆಲ್ಲ ಕರಗಿದವು ಎಂದುಕೊಳ್ಳುತ್ತಿದ್ದಂತೆಯೆ ನನ್ನ ಬದುಕಿನ ಅತ್ಯಂತ ಕ್ಲಿಷ್ಟಕರ ಹಂತ ಶುರುವಾಗಿಬಿಟ್ಟಿತು. ನನ್ನ ತವರು ಮನೆಯಲ್ಲೂ ತಾಯಿ-ತಂದೆ ಪ್ರಗತಿಪರ ವಿಚಾರದವರು. ಆದರೆ ಅತ್ತೆಯ ಮನೆಯವರೆಲ್ಲ ಸಂಪ್ರದಾಯ ಶರಣರು. ಹಾಗಿದ್ದರೂ ರಘುನಾಥರನ್ನು ಸಂಗೀತ ಕ್ಷೇತ್ರ ಪ್ರವೇಶಿಸಲು ಹೇಗೆ ಬಿಟ್ಟರೊ! "ಗಂಡಸಿನ ಮಾತೇ ಬೇರೆ, ಹೆಂಗಸಿನ ಮಾತೇ ಬೇರೆ" ಎಂಬುದು ಅವರ ಉತ್ತರವೆಂಬುದು ನನಗೆ ಗೊತ್ತಿತ್ತು. ಪ್ರಗತಿಪರ ಯೋಚನೆಯುಳ್ಳವರಾಗಿದ್ದ ನನ್ನ ಮಾವ ನೀಲಮಣಿ ಪಾಣಿಗ್ರಾಹಿ ನಮ್ಮ ಮದುವೆಯಾಗಿ ಕೆಲ ದಿನಗಳಲ್ಲೇ ಕಣ್ಮರೆಯಾಗಿದ್ದರು. ಅವರು ಬದುಕಿದ್ದಿದ್ದರೆ ಆ ಮಾತೇ ಬೇರೆ ಇರುತ್ತಿತ್ತು. ಅತ್ತೆ ಸಣ್ಣ ಹಳ್ಳಿಯ, ಅನವಶ್ಯಕವಾಗಿ ಇಲ್ಲಸಲ್ಲದ ಧಾರ್ಮಿಕ ಕಟ್ಟುಪಾಡುಗಳನ್ನು ಹೇರಿಕೊಂಡ ಕುಟುಂಬದಿಂದ ಬಂದವರು. ೧೯೬೫ರಲ್ಲಿ ಕೆಲವು ಜನ ಅತ್ತೆಯ ಕಿವಿ ಊದತೊಡಗಿದರು: "ಈ ಸೊಸೆ ನಿಮ್ಮ ಸೇವೆ ಮಾಡುವುದು ಬಿಟ್ಟು ಇದೇನಿದು ಕುಣಿತಕ್ಕೆ ಗಂಟುಬಿದ್ದಿದ್ದಾಳೆ?" ಅತ್ತೆಗೆ ಇಷ್ಟು ಸಾಕಿತ್ತು. ನಾನು ಯಶಸ್ಸು ದೊರಕಿಸಿಕೊಳ್ಳತೊಡಗಿದೆನೇನೋ ನಿಜ. ಆದರೆ ಆ ಸಂತಸವನ್ನು ಮನೆಯಲ್ಲಿ ಹಂಚಿಕೊಳ್ಳುವ ಪರಿಸ್ಥಿತಿಯಲ್ಲಿರಲಿಲ್ಲ.

ಒಂದು ದಿನ ಅತ್ತೆ ಬಂದರು. ನನ್ನ ವಿಷಯವಾಗಿ ರಘುನಾಥರೊಂದಿಗೆ 'ಎಲ್ಲ'ವನ್ನು ಹೇಳಿಬಿಟ್ಟರು. ಆತ ತುಂಬ ಸರಳ ಮನುಷ್ಯ. ಮಗುವಿನಂಥ ಮನಸ್ಸು: ತಾಯಿಯ ಮಾತನ್ನು ನಂಬಿಬಿಟ್ಟರು. ಒಂದು ದಿನ ಗುಣಪುರಕ್ಕೆ (ಅದು ನನ್ನ ಅತ್ತೆಯ ಊರು. ಅವರೆಲ್ಲಾ ಅಲ್ಲಿಯೇ ಇದದ್ದು.) ಹೋಗಿ ಬಿಟ್ಟರು. ಅಲ್ಲಿಂದಲೇ ನನಗೊಂದು ಪತ್ರ, 'ಇಲ್ಲಿಯೆ ನೆಲೆಸಲಿದ್ದೇನೆ. ಇಲ್ಲಿಂದಲೇ ಕಾರ್ಯನಿರ್ವಹಿಸುತ್ತೇನೆ' ಎಂದು. ಒಂದು ವಾರದೊಳಗಾಗಿ ವಾಪಸ್ಸು ಬರುತ್ತಾರೆ ಎಂದುಕೊಂಡಿದ್ದೆ. ನನ್ನ ನಿರೀಕ್ಷೆ ಸುಳ್ಳಾಯಿತು.

ಎರಡು ತಿಂಗಳ ನಂತರ ನಾನೇ ಗುಣಪುರಕ್ಕೆ ಹೊರಟೆ. ಕಾಲೇಜಿಗೆ ರಜೆ ಹಾಕಿದ್ದೆ. ಬಟ್ಟೆ-ಬರೆ ಎಲ್ಲ ಕಟ್ಟಿಕೊಂಡಿದ್ದೆ. "ನಾನಂತೂ ಇಲ್ಲಿಂದ ಕದಲುವವನಲ್ಲ. ನೀನೂ ಕಾಲೇಜು ಕೆಲಸಕ್ಕೆ ರಾಜೀನಾಮೆ ಕೊಟ್ಟು ಇಲ್ಲಿಯೇ ಬಂದಿದ್ದುಬಿಡು." ರಘುನಾಥರ ಮಾತಿಗೆ ನಾನು ಕಟ್ಟುಬಿದ್ದೆ. ನನ್ನ ಹಿರಿಯ ಮಗ ಪಾರ್ಥಸಾರಥಿಯನ್ನು ಜತೆಗೇ ಕರೆತಂದದ್ದರಿಂದ ವಾಪಸ್ಸು ಭುವನೇಶ್ವರಕ್ಕೆ ಹೋಗುವ ಪ್ರಮೇಯವೇ ಬರಲಿಲ್ಲ. ಸಣ್ಣ ಮಗ ಸವ್ಯಸಾಚಿ ನನ್ನ ಅವ್ವನ ಬಳಿ ಇದ್ದ. ಕಾಲೇಜು ಕೆಲಸಕ್ಕೆ ರಾಜೀನಾಮೆಯನ್ನು ಕಳಿಸಿ ತಣ್ಣಗೆ ಕೂತೆ.

ಗುಣಪುರದಲ್ಲಿ ಬಾವಿಯಿಂದ ನೀರು ಎತ್ತುವುದರಿಂದ ಮೊದಲು ಮಾಡಿ ಎಲ್ಲ ಕೆಲಸವೂ ನನ್ನ ಪಾಲಿನದೆ. ನೃತ್ಯವೊಂದನ್ನು ಬಿಟ್ಟು. ಅತ್ತೆಗೂ ನನ್ನ ಮೇಲೆ ದ್ವೇಷ. "ಇನ್ನೊಬ್ಬಳು ಸೊಸೆಯಾಗಿ ಬರಿದಿದ್ದರೆ ಎಷ್ಟು ಚೆನ್ನಾಗಿ ಸೇವೆ ಮಾಡಿರೋಳು. ತವರಿನಿಂದ ಏನೆಲ್ಲಾ ತಂದಿರೋಳು. ನೀನೂ ಇದೀಯ ಪೀಡೆಯ ಹಾಗೆ..." ಅತ್ತೆ ಮೂದಲಿಸುತ್ತಲೇ ಇದ್ದರು.

ಅತ್ತೆಯಷ್ಟೇ ಅಲ್ಲ, ನಾದಿನಿಯರಾದ ಗೌರಿ ಹಾಗೂ ಸರಸ್ವತಿಯರೂ ಕಡಿಮೆಯಿರಲಿಲ್ಲ. ನಿಂತರೆ ತಪ್ಪು, ಕೂತರೆ ತಪ್ಪು. ರಘುನಾಥ ಇದಾವುದನ್ನೂ ಕಿವಿಯ ಮೇಲೆ ಹಾಕಿಕೊಳ್ಳದಂತೆ ಇದ್ದುಬಿಡುತ್ತಿದ್ದರು. ಅವ್ವನ ಬೆರಳ ಸನ್ನೆಯಂತೆ ಕುಣಿಯುವುದೊಂದೇ ಅವರಿಗೆ ಗೊತ್ತು. ಆ ಹಿಂಸೆಯನ್ನು ಹಗಲಿಡೀ ಸಹಿಸಿಕೊಂಡರೂ ರಾತ್ರಿ ನಾನೊಬ್ಬಳೇ ಕೂತು ಅತ್ತು ಹಗುರಾಗುತ್ತಿದೆ. ಮಾನಸಿಕವಾಗಿ ತುಂಬ ಖಿನ್ನಳಾಗಿದ್ದೆ. ನೃತ್ಯದ ವಿಷಯದಲ್ಲಿ ನಾನೇನೂ ಮಾಡಲಾರದವಳಾದೆನಲ್ಲ ಎಂಬ ನೋವು. ಈ



ಪತಿ ರಘುನಾಥರೊಂದಿಗೆ ಲೋಕಾಭಿರಾಮ


ಸ್ವಾತಂತ್ರ್ಯದಿಂದ ಸ್ವಾವಲಂಬನೆಯತ್ತ

ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಪೂರ್ಣ ಸ್ವರಾಜ್ಯಕ್ಕೆ ಕರೆ ನೀಡಿದಾಗ ಅವರ ಉದ್ದೇಶವನ್ನು ಈಡೇರಿಸಲು ಇಡೀ ದೇಶ ಒಗ್ಗಟ್ಟಾಗಿ ಎದ್ದು ನಿಂತಿತು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕವೂ ಮಹತ್ವದ ಪಾತ್ರ ವಹಿಸಿದೆ. 1857ರ ಮೊದಲ ಸ್ವಾತಂತ್ರ್ಯ ಹೋರಾಟಕ್ಕೆ ಬಹಳ ಮುಂಚಿತವಾಗಿಯೇ ಈ ರಾಜ್ಯದಲ್ಲಿ ದಂಗೆಯ ಕಹಳೆ ಮತ್ತು ಧ್ವಜ ಮೊಳಗಿತ್ತು. ದಶಕಗಳ ಹಿಂದೆಯೇ ಕಿತ್ತೂರಿನ ರಾಣಿ ಚೆನ್ನಮ್ಮ ವಿದೇಶಿ ಆಳ್ವಿಕೆಯ ವಿರುದ್ಧ ಬಂಡೆದ್ದಿದ್ದಳು. ಸಂಪದ್ಭರಿತ ಸ್ವತಂತ್ರ ದೇಶ ಸ್ವಾತಂತ್ರ್ಯ ಹೋರಾಟಗಾರರ ನಿಸ್ವಾರ್ಥ ಬಲಿದಾನದ ಉದ್ದೇಶ. ತಮ್ಮ ಮಕ್ಕಳಾದರೂ ಸ್ವಚ್ಛವಾದ ಸ್ವಾತಂತ್ರ್ಯದ ಗಾಳಿಯನ್ನು ಸೇವಿಸಲಿ ಎಂಬುದು ಅವರ ಕನಸಾಗಿತ್ತು. ಸುಭದ್ರ ಭಾರತ ನಿರ್ಮಾಣವೂ ಅವರ ಗುರಿಯಾಗಿತ್ತು.

ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಈ ದಿನದಂದು ಕರ್ನಾಟಕವು ಸ್ವಾತಂತ್ರ್ಯ ಸಂಗ್ರಾಮದ ಸೇನಾನಿಗಳಿಗೆ ವಂದಿಸುತ್ತದೆ.

ಕರ್ನಾಟಕವು ನಮ್ಮ ರಾಷ್ಟ್ರ ಪಿತಾಮಹರ ಆದರ್ಶಗಳನ್ನು ಅನುಸರಿಸಿ ಜಾತ್ಯತೀತತೆ, ರಾಷ್ಟ್ರೀಯ ಸಮಗ್ರತೆ ಮತ್ತು ಸರ್ವರ ಕಲ್ಯಾಣ ಸಾಧಿಸುವ ಮೂಲಕ ಮಾದರಿ ರಾಜ್ಯವೆನಿಸಿದೆ.



ಕೃಷಿ ಕ್ಷೇತ್ರಕ್ಕೆ ಆದ್ಯತೆ

ಮೊತ್ತ ಮೊದಲನೇ ಬಾರಿಗೆ ನವೀನ ಕೃಷಿ ನೀತಿ.

ತೋಟಗಾರಿಕೆ ಮತ್ತು ಪುಷ್ಪೋದ್ಯಮ ಉತ್ಪಾದನೆಗಳ ರಫ್ತಿಗೆ ಹೆಚ್ಚಿನ ಒತ್ತು.

ಕೃಷಿಕರು ಮತ್ತು ಕೃಷಿ ಕಾರ್ಮಿಕರಿಗೆ ರೈತ ಸಂಜೀವಿನಿ ಅಪಘಾತ ವಿಮೆ.

ರೈತರಿಗೆ ಪ್ರತಿ 50 ಕೆ.ಜಿ. ಮೂಟೆ ರಾಸಾಯನಿಕ ಗೊಬ್ಬರಕ್ಕೆ ರೂ 100/- ರಂತೆ (ಸಬ್ಸಿಡಿ) ಸಹಾಯ ಧನ.

ವಿದ್ಯುತ್ ಉತ್ಪಾದನೆಗೆ ಆದ್ಯತೆ

ರಾಜ್ಯದ ವಿದ್ಯುತ್ ಬೇಡಿಕೆಯನ್ನು ಪೂರೈಸಲು ವಿದ್ಯುತ್ ಯೋಜನೆಗಳ ನಿರ್ಮಾಣ ಕಾರ್ಯಾರಂಭ.

ಪಶ್ಚಿಮ ಕರಾವಳಿಯಲ್ಲಿ ಬಾರ್ಜ್ ಮೌಂಟೆಡ್ ಯೋಜನೆಗಳ ಮುಖಾಂತರ 400 ಮೆ.ವಾ. ವಿದ್ಯುತ್. ನಂದಿಕೂರಿನಲ್ಲಿ 1000 ಮೆ.ವಾ. ಸಾಮರ್ಥ್ಯದ ಕೋಜೆಂಟ್ರಿಕ್ಸ್ ವಿದ್ಯುತ್ ಯೋಜನೆ. ರಾಯಚೂರು ಉಷ್ಣ ವಿದ್ಯುತ್ ಯೋಜನೆಯ ವಿಸ್ತರಣೆ.

ಈ ಯೋಜನೆಗಳಿಂದ 7210 ಮೆಗಾ ವ್ಯಾಟ್ಸ್ ವಿದ್ಯುತ್ ಉತ್ಪಾದನೆ.

ವಸತಿ ಹೀನರಿಗೆ ವರದಾನ

ಸರಕಾರವು ವಸತಿ ಸಮಸ್ಯೆಯನ್ನು ಅದರಲ್ಲೂ ಮುಖ್ಯವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಸಮಸ್ಯೆಯನ್ನು ಪರಿಹರಿಸಲು ಬದ್ಧವಾಗಿದೆ. ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳ ವಸತಿ ಸಮಸ್ಯೆಯನ್ನು ನೀಗಲು ಕ್ರಮ. 3.39 ಲಕ್ಷ ನಿವೇಶನಗಳನ್ನು ಹಂಚಲಾಗುತ್ತದೆ. 1.26 ಲಕ್ಷ ಮನೆಗಳನ್ನು ಕಟ್ಟಲಾಗುತ್ತದೆ.

ಹಳ್ಳಿಹಳ್ಳಿಗೆ ಕುಡಿಯುವ ನೀರು

ಶುದ್ಧವಾದ ಕುಡಿಯುವ ನೀರಿನ ಪೂರೈಕೆಗೆ ಸರಕಾಗದ ಅತ್ಯುನ್ನತ ಆದ್ಯತೆ. ಗ್ರಾಮಾಂತರ ನೀರು ಸರಬರಾಜಿಗಾಗಿ 252.14 ಕೋಟಿ ರೂಪಾಯಿಗಳು. ನೀರು ಪೂರೈಕೆಯಾಗದ ಎಲ್ಲ ವಾಸಸ್ಥಳಗಳನ್ನೂ ನೀರು ಪೂರೈಕೆ ಯೋಜನೆಯ ವ್ಯಾಪ್ತಿಗೆ ತರಲು ಪ್ರಯತ್ನ.

ನೀರಾವರಿ

ಕೃಷ್ಣಾ ಮೇಲ್ದಂಡೆ ಯೋಜನೆ ಪ್ರಗತಿ ಸಂಪನ್ಮೂಲ ಕ್ರೋಢೀಕರಣ ಭರದಿಂದ ನಡೆಯುತ್ತಿದೆ. ಕಾವೇರಿ ನದಿ ಪಾತ್ರದ ಯೋಜನೆಗಳಿಗೆ 300 ಕೋಟಿ ರೂಪಾಯಿ ಅನುದಾನ. ಸಣ್ಣ ನೀರಾವರಿಗೆ 83.57 ಕೋಟಿ ರೂಪಾಯಿ ಒದಗಿಸಲಾಗಿದೆ.

ಅರಣ್ಯೀಕರಣ

64,350 ಹೆಕ್ಟೇರ್ ವಿಸ್ತೀರ್ಣ ಪ್ರದೇಶದಲ್ಲಿ ಅರಣ್ಯೀಕರಣಕ್ಕೆ ಕ್ರಮ. ಅರಣ್ಯಗಳನ್ನು ರಕ್ಷಿಸುವ ಸಲುವಾಗಿ 300 ಲಕ್ಷ ಸಸಿಗಳ ವಿತರಣೆ. ಕಾಡುಗಳನ್ನು ರಕ್ಷಿಸಲು ವನ ವಿಜ್ಞಾನ ಕೇಂದ್ರಗಳ ಸ್ಥಾಪನೆ.

ಬಂಡವಾಳ ಹೂಡಿಕೆ

ಇಪ್ಪತ್ತೊಂದು ದೊಡ್ಡ ಯೋಜನೆಗಳ ಮೂಲಕ ರೂ.23,804 ಕೋಟಿ ಹೂಡಿಕೆ. ಅಭಿವೃದ್ಧಿ ಕೇಂದ್ರಗಳು ಸಾಫ್ಟವೇರ್ ಟೆಕ್ನಾಲಜಿ ಪಾರ್ಕ್, ಎಲೆಕ್ಟ್ರಾನಿಕ್ ಕೇಂದ್ರ ಮತ್ತು ರಫ್ತು ಪ್ರವರ್ತನಾ ಕೈಗಾರಿಕಾ ಪಾರ್ಕ್‌ಗಳ ಸ್ಥಾಪನೆ.

ಆರೋಗ್ಯ ಸೇವೆ ಸುಧಾರಣೆ

ಬಡ ಜನರಿಗೆ ಅತ್ಯಾಧುನಿಕ ವೈದ್ಯಕೀಯ ಸವಲತ್ತುಗಳನ್ನು ಒದಗಿಸಲು ಸೂಪರ್ ಸ್ಪೆಷ್ಯಾಲಿಟಿ ಆಸ್ಪತ್ರೆಗಳು. ಇದಕ್ಕಾಗಿ 550 ಕೋಟಿ ರೂ. ಮೀಸಲು. ಗ್ರಾಮೀಣ ಪ್ರದೇಶಗಳಲ್ಲಿ ಮೂಲಸೌಲಭ್ಯಗಳನ್ನು ಕಲ್ಪಿಸಲು ಸರಕಾರದ ಕ್ರಮ. 800 ವೈದ್ಯರಗಳ ನೇಮಕ.

ಶಿಕ್ಷಣ

ಬಾಲಕಿಯರ ಶಿಕ್ಷಣಕ್ಕೆ ಪ್ರಥಮ ಆದ್ಯತೆ. ಶಾಲೆಗಳೇ ಇಲ್ಲದ 1264 ಸ್ಥಳಗಳಲ್ಲಿ ಶಾಲಾಸೌಕರ್ಯ. 9.350 ಶಿಕ್ಷಕರ ನೇಮಕ. ಜಿಲ್ಲೆಗೆ ಒಂದರಂತೆ 20 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾರಂಭ. ರಾಜ್ಯದ 119 ಕ್ಷೇತ್ರಗಳಲ್ಲಿ 25.20 ಲಕ್ಷ ಮಕ್ಕಳಿಗೆ ಮಧ್ಯಾಹ್ನ ಊಟದ ಯೋಜನೆ.

ಅಂತರಾಷ್ಟ್ರೀಯ ವಿಮಾನ ನಿಲ್ದಾಣ

ದೇವನಹಳ್ಳಿಯ ಹತ್ತಿರ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣಕ್ಕೆ ನಿರ್ಧಾರ. ಇದರಿಂದ ರಾಜ್ಯಕ್ಕೆ ಪ್ರಮುಖ ಜಾಗತಿಕ ಕೇಂದ್ರಗಳೊಡನೆ ಸಂಪರ್ಕ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಮಹಿಳೆಯರು ವೃತ್ತಿ ಕೌಶಲ್ಯ ಪಡೆದು ಸ್ವಾವಲಂಬಿಗಳಾಗಲು ವಿಧವಾ ಮತ್ತು ಅಶಕ್ತ ಮಹಿಳೆಯರಿಗೆ ಯೋಜನೆಗಳು. ಸರಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಮೀಸಲಾತಿ. ಕಾಲೇಜುಗಳಲ್ಲಿ ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಮಹಿಳೆಯರಿಗೆ ಮೀಸಲಾತಿ.

ಸಮಾಜ ಕಲ್ಯಾಣ ಕಾರ್ಯಗಳು

ತುಳಿತಕ್ಕೊಳಗಾದ, ಶೋಷಣೆಗೊಳಗಾದ ಸಮಾಜದ ಹಿಂದುಳಿದ ವರ್ಗದವರ ಜೀವನಾಧಾರಕ್ಕೆ ನೂತನ ಯೋಜನೆಗಳು.

- 8.40 ಕೋಟಿ ರೂ. ವೆಚ್ಚದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗಾಗಿ 30 ವಿದ್ಯಾರ್ಥಿನಿಲಯಗಳು.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ರೈತರಿಗಾಗಿ 5000 ಕೊಳವೆ ಬಾವಿಗಳು.
- ಹಿಂದುಳಿದ ಜಾತಿಗಳವರಿಗೆ ರೂ. 35.50 ಕೋಟಿ ಮತ್ತು ಅಲ್ಪ ಸಂಖ್ಯಾತರಿಗೆ ರೂ. 32.77 ಕೋಟಿ ನೆರವು.

ಕರ್ನಾಟಕ ಆರ್ಥಿಕ ಉದಾರೀಕರಣದ ಮುಂಚೂಣಿಯಲ್ಲಿದ್ದು, ಅಂತರಾಷ್ಟ್ರೀಯ ಬಂಡವಾಳಗಾರರ ಆಕರ್ಷಣೆಯ ಕೇಂದ್ರವಾಗಿದೆ.

ಶ್ರೀ ಜೆ.ಎಚ್. ಪಟೇಲರ ಸಮರ್ಥ ಮಾರ್ಗದರ್ಶನದಲ್ಲಿ ಸರ್ವತೋಮುಖ ಪ್ರಗತಿ ಸಾಧಿಸುತ್ತಿದ್ದು ಮಾದರಿ ರಾಜ್ಯವಾಗಿ ರೂಪುಗೊಳ್ಳುತ್ತಿದೆ.

ಕರ್ನಾಟಕ ಸರ್ಕಾರ ಸ್ವಾತಂತ್ರ್ಯ ಹೋರಾಟಗಾರರ ಕನಸುಗಳನ್ನು ನನಸಾಗಿಸುವ ತನ್ನ ಧ್ಯೇಯಗಳನ್ನು ಪುನರ್ ಉಚ್ಚರಿಸುತ್ತಿದೆ. ಸಬಲ ಹಾಗೂ ಸಮೃದ್ಧ ಕರ್ನಾಟಕ ನಿರ್ಮಾಣದತ್ತ, ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸಲು ಸರ್ಕಾರ ಕಂಕಣಬದ್ಧ.

ಕರ್ನಾಟಕ - ನಿರಂತರ ಪ್ರಗತಿಗೆ ನಿರ್ಣಾಯಕ ಹೆಜ್ಜೆಗಳು

ಕರ್ನಾಟಕ ವಾರ್ತೆ



ಹಿಂದೆ ಪಟ್ಟ ಕಷ್ಟದಲ್ಲಿ ರಘುನಾಥ ಕೂಡ ಪಾಲು ಪಡೆದಿದ್ದರು. ಈಗ? ಊಹುಂ. ನನ್ನೆಡೆ ಕಣ್ಣೆತ್ತಿಯೂ ನೋಡುವ ಮನಸ್ಸಿರಲಿಲ್ಲ ನನ್ನ ಗಂಡನಿಗೆ!

ಈ ದಾಂಪತ್ಯವಿನ್ನು ಮುಂದುವರಿಯಲಾರದು ಎಂಬುದು ನನಗೆ ಖಾತ್ರಿಯಾಗಿ ಹೋಯಿತು. ಆಗಲೇ ನಾನು ಗುಣಪುರಕ್ಕೆ ಬಂದು ನಾಲ್ಕು ತಿಂಗಳುಗಳು ಉರುಳಿದ್ದವು. ಒಂದು ದಿನ ನನ್ನ ಸಣ್ಣ ತಂಗಿಯ ಗಂಡ ಅಪಘಾತಕ್ಕೀಡಾಗಿ ಸತ್ತ ಸುದ್ದಿ ಬಂತು. ಅತ್ತೆ, ನಾದಿನಿಯರು ನಾನು ಊರಿಗೆ ಹೋಗದಂತೆ ತಡೆಯೊಡ್ಡಿದರು. ನಾನು ಹಟ ಹಿಡಿದೆ. "ಹೋಗಲು ಬಿಡದಿದ್ದರೆ ಈ ಮನೆಯಲ್ಲಿರುವಷ್ಟೂ ದಿನ ಒಂದೇ ಒಂದು ಹನಿ ನೀರು ಕುಡಿಯುವುದಿಲ್ಲ, ಒಂದೇ ಒಂದು ತುತ್ತು ಅನ್ನ ಬಾಯಿಗಿಳಿಸುವುದಿಲ್ಲ..." ಎಂದು ಸತ್ಯಾಗ್ರಹ ಶುರುಮಾಡಿದೆ. "ಆಯಿತೇ ಮಹಾತಾಯಿ, ಹೋಗು. ಕಳಿಸಿ ಕೊಡುತ್ತೇವೆ. ಆದರೆ ನೀನೊಬ್ಬಳೇ ಹೋಗಬೇಕು. ಮಗುವನ್ನಾಗಲಿ, ನಿನ್ನ ಉಡುಗೆ-ಒಡವೆಗಳನ್ನಾಗಲಿ ಒಯ್ಯಕೂಡದು." ಅತ್ತೆ ಹೇಳಿದರು.

ನನಗೆ ಒಡವೆ-ವಸ್ತ್ರಗಳ ಮೇಲೆ ಆಸೆಯಿರಲಿಲ್ಲ, ಆದರೆ ಕರುಳಕುಡಿಯನ್ನು ಹೇಗೆ ಬಿಟ್ಟು ಹೋದೇನು?

ಗುಣಪುರದಿಂದ ಬಂದಾಕೆ ಅಲ್ಲಿಗೆ ಮರಳಲೇಬಾರದೆಂದು ತೀರ್ಮಾನಿಸಿದೆ. ನೃತ್ಯವೇ ನನ್ನ ಜೀವ. ಅದಕ್ಕೆ ಬೆಲೆಯಿರದಲ್ಲಿ ನಾನು ಜೀವದಿಂದಿರುವುದು ಸಾಧ್ಯವೆ? ಗುಣಪುರದಲ್ಲಿದ್ದಾಗ ನಾನು ಹೇಗೆ ದೈಹಿಕ-ಮಾನಸಿಕ ಯಾತನೆ ಅನುಭವಿಸಿದೆ ಎಂಬುದನ್ನು ರಘುನಾಥ್‌ಗೆ ಹಲವಾರು ಪತ್ರ ಬರೆದು ವಿವರಿಸಿದೆ. ಅದರಿಂದೇನೂ ಆತನ ಮನಸ್ಸಿನ ಮೇಲೆ ಪರಿಣಾಮವಾಗಲಿಲ್ಲ. ?ಋಕಾಲದವರೆಗೆ ನಮ್ಮ ನಡುವೆ ಮನಸ್ತಾಪದ ವಿನಿಮಯ ನಡೆಯುತ್ತಲೇ ಇತ್ತು. 'ನರ್ತಿಸಲು ಅವಕಾಶ ಮಾಡಿಕೊಟ್ಟರೆ ನಿಮ್ಮಲ್ಲಿ ನಾನು ಎಂಥ ಕಷ್ಟವನ್ನಾದರೂ ಸಹಿಸಿಯೇನು' ಎಂಬುದನ್ನು ಬರೆಯದೇ ಇರಲಿಲ್ಲ. ನನ್ನ ಬದುಕು ಪಡೆಯುತ್ತಿದ್ದ ವಿಚಿತ್ರ ತಿರುವು ನನ್ನ ಮಟ್ಟಿಗೆ ತಿರುಗಣೆಮಡುವೇ ಆಗಿತ್ತು. ಇಂಥದರಲ್ಲೂ ಸ್ವಾಭಿಮಾನ ನನ್ನನ್ನು ತಲೆಯೆತ್ತಿ ನಿಲ್ಲುವಂತೆ ಮಾಡುತ್ತಿತ್ತು.

ಪರಿಸ್ಥಿತಿ ಬಿಗಡಾಯಿಸುತ್ತಿರುವುದನ್ನು ನನ್ನ ಸೋದರ ಮಾವನಿಂದ ನೋಡಲು ಆಗಲಿಲ್ಲ. ಗುಣಪುರಕ್ಕೆ ಹೋಗಿ ಬಿಟ್ಟೂ ಬಿಡದೆ ರಘುನಾಥರನ್ನು ಮಾತನಾಡಿಸಿ ಮನಃಪರಿವರ್ತನೆ ಮಾಡುವಲ್ಲಿ ಆತ ಸಫಲನೂ ಆದ. ರಘು ಭುವನೇಶ್ವರಕ್ಕೆ ಮರಳಿದರು. ೧೯೬೬ರಲ್ಲಿ ನಾನು-ರಘು-ಪಾರ್ಥು ಅಲ್ಲಿ ವಾಸಿಸತೊಡಗಿದೆವು.

ಅತ್ತೆ, ನಾದಿನಿಯರ ವಿಷಯದಲ್ಲಿ ಬಹುದಿನಗಳವರೆಗೆ ನನಗೆ ಸದಭಿಪ್ರಾಯ ಮೂಡಲೇ ಇಲ್ಲ. ನನಗೆ ಬಂದಿದ್ದ ಎಲ್ಲ ಬಹುಮಾನಗಳು ಪ್ರಶಸ್ತಿ ಪತ್ರಗಳು ಗುಣಪುರದಲ್ಲೇ ಉಳಿದುಬಿಟ್ಟವು. ಅವನ್ನು ಅವರು ಜತನವಾಗೂ ಇಡಲಿಲ್ಲ.

ಕಾಲ ಎಲ್ಲವನ್ನೂ ಮರೆಸುತ್ತದಂತೆ. ಒಂದು ಕಾಲಕ್ಕೆ ನನ್ನನ್ನು ಹೀಯಾಳಿಸುತ್ತಿದ್ದ ಅತ್ತೆ ಈಗ ಮೆತ್ತಗಾಗಿದ್ದಾರೆ. "ಆಹಾ, ನನ್ನ ಸೊಸೆ

ಸಾವಿರದಲ್ಲೊಬ್ಬಳು. ನೃತ್ಯಾಂಗನೆಯಾದರೂ ನಿಗರ್ವಿ," ಎಂಬ ಮಾತನ್ನಾಕೆ ದಿನಕ್ಕೆ ಹತ್ತು ಸಲವಾದರೂ ಅವರಿವರೆದುರು ಹೇಳುತ್ತಿರುತ್ತಾರೆ.

ಅಂತೂ ಹತ್ತು ವರ್ಷಗಳ ಆ ಅನುಭವಗಳು ಒಂದು ಕೆಟ್ಟ ಕನಸಿನಂತೆ ಅನಿಸುತ್ತಿವೆ. ಜನ ನಿಮ್ಮನ್ನು ತುಳಿಯಬಹುದು; ಆದರೆ ಗಟ್ಟಿ ಮನ ನಿಮ್ಮನ್ನು ಮತ್ತೆ ಮತ್ತೆ ಎತ್ತಿ ಹಿಡಿಯುತ್ತದೆ. ಆಗ ನನಗೂ ಸಣ್ಣ ವಯಸ್ಸು. ಅತ್ತೆಯೋ ಹಳೆಯ ವಿಚಾರದ ಹೆಂಗಸು. ತಲೆಮಾರುಗಳ ಅಂತರ, ಬೆಳೆದು ಬಂದ ವಾತಾವರಣದ ಭಿನ್ನತೆ ಇಂಥದಕ್ಕೆಲ್ಲ ಕಾರಣವಾಗುತ್ತದೆ ಎಂಬುದೀಗ ನನ್ನ ಅರಿವಿಗೆ ಬಂದಿದೆ.


ನನ್ನಿಂದಾಗಿ ಗಂಡನಿಗೂ ತೊಂದರೆ....

೧೯೮೭ರಿಂದ ಮತ್ತೆ ಹೊಸ ಜೀವನವನ್ನು ಆರಂಭಿಸಿದವರು ನಾವು. ಮತ್ತೆ ಕಷ್ಟಪಟ್ಟು ದುಡಿಯಬೇಕಾದ ಅನಿವಾರ್ಯತೆ. ಆ ವರ್ಷ ನನಗೊಂದು ಮಹತ್ವದ ಅವಕಾಶ ಸಿಕ್ಕಿತು. ಗುರೂಜಿಗೆ ಆ ವರ್ಷದ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ! ಅವರ ಇತರ ಶಿಷ್ಯಗಣದೊಂದಿಗೆ ನಾನೂ ದಿಲ್ಲಿಗೆ ಹೋದೆ. ಅಲ್ಲಿ ನೃತ್ಯ ಪ್ರದರ್ಶನ ನೀಡಬೇಕು. ನನಗೆ ೨೫ ನಿಮಿಷಗಳವರೆಗೆ ನರ್ತಿಸುವ ಅವಕಾಶ ದೊರಕಿತ್ತು. ಜನ ತುಂ... ಬಾ ಅಂದರೆ ತುಂ... ಬಾ... ಪ್ರಶಂಸಿಸಿದರು. ಪತ್ರಿಕೆಗಳಲ್ಲೂ ಅಷ್ಟೇ. ಅಲ್ಲಿಂದ ಒಂದೊಂದೇ ಮೆಟ್ಟಿಲುಗಳು ಗೋಚರಿಸತೊಡಗಿದವು. ಕಾರ್ಯಕ್ರಮಗಳೂ ಸಾಕಷ್ಟು ಬರತೊಡಗಿದವು. ನೂರಾರು ಆಹ್ವಾನಗಳು. ಆದಾಯವೂ ಚೆನ್ನಾಗಿ ಆಗತೊಡಗಿತು. ರಘುನಾಥ್‌ಗೂ ವೃತ್ತಿ ಜೀವನಕ್ಕೊಂದು ಹೊಸ ಆಯಾಮ. ರಾಷ್ಟ್ರೀಯ ಸಂಗೀತ ಕಾರ್ಯಕ್ರಮಗಳನ್ನೂ, ಸಂಗೀತ ಮೇಳಗಳನ್ನೂ ಅವರು ಆಕಾಶವಾಣಿ ಮತ್ತು ದೂರದರ್ಶನಕ್ಕಾಗಿ ನಿರ್ವಹಿಸತೊಡಗಿದರು. ಆದರೆ ನನಗೆ ಹೆಚ್ಚೆಚ್ಚು ಕಾರ್ಯಕ್ರಮಗಳು ಬರತೊಡಗಿದಂತೆ ರಘು ನನ್ನೊಂದಿಗೆ ಪದೇ ಪದೇ ಕಾರ್ಯಕ್ರಮಕ್ಕೆ ಬರಬೇಕಲ್ಲ! ಅವರೇ ಹಾಡಬೇಕಲ್ಲ! ಏಕಕಾಲಕ್ಕೇ ತನ್ನ ಕಾರ್ಯಕ್ರಮಕ್ಕೂ, ನನ್ನ ಕಾರ್ಯಕ್ರಮಕ್ಕೂ ಹಾಜರಾಗುವದು ಹೇಗೆ ಸಾಧ್ಯ?

ಮೊದಮೊದಲು ಈ ವಿಷಯವಾಗಿ ಒಂದಷ್ಟು ತಿಕ್ಕಾಟ, ಇರಿಸು ಮುರಿಸು. "ನಾನು ಈ ಕಾರ್ಯಕ್ರಮವನ್ನಂತೂ ತಪ್ಪಿಸೋ ಹಾಗೇ ಇಲ್ಲ" ಅಂತ ರಘು; "ನನಗಂತೂ ಇದು ತುಂಬ ಮಹತ್ವದ ಕಾರ್ಯಕ್ರಮ" ಅಂತ ನಾನು. ಕೊನೆಗೆ ಒಂದು ಸರಳ ರಾಜೀ ಸೂತ್ರ ಅನುಸರಿಸಿದೆವಿನ್ನಿ. ಮೊದಲ ಆಹ್ವಾನಕ್ಕೆ ಆದ್ಯತೆ ನೀಡುವುದೇ ಆ ಸೂತ್ರ. ಆದರೆ ನನ್ನೊಂದಿಗೆ ಹಾಡುವುದಕ್ಕಾಗಿ ರಘು ನಿಜವಾಗಿಯೂ ತನ್ನ ಸಂಗೀತ ಪ್ರತಿಭೆಗೆ ದಕ್ಕಬಹುದಾಗಿದ್ದ ಸದವಕಾಶಗಳನ್ನು ಬಿಟ್ಟುಕೊಟ್ಟರು. ನನ್ನ ಪತಿಯ ಹಿರಿಮೆಯಲ್ಲವೆ



ಒಡಿಸ್ಸಿಯ ಒಂದು ಭಂಗಿ



ಇದು? ನನ್ನಿಂದಾಗಿ ಎಷ್ಟೆಲ್ಲ ತೊಂದರೆ ಅನುಭವಿಸಿಯೂ ಅದನ್ನು ತೋರಗೊಡದೆ ಇರುವ ಹಿರಿಯ ಗುಣ ರಘುವಿನದು.

ನನ್ನ ಕಾರ್ಯಕ್ರಮಗಳಿಗೆ ರಘು ಅಷ್ಟೊಂದು ಮಹತ್ವ ನೀಡುತ್ತಿದ್ದುದಕ್ಕೆ ಇನ್ನೂ ಒಂದು ಮುಖ್ಯ ಕಾರಣವಿತ್ತು. ಒಡಿಸ್ಸಿ ನೃತ್ಯ ಶೈಲಿಯನ್ನು ಪುನರುಜ್ಜೀವನಗೊಳಿಸಬೇಕು ಎಂಬುದೇ ನಮ್ಮಿಬ್ಬರ ಮಹೋದ್ದೇಶ. ಆ ದಿನಗಳಲ್ಲಿ ಪರಿಪೂರ್ಣವಾದ ಒಡಿಸ್ಸಿ ನೃತ್ಯವನ್ನು ವೇದಿಕೆಯ ಮೇಲೆ ಪ್ರದರ್ಶಿಸಬಲ್ಲಂಥವರು ಇರಲೇ ಇಲ್ಲ. ಗುರೂಜಿ, ರಘು ಮತ್ತು ನಾನು ಅವಿಶ್ರಾಂತವಾಗಿ ದುಡಿದೆವು. ಈ ಪ್ರಕ್ರಿಯೆಯಲ್ಲಿ ನಾನು ನಿತ್ಯವೂ ಹೊಸ ಹೊಸ ವಿಷಯವನ್ನು ಕಲಿಯಲು ಸಾಧ್ಯವಾಯಿತು. ದೇವಾಲಯಗಳು, ಪಂಡಿತರು, ಪುಸ್ತಕಗಳು... ಹೀಗೆ ಎಲ್ಲ ಮೂಲದಿಂದಲೂ ಮಾಹಿತಿ ಲಭ್ಯವಾಯಿತು. ಹೊಸ ನೃತ್ಯ ಶೈಲಿಯ ಆವಿಷ್ಕಾರದ ಮೊದಲ ಹಂತ ಶುರುವಾಯಿತು. ಈ ದಿಶೆಯಲ್ಲಿ ಶ್ರೇಯಸ್ಸು ನನಗೇ ಕಟ್ಟಲ್ಪಟ್ಟಿತಾದರೂ ರಘುವಿನ ತ್ಯಾಗ, ಗುರೂಜಿಯ ಮಾರ್ಗದರ್ಶನಗಳು ಇರದಿದ್ದರೆ ಇದೆಲ್ಲಾ ಎಲ್ಲಿ ಸಾಧ್ಯವಾಗುತ್ತಿತ್ತು?

ಪ್ರಶಸ್ತಿಗಳ ಸುರಿಮಳೆ, ಸಮ್ಮಾನಗಳ ಸುರಿಮಳೆ.... ಒಂದು ರೀತಿಯಲ್ಲಿ ಬೆಂಕಿಯಲ್ಲಿ ಬೇಯುತ್ತಿದ್ದವನನ್ನು ಹೊರದೆಗೆದು ಆತನ ಮೇಲೆ ಅಮೃತಾಭಿಷೇಕಗೈದರೆ ಹ್ಯಾಗಿರುತ್ತದೋ ಹಾಗಿತ್ತು ನನ್ನ ಆಗಿನ ಸ್ಥಿತಿ. ಈ ಪ್ರಶಸ್ತಿಗಳಲ್ಲಿ ಶ್ರೇಷ್ಠವಾದದ್ದು ಪದ್ಮಶ್ರೀ. ೧೯೭೫ರ ಪದ್ಮ ಪ್ರಶಸ್ತಿಗಳು ಪ್ರಕಟವಾದಾಗ ನಾನು ಭುವನೇಶ್ವರದಲ್ಲೇ ನೃತ್ಯ ಪ್ರಾತ್ಯಕ್ಷಿಕೆ ನೀಡುತ್ತಲಿದ್ದೆ. ಆಗಲೇ ಬಂತು ತಂತಿ ಸಂದೇಶ. ಎರಡೆರಡು ಬಾರಿ ಓದಿ ದೃಢಪಡಿಸಿಕೊಂಡೆ. ನನ್ನಂಥವಳಿಗೆ ಪದ್ಮಶ್ರೀ! ಒಂದಷ್ಟು ಹೊತ್ತು ಕಾಲು ನೆಲಬಿಟ್ಟ ಹಾಗೆ ಭಾಸವಾಯಿತಾದರೂ ಅದರ ಹಿಂದೆಯೆ ನನ್ನ ಮುಂದಿರುವ ಗುರುತರ ಹೊಣೆಯ ಅರಿವೂ ಆಯಿತು. ಇನ್ನು ಹೆಚ್ಚು ಗಂಭೀರವಾಗಿ, ಹೆಚ್ಚೆಚ್ಚು ತೊಡಗಿಕೊಂಡು ಕೆಲಸ ಮಾಡಬೇಕೆಂದು ಮನಸ್ಸು ಒತ್ತಿ ಹೇಳಿತು. ಒರಿಸ್ಸಾ ರಾಜ್ಯದ ಯಾವ ನರ್ತಕಿ/ಕ ಈ ಪ್ರಶಸ್ತಿಯನ್ನು ಈ ಮೊದಲೆಂದೂ ಪಡೆದಿರಲಿಲ್ಲ. ನಾನೇ ಆ ಗೌರವಕ್ಕೆ ಪಾತ್ರಳಾದ ಮೊದಲಿಗಳು. ರಾಜ್ಯದ ಮೂಲೆ ಮೂಲೆಯಿಂದ ಅಭಿನಂದನಾ ಪತ್ರಗಳು ಬಂದವು. ನನ್ನ ತವರಿನವರಿಗಂತೂ ನಿಧಿ ದೊರಕಿದಷ್ಟು ಸಂತಸ. ಅಪ್ಪ ಈ ಸುದ್ದಿ ಕೇಳಿದಾಕ್ಷಣ ಅತ್ತುಬಿಟ್ಟರಂತೆ.

ತಾಯಿಯಾದರೂ......

ಈಗಾಗಲೇ ಹೇಳಿರುವಂತೆ ನಾನು ಎರಡು ಮಕ್ಕಳ ತಾಯಿ. ಆದರೂ ಒಬ್ಬ ಯಶಸ್ವಿ ತಾಯಿ ಆಗಲಿಲ್ಲ ನಾನು. ಈ ವಿಷಯದಲ್ಲಿ ನಾನು ಸೋತಿದ್ದೇನೆಂದೇ ಹೇಳಬೇಕು. ನಮ್ಮಿಬ್ಬರಿಗೂ ನಿಶ್ಚಿತ ವರಮಾನವಿರಲಿಲ್ಲ. ಹೀಗಾಗಿ ಬರುವ ಕಾರ್ಯಕ್ರಮಗಳನ್ನೆಲ್ಲ ಒಪ್ಪಿಕೊಳ್ಳಲೇಬೇಕಾಗಿತ್ತು. ಕಾರ್ಯಕ್ರಮವಿಲ್ಲದಾಗ ಅವುಗಳನ್ನು ಹುಡುಕಿಕೊಂಡು ಹೋಗಬೇಕಾಗಿತ್ತು. ಇಂಥದರಲ್ಲಿ ನಾನು ಮಕ್ಕಳನ್ನು ನಿರ್ಲಕ್ಷಿಸಿದೆ ಎಂದು ಆಗಲೂ ಅನಿಸುತ್ತಿತ್ತು. ಈಗಲೂ ಅನಿಸುತ್ತಿದೆ ಮಕ್ಕಳ ಪರೀಕ್ಷೆಯ ಸಂದರ್ಭದಲ್ಲಿ ನನಗೆ ದೂರದ ಊರಲ್ಲಿ ನೃತ್ಯ ಕಾರ್ಯಕ್ರಮ. ನನ್ನ

ನೃತ್ಯ ಕಾರ್ಯಕ್ರಮ ಎಂದ ಮೇಲೆ ರಘುವೂ ಜತೆಗಿರಬೇಕು. ಮಕ್ಕಳು ಚಿಕ್ಕವರಿರುವಾಗ ಅಪ್ಪ-ಅಮ್ಮ ಇಬ್ಬರ ನೆರವೂ ಅವರಿಗೆ ಅವಶ್ಯ. ಪಾರ್ಥ್ಞ ಹಾಗೂ ಸಾಚಿಯನ್ನು ನೋಡಿಕೊಳ್ಳಲು ನನ್ನ ತಾಯಿ ಮತ್ತು ತಂಗಿ ಇದ್ದರು ನಿಜ. ಆದರೆ ಅವರು 'ಅಮ್ಮ-ಅಪ್ಪ' ಆದಾರೆಯೆ? ಮಕ್ಕಳು ನನ್ನಿಂದ ದೂರವಾಗುತ್ತಿದ್ದಾರೆ ಎಂಬುದನ್ನು ಗಮನಿಸಿದ್ದೂ ಉಂಟು. ಉಂಟಾಗುತ್ತಿದ್ದ ಕಂದರವನ್ನು ಮುಚ್ಚಲು ಪ್ರಯತ್ನಿಸಿದೆ. ಸವ್ಯಸಾಚಿ ಬಿದ್ದು ಕಾಲು ಮುರಿದುಕೊಂಡಾಗ ನನ್ನ ಕಾಲುಗಳಾದರೂ ಹೇಗೆ ಕುಣಿದಾವು? ರಘುವಿನ ಕಂಠವಾದರೂ ಹೇಗೆ ಉಳಿದೀತು? ಮೂರು ತಿಂಗಳುಗಳವರೆಗೆ ನಮ್ಮೆಲ್ಲ ಕಾರ್ಯಕ್ರಮಗಳನ್ನೂ ರದ್ದುಪಡಿಸಿದೆವು ಇಲ್ಲವೆ ಮುಂದೂಡಿದೆವು. ಆಗಲ್ಲ ಸಾಚಿಯನ್ನು ಬಿಟ್ಟು ಅಗಲಲಿಲ್ಲ ನಾನು. ಅಬ್ಬಾ, ಆಗ ಆತನ ಮುಖದ ಮೇಲೆ ಎಂಥ ಸಮಾಧಾನ! ಹಿರಿಯ ಮಗ ಪಾರ್ಥ್ಞ ಮತ್ತು ಆತನ ಮಡದಿ ಪದ್ಮಾರೊಂದಿಗೂ ಅಷ್ಟೆ. ಉಡಿಯಾ ಭಾಷೆಯಲ್ಲಿ ಎಂ.ಎ. ಮಾಡಿರುವ ಪದ್ಮಾಳಿಗೆ "ಸುಮ್ಮನೆ ಕೂರದೇ ಮತ್ತೇನಾದರೂ ಸಾಧನೆಗೆ ತೊಡಗು" ಎಂದು ಪ್ರೀತಿಯಿಂದ ಒತ್ತಾಯಿಸುತ್ತಿರುತ್ತೇನೆ. ಆಕೆಯನ್ನು ನಾನು 'ಸೊಸೆ'ಯೆಂದು ಭಾವಿಸಿಯೂ ಇಲ್ಲ. 'ಸೊಸೆ'ಯೆಂದು ಭಾವಿಸಿದರೆ ನಾನು 'ಅತ್ತೆ' ಎಂದೆನಿಸಿಕೊಳ್ಳುವೆನಲ್ಲವೆ?

ಮಕ್ಕಳ ಕುರಿತು ಕಂಡ ಕನಸುಗಳೆಷ್ಟೊ... ಅವೆಲ್ಲ ಕನಸಾಗಿಯೇ ಉಳಿದಿವೆ. ಪಾರ್ಥ್ಞ ಒಬ್ಬ ಶಾಸ್ತ್ರೀಯ ಸಂಗೀತ ಕಲಾವಿದನಾಗಬೇಕೆಂದಿತ್ತು ನನ್ನ ಇಚ್ಛೆ. ನಾನು ಸ್ವ-ಸಾಧನೆಯಲ್ಲೇ ಅದೆಷ್ಟು ತೊಡಗಿದೆನೆಂದರೆ ಪಾರ್ಥ್ಞವಿಗೆ ಈ



ಅಗಿನ ರಾಷ್ಟ್ರಪತಿಗಳಿಂದ ಪದ್ಮಶ್ರೀ ಸ್ವೀಕರಿಸುತ್ತಿರುವಾಗ



ದಿಶೆಯಲ್ಲಿ ಮಾರ್ಗದರ್ಶನ ಮಾಡಲೂ ನನ್ನಿಂದಾಗಲಿಲ್ಲ. ಒಳ್ಳೆಯ ಧ್ವನಿಯಿದೆ. ಲಘು ಸಂಗೀತಕ್ಕಷ್ಟೇ ಅದನ್ನು ಆತ ಸೀಮಿತಗೊಳಿಸಿಕೊಂಡಿದ್ದಾನೆ. ಎರಡನೆ ಮಗ ಸವ್ಯಸಾಚಿ ಒಬ್ಬ ವೃತ್ತಿನಿರತ ಸರೋದ್ ವಾದಕನಾಗಬೇಕು ಎಂದುಕೊಂಡಿದ್ದೆ. ಬುದ್ಧದೇವ ದಾಸಗುಪ್ತರ ಬಳಿ ಸರೋದ್ ಪಾಠವನ್ನು ಕೊಡಿಸಿದೆ. ಆತ ಚೆನ್ನಾಗಿಯೇ ಸರೋದ್ ನುಡಿಸುತ್ತಾನೆ. ಆದರೆ "ನನ್ನ ಮೊದಲ ಪ್ರೇಮ ಛಾಯಾಗ್ರಹಣದ ಮೇಲೆ" ಎಂಬುದು ಸಾಚಿಯ ಸ್ವಷ್ಟಾಭಿಪ್ರಾಯ. ಲಹರ್ ಬಂದರೆ ಸರೋದ್ ಹಿಡಿದು ಕೂತುಬಿಡುತ್ತಾನೆ.

ಒಂಟಿತನ ಕಾಡುತ್ತದೆ.........

ಒಂದು ವೇಳೆ ಮತ್ತೊಮ್ಮೆ ಹುಟ್ಟಿಬಂದರೆ ನಾನು ಈ ಜನ್ಮದಲ್ಲಿ ಮಾಡಿದ ತಪ್ಪನ್ನು ಮಾಡದಿರುವ ಹಾಗೆ ನೋಡಿಕೊಳ್ಳುತ್ತೇನೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ನಾನು ಮದುವೆಗೆ ಮುಂದಾಗುವುದಿಲ್ಲ. ಬೇಗ ಮದುವೆಯಾದ್ದರಿಂದ ನನ್ನ ಎಳೆಯ ಹೆಗಲುಗಳು ಅತಿಹೆಚ್ಚು ಭಾರ ಹೊರಬೇಕಾಯಿತು. ಮನಸ್ಸು ವಯಸ್ಸಿಗೆ ಮೀರಿದ ಪರಿಸ್ಥಿತಿಗಳ ಕುರಿತು ಚಿಂತಿಸುವ ಹಾಗಾಯಿತು. ಸಂಗೀತ ಸಾಧಕನನ್ನು ಮದುವೆಯಾದೆ. ನನ್ನ ಸಾಧನೆ ನನಗೆ, ನಿನ್ನ ಸಾಧನೆ ನಿನಗೆ ಎಂದು ಬಾಯಲ್ಲಿ ಹೇಳದಿದ್ದರೂ ಪಾಪ ಆತನಿಗೂ ಆತನದೇ ಆದ ಒಂದು ಕ್ಷೇತ್ರವಿದೆಯಲ್ಲ. ಏನೇ ಮಾಡುವುದಿದ್ದರೂ ರಘುವಿಗೆ ಕೇಳಿದರೆ "ನಿನಗೆ ಹೇಗೆ ಸರಿ ತೋಚುತ್ತೊ ಹಾಗೆ ಮಾಡು" ಎಂಬ ಉತ್ತರವೇ ಸಿಕ್ಕುತ್ತಿತ್ತು.

ಒಮ್ಮೊಮ್ಮೆಯಂತೂ ಎಲ್ಲವನ್ನೂ ಒಂಟಿಗೈಯಿಂದ ನಿಭಾಯಿಸಿ ಇನ್ನು ಸಾಕಪ್ಪಾ ಅನ್ನಿಸಿಬಿಡುವುದಿದೆ. ಒಂದೊಮ್ಮೆ ನನಗೆ ಇದನ್ನು ಮಾಡು, ಅದನ್ನು ಮಾಡು ಎಂದು ಹೇಳುವವರು ಯಾರಾದರೂ ಇದ್ದಿದ್ದರೆ ಎನಿಸುತ್ತಿದ್ದ ಕಾಲವೂ ಇತ್ತು. ಈಗ? ಯಾರಾದರೂ ಈ ಹೊಣೆಯನ್ನೆಲ್ಲ ಹೊತ್ತುಕೊಂಡರೆ ಸಾಕಪ್ಪಾ ಅನ್ನಿಸದೆ ಇರುವುದಿಲ್ಲ.

ಗುಣಪುರದ ಆ ದಿನಗಳನ್ನು ಬಿಟ್ಟರೆ ಮತ್ತೆಂದೂ ವೈಯಕ್ತಿಕ ವಿಷಯವನ್ನೆ ಎತ್ತಿಕೊಂಡು ಕಿತ್ತಾಡಿಲ್ಲ. ನಮ್ಮಲ್ಲಿ ಸಂಗೀತ ಸಂಯೋಜನೆ ಕುರಿತಂತೆ ಭಿನ್ನಾಭಿಪ್ರಾಯಗಳು ಬರುವುದಿದೆ. ರಘು ಶಾಸ್ತ್ರದ ವಿಷಯದಲ್ಲಿ ತುಂಬ ಕಟ್ಟುನಿಟ್ಟಿನ ಮನುಷ್ಯ. ಅದನ್ನು ಬಿಟ್ಟು ಸ್ವಲ್ಪವೂ ಆಚೀಚೆ ಸರಿಯುವವನಲ್ಲ. ಆದರೆ ಪ್ರಯೋಗಾತ್ಮಕವಾಗಿ ಅಲ್ಪಸ್ವಲ್ಪ ಮಾರ್ಪಾಡು ಮಾಡಿಕೊಳ್ಳಬಹುದು ಎಂದು ನನ್ನ ವಾದ. ಊಹೂಂ, ಜಪ್ಪಯ್ಯ ಅಂದರೂ ರಘು ಅದಕ್ಕೆ ಒಡಂಬಡುವುದಿಲ್ಲ.

ಆದರೂ ರಘು ಪ್ರತಿಯೊಂದಕ್ಕೂ ನನ್ನ ಮೇಲೆಯೇ ಅವಲಂಬಿತರಾಗುವುದುಂಟು. ಮಕ್ಕಳೂ ಅಷ್ಟೇ. ಒಂದು ಹೆಜ್ಜೆಯಿಡಲೂ ನನ್ನತ್ತ ನೋಡುತ್ತಾರೆ. ಒಮ್ಮೊಮ್ಮೆ ಇದು ನನಗೆ ಮುಜುಗರವುಂಟು ಮಾಡಿದರೂ ನನ್ನ ಮೇಲೆ ಅವರು ಇರಿಸಿರುವ ನಂಬಿಕೆಯ ಬಗ್ಗೆ ಹೆಮ್ಮೆಯೆನಿಸುತ್ತದೆ. ನಾನು ಮಾನಸಿಕವಾಗಿ ದೈಹಿಕವಾಗಿ ದಣಿದ ಹೊತ್ತಿನಲ್ಲೂ ಅವರು ಸಲಹೆ ಕೇಳಿ ಬದಾಗ ಇದ್ದಕ್ಕಿದ್ದಂತೆ ನನ್ನಲ್ಲಿ ಹೊಸ ಚೈತನ್ಯ ಮೂಡುತ್ತದೆ. ಆದರೆ ಕೆಲ ಸಂದರ್ಭಗಳಲ್ಲಿ ಹೀಗೆ ಅವರು ಬಂದಾಗ ರೇಗಿಬಿಡೋಣವೆನಿಸಿದರೂ ಕ್ಷಣಕಾಲ ಯೋಚಿಸಿ ನಕ್ಕು ಬಿಡುತ್ತೇನೆ.

ಅದು, ತಮಗೆ ನಂತರ ಬನ್ನಿ ಯೋಚಿಸೋಣ ಎಂಬ ಸೂಚನೆ ಎಂಬಂತೆ ಮಕ್ಕಳು ಹೋಗಿಬಿಡುತ್ತಾರೆ.

ಮಕ್ಕಳು! ಇವರಿಗೆ ಬಾಲ್ಯದಲ್ಲಿ ನಾನು ಕೊಡಬೇಕಾದುದೇನನ್ನೂ ಕೊಡಲು ಸಾಧ್ಯವಾಗಲೇ ಇಲ್ಲ. ನನ್ನ ಬಾಲ್ಯವಾದರೂ ಅಷ್ಟೆ. ತೀರ ಎಳವೆಯಲ್ಲಿ ನಾನು ನರ್ತನಕ್ಕೆ ತೊಡಗಿದ್ದರಿಂದ ಶೈಶವವು ನನ್ನ ಅನುಭವಕ್ಕೆ ಬರಲೇ ಇಲ್ಲ. ನಂತರ ತೀರ ಚಿಕ್ಕ ವಯಸ್ಸಿನಲ್ಲೇ ಮದುವೆಯಾದೆ. ಹೀಗಾಗಿ ತಾರುಣ್ಯದ ಅನುಭವವೂ ನನಗಾಗಲಿಲ್ಲ. ಇವೆಲ್ಲಾ ನನ್ನನ್ನು ತುಂಬ ಗಂಭೀರಳನ್ನಾಗಿಸಿವೆ, ಶಿಸ್ತಿನವಳನ್ನಾಗಿ ಮಾಡಿವೆ, ಸ್ವಾವಲಂಬಿಯನ್ನಾಗಿ ರೂಪಿಸಿವೆ. ಇಂಥ ದಿವಸ ಇಂಥದು ಆಗಲೇಬೇಕೆಂದು ನಿರ್ಧರಿಸಿದರೆ ಅದು ಆಗಲೇಬೇಕು. "ನಾಳೆ ಮಾಡಿದರೆ ನಿನಗೇನು ನಷ್ಟ?" ಎಂದೂ "ನೀನು ಇಷ್ಟು ಸಮಯ ಪಾಲಿಸಿದರೂ ಎಲ್ಲಿ ಜಯ ದೊರೆತಿದೆ?" ಎಂದೂ ರಘು ಒಮ್ಮೊಮ್ಮೆ ಕೆಣಕುವುದುಂಟು. ಆದರೆ ನನಗೆ ವಿನಾಕರಣ ಕೆಲಸ ಮುಂದೂಡುವುದು ಒಗ್ಗುವುದೇ ಇಲ್ಲವಲ್ಲ. ಒಂಟಿತನದ ಭಾವನೆಯನ್ನು ಮರೆಯಲು ನಾನು ಆ ಈ ಕೆಲಸಗಳಲ್ಲಿ ತೊಡಗಿಕೊಂಡಿರಲೇಬೇಕು. ನನಗೆ ಸ್ನೇಹಿತರೇ ಇಲ್ಲ. ಹಾಗೆ ಸಾಕಷ್ಟು ಜನ ಪರಿಚಿತರಿದ್ದಾರೆ. ಪರಿಚಿತರೆಲ್ಲ ಸ್ನೇಹಿತರಾಗುವುದು ಸಾಧ್ಯವೆ? ನನ್ನನ್ನು ಗೌರವಿಸುವ, ಪ್ರೀತಿಸುವ, ಪ್ರಶಂಸಿಸುವ ಮಂದಿಗೇನೂ ಕೊರತೆಯಿಲ್ಲ. ಆದರೆ ನಾನು ಯಾರೆದುರೂ ಸುಲಭವಾಗಿ ಮುಕ್ತಳಾಗಿ ವರ್ತಿಸುವುದಿಲ್ಲ. ಬಾಲ್ಯದಿಂದಲೂ ಅಷ್ಟೆ. ಯಾರೊಂದಿಗೂ ನಾನು ಹತ್ತಿರದವಳಾಗಲು ಸಾಧ್ಯವೇ ಇಲ್ಲ.

ಆದರೂ ನನಗೆ 'ಹತ್ತಿರ'ವಾದ ಜನರಿದ್ದಾರೆ. ಹಾಗೆ ಹತ್ತಿರವಾಗುವಂತೆ ಮಾಡಿದ ಕ್ಷಣಗಳಂತೂ ನನ್ನ ಬದುಕಿನಲ್ಲೇ ಚಿರಸ್ಮರಣೀಯವಾದವುಗಳು. ಈ ಕ್ಷಣಗಳ ನೆನಪು ಬಂದಾಗಲೆಲ್ಲ ನನ್ನ ಮನ ನಮಿಸುತ್ತದೆ. ತಲೆ ತಂತಾನೇ ಬಾಗುತ್ತದೆ. ದೇಹದಾದ್ಯಂತ ವಿನೀತಭಾವ ಆವರಿಸುತ್ತದೆ.

೧೯೮೭-೮೮ರಲ್ಲಿ ನನ್ನ ಹಿಮ್ಮಡಿಗಳ ತೊಂದರೆ ಶುರುವಾಯಿತು. ತಾಳಲಾರದ ನೋವು. ಎಲ್ಲಾ ವಿಧ ಚಿಕಿತ್ಸೆಗಳನ್ನು ಮಾಡಿಯಾಯಿತು. ಊಹುಂ, ನೋವು ಬಿಟ್ಟೋಡಿದರೆ ತಾನೆ? ನರ್ತಿಸುವುದನ್ನು ನಿಲ್ಲಿಸಿದರೆ ಸರಿಹೋಗುತ್ತದೆ ಎಂದು ಕೆಲವರ ಸಲಹೆ. ಉಸಿರಾಡದೆ ಹೋದರೆ ಚೆನ್ನಾಗಿ ಬದುಕಬಹುದು ಎಂದ ಹಾಗೆಯೆ ಇದು. ಹೆಜ್ಜೆಗಳು ಕುಣಿತ ಬಿಡಲು ಸುತರಾಂ ಒಪ್ಪಲಿಲ್ಲ. ಇಂಥ ಸ್ಥಿತಿಯಲ್ಲೇ ನಾನು ಯುರೋಪಿನಲ್ಲಿ ನಡೆದ ಒಂದು ಅಂತಾರಾಷ್ಟ್ರೀಯ ನೃತ್ಯ ವಿಚಾರ ಸಂಕಿರಣಕ್ಕೆ ಹೋದೆ. ನೃತ್ಯ ಪ್ರಾತ್ಯಕ್ಷಿಕೆ ನೀಡುತ್ತಿದ್ದಾಗ ಡೆನ್ಮಾರ್ಕಿನ ಆಡಿನ್ ಥಿಯೇಟರಿನ ವಿಖ್ಯಾತ ನಿರ್ದೇಶಕ ಯುಜಿನಿಯೋ ನನ್ನ ಹೆಜ್ಜೆಗಳನ್ನೇ ಗಮನಿಸುತ್ತಿದ್ದರು. ಕಾರ್ಯಕ್ರಮ ಮುಗಿದ ಮೇಲೆ "ನೀವು



"ನೃತ್ಯವಿಲ್ಲದೆ ಇರಲಾರೆ"



ಸಂಯುಕ್ತಾ: ಸುಖ-ದುಃಖದ ಕಥೆ

ಇಟಲಿಯ ಬರ್ಗಾಮೋದಲ್ಲಿರುವ ಪ್ರಸಿದ್ಧ ಆಸ್ಪತ್ರೆಗೊಮ್ಮೆ ಹೋಗಲೇಬೇಕು. ಹಿಮ್ಮಡಿಯಲ್ಲಿನ ತೊಂದರೆಗೆ ಅಲ್ಲಿ ವಿಶೇಷ ಚಿಕಿತ್ಸೆ ನೀಡುತ್ತಾರೆ,'' ಎಂದರು.

ಏನು ಮಾಡಲಿ? ನಾನಷ್ಟು ಸ್ಥಿತಿವಂತಳಲ್ಲ. ಅಷ್ಟು ದೂರದ ದೇಶಕ್ಕೆ ಹೋಗಿ ಅಲ್ಲಿದ್ದು, ಚಿಕಿತ್ಸೆ ಪಡೆದು, ಭಾರತಕ್ಕೆ ಮರಳುವುದೆಂದರೆ ಎಷ್ಟು ಹಣ ಬೇಕಾಗುತ್ತದೊ? ಆ ಯೋಚನೆಯನ್ನೇ ಬಿಟ್ಟುಬಿಟ್ಟೆ. ಮರುದಿನ ಯುಜನಿಯೋ ಮತ್ತೆ ಕಂಡಾಗ ಬಹುಶಃ ನನ್ನ ಅಸಹಾಯಕತೆಯನ್ನು ಊಹಿಸಿರಬೇಕು. "ನೋಡಿ, ಇಲ್ಲಿರುವವರ ಪೈಕಿ ನಿಮ್ಮೊಂದಿಗೆ ೧೯೮೦ ರಿಂದ ಕೆಲಸ ಮಾಡುತ್ತಿರುವ ಸುಮಾರು ೭೦-೮೦ ಜನ ಇದ್ದಾರೆ. ಅವರೆಲ್ಲ ಮನಸ್ಸು ಮಾಡಿದರೆ ನಿಮ್ಮ ಚಿಕಿತ್ಸೆಯ ಪೂರ್ಣ ವೆಚ್ಚ ಕೊಡಲಾರದೆ?''ಎಂದು ಕೇಳಿದರು. "ನನಗೆ ಇಂಥ ಧರ್ಮಾರ್ಥದ ಮನಸ್ಸಿಲ್ಲ'' ಎಂದುಬಿಟ್ಟೆ.

"ನೋಡಿ, ನಾನು ತುಂಬ ಸ್ವಾರ್ಥಿ. ನಿಮಗಾಗಿ ಅಲ್ಲ, ನನಗಾಗಿ ಹಣ ಕೂಡಿಸುತ್ತೇನೆ.. ಆ ಹಣದಿಂದ ನಿಮಗೆ ಚಿಕಿತ್ಸೆ ದೊರೆಯಬೇಕು. ನಿಮ್ಮ ಹೆಜ್ಜೆಗಳು, ಗೆಜ್ಜೆಗಳ ಸಹಿತ ಉಲಿಯುವುದನ್ನು ನಾನು ನೋಡಬೇಕು. ಇದು ನನ್ನ ಸ್ವಾರ್ಥವಲ್ಲವೆ? ನಿಮ್ಮ ಕಾಲುಗಳು ಸುದೀರ್ಘ ಕಾಲ ಕುಣಿಯುತ್ತಲಿರಲಿ ಎಂಬುದೇ ನನ್ನಾಸೆ'' ಯುಜಿನಿಯೋರ ಮಾತಿಗೆ ನನ್ನ ಅಂತಃಕರಣ ಕಲಕಿತು.

ಇನ್ನೊಂದು ಸಂದರ್ಭ. ಅಮೆರಿಕದಲ್ಲಿ ನನ್ನ ನೃತ್ಯ ಕಾರ್ಯಕ್ರಮಗಳು. ಏಶಿಯನ್ ರಂಗಭೂಮಿಯ ತಜ್ಞೆ, ಏಶಿಯಾ ಸೊಸೈಟಿಯ ಶ್ರೀಮತಿ ಬೀಟೆ ಗಾರ್ಡನ್ ನನ್ನ ನೃತ್ಯ ಪ್ರದರ್ಶನವನ್ನು ವೀಕ್ಷಿಸಲು ಬಂದಿದ್ದಳು. ಆ ನಂತರ ಆಕೆ ವೇದಿಕೆಗೆ ಬಂದವಳೇ ಬಾಗಿ ನನ್ನ ಪಾದಗಳನ್ನು ಮುಟ್ಟಿ ಆ ಕೈಯನ್ನು ತಲೆಯ ಮೇಲಿಟ್ಟುಕೊಂಡಳಲ್ಲದೆ ನನ್ನ ಹಸ್ತಗಳನ್ನು ಚುಂಬಿಸಿದಳು. "ಅರೆ, ನನ್ನ ಪಾದಸ್ಪರ್ಶಿಸಿ ನನ್ನನ್ನು ಚಿಕ್ಕವಳನ್ನಾಗಿ ಮಾಡಿದಿರಿ'' ಎಂದೆ. "ನೀವು ವಯಸ್ಸಿನಲ್ಲಿ ನನಗಿಂತ ಕಿರಿಯರೆಂಬುದು ಗೊತ್ತು. ನಾನು ನಿಮ್ಮ ವಯಸ್ಸನ್ನಲ್ಲ ಗೌರವಿಸುತ್ತಿರುವುದು, ನಿಮ್ಮ ಈ ಅದ್ಭುತ ಸಾಮರ್ಥ್ಯದ ಪಾದಗಳನ್ನು .....'' ಎಂದು ನನ್ನನ್ನೇ ಪ್ರೀತಿಯಿಂದ ದಿಟ್ಟಿಸಿದಳು ನಾನು ಮೂಕಳಾದೆ.

ಎರಡು ವರ್ಷಗಳ ಮೊದಲು ಒಬ್ಬ ಜೋತಿಷಿ ನಮ್ಮ ಮನೆಗೆ ಬಂದರು. ನನ್ನ ಹಸ್ತವನ್ನು ಪೂರ್ತಿ ಅಭ್ಯಸಿಸಿದ ಮೇಲೆ, "೧೯೯೬ರ ಸಪ್ಟಂಬರ್‌ವರೆಗೆ ಯಾವ ಹೇಳಿಕೆಯನ್ನೂ ಕೊಡಲು ಹೋಗಬೇಡ. ನೀನು ಹೇಳುವುದೆಲ್ಲ ಅಪಾರ್ಥಕ್ಕೆ ಗುರಿಯಾಗಿ, ನಿನ್ನನ್ನು ತೊಂದರೆಗೆ ದೂಡುತ್ತದೆ,'' ಎಂದರು. ನಾನಾಗ ಅವರ ಮಾತಿಗೆ ನಕ್ಕು ಬಿಟ್ಟಿದ್ದೆ. ಆದರೆ ದೇವದಾಸಿಯರ ಪ್ರಸಂಗ ಹಾಗೂ ಲಾಲೂ ಯಾದವ್ ಪ್ರಕರಣಗಳು ಆ ಜೋತಿಷಿಯ ಮಾತಿಗೆ ಪ್ರಮಾಣದಂತಿದ್ದವು.

ನನಗೊಂದು ಕನಸಿದೆ.........

ಒಡಿಸ್ಸಿ ನೃತ್ಯ ಶೈಲಿಯ ಮುಂದುವರಿಕೆಗೆ ಸಾಕಷ್ಟು ಕಡೆಯಿಂದ ಪ್ರೋತ್ಸಾಹ ದೊರೆಯುತ್ತಿದೆ. ನಾನು ಒಡಿಸ್ಸಿ ನೃತ್ಯವನ್ನು ಕಲಿಸುತ್ತಲಿರುವೆ. ನೃತ್ಯವನ್ನು ಶಿಕ್ಷಕಿಯಾಗಿ ಹೆಚ್ಚು ಅರ್ಥಪೂರ್ಣವಾಗಿ ವಿವರಿಸಬಹುದೆಂಬುದು ನನ್ನ ಇತ್ತೀಚಿನ ಅನುಭವ. ನಿಮ್ಮೆದುರು ಬೇರೊಬ್ಬರು ನರ್ತಿಸುತ್ತಿರುವಾಗ ಅವರೆಸಗುವ ತಪ್ಪುಗಳನ್ನು ಗುರುತಿಸಿ ತಿದ್ದಲು ಸಾಧ್ಯ. ಅವರ ನೃತ್ಯವನ್ನು


ಇನ್ನಷ್ಟು ಪರಿಪೂರ್ಣಗೊಳಿಸುವುದು ಸಾಧ್ಯ. ನಮ್ಮ ತಪ್ಪುಗಳು ನಮಗೇ ಗೊತ್ತಾಗುವುದಿಲ್ಲ, ಅಲ್ಲವೆ?

ಅಷ್ಟಕ್ಕೂ ನರ್ತಕ/ಕಿಯ ಬದುಕು ಚಿಕ್ಕದೇ. ಇನ್ನೆಷ್ಟು ದಿನ ನಾನು ಮಾನಸಿಕವಾಗಿಯೂ ದೈಹಿಕವಾಗಿಯೂ ನರ್ತಿಸಲು ಸಮರ್ಥಳಾಗಿರುವೆನೊ. ದೀರ್ಘಕಾಲ ಬದುಕುವ ಇಚ್ಛೆಯೂ ನನಗಿಲ್ಲ. ನರ್ತಿಸುತ್ತಿರುವಾಗಲೇ ವೇದಿಕೆಯ ಮೇಲೆಯೇ ನನ್ನ ಪ್ರಾಣಪಕ್ಷಿ ಹಾರಿ ಹೋದರೆ ಅದರಂಥ ಪುಣ್ಯ ಬೇರಾವುದೂ ಇಲ್ಲ ಎಂದುಕೊಳ್ಳುತ್ತೇನೆ. ಮತ್ತೆ ಹುಟ್ಟುವುದಾದರೆ ನಾನು ನರ್ತಕಿಯಾಗಿಯೇ ಜನಿಸಬಯಸುತ್ತೇನೆ.

ಜನ ನನ್ನನ್ನು ಆ ಮೇಲೆ ಸ್ಮರಿಸುತ್ತಾರೂ ಇಲ್ಲವೊ ಎಂಬ ಚಿಂತೆ ನನಗಿಲ್ಲವೆ ಇಲ್ಲ. ಒಡಿಸ್ಸಿ ನೃತ್ಯ ಶೈಲಿಯನ್ನು ಅವರು ಸ್ಮರಿಸಿದರೆ ಸಾಕು. 'ಸಂಯುಕ್ತಾ ಎಂಬೊಬ್ಬ ಒಡಿಸ್ಸಿ ನರ್ತಕಿಯಿದ್ದಳು' ಎಂದು ನೆನೆದರೆ ಸಾಕು. ಈ ಮೊದಲೇ ಹೇಳಿದಂತೆ ನಾನು ಸಮಾಜದೊಂದಿಗೆ ಬೆರೆಯುವಂಥವಳಲ್ಲ. ಮದುವೆ-ಪಾರ್ಟಿಗಳಿಂದಂತೂ ನಾನೆಂದೂ ದೂರ. ನನ್ನೊಂದಿಗೆ ಶ್ರಮಿಸುವ ಸಂಗೀತಗಾರರು, ವಾದ್ಯಗಾರರ ಮನೆಗಳ ಸಮಾರಂಭಗಳಿದ್ದರೆ ಅವುಗಳನ್ನೆಂದೂ ತಪ್ಪಿಸುವುದಿಲ್ಲ.

ಪ್ರತಿದಿನದ ಸಂಜೆ ನನಗೆ ಉಲ್ಲಾಸವನ್ನೇ ನೀಡುತ್ತದೆ. ಈ ಇಡೀ ದಿನದಲ್ಲಿ, ನಾನು ಮತ್ತೆ ಮತ್ತೆ ಚಡಪಡಿಸಬೇಕಾದಂಥ ಒಂದೇ ಒಂದು ತಪ್ಪನ್ನೂ ಮಾಡಿರುವುದಿಲ್ಲವಲ್ಲ. ಧನಾತ್ಮಕ ಚಿಂತನೆ ನಡೆಸುವ ಅರ್ಥಪೂರ್ಣ ಬದುಕಿನ ಎಲ್ಲರೂ ಹೀಗೆಯೆ.

ನಾನು ಒಂಬತ್ತರೆಳವೆಯಲ್ಲಿ ಸೇರಿದ್ದೆನಲ್ಲ, ಮದ್ರಾಸಿನ 'ಕಲಾಕ್ಷೇತ್ರ', ಅಂಥದೊಂದು ನೃತ್ಯ ಶಾಲೆಯನ್ನು ಪ್ರಾರಂಭಿಸುವ ಕನಸು ನನ್ನದು. ಅಲ್ಲಿ ಪ್ರತಿಯೊಂದು ನೃತ್ಯ ಶೈಲಿಯವರೊಂದಿಗೆ ಅನುಭವಗಳನ್ನು ಹಂಚಿಕೊಳ್ಳುವ ಬಯಕೆಯೂ ಇದೆ. ಅಲ್ಲಿ ಒಳ್ಳೆಯ ನರ್ತಕರನ್ನಷ್ಟೇ ಅಲ್ಲ, ಸತ್ಪ್ರಜೆಗಳನ್ನು, ಸಚ್ಚಾರಿತ್ರ್ಯವಂತರನ್ನು ರೂಪಿಸುವುದು ನನ್ನಿಚ್ಛೆ.



ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆಯ ಪ್ರಕಟಣೆಗಳು

ಹುಬ್ಬಳ್ಳಿ-ಬೆಂಗಳೂರು

	ಪುಸ್ತಕದ ಹೆಸರು	ಲೇಖಕರ ಹೆಸರು	ಬೆಲೆ
೧.	ನನಗೆ ನಾನೇ ಮಾದರಿ	ಶ್ರೀ ಬಿ.ಡಿ. ಜತ್ತಿ	ರೂ. ೪೦-೦೦
೨.	ಶ್ರೀ ರಾಮದಾಸರು ಹೇಳಿದ ಕಥೆಗಳು	ಶ್ರೀ ಬಿ.ಡಿ. ಜತ್ತಿ	„ ೧೫-೦೦
೩.	ಕೃಷ್ಣಾವತಾರ ಭಾಗ-೧	ಮೂಲ: ಶ್ರೀ ಕೆ.ಎಂ. ಮುನ್ಷಿ ಅನುವಾದ: ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ	„ ೨೦-೦೦
೪.	ಕೃಷ್ಣಾವತಾರ ಭಾಗ-೨	-"-	„ ೨೫-೦೦
೫.	ಕೃಷ್ಣಾವತಾರ ಭಾಗ-೩	-"-	„ ೨೦-೦೦
೬.	ಕೃಷ್ಣಾವತಾರ ಭಾಗ-೪	-"-	„ ೨೦-೦೦
೭.	ಕೃಷ್ಣಾವತಾರ ಭಾಗ-೫	-"-	„ ೨೫-೦೦
೮.	ಕೃಷ್ಣಾವತಾರ ಭಾಗ-೬	-"-	„ ೨೦-೦೦
೯.	ಕೃಷ್ಣಾವತಾರ ಭಾಗ-೭	-"-	„ ೨೦-೦೦
೧೦.	ಕೃಷ್ಣಾವತಾರ ಭಾಗ-೮	-"-	„ ೨೫-೦೦
೧೧.	ಕೃಷ್ಣಾವತಾರ ಭಾಗ-೯, ೧೦	-"-	„ ೨೦-೦೦
೧೨.	ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ	ಡಾ. ಸೂರ್ಯನಾಥ ಕಾಮತ	„ ೪೫-೦೦
೧೩.	ವಂದೇಮಾತರಂದಿಂದ ಜನಗಣಮನದವರೆಗೆ	ಶ್ರೀ ಪಿ.ಎಚ್. ದೇಸಾಯಿ	„ ೫೦-೦೦
೧೪.	ಗೀತಾ ನಿತ್ಯಪಾಠ	ಶ್ರೀ ರಂಗನಾಥ ದಿವಾಕರ	„ ೩-೦೦
೧೫.	ಶ್ರೀ ಕೃಷ್ಣಾವತಾರದ ಕೊನೆಯ ಗಳಿಗೆಗಳು	ಪ್ರೊ. ಕೆ.ಎಸ್. ನಾರಾಯಣಾಚಾರ್ಯ	„ ೨೦-೦೦
೧೬.	ಗಾಂಧೀಜಿ ನಾನು ಕಂಡಂತೆ	ಶ್ರೀ ರಂಗನಾಥ ದಿವಾಕರ	„ ೧೦-೦೦
೧೭.	ನೆನಪಿನಂಗಳದಲ್ಲಿ	ಶ್ರೀ ಜಿ.ಎಂ. ಪಾಟೀಲ	„ ೨೦-೦೦

ವಿ.ಸೂ. ಪುಸ್ತಕ ಮಾರಾಟಗಾರರಿಗೆ ಕನಿಷ್ಠ ೧೦ ಪ್ರತಿಗಳನ್ನು ತರಿಸಿದರೆ ಶೇ. ೨೫ರಷ್ಟು ಕಮೀಶನ ಕೊಡಲಾಗುವದು. ಪುಸ್ತಕಗಳು ಬೇಕಾದಲ್ಲಿ ತಕ್ಷಣ ಕೆಳಕಂಡ ವಿಳಾಸಕ್ಕೆ ಎಲ್ಲ ವಿವರಗಳೊಂದಿಗೆ ಡಿ.ಡಿ. ಅಥವಾ ಮನಿಯಾರ್ಡರ ಮೂಲಕ ಬರೆದು ತಿಳಿಸುವುದು. ಅಂಚೆ ವೆಚ್ಚ ಪ್ರತ್ಯೇಕ. ವಿ.ಪಿ.ಪಿ. ಸೌಲಭ್ಯ ಇರುವುದಿಲ್ಲ.

ಪ್ರಸಾರಾಂಗ ವ್ಯವಸ್ಥಾಪಕರು
ಸಂಯುಕ್ತ ಕರ್ನಾಟಕ, ಕೊಪ್ಪೀಕರ ರಸ್ತೆ, ಹುಬ್ಬಳ್ಳಿ-೨೦.
ಸಂಯುಕ್ತ ಕರ್ನಾಟಕ, ನಂ. ೨. ರೆಸಿಡೆನ್ಸಿ ರಸ್ತೆ, ಬೆಂಗಳೂರು-೨೫.



ಮಧು ಚಿಕಿತ್ಸೆ



ಡಾ. ಶೋಭಾ ಜಿ. ಹಿರೇಮಠ,

ಉಪನ್ಯಾಸಕಿ,
ರಸಶಾಸ್ತ್ರ ಮತ್ತು ಭೈಷಜ್ಯಕಲ್ಪನ ವಿಭಾಗ,
ಸರಕಾರಿ ಆಯುರ್ವೇದ ಮಹಾವಿದ್ಯಾಲಯ,
ಧನ್ವಂತರಿ ರಸ್ತೆ,
ಬೆಂಗಳೂರು-೫೬೦೦೦೯.




ಮಧು ಚಿಕಿತ್ಸೆ

ಜೇನುನೊಣಗಳು ಸಸ್ಯಗಳ ಮಕರಂದವನ್ನು ಸಂಗ್ರಹಿಸಿ, ಮಾರ್ಪಡಿಸಿ ಹೆಚ್ಚು ಮಂದವಾದ ದ್ರವರೂಪದಲ್ಲಿ ಜೇನುಗೂಡಿನಲ್ಲಿ ಕೂಡಿಡುವ ವಸ್ತುವೇ ಮಧು. ಜೇನಿನ ರಾಸಾಯನಿಕ ರಚನೆಯು ಪುಷ್ಪಮೂಲ ಮತ್ತು ಜೇನುನೊಣದ ಜಾತಿಯನ್ನು ಅವಲಂಬಿಸಿದೆ. ಸಕ್ಕರೆ ಮತ್ತು ಗ್ಲೂಕೋಸ್‌ನಂತೆ ಜೇನು ರುಚಿಯಲ್ಲಿ ಸಿಹಿಯಾಗಿದ್ದರೂ ಅವುಗಳಂತೆ ಅಧಿಕವಾಗಿ ಮತ್ತು ಅತಿ ಶೀಘ್ರ ಕಾಲದಲ್ಲಿ ರಕ್ತದ ಸಕ್ಕರೆಯಂಶವನ್ನು ವೃದ್ಧಿಗೊಳಿಸುವುದಿಲ್ಲ, ಅಲ್ಲದೆ ಇದರ ಜೀರ್ಣಕ್ರಿಯೆಗೆ ಇನ್ಸುಲಿನ್ನಿನ ಅವಶ್ಯಕತೆ ಇಲ್ಲ, ಆದ್ದರಿಂದ ಇದು ಮಧುಮೇಹಿಗಳಿಗೆ ಅಪಾಯರಹಿತವಾದ ಸಕ್ಕರೆ (Safe Sugar) ಆಗಿದೆ. ಪೌರರ ಮತ್ತು ಪಾಶ್ಚಿಮಾತ್ಯರಿಬ್ಬರಿಂದಲೂ ವಿಶಿಷ್ಟ ಸ್ಥಾನ ಪಡೆದ ಮಧು, ಆಹಾರವಾಗಿ, ಔಷಧಿಯಾಗಿ ಉಪಯೋಗಿಸಲ್ಪಡುತ್ತಿದೆ.

'ಮಧು' ಅಥವಾ ಜೇನುತುಪ್ಪ ಯಾರಿಗೆ ಗೊತ್ತಿಲ್ಲ? ಇದರ ಸವಿಯನ್ನು ಸವಿಯದವರು ಇಲ್ಲವೇ ಇಲ್ಲವೆಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಹಾಗೆ ನೋಡಿದರೆ ಮಧುವಿನ ಬಳಕೆ ಹಾಗೂ ಅದರ ಉತ್ಪತ್ತಿಗೆ ಕಾರಣವಾದ ಜೇನುನೊಣದ ಸಾಕುವಿಕೆ ವೇದಕಾಲದಿಂದಲೂ (ಕ್ರಿ.ಪೂ. ೪೫೦೦ ಕ್ರಿ.ಪೂ. ೨೫೦೦) ನಡೆದುಬಂದಿದೆ. ಯಜುರ್ವೇದದಲ್ಲಿ ಜೇನಿಗೆ ಸಂಬಂಧಿಸಿದ ಹಾಗೆ 'ಮಧು ಸೂಕ್ತ' ಎಂಬ ಪ್ರತ್ಯೇಕ ಸೂಕ್ತವೇ ಇದೆ. ಅನಾದಿಕಾಲದಿಂದ ಇದಕ್ಕೆ ಮರುಳಾದ ಕವಿಗಳು ಜೇನನ್ನು ಕುರಿತು ಸುಂದರವಾದ ಪದ್ಯಗಳನ್ನೇ ರಚಿಸಿದ್ದಾರೆ. ತತ್ವಜ್ಞಾನಿಗಳು ಮತ್ತು ಸಮಾಜ ವಿಜ್ಞಾನಿಗಳು ಮಾನವರು ಅನುಕರಿಸಬೇಕಾದ ಸದ್ಗುಣಗಳನ್ನು ಈ ಜೇನಿನಲ್ಲಿ ಕಂಡಿದ್ದಾರೆ. ಮೆಟರ್ಲಿಂಕ್ ಎಂಬ ಪ್ರಖ್ಯಾತ ಲೇಖಕ ಜೇನಿನಲ್ಲಿ ಮನುಷ್ಯತ್ವ ತುಂಬಿ, ಕಲ್ಪನೆ ಮತ್ತು ವಾಸ್ತವಾಂಶಗಳನ್ನು ಕೂಡಿಸಿ ಹೆಣೆದಿರುವ ಬೃಹತ್ ಗ್ರಂಥವು ಜಗದ್ವಿಖ್ಯಾತಿ ಪಡೆದಿದೆ. ಜೇನಿನ ಸಂಪರ್ಕದಿಂದ, ಸಮೀಕ್ಷೆಯಿಂದ ಹಾಗೂ ಅಧ್ಯಯನದಿಂದ ಮಾನವ ಅಪಾರ ಮಾನಸಿಕ ಮತ್ತು ಬೌದ್ಧಿಕ ಸ್ಫೂರ್ತಿಯನ್ನು ಪಡೆದಿದ್ದಾನೆ.

ಜೇನುನೊಣಗಳು ಪುಷ್ಪಗಳಲ್ಲಿಯ ಮಕರಂದವನ್ನು ಸಂಗ್ರಹಿಸಿ, ಮಾರ್ಪಡಿಸಿ ಹೆಚ್ಚು ಮಂದವಾದ ದ್ರವರೂಪದಲ್ಲಿ ಜೇನುಗೂಡಿನಲ್ಲಿ ಕೂಡಿಸುವ ವಸ್ತುವೇ 'ಮಧು'. ಅದಕ್ಕೆ ಮೂಲವಾದ ಮಕರಂದದ ಸುವಾಸನೆ, ರುಚಿ ಮತ್ತು ಬಣ್ಣಗಳಲ್ಲಿ ಎಷ್ಟು ವೈವಿಧ್ಯವನ್ನು ಕಾಣಬಹುದೋ ಅಷ್ಟೇ ವೈವಿಧ್ಯ ಮಧುವಿನ ರುಚಿ, ಸುವಾಸನೆ ಮತ್ತು ಬಣ್ಣಗಳಲ್ಲಿದೆ. ಬೆಲ್ಲದ ಸವಿಯನ್ನು ಬೆಲ್ಲ ಸವಿದೇ



ತಿಳಿಯಬೇಕೆಂಬಂತೆ ಮಧುವಿನ ರುಚಿಯನ್ನು ಸವಿದೇ ತಿಳಿಯಬೇಕು. ಅದು ವಿವರಣೆಗೆ ನಿಲುಕುವಂಥದಲ್ಲ. ಇದರ ರುಚಿ ಬೇಸರಿಕೆಯನ್ನುಂಟುಮಾಡುವಂತಹದೂ ಅಲ್ಲ.

ಮಧುವನ್ನು ಲ್ಯಾಟನ್ನಿನಲ್ಲಿ 'ಮೆಲ್' (Mel) ಎಂದರೆ ಇಂಗ್ಲೀಷಿನಲ್ಲಿ 'ಹನಿ' (Honey) ಹಾಗೂ ಕನ್ನಡದಲ್ಲಿ 'ಜೇನುತುಪ್ಪ'(ಜೇನು) ಎನ್ನುವರು. ಸಂಸ್ಕೃತದಲ್ಲಂತೂ ಇದಕ್ಕೆ ಮಧು, ಮಾಕ್ಷಿಕ, ಕ್ಷಾದ್ರ, ಭ್ರಾಮರ, ಕುಸುಮಾಸವ, ಪುಷ್ಪಾಸವ, ಮಾಕ್ಷಿಕ ಎಂಬ ಹತ್ತಾರು ಹೆಸರುಗಳಿವೆ. ತೆಲುಗಿನಲ್ಲಿ 'ತೇನ್' (ತ್ಯಾನ್ಯೆ ಕೂಡ) ಎಂದು, ತಮಿಳಿನಲ್ಲಿ 'ತೇನ್', ಹಿಂದಿಯಲ್ಲಿ 'ಶಹದ್', ಅರಬ್ಬೀ ಭಾಷೆಯಲ್ಲಿ 'ಉಸೇಲ್', ಪಾರ್ಸಿಯಲ್ಲಿ 'ಅಂಗಬೀನ್'... ಹೀಗೆ ಜೇನೊಂದಕ್ಕೆ ಬೇರೆ ಬೇರೆ ಭಾಷೆಯಲ್ಲಿ ಬೇರೆ ಬೇರೆ ಹೆಸರುಗಳುಂಟು.

ಮನುಷ್ಯನಿಗೆ ಆರಂಭದಲ್ಲಿ ದೊರೆತ ಮಧುರ ರಸವುಳ್ಳ ಆಹಾರ ವಸ್ತುಗಳಲ್ಲಿ 'ಮಧು' ಮೊದಲನೆಯದಾಗಿರಬೇಕು. ಜೊತೆಗೆ ಈ ಜೇನು ನೈಸರ್ಗಿಕವಾಗಿ ಯಾವುದೇ ಸಂಸ್ಕಾರಕ್ಕೆ ಒಳಗಾಗದೆ ಇರುವ ಅಪ್ಪಟ ದ್ರವ್ಯವಾಗಿರುವುದೇ ಇದರ ಪಾವಿತ್ರ್ಯಕ್ಕೆ ಕಾರಣವಾಗಿರಬಹುದು. ಪ್ರಪಂಚದ ಅನೇಕ ಮತ ಧರ್ಮಗಳು ಮಧುವಿಗೆ ಶ್ರೇಷ್ಠಸ್ಥಾನ ಕೊಟ್ಟಿವೆ. ಹಿಂದುಗಳಲ್ಲಿ ಯಜ್ಞಯಾಗಾದಿಗಳು, ದೇವತಾರ್ಚನೆ, ಶ್ರಾದ್ಧಗಳಂಥ ಸಂದರ್ಭಗಳಲ್ಲೂ ಶಿಶುವಿನ ಜನನವಾದ ಕೂಡಲೇ ಶುದ್ಧಿಯ ಸಂಕೇತವಾಗಿ ಚೀಪಿಸುವುದಕ್ಕೂ ಜೇನುತುಪ್ಪವನ್ನು ಬಳಸುವುದುಂಟು. ಕೆಲವು ಹಬ್ಬ ಹುಣ್ಣಿಮೆಗಳಲ್ಲಿ ಯಹೂದ್ಯರು ಮಧುವಿನಿಂದ ವಿಶೇಷ ತಿನಿಸುಗಳನ್ನು ತಯಾರಿಸಿದರೆ ರೋಮನ್ ಕ್ಯಾಥೋಲಿಕ್ ಕ್ರೈಸ್ತರು 'ಮಧುರಸ' (Mead)ವನ್ನು ತಯಾರಿಸಿ ಉಪಯೋಗಿಸುವರು. ಪವಿತ್ರ ಕುರಾನಿನಲ್ಲಿ ಮಧು ಮತ್ತು ಅದರ ಉಪಯೋಗದ ಬಗ್ಗೆ ಒಂದು ಪ್ರತ್ಯೇಕ ಅಧ್ಯಾಯವೇ ಇದೆ.



ಆಯುರ್ವೇದದಲ್ಲಿ ಸ್ನಾತಕೋತ್ತರ ಪದವಿಯನ್ನೂ ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಡಾಕ್ಟೊರೇಟ್ ಅನ್ನೂ ಪಡೆದಿರುವ ಶೋಭಾ ಜೆ. ಹಿರೇಮಠರು ಆಯುರ್ವೇದಕ್ಕೆ ಸಂಬಂಧಿಸಿದಹಾಗೆ ರಾಷ್ಟ್ರೀಯ, ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಹಿಂದೆ ವೈದ್ಯಾಧಿಕಾರಿಯಾಗಿಯೂ ಕಾರ್ಯನಿರ್ವಹಿಸಿರುವ ಅವರು ಸದ್ಯಕ್ಕೆ ಬೆಂಗಳೂರಿನ ಸರ್ಕಾರಿ ಭಾರತೀಯ ವೈದ್ಯ ಮಹಾ ವಿದ್ಯಾಲಯದಲ್ಲಿ ಅಧ್ಯಾಪಕಯಾಗಿದ್ದಾರೆ.



ರಸಾಯನಿಕ ರಚನೆ:

ಜೇನು, ಬಹುಪಾಲು ಸರಳ ರಚನೆಯ ಶರ್ಕರ ವಸ್ತುಗಳು (Simple Sugars) ಮತ್ತು ತೇವಾಂಶದಿಂದ (Moisture) ಕೂಡಿದೆ. ಡೆಕ್ಸ್‌ಟ್ರೋಸ್ (Dextrose), ಗ್ಲೂಕೋಸ್ (Glucose) ಮತ್ತು ಲೆವ್ಯುಯೂಲೋಸ್ (Levulose)ಗಳೇ ಜೇನಿನಲ್ಲಿರುವ ಸಕ್ಕರೆಯ ಸುಲಭ ರೂಪಗಳು. ಜೊತೆಗೆ ಕಬ್ಬಿನ ಸಕ್ಕರೆಯಂತಹ ಸುಕ್ರೋಸ್ (Sucrose) ಹಾಗೂ ಡೆಕ್ಸ್‌ಟ್ರಿನ್ (Dextrin)ಗಳೆಂಬ ಪಿಷ್ಟ ಪದಾರ್ಥಗಳು ಅಂಟುಗಳು (Gums), ಆಮ್ಲಗಳು (Acids), ಕಿಣ್ವಗಳು (Enzymes), ಜೀವಸತ್ವ (Vitamins), ಪರಾಗಕಣಗಳು, ಮೇಣದ ಕಣಗಳು, ಬಣ್ಣ ಕೊಡುವ ವಸ್ತುಗಳು (Colouring Substances) ಇರುವವು. ಮಧುವನ್ನು ಸುಟ್ಟು ಅದರ ಬೂದಿಯನ್ನು ರಾಸಾಯನಿಕವಾಗಿ ವಿಶ್ಲೇಷಿಸಿದಾಗ ಅದರಲ್ಲಿ ಸಿಲಿಕಾ, ಕಬ್ಬಿಣ, ತಾಮ್ರ, ಮ್ಯಾಂಗನೀಸ್, ಕ್ಲೋರಿನ್, ಕ್ಯಾಲ್ಸಿಯಂ, ಪೊಟ್ಯಾಸಿಯಂ, ಸೋಡಿಯಂ, ರಂಜಕ, ಗಂಧಕ, ಅಲ್ಯೂಮಿನಿಯಂ ಮತ್ತು ಮೆಗ್ನೀಷಿಯಂ ಇವುಗಳ ಸಂಯುಕ್ತ ವಸ್ತುಗಳು ಇರುವುದು ಕಂಡು ಬಂದಿರುತ್ತದೆ. ಮಧುವಿನಲ್ಲಿಯ ಮುಖ್ಯ ಆಮ್ಲಗಳೆಂದರೆ ಫಾರ್ಮಿಕ್, ಅಸಿಟಿಕ್, ಮ್ಯಾಲಿಕ್, ಸಿಟ್ರಿಕ್, ಸಕ್ಸಿನಿಕ್ ಮತ್ತು ಅಮೈನೋ; ಕಿಣ್ವಗಳೆಂದರೆ ಇನ್ವರ್ಟೇಸ್ (Invertase), ಡಯಾಸ್ಟೇಸ್ (Diastase), ಕ್ಯಾಟಲೇಸ್ (Catalse) ಮತ್ತು ಇನ್ಯುಲೇಸ್(Inulase); ವಿಟಮಿನ್‌ಗಳು A, B ಕಾಂಪ್ಲೆಕ್ಸ್, (B೧, B೨, B೬, H ಫೋಲಿಕ್, ನಿಕೋಟಿನಿಕ್ ಮತ್ತು ಪ್ಯಾಂಟೋಥೆನಿಕ್ ಆಮ್ಲಗಳು) ಮತ್ತು C; ಸಸ್ಯ ಮೂಲವಾದ ಬಣ್ಣ ಕೊಡುವ ವಸ್ತುಗಳು- ಕ್ಯಾರೋಟಿನ್, ಝಂತೋಫಿಲ್, ಆಂತೋಸಯನಿನ್, ಟ್ಯಾನಿನ್ ಮುಂತಾದವುಗಳು.

ಬೇರೆ ಬೇರೆ ಸ್ಥಳ, ಪುಷ್ಪಮೂಲ ಹಾಗೂ ಜೇನುನೊಣಗಳಿಗೆ ಅನುಗುಣವಾಗಿ ಜೇನಿನ ರಾಸಾಯನಿಕ ರಚನೆ ಬೇರೆ ಬೇರೆಯಾಗುತ್ತವೆ. (ಬಾಕ್ಸ್ ನೋಡಿ)

ಮಧು ಮತ್ತು ಮಧು ಮಕ್ಷಿಕಗಳ ಪ್ರಕಾರಗಳು:

ಮಧು, ಅದರ ಪ್ರಕಾರಗಳು, ಗುಣಧರ್ಮ, ಔಷಧೀಯ ಉಪಯೋಗ, ಮಧು ತಯಾರಿಸುವ ಮಕ್ಷಿಕಗಳ ಸವಿಸ್ತಾರ ವರ್ಣನೆ ಇವುಗಳ ಬಗ್ಗೆ ಆಯುರ್ವೇದ ಗ್ರಂಥಗಳಲ್ಲಿ ವಿವರಿಸಿದಷ್ಟು ಇನ್ನಾವುದೇ ಗ್ರಂಥಗಳಲ್ಲಿ ಕಾಣಸಿಗುವುದಿಲ್ಲ. ಆಯುರ್ವೇದ ಶಾಸ್ತ್ರಗ್ರಂಥಗಳಾದ ಚರಕ ಮತ್ತು ಅಷ್ಟಾಂಗ ಸಂಗ್ರಹಗಳಲ್ಲಿ 'ಮಾಕ್ಷಿಕ, ಭ್ರಾಮರ, ಪೌತ್ತಿಕ, ಕ್ಷೌದ್ರಗಳೆಂಬ ನಾಲ್ಕು ವಿಧದ ಮಧು ಮಾಕ್ಷಿಕಗಳು ಮತ್ತು ಅವುಗಳಿಂದ ತಯಾರಾದ ಮಧುವನ್ನು ವರ್ಣಿಸಲಾಗಿದ್ದರೆ, ಸುಶ್ರುತ ಸಂಹಿತೆಯಲ್ಲಿ 'ಮಾಕ್ಷಿಕ, ಭ್ರಾಮರ, ಕ್ಷೌದ್ರ, ಔದ್ದಾಲಕ, ದಾಲ, ಅರ್ಘ್ಯ, ಛಾತ್ರ, ಪೌತ್ತಿಕ' ಎಂಬ ೮ ವಿಧದ ಮಧು ಮತ್ತು ಮಧು ಮಕ್ಷಿಕಗಳನ್ನು ವಿವರಿಸಲಾಗಿದೆ. ಆಧುನಿಕ ವಿಜ್ಞಾನದ ಪ್ರಕಾರ 'ಎಪಿಸ್ ಸಿರಾನಾ, (Apis Cerana), ಎಪಿಸ್ ಫ್ಲೋರಿಯಾ (Apis Florea),



ಎಪಿಸ್ ಡೊರ್ಸೆಟಾ (Apis Dorsata) ಮತ್ತು ಎಪಿಸ್ ಮೆಲ್ಲಿಫೆರಾ (Apis Mellifera) ಎಂದು ಜಗತ್ತಿನಾದ್ಯಂತ ದೊರೆಯುವ ಮಧು ಮಕ್ಷಿಕಗಳನ್ನು ನಾಲ್ಕು ಬಗೆಗಳಲ್ಲಿ ವಿವರಿಸಿರುವರು. ಅವೆಲ್ಲವುಗಳ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತಿದೆ.

೧) **ಮಾಕ್ಷಿಕ:** ಮಾಕ್ಷಿಕ ಮಾದರಿಯ ಮಧುವಿಗೆ ಕಾರಣವಾದ ಮಕ್ಷಿಕಗಳು ಕೆಂಚು (ಪಿಂಗಲ) ಬಣ್ಣದವಾಗಿದ್ದು ಗಾತ್ರದಲ್ಲಿ ದೊಡ್ಡದಾಗಿರುತ್ತವೆ. ಈ ಜೇನುನೊಣಗಳಿಂದ ತಯಾರಾದ ಜೇನು ತೈಲವರ್ಣದ್ದಾಗಿದ್ದು ಇನ್ನುಳಿದ ಎಲ್ಲ ಬಗೆಯ ಜೇನುಗಳಿಗಿಂತ ಶ್ರೇಷ್ಠವಾಗಿದೆ. ಈ ನೊಣಗಳು ಮಕರಂದವನ್ನು ಹೆಚ್ಚಾಗಿ ಕೂಡಿಸಿ ಜೇನನ್ನು ತಯಾರಿಸುವವು. ಇದು ಜೀರ್ಣಕ್ಕೆ ಸುಲಭವಾಗಿದ್ದು ಎಲ್ಲ ಬಗೆಯ ನೇತ್ರ ರೋಗಗಳಲ್ಲಿ, ಕಾಮಾಲೆ, ಮೂಲವ್ಯಾಧಿ, ಕೆಮ್ಮು ದಮ್ಮು ರಾಜಯಕ್ಷ್ಮ(ಕ್ಷಯ) ಕ್ಷತರೋಗಗಳಲ್ಲಿ ಪ್ರಯೋಜನಕರವಾಗಿರುವವು. ಇದನ್ನು ಆಧುನಿಕ ವೈಜ್ಞಾನಿಕರು ವಿವರಿಸಿದ ಎಫಿಸ್ ಸಿರಾನಾ ಜಾತಿಯ ಜೇನುನೊಣಕ್ಕೆ ಹೋಲಿಸಬಹುದಾಗಿದೆ.

೨) **ಭ್ರಾಮರ:** ಈ ಜಾತಿಯ ಜೇನುನೊಣಗಳು ಚಿಕ್ಕ ಗಾತ್ರದವಾಗಿದ್ದು ಆರು ಕಾಲುಗಳನ್ನು ಹೊಂದಿರುತ್ತವೆ. ಇಂಥ ನೊಣಗಳಿಂದ ತಯಾರಿಸಲ್ಪಟ್ಟ ಜೇನು ಬಿಳಿ ಬಣ್ಣದ್ದಾಗಿದ್ದು ಶುಭ್ರವಾಗಿರುತ್ತದೆ. ಇದು ರುಚಿಯಲ್ಲಿ ಹೆಚ್ಚು ಸಿಹಿಯಾಗಿದ್ದು ಶೀತ ಗುಣದ್ದಿದೆ. ಅಲ್ಲದೆ ಇದು ಹೆಚ್ಚು ಸಾಂದ್ರತೆ ಹೊಂದಿರುತ್ತದೆ. ಈ ಜೇನು ರಕ್ತಪಿತ್ತದಲ್ಲಿ ಪ್ರಯೋಜನಕರವಾಗಿದೆ.

೩) **ಕ್ಷೌದ್ರ:** ಈ ಜೇನಿಗೆ ಕಾರಣವಾದ ನೊಣಗಳು ಕಪಿಲ (ಕಂದು) ವರ್ಣದ್ದಾಗಿದ್ದು ಗಾತ್ರದಲ್ಲಿ ಚಿಕ್ಕದಾಗಿರುತ್ತವೆ. ಈ ನೊಣಗಳಿಂದ ತಯಾರಾದ ಜೇನು ಕೂಡ ಕಂದು ಬಣ್ಣದ್ದಾಗಿದ್ದು ಗುಣದಲ್ಲಿ ಮಾಕ್ಷಿಕ ಮಧುವಿನಂತೆಯೇ ಇದೆ. ವಿಶೇಷವಾಗಿ ಪ್ರಮೇಹನಾಶಕ ಗುಣ ಹೊಂದಿದ ಜೇನು ಇದು.

೪) **ಪೌತ್ತಿಕ:** ಈ ಜಾತಿಯ ಜೇನುನೊಣಗಳು ಸೊಳ್ಳೆಗಳಂತೆ ಗಾತ್ರದಲ್ಲಿ ಅತಿ ಚಿಕ್ಕದಾಗಿದ್ದು ಕಪ್ಪು ಬಣ್ಣ ಹೊಂದಿದ್ದು ಕಚ್ಚಿದರೆ ಬಹಳ ವೇದನೆಯನ್ನುಂಟು ಮಾಡುತ್ತವೆ. ಸಾಮಾನ್ಯವಾಗಿ ಈ ನೊಣಗಳು ಗಿಡದ ಬೊಡ್ಡೆಯಲ್ಲಿ ಗೂಡು ಕಟ್ಟುವವು. ಈ ಜೇನು ನೋಡಲು ತುಪ್ಪದಂತಿದ್ದು ವಾತ ಮತ್ತು ಪಿತ್ತದ ವಿಕಾರಗಳನ್ನುಂಟು ಮಾಡುವಂತಹದು. ಇದು ಮೂತ್ರಕೃಚ್ಛ್ರ, ಗ್ರಂಥಿ, ಉರಃಕ್ಷತ ಮೊದಲಾದ ಕಾಯಿಲೆಗಳಲ್ಲಿ ಉಪಕಾರಿಯಾಗಿದೆ. ಈ ನೊಣಗಳನ್ನು ಆಧುನಿಕಶಾಸ್ತ್ರದಲ್ಲಿ ವಿವರಿಸಿದ 'ಎಪಿಸ್ ಮೆಲ್ಲಿಫೆರಾ'ಗೆ ಹೋಲಿಸಬಹುದಾಗಿದೆ.

೫) **ಛಾತ್ರ:** ಛಾತ್ರ ಜಾತಿಯ ಜೇನುನೊಣಗಳು ಕಂದು ಅಥವಾ ಹಳದಿ ಬಣ್ಣದ್ದಾಗಿದ್ದು ಛತ್ರಿಯಾಕಾರದಲ್ಲಿ ಗೂಡು ಕಟ್ಟುವವು. ಈ ಕಾರಣದಿಂದಲೇ ಈ ನೊಣದ ಜಾತಿಗೆ 'ಛಾತ್ರ'ವೆಂದು ಹೆಸರು ಬಂದಿರಬಹುದು. ಇವುಗಳಿಂದ ತಯಾರಾದ ಜೇನು ಕಂದು ಅಥವಾ ಹಳದಿ ಬಣ್ಣದ್ದಾಗಿದ್ದು ಬಹಳ ಗಟ್ಟಿಯಾಗಿ ತೂಕದಲ್ಲಿ ಅತಿ ಭಾರವಾಗಿರುತ್ತದೆ. ಇದು ಬಹಳ ಸಿಹಿಯಾಗಿದ್ದು ಶೀತ ಗುಣ ಇದಕ್ಕಿದೆ. ಈ ಮಧುವಿನ ಉಪಯೋಗ ಶ್ವೇತ-ಕುಷ್ಠದಲ್ಲಿ (ತೊನ್ನಿನಲ್ಲಿ), ರಕ್ತ



ಪಿತ್ತದಲ್ಲಿ, ಪ್ರಮೇಹದಲ್ಲಿ, ಬಾಯಾರಿಕೆ, ತಲೆ ಸುತ್ತು ಮತ್ತು ವಿಷ ಪರಿಣಾಮ ಗಳಲ್ಲಿ ಲಾಭದಾಯಕವಾಗಿದೆ.

೬) **ಆರ್ಘ್ಯ:** ಈ ಬಗೆಯ ಜೇನುನೊಣಗಳು ಹಳದಿ ಬಣ್ಣ, ಚೂಪು ಮುಖ, ಆರುಕಾಲುಗಳನ್ನು ಹೊಂದಿದ್ದು ಸಾಮಾನ್ಯವಾಗಿ ಆಶ್ರಮಗಳಲ್ಲಿ ಗೂಡು ಕಟ್ಟುತ್ತಿದ್ದು ಜೇನನ್ನು ಹಿಪ್ಪೆ ಹೂವಿನಿಂದ ತಯಾರಿಸುತ್ತವೆ. ಈ ಜೇನು ಕಣ್ಣುಗಳಿಗೆ ಹಿತಕರವಾಗಿದ್ದು ಬಲವರ್ಧಕವಾಗಿದೆ. ಈ ಜೇನುನೊಣಗಳನ್ನು ಆಧುನಿಕ ಶಾಸ್ತ್ರದ 'ಎಪಿಸ್ ಫ್ಲೋರಿಯಾ' ಎಂದು ಗುರುತಿಸಬಹುದಾಗಿದೆ.

೭) **ಔದ್ದಾಲಕ:** ಸಾಮಾನ್ಯವಾಗಿ ಔದ್ದಾಲಕ ಜೇನು ನೊಣಗಳು ತಮ್ಮ ಗೂಡನ್ನು ಹುತ್ತಗಳಲ್ಲಿ ಕಟ್ಟುವವು. ಈ ನೊಣಗಳು ಚಿಕ್ಕವಾಗಿ ಕಂದು ವರ್ಣ ಹೊಂದಿರುತ್ತವೆ. ಈ ನೊಣಗಳನ್ನು ಆಧುನಿಕಶಾಸ್ತ್ರದಲ್ಲಿ ವಿವರಿಸಿದ 'ಎಪಿಸ್ ಡೊರ್ಸೆಟಾ' ಎಂಬ ಜಾತಿಯ ಜೇನುನೊಣಗಳಿಗೆ ಹೋಲಿಸಬಹುದಾಗಿದೆ. ಈ ನೊಣಗಳಿಂದ ತಯಾರಾದ ಜೇನು ಕೂಡ ಕಂದು ಬಣ್ಣದ್ದಾಗಿದ್ದು ಕಂಠಕ್ಕೆ ಹಿತಕಾರಿಯಾಗಿದೆ. ಆಯುರ್ವೇದ ಗ್ರಂಥಗಳಲ್ಲಿ ಕುಷ್ಠಹರ, ವಿಷಹರವೆಂದು ಇದನ್ನು ವರ್ಣಿಸಲಾಗಿದೆ.

೮) **ದಾಲ:** ಈ ಬಗೆಯ ಜೇನು, ಮಧುರ, ಅಲ್ಪ ಹುಳಿ ಹಾಗೂ ಒಗರು ರುಚಿಯನ್ನು ಹೊಂದಿದ್ದು, ಲಘು, ರೂಕ್ಷ, ದೀಪನ, ಕಫಹರವಾಗಿದೆ. ವಾಂತಿ ಮತ್ತು ಪ್ರಮೇಹದಲ್ಲಿ ವಿಶೇಷವಾಗಿ ಪ್ರಯೋಜನಕರವಾಗಿದೆ.

ಈ ಎಲ್ಲ ವಿವರಗಳನ್ನು ಐದು ಸಾವಿರ ವರ್ಷಗಳಷ್ಟು ಹಿಂದೆಯೆ ನಮ್ಮ ಋಷಿಮುನಿಗಳು ತಿಳಿದಿದ್ದರೆಂದರೆ ಅದರಿಂದ ಅವರ ಅಗಾಧ ಬುದ್ಧಿಮತ್ತೆ ಮತ್ತು ಪ್ರಖರ ಪರೀಕ್ಷಾ ನೋಟ ಎದ್ದು ಕಾಣುತ್ತದೆ. ಜನ ಸಾಮಾನ್ಯರು ಈಗ ಈ ಎಂಟು ಬಗೆಯ ಜೇನುನೊಣಗಳಲ್ಲಿ ಭ್ರಾಮರವನ್ನು ಹೆಜ್ಜೇನೆಂದೂ, ಛಾತ್ರವನ್ನು ಮಧ್ಯ ಪ್ರಕಾರದ ಜೇನೆಂದೂ, ಕ್ಷೌದ್ರವನ್ನು ಕಿರುಜೇನೆಂದೂ, ಮಾಕ್ಷಿಕವನ್ನು ಕುಡಮೇ(ಸೊಳ್ಳೆ) ಜೇನೆಂದೂ, ಪೌತ್ತಿಕವನ್ನು ಕಾಡು ಜೇನೆಂದೂ, ಆರ್ಘ್ಯವನ್ನು ಮನೆಗೋಡೆಗಳಲ್ಲಿ ಗೂಡು ಕಟ್ಟುವ ಜೇನುನೊಣವೆಂದೂ, ಔದ್ದಾಲಕವನ್ನು ಹುತ್ತದಲ್ಲಿ ಗೂಡು ಕಟ್ಟುವ ಜೇನುನೊಣವೆಂದೂ, ದಾಲವನ್ನು ಮರದ ಪೊಟರೆ ಮತ್ತು ಕಲ್ಲು ಸಂದುಗಳಲ್ಲಿ ಗೂಡು ಕಟ್ಟುವ ಜೇನುನೊಣವೆಂದೂ ಗುರುತಿಸಿರು ವರು.

ಜೇನು ಯಾವುದೇ ಬಗೆಯದಾಗಿರಲಿ, ಅದು ಹೊಸದಾಗಿದ್ದರೆ ಪುಷ್ಟಿದಾಯ ಕವಾಗಿರುತ್ತದೆ ಹಾಗೂ ಹಳೆಯದಾಗಿದ್ದರೆ ರೂಕ್ಷ, ಲೇಖನ ಗುಣಗಳು ವೃದ್ಧಿಗೊಂಡು ಮೇದೋಹರವಾಗಿ ಮತ್ತು ಕಫಹರವಾಗಿ ಕೆಲಸ ಮಾಡುತ್ತದೆ. ಬೇರೆ ಬೇರೆ ಜಾತಿಯ ಜೇನು ನೊಣಗಳಿಂದ ತಯಾರಾದ ಜೇನು ಬೇರೆ ಬೇರೆ ಗುಣಧರ್ಮ ಹೊಂದಿದ್ದರೂ ಎಲ್ಲ ಬಗೆಯ ಜೇನನ್ನೂ ಚಿಕಿತ್ಸೆಯಲ್ಲಿ ಯೋಗ ವಾಹಿಯಾಗಿ (Catalyst) ಉಪಯೋಗಿಸುವುದುಂಟು.

ಜೇನುನೊಣಗಳು ಬಗೆ-ಬಗೆಯ ಪುಷ್ಪಗಳಿಂದ ಮಕರಂದವನ್ನು ಸಂಗ್ರಹಿಸಿ ಜೇನನ್ನು ತಯಾರಿಸುವುದರಿಂದ ಅದು ಯೋಗವಾಹೀ ಗುಣಹೊಂದಿರುತ್ತದೆ.



ಈ ಗುಣದಿಂದ ಜೇನು ಯಾವ ಔಷಧಿಯೊಂದಿಗೆ ಅಥವಾ ವಸ್ತುವಿನೊಂದಿಗೆ ಕೊಡಲ್ಪಡುವುದೋ ಆ ಔಷಧಿಯ/ವಸ್ತುವಿನ ಗುಣವನ್ನು ವಿಕಾಸಗೊಳಿಸಿ ಸಂಪೂರ್ಣ ಶರೀರವನ್ನು ಶೀಘ್ರವಾಗಿ ವ್ಯಾಪಿಸಿ ಔಷಷಧಿಯ ಪರಿಣಾಮವನ್ನುಂಟು ಮಾಡುತ್ತದೆ. ಔಷಧಿಯ ಶೀಘ್ರ ಪರಿಣಾಮಕ್ಕೆ ಜೇನಿನ ಸೂಕ್ಷ್ಮ ಮಾರ್ಗಾನುಗಾಮಿ ಮತ್ತು ಶೀಘ್ರ ಪ್ರಭಾವಕಾರೀ ಗುಣಗಳೂ ಪೂರಕವಾಗಿವೆ. ಈ ಕಾರಣದಿಂದಲೇ ಆಯುರ್ವೇದೀಯ ಔಷಧಿಗಳಿಗೆ ಮಧುವನ್ನು ಅನುಪಾನರೂಪದಲ್ಲಿ ಉಪಯೋಗಿಸಲು ಆದೇಶಿಸಿರುವರು.

ಮಧು ಮಾದರಿಗಳ ರಾಸಾಯನಿಕ ರಚನೆ

ಮಧು ಮಾದರಿ	ತೇವಾಂಶ %	ಗ್ಲುಕೋಸ್ %	ಲೆವ್ಯು ಲೋಸ್ %	ಸುಕ್ರೋಸ್ %	ಬೂದಿ %	ಫಾರ್ಮಿಕ್ ಆಮ್ಲ %
೧) ಎಲ್ಲಾ ಕಡೆ ದೊರೆಯುವ ಸಾಮಾನ್ಯ ತರದ್ದು	೧೯.೯	೩೨.೮೨	೩೭.೯೫	೧.೬೬	೦.೨೯	೦.೧೬
೨) ಕೊಡಗು	೩೫.೬೮	೩೫.೬೮	೩೯.೩	೦.೬೮	೦.೧೭	-
೩) ಬೆಳಗಾವಿ	೨೨.೯೪	೨೭.೧೫	೩೯.೭೭	೩.೨೨	೦.೮೩	೦.೨೫
೪) ಮಹಾಬಲೇಶ್ವರ	೧೯.೬೨	೩೦.೦೮	೪೧.೩೭	೧.೬೦	೦.೨೧	೦.೧೩
೫) ಕೊಯಮತ್ತೂರು (ಹತ್ತಿ ಹೂವಿನದು)	೨೧.೯೯	೬೯.೬೮	-	೬.೯೬	೦.೨೨	೦.೦೭
೫) ಕೊಯಮತ್ತೂರು (ಬೇವಿನದು)	೨೨.೮೫	೬೯.೧೬	೩	೭.೪೬	೦.೦೬	೦.೧೬
೭) ಪಂಜಾಬ (ಅಂಟವಾಳದ್ದು)	೧೭.೦	೭೮.೧	-	೪.೯೪	೦.೧೪	೦.೧೮
೮) ಅಮೆರಿಕಾ (೯೨ ಮಾದರಿಗಳ ಸರಾಸರಿ)	೧೭.೭	೩೪.೦೨	೪೦.೫೦	೧.೯	೦.೧೮	-
೯) ಬ್ರಿಟನ್	೧೮.೪೮	೭೪.೪೩	-	೧.೫೨	೦.೧೫	-

ಸಾಮಾನ್ಯವಾಗಿ ಮಧು, ಅಕ್ಟೋಬರ್‌ನಿಂದ ಏಪ್ರಿಲ್ (ವಸಂತ ಮತ್ತು ಗ್ರೀಷ್ಮ ಋತುವಿನಲ್ಲಿ) ತಿಂಗಳುಗಳಲ್ಲಿ ಜೇನುನೊಣಗಳಿಂದ ಸಂಗ್ರಹಿಸಲ್ಪಡುವುದು. ಜೇನಿನ ತಯಾರಿಕೆ ಮತ್ತು ಪ್ರಮಾಣ ಜೇನುಗೂಡಿನ ಅಳತೆ ಮತ್ತು ಹೂವಿನ ಲಭ್ಯತೆಯನ್ನವಲಂಬಿಸಿದೆ.

ಸಾಮಾನ್ಯ ಗುಣಧರ್ಮಗಳು:

ಹೂವಿನ ಜಾತಿಯನ್ನು ಅವಲಂಬಿಸಿ ಅವುಗಳಿಂದ ತಯಾರಾಗುವ ಮಧುವಿನ ಗುಣಧರ್ಮ, ಬಣ್ಣ ವಾಸನೆಗಳು ಬೇರೆ ಬೇರೆಯಾಗಿರುತ್ತವೆ.



ಸಾಮಾನ್ಯವಾಗಿ ಜೇನು ಬಂಗಾರದ ಬಣ್ಣ (Golden Yellow)ವನ್ನು ಹೊಂದಿದ್ದರೂ ಹಿಮಾಲಯದಲ್ಲಿ ದೊರೆಯುವ ಜೇನು ಬಿಳುಪಾಗಿರುತ್ತದೆ. ಜೇನಿನಲ್ಲಿನ ಸಕ್ಕರೆಯ ಅಂಶವು ಬೇರೆ ಬೇರೆ ರೂಪದಲ್ಲಿ ಅಧಿಕ ಪ್ರಮಾಣದಲ್ಲಿ ಇರುವುದರಿಂದ ಅದು ಗಟ್ಟಿಯಾಗಿ ಬಿಡುತ್ತದೆ. ಆದರೆ ಸ್ವಲ್ಪ ಬಿಸಿ ಮಾಡಿದರೆ ಮತ್ತೆ ದ್ರವರೂಪವನ್ನು ಹೊಂದುವುದು. ಜೇನು ವಾತಾವರಣದಲ್ಲಿಯ ತೇವಾಂಶವನ್ನು ಹೀರಿಕೊಳ್ಳುವುದು. ಅಧಿಕ ಸಮಯದವರೆಗೆ ವಾತಾವರಣದಲ್ಲಿಟ್ಟಿದ್ದಾದರೆ ತನ್ನ ವಾಸನೆಯನ್ನು ಕಳೆದುಕೊಳ್ಳುವುದು ಮತ್ತು ಅದು ಜೇನುಹುಳದಿಂದ ಪೂರ್ತಿಯಾಗಿ ಜೀರ್ಣಿಸಲ್ಪಡದಿದ್ದರೆ ಹುಳಿಯಾಗಲೂಬಹುದು.

'ಲಿಸ್ನರ್' ಎಂಬ ಒಂದು ಬ್ರಿಟಿಶ್ ಪತ್ರಿಕೆಯಲ್ಲಿ ನಿತ್ರಾಣ ಮಕ್ಕಳಿಗೆ ಆರು ವಾರಗಳ ತನಕ ಸತತ ಜೇನಿನ ಸೇವನೆ ಮಾಡಿಸಿದ್ದಾದರೆ ಕೆಂಪು ರಕ್ತ ಕಣಗಳು ಅಧಿಕವಾದದ್ದು ಕಂಡುಬರುತ್ತದೆ ಎನ್ನಲಾಗಿದೆ. ನಿಶ್ಶಕ್ತಿ ಮತ್ತು ನಿರ್ಬಲ ಹೃದಯ ಕ್ರಿಯೆಯನ್ನು ಚೇತನಗೊಳಿಸಲು ಜೇನು ಬಹಳ ಉಪಯುಕ್ತ ಔಷಧಿಯೆಂದು ಸ್ಕಾಟ್‌ಲಂಡಿನ ಡಾ. ಸಿ.ಎನ್. ಡಬ್ಲ್ಯು. ಥಾಮಸ್ ಘೋಷಿಸಿರುವರು.

'ಮಧು', ಒಂದು ನಿರುಪದ್ರವಿ(Safe) ಸಕ್ಕರೆಯಾಗಿದ್ದು ಜೀರ್ಣಕ್ರಿಯೆಗೆ ಒಳಗಾಗದೆ, ಕರುಳಿನಲ್ಲಿ ಯಾವ ಬಗೆಯ ಉದ್ರೇಕವನ್ನೂ ಉಂಟುಮಾಡದೆ, ಅತಿ ಶೀಘ್ರದಲ್ಲಿ ಶಕ್ತಿ ನೀಡಬಲ್ಲ ನೈಸರ್ಗಿಕ ಆಹಾರವಾಗಿದೆ. ಅದು ತಾಮ್ರ, ಕಬ್ಬಿಣ, ಮ್ಯಾಂಗನೀಸ್, ಪೊಟ್ಯಾಶಿಯಂ ಮೊದಲಾದ ನೈಸರ್ಗಿಕ ಖನಿಜಗಳ ಶ್ರೀಮಂತ ಭಂಡಾರವೂ ಹೌದು. ಇದು ಯಾವ ವಯೋಮಿತಿ ಇಲ್ಲದೆ ಎಲ್ಲರಿಗೂ ರಕ್ತ ತಯಾರಿಕೆಗೆ ಸಹಾಯವಾಗುವ ಆದರ್ಶ ಟಾನಿಕ್ ಆಗಿದೆ. ಬಾಲ್ಯಾವಸ್ಥೆಯಲ್ಲಿ, ಯೌವನಾವಸ್ಥೆಯಲ್ಲಿ, ವೃದ್ಧಾಪ್ಯದಲ್ಲಿ, ಗರ್ಭಿಣಿಗೆ, ಹಾಲುಣಿಸುವ ತಾಯಂದಿರಿಗೆ ಹೀಗೆ ಎಲ್ಲರೂ ಇದನ್ನು ಉಪಯೋಗಿಸಬಹುದಾಗಿದೆ.

ಕಬ್ಬಿನ ರಸದಿಂದ ತಯಾರಾದ ಸಕ್ಕರೆ, ಬೆಲ್ಲ, ಕಾಕಂಬಿ, ಕಲ್ಲುಸಕ್ಕರೆ, ಗ್ಲೂಕೋಸ್ ಮೊದಲಾದವುಗಳಿಗಿಂತಲೂ ಜೇನು ಶ್ರೇಷ್ಠವಾಗಿದೆ. ಇದು ಸಕ್ಕರೆಯ ರೂಪಗಳಾದ ಸುಕ್ರೋಸ್, ಡೆಡೋಸ್ ಮೊದಲಾದವುಗಳಂತೆ ಅವುಗಳ ಸುಲಭ ರೂಪಕ್ಕೆ ಬದಲಾವಣೆ ಹೊಂದಬೇಕಿಲ್ಲ. ಅದು ಪೂರ್ತಿಯಾಗಿ ಜೀರ್ಣಿಸಲ್ಪಟ್ಟ ಸಕ್ಕರೆಯ ರೂಪದಲ್ಲಿಯೇ (ಗ್ಲೂಕೋಸ್ + ಫ್ರುಕ್ಟೋಸ್) ಇದೆ. ಜೇನು ಜೀರ್ಣಾಂಗಗಳ ಸೂಕ್ಷ್ಮ ಒಳಪದರಿಗೆ (Mucous Membrane)ಯಾವ ಬಗೆಯ ಕ್ಷೋಭೆ (Irritation)ಯನ್ನುಂಟು ಮಾಡುವುದಿಲ್ಲ.

ಅದೇ ತಾನೆ ಜನಿಸಿದ ಮಗುವಿಗೆ ಕೂಡ ಇದನ್ನು ನಿರ್ಭಯವಾಗಿ ನೆಕ್ಕಿಸಬಹುದು. ಇದು ಕಣ್ಣಿಗೆ ಕಾಣದ ಅತಿ ಸೂಕ್ಷ್ಮ ಕ್ರಿಮಿ ಜಂತುಗಳಲ್ಲಿನ (Micro-organisms) ತೇವಾಂಶವನ್ನು ಹೀರಿ ಕ್ರಿಮಿನಾಶಕವಾಗಿ (Antibacterial), ನಂಜುನಾಶಕವಾಗಿ (Antiseptic) ಕೆಲಸ ಮಾಡಬಲ್ಲದು. ಜೇನಿನಲ್ಲಿ ಸಂಗ್ರಹಿಸಿಟ್ಟ ಹಣ್ಣುಗಳು, ಔಷಧಗಳು ಮತ್ತು ಆಹಾರ ಪದಾರ್ಥಗಳು ತಾಜಾ ಆಗಿದ್ದು ರುಚಿ ಮತ್ತು ಗುಣಯುಕ್ತವಾಗಿರುತ್ತವೆ. ಈ ಕಾರಣದಿಂದಲೇ



ಆಹಾರ ಪದಾರ್ಥಗಳನ್ನು ಜೇನಿನೊಂದಿಗೆ ತಯಾರಿಸಿ ಇಡುವುದು ಆಹಾರ ಕೆಡದಂತೆ ರಕ್ಷಿಸಿ ಇಡುವ ಪುರಾತನ ವಿಧಿಗಳಲ್ಲೊಂದಾಗಿತ್ತು. ಮಧು, ಜಗತ್ತಿನ ಎಲ್ಲೆಡೆಯಲ್ಲಿ ದೊರೆಯಬಹುದಾದ ಎಲ್ಲ ಕಾಯಿಲೆಯವರಲ್ಲಿ ಉಪಯೋಗಿಸಬಹುದಾದ ಆಹಾರ ಮತ್ತು ಔಷಧೀಯ ಗುಣವುಳ್ಳ ದ್ರವ್ಯವಾಗಿದೆ. ಇದನ್ನು ಶೀಘ್ರ ಶಕ್ತಿದಾಯಕವಾಗಿ ಅಧಿಕ ಬಳಲಿದವರು, ದುರ್ಬಲರು, ಹಸಿವೆ ಇಲ್ಲದವರು, ಆಮ್ಲಪಿತ್ತದಿಂದ ಬಳಲುತ್ತಿರುವವರು, ಹೃದ್ರೋಗಿಗಳು ಸೇವಿಸಬಹುದು. ಎಲ್ಲ ಬಗೆಯ ಜ್ವರಗಳಲ್ಲಿ, ಅನಿದ್ರೆಯಲ್ಲಿ, ಮಾನಸಿಕ ಬಳಲಿಕೆಯಲ್ಲಿ, ರಕ್ತದಲ್ಲಿ ಸಕ್ಕರೆಯ ಅಂಶ ಕಡಿಮೆಯಾದಲ್ಲಿ, ಯಾವುದೇ ಕಾರಣದಿಂದ ವಾಂತಿಯಾದ ನಂತರದಲ್ಲಿ ಶಸ್ತ್ರಚಿಕಿತ್ಸಾಜನ್ಯ ಆಘಾತ (Surgical Shock)ದಲ್ಲಿ ಉಪಯೋಗಿಸಬಹುದಾಗಿದೆ.

ಆಹಾರವಸ್ತುವಾಗಿ:

ನೈಸರ್ಗಿಕ ಮೂಲದಿಂದ ಉಂಟಾದ ಸರಳ ರಚನೆಯ ಶರ್ಕರಗಳನ್ನು ಅಧಿಕ ಪ್ರಮಾಣದಲ್ಲಿ ಹೊಂದಿದ ಮಧು ಅಮೃತ ಸಮಾನವಾಗಿದೆ. ಇದು ಧಾತುಪುಷ್ಟಿ ನೀಡದೆ ದೈಹಿಕ ಚೈತನ್ಯವನ್ನು ಅತ್ಯಲ್ಪ ಕಾಲದಲ್ಲಿ ನೀಡಬಲ್ಲದು. ಎಂ.ಎಚ್. ಹೇಡಾಕ್ ಎಂಬುವವರು ಹನ್ನೆರಡು ವಾರಗಳ ಕಾಲ ಕೇವಲ ಜೇನು ಮತ್ತು ಹಾಲನ್ನು ಸೇವಿಸಿ ಯಾವ ಅಹಿತಕರ ಪರಿಣಾಮವೂ ಇಲ್ಲದಂತೆ ಸಾಮಾನ್ಯಮಟ್ಟದ ಜೀವನ ನಡೆಸಿ ಹಾಲು ಮತ್ತು ಜೇನುಗಳ ಸಂಯೋಗವು ಪರಿಪೂರ್ಣ ಹಾಗೂ ಅಮೃತ ಸಮಾನವಾದ ಆಹಾರವೆಂದು ತೋರಿಸಿರುವರು.

ಮಧುವಿನ ಆಹಾರ ಗುಣದ ಶ್ರೇಷ್ಠತೆ ಎಷ್ಟೆಂದರೆ ೭ ಔನ್ಸ್ ಮಧುವು ಎರಡೂವರೆ ಪೌಂಡ್ ಹಾಲಿನ, ಮೂರುವರೆ ಪೌಂಡ್ ಗಿಣ್ಣದ (Cheese), ೧೨ ಔನ್ಸ್ ಮಾಂಸದ, ೧೫ ಔನ್ಸ್ ಮೀನಿನ, ೧೦ ಮೊಟ್ಟೆಯ ಅಥವಾ ೮ ಕಿತ್ತಳೆ ಹಣ್ಣಿನ ಶಕ್ತಿ ಸಾಮರ್ಥ್ಯ ನೀಡಬಲ್ಲುದುದಾಗಿದೆ. ಅದು ಬೇಗ ರಕ್ತಗತವಾಗಬಲ್ಲದು. ಆದ್ದರಿಂದ ಅದು ಹಸುಳೆಗಳಿಗೆ, ವೃದ್ಧರಿಗೆ ಮತ್ತು ರೋಗಿಗಳಿಗೆ ಒಳ್ಳೆಯ ಆಹಾರ.

ಅಂಗಸಾಧನೆಯಲ್ಲಿ ತೊಡಗಿರುವವರು ಕಠಿಣ ವ್ಯಾಯಾಮ ಮಾಡಿದ ನಂತರ ಜೇನನ್ನು ಸೇವಿಸಿದರೆ ಕುಂದಿದ ಶಕ್ತಿಯನ್ನು ಶೀಘ್ರವಾಗಿ ಮತ್ತೆ ಪಡೆಯಬಹುದು. ದುಡಿದು ಬಳಲಿದವರು ಒಂದು ಲೋಟ ನೀರಿನಲ್ಲಿ ಒಂದು ಔನ್ಸಿನಷ್ಟು ಜೇನುತುಪ್ಪ ಬೆರೆಸಿ ಕುಡಿದ ಕೂಡಲೇ ಲವಲವಿಕೆ ಉಂಟಾಗುವುದು. ಪೂಜಾವಿಧಿ ಮತ್ತು ಶ್ರಾದ್ಧಗಳಲ್ಲಿ, ಭೋಜನಕಾಲದಲ್ಲಿ ಮಧುವಿನ ಸೇವನೆಗೆ ಅದರ ಈ ಉತ್ಕೃಷ್ಟತೆಯೇ ಕಾರಣವಾಗಿಬೇಕು. ಅಮೇರಿಕದ ಒಬ್ಬ ಗ್ರಂಥಕರ್ತ ಜೇನನ್ನು ಹೀಗೆ ವರ್ಣಿಸಿದ್ದಾನೆ: "ವಾಸ್ತವವಾಗಿ ಇನ್ನಾವ ಆಹಾರ ಪದಾರ್ಥವೂ ಜೇನಿನಂತಹ ಸಾಹಚರ್ಯ ಹೊಂದಿಲ್ಲ. ಪ್ರತಿಯೊಂದು ಹನಿಯೂ ಒಂದು ಕೋಮಲ ಕುಸುಮದ ವಕ್ಷಸ್ಥಲದಲ್ಲಿ ಜನಿಸಿ, ರವಿಯ ಕಿರಣಗಳ ಸ್ಫೂರ್ತಿ ಪಡೆದು, ಉಷಃಕಾಲದ ಮಂಜಿನಲ್ಲಿ ಮಿಂದು ತಯಾರಾಗಿ ದಾನರೂಪದಲ್ಲಿ ಬಂದ ಅಮೃತವಾಗಿದೆ."



ಪಾಶ್ಚಿಮಾತ್ಯದಲ್ಲಿ ಮಧುವಿನ ಬಳಕೆ:

ಪಾಶ್ಚಿಮಾತ್ಯ ದೇಶಗಳಲ್ಲಿ ದ್ರಾಕ್ಷಾರಸ ಹಾಗೂ ಮೀಡ್ (Mead) ಎಂಬ ಮಾದಕದ ತಯಾರಿಕೆಯಲ್ಲಿ ಮಧುವನ್ನು ಉಪಯೋಗಿಸುವರು. ಕಾಂತಿವರ್ಧಕಗಳ ತಯಾರಿಕೆಯಲ್ಲಿ; ಹಸುಗಳ ಹಾಲಿನ ಉತ್ಪನ್ನ ಹೆಚ್ಚಿಸುವುದಕ್ಕೆ; ಜೂಜಿನ ಕುದುರೆಗಳ ಸತ್ವ ಹೆಚ್ಚಿಸಲು; ಮಾಂಸಕ್ಕಾಗಿ ಬೆಳೆಸಿದ ದನ, ಕುಕ್ಕುಟವರ್ಗ ಮತ್ತು ಮೀನುಗಳನ್ನು ಕೊಬ್ಬಿಸುವುದಕ್ಕೆ; ಸಿಗರೇಟು ಮತ್ತು ಅಗಿಯುವ ಹೊಗೆಸೊಪ್ಪುಗಳ ರಚನೆಯನ್ನು ಉತ್ತಮಗೊಳಿಸಿ ಅವುಗಳಲ್ಲಿ ತೇವವಿರುವಂತೆ ಮಾಡಲು; ಒಣ ಹಂದಿ ಮಾಂಸವನ್ನು ಪರಿಷ್ಕರಿಸಲು; ಅಗಿಯುವ ಗೋಂದಿಗೆ (Chewing Gum) ಸಿಹಿರುಚಿ ಕೊಡುವುದಕ್ಕೆ ಜೇನುತುಪ್ಪ ಬಳಸುವರು.

ಅನೇಕ ವರ್ಷಗಳ ಸಂಶೋಧನೆಯ ನಂತರ ಫೋರ್ಡ್ ಮೋಟಾರು ಕಂಪನಿಯ ಶೋಧನೆಯ ಶಾಲೆಯಲ್ಲಿ ಮಧು, ಬಲು ಒಳ್ಳೆಯ ಆಘಾತ ನಿರೋಧಕ (Shock absorbant) ಎಂದು ಕಂಡುಹಿಡಿಯಲಾಯಿತು. ಫೋರ್ಡ್ ಮೋಟಾರುಗಳಲ್ಲಿ ಆಘಾತದ ಹೊಡೆತಗಳನ್ನು ತಡೆಗಟ್ಟಲು ಜೇನು ಉಪಯೋಗಿಸಲ್ಪಟ್ಟಿದೆ.

ಗಾಲ್ಫ್ ಆಟದ ಚೆಂಡುಗಳ ಒಳಗೂ ಮಧುವನ್ನು ಬಳಸುವರು. ಇದಲ್ಲದೆ ಅದು ಸಸ್ಯಗಳ ಬೆಳವಣಿಗೆಗೆ ಉತ್ತೇಜಕವೆಂದೂ, ಕಸಿ ಮಾಡಿದ ಕಾಂಡಗಳು ಬೇರು ಬಿಡಲು ಸಹಾಯಕವೆಂದೂ ಕಂಡುಬಂದಿದೆ. ಶೀತಲ ದಾಸ್ತಾನಿನಲ್ಲಿಟ್ಟ ಮೊಟ್ಟೆಗಳು ಗೋಂದಿನಂತೆ ಅಂಟಂಟಾಗುವುದನ್ನೂ ಮಧು ತಡೆಗಟ್ಟುತ್ತದೆ. ಅಲ್ಪ ಪ್ರಮಾಣದಲ್ಲಿ ಬ್ಯಾಕ್ಟೀರಿಯಾ ಅಭಿವರ್ಧನೆಗಳ (Culture) ತಯಾರಿಕೆಗೂ, ಕ್ಲೋವರ್ ಮುಂತಾದ ಸಸ್ಯಬೀಜಗಳ ಸಂಸ್ಕರಣೆಗೂ, ನೊಣಗಳ ನಿರ್ಮೂಲನೆಗೆ ಉಪಯೋಗಿಸುವ ವಿಷಮಿಶ್ರಿತ ಆಹಾರಗಳಲ್ಲಿಯೂ ಮಧುವನ್ನು ಬಳಸಲಾಗುತ್ತಿದೆ.

ಔಷಧಿಯ ಉಪಯೋಗಗಳು:

ಮಧು ಕಣ್ಣಿಗೆ ಹಿತಕರ, ಗಾಯ-ಹುಣ್ಣುಗಳಲ್ಲಿ ಕೊಳೆತ ಭಾಗವನ್ನು ತೆಗೆದುಹಾಕಲು, ಬಾಯಾರಿಕೆಯನ್ನು ಶಮನಗೊಳಿಸಲು, ಕಫ ಸಂಬಂಧದ ರೋಗಗಳಲ್ಲಿ, ವಿಷ ನಿರ್ಮೂಲನೆಗೆ ಶ್ರೇಷ್ಠ ಔಷಧಿಯಾಗಿದೆ. ಬಿಕ್ಕಳಿಕೆ, ಶ್ಲೇಷ್ಮ ವಮನ ಅಥವಾ ಭೇದಿಯಲ್ಲಿ ರಕ್ತ ಹೋಗುವುದು, ಒಗ್ಗದಿರುವಿಕೆ (Allergy), ತೊನ್ನು, ಜಂತುಹುಳು, ವಾಂತಿ, ಕೆಮ್ಮು ದಮ್ಮು ಆಮಶಂಕೆ ಇವೆಲ್ಲದಕ್ಕೂ ಜೇನು ಉತ್ತಮ ಮದ್ದಾಗಿದ್ದು ಗೃಹಿಣಿಯರ ಮನೆ ಮದ್ದುಗಳ ಪೆಟ್ಟಿಗೆಯಲ್ಲಿ ಅಗ್ರಸ್ಥಾನ ಪಡೆದಿದೆ. ಜೇನು ವಿರೇಚಕವೆಂದು, ರಕ್ತ ಶುದ್ಧಿಗೊಳಿಸುವುದೆಂದು ಹೇಳಲಾಗಿದೆ. ಅಲ್ಲದೆ ನೆಗಡಿಯಲ್ಲಿ ಜ್ವರ ನಿವಾರಕವೆಂದು ಮತ್ತು ಕಣ್ಣುನೋವು, ಬಾಯಿಹುಣ್ಣು, ಗಂಟಲುನೋವು, ಸುಟ್ಟ ಗಾಯಗಳಿಗೆ ಪರಿಹಾರಕವೆಂದು, ಹೃದ್ರೋಗದಲ್ಲಿ ಸಾಕಷ್ಟು ಪೋಷಣೆ ಇಲ್ಲದಾಗ, ಜೀರ್ಣಶಕ್ತಿ ದುರ್ಬಲವಾಗಿದ್ದರೆ, ಕರುಳಿನಲ್ಲಿ ವ್ರಣವಾಗಿದ್ದರೆ ಜೇನಿನ ನಿತ್ಯ ಸೇವನೆ ಹಿತಕರವಾಗಿದೆ. ಕ್ಷಾರೀಯ



ಸ್ವಭಾವದ ಮಧು, ರಕ್ತದಲ್ಲಿ ಆಮ್ಲತೆ (Acidosis)ಯನ್ನಾಗಲಿ ಅಥವಾ ಕರುಳಿನಲ್ಲಿ ವಾಯು ಸೇರಿದ ಸ್ಥಿತಿಯನ್ನಾಗಲಿ (Flatulance) ಉಂಟು ಮಾಡುವುದಿಲ್ಲ. ಜೇನನ್ನು ಆಯುರ್ವೇದ ಮತ್ತು ಯುನಾನಿ ಔಷಧಿ ಪದ್ಧತಿಗಳಲ್ಲಿ ಆಸವಾರಿಷ್ಟ, ಶರಬತ್, ಗುಟಿಕಾ, ಲೇಹ್ಯ ಮೊದಲಾದ ಬಗೆಯ ಔಷಧಿಗಳನ್ನು ತಯಾರಿಸಲು ಉಪಯೋಗಿಸಲಾಗುತ್ತಿದೆ.

ಖಾಲಿ ಹೊಟ್ಟೆಯಲ್ಲಿ ಬೆಳಿಗ್ಗೆ ೧/೨ ಔನ್ಸ್ ಜೇನು ಮತ್ತು ೧ ಚಮಚ ಲಿಂಬೆರಸವನ್ನು ನೀರಿಗೆ ಬೆರೆಸಿ ಪ್ರತಿನಿತ್ಯ ಸೇವಿಸುವುದರಿಂದ ಹೆಚ್ಚಿದ ಕೊಬ್ಬಿನಾಂಶ ಕರಗುವುದು, ರಕ್ತ ಶುದ್ಧಿಯಾಗುವುದು ಮತ್ತು ನವಚೈತನ್ಯ ಬರುವುದು. ೨) ಅಧಿಕ ರಕ್ತದೊತ್ತಡಕ್ಕೆ ಅದು ದಿವ್ಯೌಷಧವಾಗಿದೆ. ೩) ಒಂದು ಟೇಬಲ್ ಚಮಚದಷ್ಟು (೧೫ ಮಿಲಿಗ್ರಾಂ) ಜೇನನ್ನು ರಾತ್ರಿ ಮಲಗುವ ಮೊದಲು ಕೊಡುವುದರಿಂದ ಇದು ನಿದ್ರಾಜನಕವಾಗಿ, ಮೂತ್ರ ಸಂಗ್ರಹಣೀಯವಾಗಿ ಕೆಲಸ ಮಾಡುವುದು. ಕಾರಣ ರಾತ್ರಿ ಹಾಸಿಗೆಯಲ್ಲಿ ಮೂತ್ರ ವಿಸರ್ಜಿಸುವ (Bed Wetting) ಮಕ್ಕಳಿಗೆ ಇದು ಒಂದು ಸುಲಭ ಹಾಗೂ ನಿರುಪದ್ರವ ಉಪಾಯವಾಗಿದೆ. ೪) ಅತಿ ಚಿಕ್ಕ ಮಕ್ಕಳಿಗೆ ಪ್ರತಿಸಲ ಆಹಾರ ಕೊಡುವಾಗಲೂ ಜೇನನ್ನು ಸ್ವಲ್ಪ ಪ್ರಮಾಣದಲ್ಲಿ ಬೆರೆಸಿ ಕೊಡುವುದರಿಂದ ಅವುಗಳ ಬೆಳವಣಿಗೆಯು ಸುಧಾರಿಸುವುದಲ್ಲದೆ ಮಕ್ಕಳು ಪದೆ ಪದೆ ಕಾಯಿಲೆಗಳಿಗೆ ತುತ್ತಾಗುವುದನ್ನು ತಡೆಯಬಹುದು. ೫) ಒಂದು ಚಮಚ ಜೇನು ಮತ್ತು ಒಂದು ಚಮಚ ಲಿಂಬೆರಸ ಸೇರಿಸಿ ಸೇವಿಸುವುದು ಹುಳಿತೇಗು, ಕಾಮಾಲೆ, ಅಜೀರ್ಣ, ಕಬ್ಬಿಣದ ಕೊರತೆ ಯಿಂದಾದ ಅನೀಮಿಯದಲ್ಲಿ ಪ್ರಯೋಜನಕರ.

೬) ಜೇನಿನ ನಿತ್ಯ ಬಳಕೆಯಿಂದ ಅಧಿಕ ಸ್ಥೂಲತೆ, ನರ ದೌರ್ಬಲ್ಯ (Nervousness) ಹೃದಯದ ಅಧಿಕ ಬಡಿತ (Palpitation)ಗಳು ನಿಯಂತ್ರಿಸಲ್ಪಡುವವು. ೭) ಕೆಮ್ಮು ದಮ್ಮು ಗಂಟಲುಬೇನೆ ಮೊದಲಾದ ಗಂಟಲು ಮತ್ತು ಪುಪ್ಪುಸಕ್ಕೆ ಸಂಬಂಧಿಸಿದ ಕಾಯಿಲೆಗಳಿಗೆ ತುಲಸಿರಸ ಮತ್ತು ಜೇನಿನ ಬೆರಕೆ ಫಲಪ್ರದ. ೮) ಕ್ರೀಡಾಪಟುಗಳು ಮತ್ತು ಕುಸ್ತಿ ಪೈಲ್ವಾನರು ಆಹಾರದಲ್ಲಿ ಜೇನನ್ನು ಪ್ರತಿನಿತ್ಯ ಶಕ್ತಿವರ್ಧಕವಾಗಿ ಉಪಯೋಗಿಸುವರು. ಇದರ ನಿತ್ಯ ಬಳಕೆ ಬಳಲಿಕೆಯನ್ನು ಹೋಗಲಾಡಿಸುವುದಲ್ಲದೆ ಶಕ್ತಿವರ್ಧಿಸುವುದು ಹಾಗೂ ಕಾಲುಗಳಲ್ಲಿ ನೋವು (Cramps) ಮಾಯವಾಗುವುದು. ೯) ಜೇನಿನ ಬಳಕೆ ಆರೋಗ್ಯಕರ ಜೀವನದ ಅವಧಿಯನ್ನು ಅಧಿಕಗೊಳಿಸುವುದು, ವಯಸ್ಸಾಗಿದ್ದರೂ ವೃದ್ಧಾಪ್ಯದ ಸರ್ವ ಲಕ್ಷಣಗಳಿಂದ (ಮಾನಸಿಕ ಮತ್ತು ಶಾರೀರಿಕ) ದೂರವಿರಬಹುದು. ೧೦) ಶುದ್ಧ ಜೇನು, ಲೈಂಗಿಕ ಕ್ರಿಯೆಯ ಅನಂತರ ಉಂಟಾಗುವ ನರದೌರ್ಬಲ್ಯವನ್ನು, ಶೀಘ್ರ ಶುಕ್ರಸ್ಖಲನವನ್ನು, ಷಂಡತ್ವವನ್ನು ತಡೆಯಬಲ್ಲ ಔಷಧಿಯಾಗಿದೆ. ೧೧) ನರ ದೌರ್ಬಲ್ಯದಿಂದ ಉಂಟಾಗುವ ನಿದ್ರಾರಾಹಿತ್ಯಕ್ಕೆ ಇದು ಅತ್ಯುತ್ತಮ ಮದ್ದು. ನರಸಂಬಂಧಿತ ಕಾಯಿಲೆಗಳಲ್ಲಿ ಒಂದಾದ ಅರ್ಧಾಂಗವಾಯುವಿಗೆ (Hemiplasia) ಉತ್ತಮ ಭೇಷಜವಾಗಿದೆ. ೧೨) ಇತ್ತಿತ್ತಲಾಗಿ ಪಾಶ್ಚಿಮಾತ್ಯ ವೈದ್ಯರು 'ಹಕ್ಕಿ ರೋಗಕ್ಕೆ' (Rickets)



ಬಾಲಶೋಷಕ್ಕೆ (Marasmus) ಸ್ಕರ್ವಿ (Scurvy) ರೋಗದಲ್ಲಿ ಜೇನಿನ ಬಳಕೆಯ ಬಗ್ಗೆ ಅಧಿಕ ಒತ್ತುಕೊಟ್ಟು ಆದೇಶಿಸುತ್ತಿರುವರು. ೧೩) ಜೇನಿನ ಅಭ್ಯಂತರ ಪ್ರಯೋಗ ಮತ್ತು ಸೂರ್ಯನ ಎಳೆ ಬಿಸಿಲಿಗೆ ಮೈ ಒಡ್ಡುವಿಕೆ, ಶರೀರದ ನಿರ್ನಾಳ ಗ್ರಂಥಿಗಳ ಮತ್ತು ಕ್ಯಾಲ್ಸಿಯಂ ಜೀವದ್ರವ್ಯ ಕ್ರಿಯೆಗಳು (Calcium Metabolism) ಸರಿಯಾಗಿ ನಡೆಯುವಂತೆ ಮಾಡುವ ಒಂದು ಆದರ್ಶ ಅಭ್ಯಾಸವೆಂದು ಪರಿಣಿತರು ಪ್ರಶಂಸಿಸಿರುವರು. ೧೪) ಹಳೆಯ ಅತಿಸಾರ, ಸಂಗ್ರಹಣಿ ಮತ್ತು ಮಲಬದ್ಧತೆ ಮೊದಲಾದ ಕರುಳಿಗೆ ಸಂಬಂಧಪಟ್ಟ ರೋಗಗಳಲ್ಲಿ ಜೇನುತುಪ್ಪವನ್ನು ಎನಿಮಾ ರೂಪದಲ್ಲಿ ಕೊಡುವುದರಿಂದ ಕರುಳಿನಲ್ಲಿಯ ಹೆಚ್ಚಾದ ಕಫವನ್ನು ಅದು ತನ್ನ 'ಗ್ರಾಹೀ' ಗುಣದಿಂದ (ಹೀರುವ ಗುಣ) ತೆಗೆದು ಅತಿಸಾರ ಮತ್ತು ಸಂಗ್ರಹಣೆಯನ್ನು ದೂರಗೊಳಿಸುವುದಷ್ಟೇ ಅಲ್ಲದೆ ಸಾಕಷ್ಟು ಆಹಾರರಸವು ಸರಿಯಾದ ರೀತಿಯಲ್ಲಿ ಶರೀರದ ಅಂಗಾಂಗ ಗಳಿಗೆ ದೊರೆಯುವಂತೆ ಮಾಡುವುದು. ೧೫) ಒಂದು ತೊಲ ಜೇನುತುಪ್ಪ, ಅರ್ಧತೊಲ ತುಪ್ಪ ಹಾಗೂ ೧ ತೊಲ ಅಶ್ವಗಂಧ ಚೂರ್ಣ ಇವೆಲ್ಲದರ ಸಂಯೋಗ ಕ್ಷಯರೋಗದಲ್ಲಿ ಬಹಳ ಪ್ರಯೋಜನಕರವಾಗಿದೆ. ೧೬) ರಕ್ತ ಪ್ರದರದಲ್ಲಿ ಅತ್ತಿಕಾಯಿ ರಸ ಮತ್ತು ಜೇನುತುಪ್ಪ ದಿವ್ಯೌಷಧಿಯಾಗಿದೆ. ೧೭) ಜೇನು, ಕೇವಲ ಶರೀರ ಪೋಷಣೆ ಬಯಸುವವರಿಗೆ ಮಾತ್ರ ಇರದೆ ಸಿಹಿ ಮೂತ್ರದ್ಗಂತಹ ಕಾಯಿಲೆಯಿಂದ ಬಳಲುವವರೂ ಇದನ್ನು ಔಷಧಿಯಾಗಿ ಬಳಸಬಹುದಾಗಿದೆ. ಹಿಂದೂ-ಗ್ರೀಕ್-ಅರೇಬಿಕ್ ವೈದ್ಯ ಪದ್ಧತಿಗಳಲ್ಲಿ ಮಧುಮೇಹಹರ ಔಷಧಗಳನ್ನು ಮಧುವಿನೊಂದಿಗೆ ಕೊಡಲು ಆದೇಶಿಸಲಾಗಿದೆ. ಇದಕ್ಕೆ ಕಾರಣವೆಂದರೆ ಜೇನಿನಲ್ಲಿರುವ ನಿರುಪದ್ರವ ಸಕ್ಕರೆ ಮತ್ತು ಇನ್ನಿತರ ಅಮೂಲ್ಯ ಘಟಕಗಳಾದ ಸಸಾರಜನಕ, ಜೀವಸತ್ವ, ಕಿಣ್ವ, ಖನಿಜ ದ್ರವ್ಯ ಮೊದಲಾದವುಗಳು. ಜೇನಿನಲ್ಲಿರುವ ನಿರುಪದ್ರವಿಯಾದ 'ಲೆವ್ಯುಲೋಸ್' ಎಂಬ ಸಕ್ಕರೆಯ ಜೀರ್ಣಕ್ರಿಯೆಗೆ ಇನ್ನುಳಿದ ಸಕ್ಕರೆಯ ಜೀರ್ಣಕ್ಕೆ ಬೇಕಾಗುವ ಇನ್ಸುಲಿನ್‌ನ ಅವಶ್ಯಕತೆಯಿಲ್ಲ.

ಈ ಒಂದು ವಿಚಾರವನ್ನು ಆಧಾರವಾಗಿಟ್ಟುಕೊಂಡು ರಕ್ತದ ಸಕ್ಕರೆಯ ಅಂಶದ ಮೇಲೆ ಜೇನಿನ ಪ್ರಭಾವವೇನಿರಬಹುದೆಂದು ೫ ಜನ ನಿರೋಗಿ (ಆರೋಗ್ಯವಂತ) ಮತ್ತು ೫ ಜನ ಮಧುಮೇಹಿಗಳನ್ನು ಅಭ್ಯಸಿಸಲಾಯಿತು. ಈ ಅಧ್ಯಯನದಲ್ಲಿ ಜೇನಿನೊಂದಿಗೆ ಜೇನಿನಂತೆ ಸಿಹಿಯಾದ ಮತ್ತು ಸಕ್ಕರೆಯಂಶವನ್ನು ಹೊಂದಿದ ಸಕ್ಕರೆ ಮತ್ತು ಗ್ಲೂಕೋಸನ್ನು ಕೂಡ ಪರೀಕ್ಷಿಸಲಾಯಿತು. ಪ್ರತಿಯೊಂದು ವ್ಯಕ್ತಿಗೂ (ರೋಗಿ ಮತ್ತು ನಿರೋಗಿ ಇಬ್ಬರಿಗೂ) ೮ ದಿನಗಳ ಅಂತರದಲ್ಲಿ ಅನುಕ್ರಮವಾಗಿ ೧೦೦ ಗ್ರಾಂ ಜೇನು, ಸಕ್ಕರೆ ಮತ್ತು ಗ್ಲೂಕೋಸನ್ನು ನೀರಿಗೆ (೧೦೦ ಮಿ.ಲೀ.) ಬೆರೆಸಿ ಕುಡಿಸಲಾಯಿತು. ಪ್ರತಿಸಲವೂ "ಗ್ಲೂಕೋಸ್ ಟಾಲರೆನ್ಸ್ ಟೆಸ್ಟ್" (GTT) ಮಾಡಿಸಲಾಯಿತು.

ಈ ಅಧ್ಯಯನದಿಂದ ತಿಳಿದು ಬಂದ ಅಂಶಗಳೆಂದರೆ ೧) ಸಕ್ಕರೆ ಮತ್ತು ಗ್ಲೂಕೋಸ್ ತೆಗೆದುಕೊಂಡಾಗ ರಕ್ತದ ಸಕ್ಕರೆಯ ಅಂಶ ಉಚ್ಚ ಮಟ್ಟ ಮುಟ್ಟಲು



(Peak glucose level) ಒಂದು ಗಂಟೆ ಬೇಕಾದರೆ ಜೇನು ತೆಗೆದುಕೊಂಡಾಗ ೧೧/೨ ಗಂಟೆ ಬೇಕಾಯಿತು. ಆದರೆ ಸಕ್ಕರೆಯ ಅಂಶ ಜೇನು ತೆಗೆದುಕೊಂಡ ನಂತರ ಎರಡು ಗಂಟೆಗಳಲ್ಲಿಯೇ ಶರೀರದಿಂದ ಹೊರ ಹಾಕಲ್ಪಟ್ಟಿತು. ಇದು ಜೇನಿನ ಶೀಘ್ರ ವಿಲಯನಗೊಳ್ಳುವ (Quick assimilative property) ಗುಣವನ್ನು ತೋರಿಸುತ್ತದೆ.

೨) ರಕ್ತದಲ್ಲಿಯ ಸಕ್ಕರೆಯ ಅಂಶವು ಗ್ಲೂಕೋಸ್ ಮತ್ತು ಸಕ್ಕರೆ ಸೇವಿಸಿದ ವ್ಯಕ್ತಿಯವನದಕ್ಕಿಂತ ಪರಿಗಣಿಸಲ್ಪಡುವ ಪ್ರಮಾಣದಲ್ಲಿ ಮಧು ಸೇವಿಸಿದ ವ್ಯಕ್ತಿಯಲ್ಲಿ ಕಡಿಮೆಯಾಗಿರುವುದು ಸ್ಪಷ್ಟವಾಗಿದೆ.

೩) ಹೀಗೆ ಅಧಿಕ ಸಮಯ ತೆಗೆದುಕೊಂಡು ರಕ್ತಕ್ಕೆ ಸೇರುವ, ಆದರೆ ಬೇಗನೆ ಶರೀರದಿಂದ ಹೊರಹಾಕಲ್ಪಡುವ ಗುಣ ಮಧುವಿಗೆ ಇರುವುದರಿಂದ ಮಧುಮೇಹಿಗಳಿಗೆ ಇದೊಂದು ನಿರಪಾಯಕರವಾದ ಸಕ್ಕರೆಯಾಗಿದೆ (Safe Sugar) ಎಂದೆನ್ನಬಹುದು.

೪) ಇನ್ಸುಲಿನ್ ಕಾರ್ಯ ನಿರ್ವಹಿಸಲು ಅವಶ್ಯವಾಗಿರುವ 'ಸತು' (Zinc) ಈ ಜೇನಿನಲ್ಲಿದೆ. ಕಾರಣ, ಜೇನು ಮಧುಮೇಹಿಗೆ ಔಷಧಿಯಾಗಿ ಅಪರೋಕ್ಷವಾಗಿ ಸಹಾಯಮಾಡಬಲ್ಲದು.

೫) ಮಧುಮೇಹಿಗಳಲ್ಲಿ ಸಾಮಾನ್ಯವಾಗಿ ಜೀವಸತ್ವಗಳ ಕೊರತೆಯಿಂದ ಉಂಟಾಗಬಹುದಾದ ಉಪದ್ರವಗಳನ್ನು ಹಾಗೂ ತಡೆಗಟ್ಟಲು ನಿವಾರಿಸಲು ಜೀವಸತ್ವಗಳಿಂದೊಡಗೂಡಿದ ಈ ಜೇನು ಅನುಕೂಲವಾಗಿದೆ.

೬) ಮಧುಮೇಹಿಗಳು ಬೇರೆ ರೋಗಗಳಿಂದ ದೂರ ಇರಲು ಅವಶ್ಯವಿರುವ ರೋಗನಿರೋಧಕಶಕ್ತಿಯನ್ನು ಬೆಳೆಸುವಲ್ಲಿ ಕೂಡ ಜೇನಿನ ಕೈವಾಡವಿದೆ ಎಂಬುದು ದೃಢಪಟ್ಟಿದೆ.

ಜೇನಿನ ಬಾಹ್ಯ ಪ್ರಯೋಗ

ಜೇನನ್ನು ಔಷಧಿಯೆಂದು ಆಭ್ಯಂತರವಾಗಿ ಮಾತ್ರ ಉಪಯೋಗಿಸದೆ ಬಾಹ್ಯ ಪ್ರಯೋಗದಲ್ಲಿಯೂ ಬಳಸುವುದುಂಟು.

೧) ಇದನ್ನು ಸೌಂದರ್ಯ ಸಾಧಕವಾಗಿ ಚರ್ಮಕ್ಕೆ [illegible]ಗಿಸುವ ಸಾಧನವೆಂದು (Bleaching Agent) ಉಪಯೋಗಿಸಲಾಗುತ್ತದೆ.

೨) ಸುಟ್ಟ ಮತ್ತು ಬೆಂದ ಗಾಯಗಳಿಗೆ ಹಾಗೂ ಜೇನು ಕಚ್ಚಿದ ಸ್ಥಳಕ್ಕೆ ಶಾಮಕ ದ್ರವ್ಯವೆಂದೂ (Soothening agent) ಲೇಪಿಸಲಾಗುತ್ತದೆ.

೩) ಉಳುಕಿನಲ್ಲಿ (sprain) ಗೌತಲಮ್‌ದಲ್ಲಿ (Mumbs) ಸಂಧಿವಾತದಲ್ಲಿ (Inflammatory Swelling of the joints) ಜೇನು ಮತ್ತು ಸುಣ್ಣದ ಮಿಶ್ರಣವನ್ನು ಲೇಪಿಸುವರು.

೪) ಜೇನುತುಪ್ಪದಿಂದ ಬಾಯಿ ಮುಕ್ಕಳಿಸುವುದರಿಂದ ಬಾಯಿಹುಣ್ಣು ಮಾಯವಾಗಿ ಉರಿ, ಬಾಯಾರಿಕೆಗಳು ಶಮನವಾಗುತ್ತವೆ.

೫) ಗೋದಿ ಹಿಟ್ಟಿಗೆ ಜೇನು ಬೆರೆಸಿ ತಯಾರಿಸಿದ ಪೋಲ್ಟೀಸ್ ವ್ರಣಶೋಥವು ಬೇಗನೆ ಪಕ್ವವಾಗುವಂತೆ ಮಾಡಿ ನೋವು ನಿವಾರಣೆಗೊಳ್ಳುವುದು.



೬) ಜೇನು ವ್ರಣರೋಪಕವಾಗಿರುವುದರಿಂದ ಗಂಟಲಿನ ಹುಣ್ಣಿಗೂ ಸ್ತನ ಮುಖದಲ್ಲಾದ ವ್ರಣಕ್ಕೂ ಲೇಪಿಸುವರು.

೭) ಸ್ತನದಲ್ಲಿ ಹಾಲುಕಟ್ಟಿಕೊಂಡು ನೋವಿನಿಂದ ಕೂಡಿದ್ದರೆ ಜೇನು ಮತ್ತು ಸುಣ್ಣದ ಲೇಪನದಿಂದ ಹಾಲು ಇಂಗಲ್ಪಟ್ಟು ಶೂಲ ಮತ್ತು ಶೋಥಗಳು ನಿವಾರಿಸಲ್ಪಡುವವು.

೮) ಇದೇ ಲೇಪವನ್ನು ತಲೆನೋವು ಬಂದಾಗ ಹಣೆಗೆ ಲೇಪಿಸುವುದರಿಂದ ಮತ್ತು ಹೊಟ್ಟೆನೋವಿನಲ್ಲಿ ಹೊಕ್ಕಳ ಸುತ್ತ ಲೇಪಿಸುವುದರಿಂದ ನೋವು ನಿವಾರಿಸಲ್ಪಡುತ್ತದೆ.

೯) ಜೇನು ಮತ್ತು ಇಜ್ಜಲು ಪುಡಿಗಳ ಮಿಶ್ರಣದಿಂದ ಹಲ್ಲುಜ್ಜುವುದರಿಂದ ಹಲ್ಲುಗಳು ಶುಭ್ರವಾಗಿ ಶುಚಿಯಾಗುವವು.

೧೦) ಹುಲಿ, ಚಿರತೆ, ನರಿ, ನಾಯಿ, ತೋಳ ಮೊದಲಾದ ಪ್ರಾಣಿಗಳು ಕಚ್ಚಿ ಉಂಟಾದ ವ್ರಣಕ್ಕೆ ಜೇನಿನ ಲೇಪನ ಮತ್ತು ೧ ತೊಲ ಜೇನಿನ ಸೇವನೆ ಲಾಭದಾಯಕವಾಗಿದೆ.

೧೧) ಆಗತನೆ ಏಳುತ್ತಿರುವ ಕುರುವಿಗೆ ಜೇನನ್ನು ಲೇಪಿಸಿದರೆ ಕುರುವು ಕರಗುವುದು ಮತ್ತು ಬಾವು ಇಂಗಿಹೋಗುವುದು.

೧೨) ಒಸಡು ಊದಿದ್ದರೆ, ಕೀವು ಸೋರುತ್ತಿದ್ದರೆ ಹತ್ತಿಯನ್ನು ಜೇನುತುಪ್ಪದಲ್ಲಿ ಅದ್ದಿ ಹಚ್ಚಬೇಕು ಅಥವಾ ಆ ಸ್ಥಳದಲ್ಲಿ ಸ್ವಲ್ಪಹೊತ್ತು ಇಡಬೇಕು ಇದರಿಂದ ಒಸಡಿಗೆ ಸಂಬಂಧಪಟ್ಟ ರೋಗಗಳು ನಿವಾರಿಸಲ್ಪಡುವವು.

೧೩) ಅಂಜನದಂತೆ ದಿನಕ್ಕೊಂದು ಸಲ ಪರಿಶುದ್ಧವಾದ ಜೇನನ್ನು ಕಣ್ಣಿಗೆ ಹಚ್ಚುವುದರಿಂದ ಕಣ್ಣಿನ ಗೀಜು, ಕಣ್ಣುಗಳು ಅಂಟಿಕೊಳ್ಳುವುದು, ಕಣ್ಣುಗಳ ಮುಂದೆ ಪರದೆ ಬಿದ್ದಂತಾಗುವುದು ಇವೇ ಮೊದಲಾದ ತೊಂದರೆಗಳು ಮಾಯವಾಗಿ ಅವು ಸ್ವಚ್ಛವಾಗುತ್ತವೆ.

೧೪) ಜೇನು, ವ್ರಣಶೋಧಕವೂ ಆಗಿದೆ, ಕಫವು ಹೆಚ್ಚಾಗಿ ವ್ರಣಿತಭಾಗವು ಊದಿಕೊಂಡು ಕೀವು, ರಕ್ತಗಳು ಸೋರುತ್ತಿದ್ದರೆ ಜೇನುತುಪ್ಪವನ್ನು ಹಚ್ಚುವುದರಿಂದ ಕೀವು ಮುಂತಾದ ದೂಷಿತ ಪದಾರ್ಥಗಳು ಹೊರಹಾಕಲ್ಪಟ್ಟು, ಶುದ್ಧವಾಗಿ, ಮಾಂಸಾಂಕುರಗಳು ಬೆಳೆದು ವ್ರಣವು ಬೇಗನೆ ಮಾಯುವಂತಾಗುವುದು.

ಜೇನುಮೇಣ ಮತ್ತು ಜೇನುನೊಣದ ಉಪಯೋಗ

ಜೇನಿನೊಂದಿಗೆ ಜೇನುಮೇಣ ಮತ್ತು ಜೇನುನೊಣಗಳಲ್ಲಿಯ ವಿಷವು ಕೂಡ ಔಷಧೀಯಗುಣ ಹೊಂದಿದೆ. ಜೇನುಮೇಣದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ವಿಟಮಿನ್ 'ಇ' ಇರುತ್ತದೆ. 'ಇ' ವಿಟಮಿನ್ ಚರ್ಮದ ಸಹಜ ಸೌಂದರ್ಯವನ್ನು ಕಾಪಾಡಲು ಅತ್ಯವಶ್ಯ. ಈ ಕಾರಣದಿಂದಲೇ ಜೇನು ಮೇಣಕ್ಕೆ ಇನ್ನಾವುದೇ ಕೃತ್ರಿಮ ಅಥವಾ ನೈಸರ್ಗಿಕ ಮೇಣವು ಸರಿಸಮಾನವಾಗಿ ನಿಲ್ಲಲಾರದು. ಈ ಜೇನು ಮೇಣವನ್ನು ವಿವಿಧ ಸೌಂದರ್ಯ ಪ್ರಸಾಧನಗಳ ಮತ್ತು ಮುಲಾಮುಗಳ ತಯಾರಿಕೆಯಲ್ಲಿ ಬಳಸಲಾಗುತ್ತಿದೆ. ಕರಗಿದ ಜೇನುಮೇಣ ಮತ್ತು ಕೊಬ್ಬರಿ



ಎಣ್ಣೆಯ ಮಿಶ್ರಣವು ಕಾಲಿನ ಹಿಮ್ಮಡಿಯ ಬಿರುಕುಗಳಿಗೆ (Cracks) ಒಳ್ಳೆಯ ಔಷಧಿಯಾಗಿದೆ. ಈ ಮಿಶ್ರಣಕ್ಕೆ ಕರ್ಪೂರವನ್ನು ಸೇರಿಸಿ ನೋವುನಿವಾರಕವಾಗಿಯೂ ಉಪಯೋಗಿಸುವುದಿದೆ. ಜೇನುಗೂಡನ್ನು ಅತ್ಯಲ್ಪ ಪ್ರಮಾಣದಲ್ಲಿ ಪ್ರತಿನಿತ್ಯ ಚೀಪುವುದರಿಂದ ಬಹಳ ಕಾಲದಿಂದ ಇರುವ ನೆಗಡಿ, ಪೀನಸ ರೋಗಗಳು ಇಲ್ಲವಾಗುವವು.

ಜೇನಿಗೆ ಇಷ್ಟೆಲ್ಲ ಮೌಲ್ಯಗಳಿರುವುದರಿಂದಲೇ ಹಣದಾಸೆಗೆ ಅದರಲ್ಲಿ ಬೆಲ್ಲ ಮೊದಲಾದುವುಗಳನ್ನು ಕಲಬೆರಕೆ ಮಾಡಿ ಮಾರುವುದುಂಟು. ಆದ್ದರಿಂದ ಜೇನಿನ ಶುದ್ಧಾಶುದ್ಧ ಲಕ್ಷಣಗಳನ್ನು ತಿಳಿಯುವುದು ಅವಶ್ಯ.

ಜೇನಿನ ಶುದ್ಧತೆಯ ಪರೀಕ್ಷೆಗಳು

೧) ಪರಿಶುದ್ಧ ಜೇನಿನ ಬಣ್ಣ, ಪರಿಮಳ, ಪಾರದರ್ಶಕತೆ ಮೊದಲಾದವುಗಳ ಪರಿಚಯವಿರುವವರಿಗೆ ಜೇನಿನ ಶುದ್ಧಾಶುದ್ಧತೆಯನ್ನು ನಿರ್ಣಯಿಸುವುದು ಸುಲಭ.

೨) ಶುದ್ಧ ಜೇನು ಹೆಚ್ಚು ಸಾಂದ್ರವಾಗಿರುತ್ತದೆ. ಅದು ಅಳತೆಗಿಂತ ತೂಕದಲ್ಲಿ ಹೆಚ್ಚು ಬರುತ್ತದೆ. ಹೀಗಾಗಿ ಜೇನು ಬೇರೆ ದ್ರವ್ಯಗಳಿಂದ ಮಿಶ್ರಣ ಮಾಡಲ್ಪಟ್ಟಿದ್ದರೆ ಅದರ ಸ್ವಾಭಾವಿಕ ಸಾಂದ್ರತೆ ಮತ್ತು ತೂಕ ಕಡಿಮೆಯಾಗುವುದು.

೩) ಶುದ್ಧವಾದ ಜೇನನ್ನು ನಾಯಿ ತಿನ್ನುವುದಿಲ್ಲ. ಜೇನಿನ ವಾಸನೆಯೆಂದರೆ ನಾಯಿಗೆ ಆಗದು. ಕಾರಣ ನಾಯಿಗೆ ಜೇನನ್ನು ತಿನ್ನಲು ಕೊಡುವಮೂಲಕ ಅದರ ಪರಿಶುದ್ಧತೆಯನ್ನು ಪರೀಕ್ಷಿಸಬಹುದು.

ನವೆಂಬರ್ ೯೭ರ ಸಂಚಿಕೆಯ 'ಆರೋಗ್ಯದಂಗಳ'


*

ಯುವಕರ ಮಾನಸಿಕ ಸಮಸ್ಯೆಗಳು

*

ಖ್ಯಾತ ಮನೋಚಿಕಿತ್ಸಕ

ಡಾ. ಪ್ರಕಾಶ ಕೊಣ್ಣೂರರರು ನೀಡುವ ಲೇಖನ



೪) ರಾಸಾಯನಿಕ ಪರೀಕ್ಷೆ:

ಅ)೧ ಮಿ.ಗ್ರಾಂ. ಜೇನಿಗೆ ೪ ಮಿ.ಗ್ರಾಂ ಆಲ್ಕೋಹಾಲ್ ಮಿಶ್ರಣ ಮಾಡಿದಾಗ ಕೆಸರಿನಂತೆ (turbidity) ಕೆಳಗೆ ಗಲೀಜು ಸಂಗ್ರಹವಾದರೆ ಅದು ಹೊರಗಿನಿಂದ ಬೆರೆಸಿದ ಗ್ಲುಕೋಸ್‌ನದ್ದೆಂದು ನಿರ್ಧರಿಸಬಹುದು.

ಆ) ೧೦ ಮಿ.ಗ್ರಾ. ಜೇನಿಗೆ ೫ ಮಿ.ಗ್ರಾಂ. ಈಥರ್ ಬೆರೆಸಿ, ಚೆನ್ನಾಗಿ ಅಲುಗಾಡಿಸಿ, ಮೇಲಿನ ಈಥರ್ ಭಾಗವನ್ನು ಸಂಗ್ರಹಿಸಿ, (ಹಬೆಯ ಮೇಲೆ ಕಾಯಿಸಿ) ದ್ರವಾಂಶವನ್ನು ಇಂಗಿಸಲು ಕೇಸರಿ ಬಣ್ಣದ ಪುಡಿಯಂಥ ಭಾಗ ಕಂಡಿದ್ದಾದರೆ ಅದರಲ್ಲಿ ಸಕ್ಕರೆಯನ್ನು ಕಲಬೆರಕೆ ಮಾಡಿದೆ ಎಂದು ತಿಳಿಯಬೇಕು.

ಹೀಗೆ ಕೃತ್ರಿಮತೆಯ ಕವಚದಿಂದ ಹೊರಗಿರುವ ಈ ಮಧು ನೈಸರ್ಗಿಕವಾಗಿ ತಯಾರಿಸಲ್ಪಟ್ಟ ವರದಾನವಾಗಿದೆ. ದೈಹಿಕವಾಗಿ, ಧಾರ್ಮಿಕವಾಗಿ ಮಹತ್ವವನ್ನು ಪಡೆದಿರುವ ಮಧು ಭಾರತೀಯ ಸಂಸ್ಕಾರಗಳಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮಧು, ಸೌಜನ್ಯದ ಕುರುಹಾಗಿ ಗುರುತಿಸಲ್ಪಡುತ್ತದೆ. ಸಂಕ್ಷೇಪವಾಗಿ ಹೇಳುವುದಾದರೆ ಇದು ಆಹಾರವಾಗಿ ಔಷಧಿಯಾಗಿ, ಬಾಹ್ಯ ಮತ್ತು ಅಭ್ಯಂತರ ಎರಡೂ ಮಾರ್ಗವಾಗಿ ಉಪಯೋಗಿಸಲ್ಪಡುತ್ತದೆ. ಅದು ಪ್ರಮುಖವಾಗಿ ೮ ಜಾತಿಯ ಮಕ್ಷಿಕಗಳಿಂದ ತಯಾರಿಸಲ್ಪಡುತ್ತಿದ್ದು ಪ್ರತಿಯೊಂದು ಜೇನಿನ ಗುಣವೂ ಅದರ ಉತ್ಪತ್ತಿಗೆ ಕಾರಣವಾದ ಜೇನುನೊಣ, ಪುಷ್ಪಮೂಲ ಮತ್ತು ದೊರೆಯುವ ಸ್ಥಾನಗಳನ್ನು ಅವಲಂಬಿಸಿದೆ. ಸರ್ವೇಸಾಮಾನ್ಯವಾಗಿ ಎಲ್ಲ ಬಗೆಯ ಜೇನು ಕಫ ಸಂಬಂಧೀ ಮತ್ತು ಪ್ರಾಣವಹ ಸ್ರೋತಸ್ಸಿಗೆ ಸಂಬಂಧಪಟ್ಟ ಕಾಯಿಲೆಗಳಲ್ಲಿ ವಿಶೇಷವಾಗಿ ಪ್ರಯೋಜನಕರವಾಗಿದ್ದರೂ ಮಾಕ್ಷಿಕ ಜಾತಿಯ ಮಧುವು ಮಧುಮೇಹಿಗೂ ಔಷಧಿಯಾಗಿ ಕೆಲಸಮಾಡಬಲ್ಲದುದಾಗಿದೆ ಎಂಬುದು ವೈಜ್ಞಾನಿಕ ಅಧ್ಯಯನದಿಂದ ಸ್ಪಷ್ಟವಾಗಿದೆ.

ಒಂದೇ ಮಾತಿನಲ್ಲಿ ಹೇಳುವುದಾದರೆ ಪರಿಶುದ್ಧ ಮಧುವನ್ನು ವಿವೇಚನಾತ್ಮಕವಾಗಿ ಉಪಯೋಗಿಸಿದಲ್ಲಿ ಅದು ಅಮೃತ-ಸಮಾನ ಆಹಾರವಾಗಿ ಮತ್ತು ಔಷಧಿಯಾಗಿ ಕಾರ್ಯ ನಿರ್ವಹಿಸಬಲ್ಲದೆಂದು ಹೇಳಬಹುದು. ✪

Printed & Published by S. K. KATOTE on behalf of
Loka Shikshna Trust at Samyukta Karnataka
Press, Koppikar Road, Hubli-580020. (Phone: 364303)
No. 2, Residency Road, Bangalore-560025. (Phone: 2214366)

Managing Editor: K. SHAMARAO
Registered with the Registrar of Newspaper
for India under No. 3633/57